ಶುಕ್ರವಾರ, ಜನವರಿ 3, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 3 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಖೇಲ್ ರತ್ನ ಪುರಸ್ಕಾರ
ಗುಕೇಶ್, ಮನು ಭಾಕರ್, ಹರ್ಮನ್ ಪ್ರೀತ್ ಸಿಂಗ್, ಪ್ರವೀಣ್ ಕುಮಾರ್ ಅವರಿಗೆ ಖೇಲ್ ರತ್ನ ಪುರಸ್ಕಾರ
ಪುಟ 14

ಆಳ-ಅಗಲ
ಸ್ಪೀಡ್ ಕಿಂಗ್ ಬೂಮ್ರಾ
'ಇಂಡಿಯಾ'ಗೆ ವಾಪಸ್: ನಿತೀಶ್ ಗೂಢಾರ್ಥದ ಪ್ರತಿಕ್ರಿಯೆ 13
ಚಿನ್ಮಯಿ ಕೃಷ್ಣದಾಸ್‌ಗೆ ಜಾಮೀನು ನಿರಾಕರಣೆ 12

ಸೆನ್ಸೆಕ್ಸ್	ನಿಫ್ಟಿ	₹/$
79,943	24,188	85.75

ಇದೇ 5ರಿಂದ ಬಸ್ ಯಾನದ ಪರಿಷ್ಕೃತ ದರ ಜಾರಿ ● ನಿಗಮಗಳಿಗೆ ₹2,000 ಕೋಟಿ ಸಾಲಕ್ಕೆ ಒಪ್ಪಿಗೆ

ಪ್ರಯಾಣ ದರ; ಶೇ 15ರಷ್ಟು ಭಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಧಾನ್ಯ, ತರಕಾರಿ, ದಿನ ಬಳಕೆಯ ವಸ್ತುಗಳ ದರ ಏರಿಕೆಯ ಭಾರದಿಂದ ಜನ ತತ್ತರಿಸುತ್ತಿರುವ ಮಧ್ಯೆಯೇ, ಚಾಲ್ತಿಯಲ್ಲಿರುವ ಬಸ್ ಪ್ರಯಾಣ ದರವನ್ನು ಶೇ 15ರಷ್ಟು ಹೆಚ್ಚಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆ.

ಹೊಸ ವರ್ಷದ ಆರಂಭದಲ್ಲೇ, ಗುರುವಾರ ನಡೆದ ಸಚಿವ ಸಂಪುಟ ಸಭೆಯು ನಾಲ್ಕು ಸಾರಿಗೆ ಸಂಸ್ಥೆಗಳು ಸಲ್ಲಿಸಿದ್ದ ಪ್ರಸ್ತಾವನೆಗೆ ಸಮ್ಮತಿ ಸೂಚಿಸಿದೆ. ಪರಿಷ್ಕೃತ ದರ ಇದೇ ಭಾನುವಾರ (ಜ.5ರಿಂದ) ಜಾರಿಗೆ ಬರಲಿದೆ.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, ಡೀಸೆಲ್ ದರ ಏರಿಕೆಯಾಗಿರುವುದು, ಸಿಬ್ಬಂದಿ ವೆಚ್ಚ ಹೆಚ್ಚಳವಾಗಿರುವುದು ಮತ್ತು ಪ್ರಯಾಣ ದರ ಪರಿಷ್ಕರಣೆ ಮಾಡದೇ ಹಲವು ವರ್ಷಗಳೇ ಆಗಿರುವುದರಿಂದ ಈ ಬಾರಿ ಪರಿಷ್ಕರಣೆಗೆ ಒಪ್ಪಿಗೆ ನೀಡಲಾಯಿತು ಎಂದು ಸಮರ್ಥಿಸಿಕೊಂಡರು.

13ನೇ ಪುಟ ನೋಡಿ

ಬೆಂಗಳೂರಿನಿಂದ ವಿವಿಧ ನಗರಗಳಿಗೆ ಕೆಎಸ್‌ಆರ್‌ಟಿಸಿ ಈಗಿನ ದರ/ಪರಿಷ್ಕೃತ ದರ (₹ಗಳಲ್ಲಿ)

ಬಸ್	ಮಂಗಳೂರು	ಮೈಸೂರು	ಹುಬ್ಬಳ್ಳಿ	ಕಲಬುರಗಿ	ಬೆಳಗಾವಿ	ದಾವಣಗೆರೆ	ಶಿವಮೊಗ್ಗ
ಹವಾನಿಯಂತ್ರಿತ ಸ್ಲೀಪರ್	1201/1382	461/531	1086/1229	1656/1904	1286/1479	-	-
ಐರಾವತ ಕ್ಲಬ್‌ಕ್ಲಾಸ್	1208/1389	516/594	939/1080	1352/1555	1022/1175	694/798	822/945
ನಾನ್‌ಎಸಿ ಸ್ಲೀಪರ್	1002/1153	346/398	1032/1187	1041/1197	1019/1170	670/770	742/853
ಸಾರಿಗೆ (ಕೆಂಪು ಬಸ್)	424/487	203/233	521/599	726/835	651/748	340/391	332/382

ಬಸ್‌ಗಳ ಸಂಖ್ಯೆ	ಕೆಎಸ್‌ಆರ್‌ಟಿಸಿ	ಬಿಎಂಟಿಸಿ	ಎನ್‌ಡಬ್ಲ್ಯುಆರ್‌ಟಿಸಿ	ಕೆಕೆಆರ್‌ಟಿಸಿ
	8,800	6,539	4,866	4,864

- ದರ ಏರಿಕೆಯಿಂದ ಪ್ರತಿ ತಿಂಗಳು ಹೆಚ್ಚುವರಿಯಾಗಿ ₹74.85 ಕೋಟಿ ಸಂಗ್ರಹ
- ಶಕ್ತಿ ಯೋಜನೆಗಾಗಿ ಪ್ರತಿ ತಿಂಗಳು ₹417.92 ಕೋಟಿ ಬಿಡುಗಡೆ
- ಶಕ್ತಿಯೋಜನೆಗಾಗಿ ರಾಜ್ಯ ಸರ್ಕಾರದಿಂದ ಈ ಆರ್ಥಿಕ ವರ್ಷದಲ್ಲಿ ₹ 5,015 ಕೋಟಿ ವೆಚ್ಚ

ಮೆಜೆಸ್ಟಿಕ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಿಎಂಟಿಸಿ ಬಸ್	ಈಗಿನ ದರ	ಪರಿಷ್ಕೃತ ದರ
	₹246	₹282

ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ

ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜಿಸಿ, ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆಯನ್ನು ರಚಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆಗಳಿರಲಿವೆ. ಧಾರವಾಡ ಮಹಾನಗರ ಪಾಲಿಕೆ ಆದ ಬಳಿಕ ಅದರ ವ್ಯಾಪ್ತಿಯಲ್ಲಿ 2,75,339 ಜನಸಂಖ್ಯೆ ಇರುತ್ತದೆ. ಒಟ್ಟು ವಿಸ್ತೀರ್ಣ 120.94 ಚ.ಕಿ.ಮೀ ಹಾಗೂ ಜನಸಾಂದ್ರತೆ 2,277 ಇರುತ್ತದೆ. ಹುಬ್ಬಳ್ಳಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜನಸಂಖ್ಯೆ 6,68,449 ಮತ್ತು ವಿಸ್ತೀರ್ಣ 127.05 ಕಿ.ಮೀ, 5261 ಜನಸಾಂದ್ರತೆ ಇರುತ್ತದೆ ಎಂದು ವಿವರಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ವಕ್ಫ್ ಹೋರಾಟ ನಿಲ್ಲಿಸಲು ವರಿಷ್ಠರು ಹೇಳಿಲ್ಲ: ಯತ್ನಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕ್ಫ್ ವಿರುದ್ಧದ ಎರಡನೇ ಹಂತದ ಹೋರಾಟ ಮಧ್ಯಕರ್ನಾಟಕ, ಮೈಸೂರು ಭಾಗದಲ್ಲಿ ನಡೆಯಲಿದೆ. ಹೋರಾಟದ ಯಾತ್ರೆ ನಿಲ್ಲಿಸುವಂತೆ ಪಕ್ಷದ ವರಿಷ್ಠರು ಸೂಚಿಸಿಲ್ಲ. ಉಚ್ಚಾಟನೆಯನ್ನೂ ಮಾಡುವುದಿಲ್ಲ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಪಕ್ಷದ ವರಿಷ್ಠರು ಕರೆದರೆ ಮಾತ್ರ ದೆಹಲಿಗೆ ಹೋಗುತ್ತೇವೆ. ಮಾತನಾಡುತ್ತೇವೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ವತಃ ಕರೆದರೂ ಮಾತುಕತೆ ಸಾಧ್ಯವಿಲ್ಲ. ನಮ್ಮದೇ ನಿಷ್ಠರ ಬಣ. ವಿಜಯೇಂದ್ರ ಪಕ್ಷದ ಅಧ್ಯಕ್ಷ ಅಷ್ಟೇ, ಅವರ ಜತೆ ಗುರುತಿಸಿಕೊಂಡವರೂ ಹೋರಾಟಕ್ಕೆ ಬಂದರೆ ಸ್ವಾಗತಿಸುತ್ತೇವೆ' ಎಂದರು. 'ಬಿಜೆಪಿಯಿಂದ ನನ್ನನ್ನು ಏಕೆ ಉಚ್ಚಾಟನೆ ಮಾಡುತ್ತಾರೆ. ಉಚ್ಚಾಟನೆ ಮಾಡಲು ನಾನು ಯಾರ ಜತೆಯೂ ಹೊಂದಾಣಿಕೆ ರಾಜಕಾರಣ ಮಾಡಿಕೊಂಡಿಲ್ಲ ಎಂದು ಅವರು ಹೇಳಿದರು.

13ನೇ ಪುಟ ನೋಡಿ

ಕಾರ್ಯಭಾರದ ಕೊರತೆ ಉಪನ್ಯಾಸಕರು ಮನೆಗೆ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವಿದ್ಯಾರ್ಥಿಗಳ ಕೊರತೆ ಇರುವ ಅನುದಾನಿತ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರನ್ನು ಕೆಲಸದಿಂದ ಬಿಡುಗಡೆ ಮಾಡುವಂತೆ ಆಡಳಿತ ಮಂಡಳಿಗಳಿಗೆ ಸೂಚಿಸಿರುವ ಸರ್ಕಾರದ ಆದೇಶಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ರಾಜ್ಯದಲ್ಲಿ 821 ಅನುದಾನಿತ ಪದವಿಪೂರ್ವ ಕಾಲೇಜುಗಳಿವೆ. ಸರ್ಕಾರದ ನಿಯಮದಂತೆ ಕಾಯಂ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಆಯಾ ವಿಷಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕನಿಷ್ಠ 40 ಇರಬೇಕು. ಬಹುತೇಕ ಕಾಲೇಜುಗಳಲ್ಲಿ ಪ್ರತಿವರ್ಷವೂ ವಿದ್ಯಾರ್ಥಿಗಳ ಪ್ರವೇಶದಲ್ಲಿ ಗಣನೀಯವಾಗಿ ಇಳಿಕೆಯಾಗುತ್ತಿದೆ. ಕೆಲ ವಿಷಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದೆ. ಅಂತಹ ಕಾಲೇಜುಗಳಲ್ಲಿ ಅನುದಾನಿತ ವೇತನ ಪಡೆಯುತ್ತಿರುವ ಉಪನ್ಯಾಸಕರಿಗೆ ಕೆಲಸ ಕಳೆದುಕೊಳ್ಳುವ ಭೀತಿ ಎದುರಾಗಿದೆ.

ಅನುದಾನಿತ ಕಾಲೇಜುಗಳಲ್ಲಿ 4,291 ಹುದ್ದೆಗಳು ಭರ್ತಿಯಾಗದೇ ಖಾಲಿ ಉಳಿದಿವೆ.

13ನೇ ಪುಟ ನೋಡಿ

ಟಾಪ್ 8 ದೀರ್ಘಕಾಲಿಕ ರೋಗಗಳು ಭಾರತದಲ್ಲಿ

- ಹೃದಯಾಘಾತ
- ರಕ್ತದೊತ್ತಡ (ಹೈಪರ್‌ಟೆನ್ಷನ್)
- ಪಾರ್ಶ್ವವಾಯು(ಸ್ಟ್ರೋಕ್)
- ಬೆನ್ನು ನೋವು
- ಕ್ಯಾನ್ಸರ್
- ಆಸ್ಟಿಯೋಪೊರೋಸಿಸ್
- ಮಧುಮೇಹ
- ದೀರ್ಘಕಾಲಿಕ ದಣಿವಿನ ಸಮಸ್ಯೆ

ನಿಮ್ಮ ಆರೋಗ್ಯದ ಬಗ್ಗೆ ಈ ಹೊಸ ವರ್ಷದಲ್ಲಿ ಗಮನಹರಿಸಿ !

Amount upto Rs.5000/- eligible for claim as deduction u/s 80 D of income tax act

Offer Valid till - 5th Jan 2025

ದೀರ್ಘಕಾಲಿಕ ರೋಗಗಳು	JANA SEVA PLUS (RADIOLOGY 3, LAB TESTS 82)	JANA SEVA GOLD (RADIOLOGY 4, LAB TESTS 89)	JANA SEVA DIAMOND (RADIOLOGY 6, LAB TESTS 91)
ಹೃದಯಾಘಾತದ ಅಪಾಯ	Cholesterol profile, ECG	**CT Calcium Scoring Scan,** Cholesterol profile, ECG	**CT Calcium Scoring Scan,** Cholesterol profile, ECG
ಹೃದಯಾಘಾತದ ಅಪಾಯ	—	—	**Carotid Doppler Scan**
ಕ್ಯಾನ್ಸರ್ ತಪಾಸಣೆ	X-Ray chest - For Lung Cancer, Ultrasound Scan - Abdomen & Pelvic Organs	**Cancer Markers :** - Male - Prostate - PSA Total - Female - Ovaries - CA 125 - Colon, Liver, Pancreas - CEA; X-Ray Chest - For Lung Cancer, Ultrasound Scan - Abdomen & Pelvic Organs	**Cancer Markers :** - Male - Prostate - PSA Total - Female - Ovaries - CA 125 - Colon, Liver, Pancreas - CEA; X-Ray Chest - For Lung Cancer, Ultrasound Scan - Abdomen & Pelvic Organs
ಬೆನ್ನು ನೋವು	—	—	**MRI Lumbar Spine Screening**
ಆಸ್ಟಿಯೊಪೊರೋಸಿಸ್ ಮತ್ತು ಮುರಿಯುವ ಅಪಾಯ	—	**Vitamin D**	**Vitamin D, Calcium, Phosphorus**
ಮಧುಮೇಹ ತಪಾಸಣೆ	Sugar (fasting+after food), HbA1c	Sugar (fasting+after food), HbA1c	**Fasting Insulin,** Sugar (fasting + after food), HbA1c,
ಹೈಪರ್‌ಟೆನ್ಷನ್ (ಅಧಿಕ ರಕ್ತದೊತ್ತಡ)	Blood Pressure Check, Kidney Function Tests	Blood Pressure Check, Kidney Function Tests	Blood Pressure Check, Kidney Function Tests
ದೀರ್ಘಕಾಲದ ದಣಿವಿನ ಸಮಸ್ಯೆ ಮತ್ತು ಆಯಾಸ	Complete Blood Count, ESR (inflammation screen)	**Vitamin B12,** Complete Blood Count, ESR	**Vitamin B12,** Complete Blood Count, ESR
ಸಾಮಾನ್ಯ ಆರೋಗ್ಯ	Liver Function tests, TSH & Complete Urine Analysis	Liver Function tests, Thyroid profile & Complete Urine Analysis.	Liver Function tests, Thyroid profile & Complete Urine Analysis.
	60% Discount ~~₹4050~~ **₹1599**	**64% Discount** ~~₹13890~~ **₹4999**	**70% Discount** ~~₹23380~~ **₹6999**

ನಿರ್ಣಯ ಮಾತ್ರ ಮಾಡಬೇಡಿ.
ಈಗಲೇ ನೇಮಕಾತಿ ಮಾಡಿ !

MRI ಸ್ಕ್ಯಾನ್ Starting From **₹2900** MRI Brain/Each Spine

CT ಸ್ಕ್ಯಾನ್ Starting From **₹1100** CT Brain/PNS

ರಕ್ತಪರೀಕ್ಷೆಯಲ್ಲಿ 50% ಕಡಿಮೆ ದರದಲ್ಲಿ
ಮನೆಯಿಂದಲೇ ರಕ್ತ ಸಂಗ್ರಹ ಮಾಡಲಾಗುವುದು

HEALTH FIRST!

70224 70224

aarthiscan.com

ಜಯ ನಗರ | ಇಂದಿರಾ ನಗರ | ರಾಜಾಜಿನಗರ | ಪದ್ಮನಾಭ ನಗರ
ಕೋರಮಂಗಲ | ಮಾರತಹಳ್ಳಿ | ಜೆಪಿ ನಗರ | ಕೆ.ಆರ್ . ಪುರಂ
ಹೆಬ್ಬಾಳ | ಹೆಣ್ಣೂರು | ನಾಗರಭಾವಿ

AARTHI SCANS & LABS

For Franchise Enquiry - 98840 22534

ಬೆಂಗಳೂರು | ಮುಂಬೈ | ನವ ದೆಹಲಿ | ಚೆನ್ನೈ | ಹೈದರಾಬಾದ್ | ಕೋಲ್ಕತ್ತಾ | ಗುರ್ಗಾಂವ್ | ಪುಣೆ | ಅಹಮದಾಬಾದ್ | ತಿರುವನಂತಪುರ | ಪಾಂಡಿಚೇರಿ

ಚಂದಾಪುರ ಕೆರೆ ಮಾಲಿನ್ಯ: ಎನ್‌ಜಿಟಿಗೆ ರಾಜ್ಯ ಸರ್ಕಾರ 'ಪ್ರಮಾಣ'

54 ಕೈಗಾರಿಕೆಗಳಿಗೆ ₹140 ಕೋಟಿ ದಂಡ

● ಮಂಜುನಾಥ ಹೆಬ್ಬಾರ್

ನವದೆಹಲಿ: ಬೆಂಗಳೂರಿನ ಚಂದಾಪುರ ಕೆರೆಗೆ ಕೊಳಚೆ ನೀರನ್ನು ಬಿಟ್ಟ ಕಾರಣಕ್ಕೆ 54 ಕೈಗಾರಿಕೆಗಳಿಗೆ ಕರ್ನಾಟಕ ಸರ್ಕಾರವು ಪರಿಸರ ಪರಿಹಾರದ ರೂಪದಲ್ಲಿ ₹140 ಕೋಟಿ ದಂಡ ವಿಧಿಸಿದೆ.

ಚಂದಾಪುರ ಕೆರೆ ಮಲಿನಗೊಂಡು ಅವಸಾನದ ಅಂಚಿಗೆ ತಲುಪಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು. ಈ ಸಂಬಂಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಪ್ರಧಾನ ಪೀಠವು ಕರ್ನಾಟಕ ಸರ್ಕಾರಕ್ಕೆ ₹500 ಕೋಟಿ ದಂಡ ವಿಧಿಸಿತ್ತು. ಕೆರೆಗೆ ಸುತ್ತಮುತ್ತಲ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಕೈಗಾರಿಕೆಗಳ ಕೊಳಚೆ ನೀರು ಸೇರಿ ಅಪಾರ ಹಾನಿ ಉಂಟಾಗಿದ್ದು, ಇದಕ್ಕೆ ಸರ್ಕಾರದ ದಿವ್ಯ ನಿರ್ಲಕ್ಷ್ಯವೇ ಕಾರಣ ಎಂದು ಪೀಠ ಕಿಡಿಕಾರಿತ್ತು. ದಂಡ ಮೊತ್ತವನ್ನು ಜಲಕಾಯದ ಪುನರುಜ್ಜೀವನಕ್ಕೆ ಬಳಸುವಂತೆ ತಾಕೀತು ಮಾಡಿತ್ತು.

'ಈ ಜಲಕಾಯವು 24.27 ಎಕರೆ ಪ್ರದೇಶದಲ್ಲಿದೆ. ಹೀಲಳಿಗೆ ಗ್ರಾಮದಲ್ಲಿ 7.2 ಎಕರೆ ಹಾಗೂ ಚಂದಾಪುರ ಪಟ್ಟಣದಲ್ಲಿ 17.25 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ. ನಿರ್ಮಾಣ ಚಟುವಟಿಕೆಗಳಿಗಾಗಿ ಜಲಕಾಯದ ಎರಡು ಎಕರೆಯನ್ನು ಒತ್ತುವರಿ ಮಾಡಲಾಗಿದೆ. ಕೆರೆಯ ಮೀಸಲು ಪ್ರದೇಶದಲ್ಲಿ ಸರ್ಕಾರಿ ಆಸ್ಪತ್ರೆ ಹಾಗೂ ಅಂಗಡಿಗಳು ನಿರ್ಮಾಣವಾಗಿವೆ. ಕೆರೆಯ ಸುತ್ತ ಹಾಕಿರುವ ಬೇಲಿ ಕಿತ್ತು ಹೋಗಿದೆ. ಕೆರೆಯ ಪಕ್ಕದಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಇಲ್ಲ. ಹೀಗಾಗಿ, ಕೊಳಚೆ ನೀರು ನೇರವಾಗಿ ಜಲಕಾಯವನ್ನು ಸೇರುತ್ತಿದೆ. ಜಿಗಣಿ–ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಕೈಗಾರಿಕಾ ತ್ಯಾಜ್ಯವು ಕೆರೆಯನ್ನು ಸೇರುತ್ತಿದೆ. ಇದು ಸರ್ಕಾರ ರೂಪಿಸಿರುವ ನಿಯಮಕ್ಕೆ ವಿರುದ್ಧ. ಕೈಗಾರಿಕೆಗಳು ತ್ಯಾಜ್ಯ ನೀರನ್ನು ಜಲಕಾಯಕ್ಕೆ ಬಿಡುವಂತಿಲ್ಲ' ಎಂದು ಪೀಠ ಹೇಳಿತ್ತು.

'ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿ ಔಷಧ ಉತ್ಪಾದಿಸುವ ಕೈಗಾರಿಕೆಗಳು, ಪವರ್ ಕೋಟಿಂಗ್, ಎಲೆಕ್ಟ್ರೋ-ಪ್ಲೇಟಿಂಗ್ ಸೇರಿದಂತೆ ಕೆಂಪು ವರ್ಗೀಕರಣದ 195 ಕೈಗಾರಿಕೆಗಳು ಇವೆ. ಬೆಂಗಳೂರು ನಗರದ ಜನರ ಜಲದಾಹವನ್ನು ನೀಗಿಸಲು ಕೆರೆಯಲ್ಲಿ ಕೊಳಚೆ ಬಾವಿಗಳನ್ನು ಕೊರೆದು ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಜಲಕಾಯದ ನೀರಿನ ಗುಣಮಟ್ಟ ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ ವರದಿ ಸಲ್ಲಿಸಿದೆ. ಕೊಳಚೆ ನೀರು ಬಿಟ್ಟ ಕೈಗಾರಿಕೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಪೀಠ ನಿರ್ದೇಶನ ನೀಡಿತ್ತು.

ದಂಡಕ್ಕೆ ವಿನಾಯಿತಿ ಕೋರಿ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಪೀಠ ತಿರಸ್ಕರಿಸಿತ್ತು. ಕೆರೆ ಪುನರುಜ್ಜೀವನಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸಬೇಕು ಎಂದು ಸೂಚಿಸಿತ್ತು. ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಎನ್‌ಜಿಟಿಗೆ ಗುರುವಾರ ವರದಿ ಸಲ್ಲಿಸಿದ್ದಾರೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಾಲ್ಕು ಕೈಗಾರಿಕೆಗಳಿಂದ ಈ ವರೆಗೆ ₹1.39 ಕೋಟಿ ದಂಡ ವಸೂಲಿ ಮಾಡಿದೆ. ಉಳಿದ ₹138 ಕೋಟಿ ಮೊತ್ತ ವಸೂಲಿ ಆಗಿಲ್ಲ. ದಂಡ ವಿಧಿಸಿದ್ದನ್ನು ಪ್ರಶ್ನಿಸಿ 17 ಕೈಗಾರಿಕೆಗಳು ಎನ್‌ಜಿಟಿಗೆ ಮೇಲ್ಮನವಿ ಸಲ್ಲಿಸಿವೆ ಹಾಗೂ ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿವೆ. ದಂಡ ವಸೂಲಿಗಾಗಿ ಕೈಗಾರಿಕೆಗಳಿಗೆ ಷೋಕಾಸ್ ನೋಟಿಸ್ ನೀಡಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ತ್ಯಾಜ್ಯ ಸಂಸ್ಕರಣ ಘಟಕಕ್ಕೆ ₹41 ಕೋಟಿ

ಚಂದಾಪುರ ಕೆರೆಯಲ್ಲಿ 1.5 ದಶಲಕ್ಷ ಲೀಟರ್ ಸಾಮರ್ಥ್ಯದ ಕೊಳಚೆ ನೀರು ಸಂಸ್ಕರಣ ಘಟಕ ಸ್ಥಾಪನೆಗೆ ಹಣಕಾಸು ನೆರವು ನೀಡಲು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಒಪ್ಪಿದೆ.

ಚಂದಾಪುರ ಕೆರೆಯ ಜಲಾನಯನ ಪ್ರದೇಶದಲ್ಲಿ 207 ಕೈಗಾರಿಕೆಗಳಿವೆ. ಈ ಪೈಕಿ ಪ್ರಸ್ತುತ 162 ಕೈಗಾರಿಕೆಗಳು ವಿವಿಧ ತ್ಯಾಜ್ಯ ಸಂಸ್ಕರಣ ಘಟಕಗಳ ಮೂಲಕ ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಬಿಡುತ್ತಿವೆ. 17 ಕೈಗಾರಿಕೆಗಳು ಮುಚ್ಚಿವೆ. 13 ಕೈಗಾರಿಕೆಗಳಲ್ಲಿ ತ್ಯಾಜ್ಯ ನೀರು ಸಂಸ್ಕರಣ ಘಟಕಗಳಿವೆ. ಇನ್ನು 14 ಕೈಗಾರಿಕೆಗಳು ತಮ್ಮ ಕಾರ್ಯಾಚರಣೆ ವಿಧಾನದ ಬಗ್ಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ವಿವರಗಳನ್ನು ನೀಡಿವೆ.

ಹೆಬ್ಬಗೋಡಿ, ಬೊಮ್ಮಸಂದ್ರ, ಜಿಗಣಿ ಮತ್ತು ಚಂದಾಪುರ ಭಾಗದಲ್ಲಿ ಒಳಚರಂಡಿ ಮಾರ್ಗವನ್ನು (ಯುಜಿಡಿ) ಮರು ನಿರ್ಮಾಣ ಮಾಡಲಾಗುತ್ತಿದೆ. ಹೆಬ್ಬಗೋಡಿ, ಬೊಮ್ಮಸಂದ್ರ, ಜಿಗಣಿ ಮತ್ತು ಚಂದಾಪುರದಲ್ಲಿ ನಾಲ್ಕು ಕೊಳಚೆ ನೀರು ಸಂಸ್ಕರಣಾ ಘಟಕಗಳನ್ನು ನಿರ್ಮಿಸಲಾಗಿದೆ ಎಂದು ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

ಕೊಚ್ಚಿನ್ ಉತ್ಸವ... ಕೇರಳದ ಕೊಚ್ಚಿನ್‌ನ ಉತ್ಸವದ ಪ್ರಯುಕ್ತ ಗುರುವಾರ ನಡೆದ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ರೋಬೊ ಆನೆ ಗಮನ ಸೆಳೆಯಿತು –ಪಿಟಿಐ ಚಿತ್ರ

ನಾಪತ್ತೆಯಾದ ವ್ಯಕ್ತಿ ಮನೆ ಬಳಿ ಗ್ರೆನೇಡ್ ಪತ್ತೆ

ಇಂಫಾಲ್ (ಪಿಟಿಐ): ಲೈಮಖಾಂಗ್‌ನಲ್ಲಿರುವ ಸೇನಾ ಠಾಣೆಯಿಂದ ನಾಪತ್ತೆಯಾಗಿರುವ ಲೈಶ್ರಮ್ ಕಮಲ್‌ಬಾಬು ಸಿಂಗ್ ಅವರ ಮನೆಯ ಬಳಿ ಗ್ರೆನೇಡ್ ಪತ್ತೆಯಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದರು.

ಪಶ್ಚಿಮ ಇಂಫಾಲ್ ಜಿಲ್ಲೆಯ ಲೊಯಿತಾಂಗ್ ಖುನೌನಲ್ಲಿರುವ ಸಿಂಗ್ ಮನೆಯ ಗೇಟ್ ಬಳಿ ಗ್ರೆನೇಡ್ ಪತ್ತೆಯಾಗಿದ್ದು, ಇದರಿಂದ ಸ್ಥಳೀಯರು ಆತಂಕಗೊಂಡಿದ್ದರು. ನಂತರ ಗ್ರೆನೇಡ್ ಅನ್ನು ನಿಷ್ಕ್ರಿಯಗೊಳಿಸಲಾಯಿತು ಎಂದು ಮಾಹಿತಿ ನೀಡಿದರು.

ಗ್ರೆನೇಡ್‌ನೊಂದಿಗೆ ಸ್ಥಳದಲ್ಲಿ ಪತ್ರವೊಂದು ದೊರೆತಿದೆ. ಇದರಲ್ಲಿ 'ನಾಪತ್ತೆಯಾಗಿರುವ ಸಿಂಗ್ ಹುಡುಕಾಟಕ್ಕಾಗಿ ರಚಿಸಲಾಗಿರುವ ಜಂಟಿ ಕ್ರಿಯಾ ಸಮಿತಿಯನ್ನು ವಿಸರ್ಜಿಸಿ ಹೊಸ ಸಮಿತಿಯನ್ನು ರಚಿಸಬೇಕು. ಭೂಮಿಯನ್ನು ಮಾರಾಟ ಮಾಡುವ ಯಾರೂ ಸಮಿತಿಯಲ್ಲಿ ಇರಬಾರದು' ಎಂದು ಬರೆಯಲಾಗಿದೆ.

ಅಸ್ಸಾಂ ಮೂಲದ ಸಿಂಗ್, ಗುತ್ತಿಗೆದಾರರ ಪರವಾಗಿ ಸೇನೆಯ ಎಂಜಿನಿಯರಿಂಗ್ ಸೇವೆಯಲ್ಲಿ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಕಳೆದ ನವೆಂಬರ್ 25ರಿಂದ ನಾಪತ್ತೆಯಾಗಿದ್ದಾರೆ.

ಆಹಾರ ಪ್ರಮಾಣ ಕಡಿತ

ದಿನಸಿ ಬೆಲೆ ಏರಿಕೆ: ಅಂಗನವಾಡಿ ಕೇಂದ್ರಗಳಲ್ಲಿ ಸಮಸ್ಯೆ

● ಬಸವರಾಜ ಹವಾಲ್ದಾರ

ಬಾಗಲಕೋಟೆ: ದಿನಸಿ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರಿಕೆ ಆಗುತ್ತಿದೆ. ಆದರೆ, ಏಳು ವರ್ಷಗಳಿಂದ ಮಕ್ಕಳು, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ನೀಡುವ ಪೌಷ್ಟಿಕ ಆಹಾರದ ದರದಲ್ಲಿ ಬದಲಾವಣೆ ಆಗಿಲ್ಲ. ಪರಿಣಾಮ ಹಾಲಿನ ಪುಡಿ, ಅಡುಗೆ ಎಣ್ಣೆ ಸೇರಿ ವಿವಿಧ ವಸ್ತುಗಳ ಪ್ರಮಾಣ ಕಡಿತ ಮಾಡಲಾಗಿದೆ.

ರಾಜ್ಯದಲ್ಲಿ 6 ತಿಂಗಳಿನಿಂದ 3 ವರ್ಷದೊಳಗಿನ 19.83 ಲಕ್ಷ ಮಕ್ಕಳಿದ್ದರೆ, 3 ವರ್ಷದಿಂದ 6 ವರ್ಷದೊಳಗಿನ 17.82 ಲಕ್ಷ ವಿದ್ಯಾರ್ಥಿಗಳಿದ್ದಾರೆ. 3 ವರ್ಷದೊಳಗಿನ ಮಕ್ಕಳ ಮನೆಗೆ ಆಹಾರ ಧಾನ್ಯ ನೀಡಿದರೆ, 3 ರಿಂದ 6 ವರ್ಷದೊಳಗಿನ ಮಕ್ಕಳಿಗೆ ಅಂಗನವಾಡಿಗಳಲ್ಲೇ ಆಹಾರ ಸಿದ್ಧಪಡಿಸಿ, ನೀಡಲಾಗುತ್ತದೆ.

ಅಪೌಷ್ಟಿಕ ಮಕ್ಕಳ ಆಹಾರಕ್ಕೆ ₹8, ತೀವ್ರ ಅಪೌಷ್ಟಿಕ ಮಕ್ಕಳಿಗೆ ₹12, ಗರ್ಭಿಣಿ ಮತ್ತು ಬಾಣಂತಿಯರಿಗೆ ₹21 ನಿಗದಿ ಮಾಡಲಾಗಿದೆ. ಸಾಮಾನ್ಯ, ಅಪೌಷ್ಟಿಕ, ತೀವ್ರ ಅಪೌಷ್ಟಿಕ ಮಕ್ಕಳೆಂದು ವಿಂಗಡಿಸಲಾಗಿದ್ದು, ಅದರ ಆಧಾರದ ಮೇಲೆ ಆಹಾರ ಧಾನ್ಯದ ಪ್ರಮಾಣ ನೀಡಲಾಗುತ್ತದೆ.

> **ಜಿಲ್ಲೆಯ ಕೆಲ ತಾಲ್ಲೂಕುಗಳಿಗೆ ಹಾಲಿನ ಪುಡಿ ಪೂರೈಕೆಯಾಗಿಲ್ಲ. ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಹಾಲಿನ ಪುಡಿ ಪೂರೈಕೆಗೆ ತಕ್ಷಣವೇ ಕ್ರಮ ಕೈಗೊಳ್ಳಲಾಗುವುದು**
> **ಪ್ರಭಾಕರ,** ಉಪನಿರ್ದೇಶಕ, ಮಕ್ಕಳು ಮತ್ತು ಮಹಿಳಾ ಅಭಿವೃದ್ಧಿ ಇಲಾಖೆ, ಬಾಗಲಕೋಟೆ

ಹಾಲಿನ ಪುಡಿಯ ಬೆಲೆ ಹೆಚ್ಚಳ ಆಗಿರುವುದರಿಂದ ಮೊದಲು ನೀಡುತ್ತಿದ್ದ 20 ಗ್ರಾಂ ಹಾಲಿನ ಪುಡಿಯನ್ನು 15 ಗ್ರಾಂ ಪ್ರಮಾಣಕ್ಕೆ ಇಳಿಸಲಾಗಿದೆ. ಅಡುಗೆ ಎಣ್ಣೆ ಪ್ರಮಾಣವನ್ನು 5 ಗ್ರಾಂನಿಂದ 3.3 ಗ್ರಾಂಗೆ ಕಡಿಮೆ ಮಾಡಲಾಗಿದೆ. ಈ ಮೊದಲು ಮಿಕ್ಸ್ ಮಸಾಲೆ ಕೊಡಲಾಗುತಿತ್ತು. ಅದರ ಬದಲು ಈಗ ಮೆಣಸಿಕಾಯಿ ಪುಡಿ ನೀಡಲಾಗುತ್ತಿದೆ.

ಸಾಂಬಾರು ತಯಾರಿಸಲು ತೊಗರಿಬೇಳೆ ನೀಡಲಾಗುತಿತ್ತು. ಬೆಲೆ ಹೆಚ್ಚಾಗಿರುವ ಕಾರಣ ಅದರ ಬದಲು ಹೆಸರುಕಾಳು ಕೊಡಲಾಗುತ್ತಿದೆ. ಈಗ ಅದರ ಸಾಂಬಾರನ್ನೇ ಸಿದ್ಧಪಡಿಸಲಾಗುತ್ತದೆ. ಪ್ರತಿ ಮಗುವಿಗೆ 30.55 ಗ್ರಾಂ ತೊಗರಿಬೇಳೆ ನೀಡಲಾಗುತಿತ್ತು. ಈಗ 18.5 ಗ್ರಾಂ ಹೆಸರುಕಾಳು ನೀಡಲಾಗುತ್ತಿದೆ.

'ಆಹಾರ ನೀಡುವ ಪ್ರಮಾಣವನ್ನು ಆಗಾಗ ಬದಲಾಯಿಸುತ್ತ ಇರುತ್ತಾರೆ. ಯಾವ ವಸ್ತುವಿನ ಬೆಲೆ ಹೆಚ್ಚಾಗುತ್ತದೆಯೋ ಅದನ್ನು ಕಡಿತಗೊಳಿಸಿ, ಕಡಿಮೆ ಬೆಲೆ ಇರುವುದನ್ನು ಹೆಚ್ಚಿಗೆ ನೀಡುವಂತೆ ತಿಳಿಸುತ್ತಾರೆ' ಎಂದು ಅಂಗನವಾಡಿ ಕಾರ್ಯಕರ್ತೆಯೊಬ್ಬರು ತಿಳಿಸಿದರು.

ಎರಡು ತಿಂಗಳಿಂದ ಬಂದಿಲ್ಲ ಹಾಲಿನ ಪುಡಿ, ಸಕ್ಕರೆ: ಬಾಗಲಕೋಟೆ ಜಿಲ್ಲೆಯಲ್ಲಿ ಎರಡು ತಿಂಗಳಿನಿಂದ ಹಾಲಿನ ಪುಡಿ, ಸಕ್ಕರೆ ಬಂದಿಲ್ಲ. 6 ರಿಂದ 3 ವರ್ಷದೊಳಗಿನ ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ವಿತರಿಸಿಲ್ಲ. ಹಾಲಿನ ಪುಡಿ ಮತ್ತು ಸಕ್ಕರೆ ಲಭ್ಯವಿದ್ದರೆ ಮಾತ್ರ ಅಂಗನವಾಡಿ ಕೇಂದ್ರಗಳಲ್ಲಿ ಅವುಗಳನ್ನು ಮಕ್ಕಳಿಗೆ ನೀಡಲಾಗುತ್ತದ. ಇಲ್ಲದಿದ್ದರೆ, ಇಲ್ಲ.

'ಸರಿಯಾಗಿ ಆಹಾರ ಪೂರೈಕೆಯಾಗದ ಕಾರಣ ಜನ ನಮ್ಮನ್ನು ಬಯ್ಯುತ್ತಾರೆ. ಮೊದಲು ಸರಿಯಾಗಿ ನೀಡುತ್ತಿದ್ದೀರಿ. ಈಗ ನೀಡುತ್ತಿಲ್ಲ. ಎರಡು ತಿಂಗಳಿನಿಂದ ಅಗತ್ಯವಾದದ್ದು ಪೂರೈಕೆ ಆಗದಿದ್ದರೆ, ಮಕ್ಕಳ ಪೋಷಕರಿಗೆ, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಏನೆಂದು ಉತ್ತರಿಸಬೇಕು' ಎಂದು ಅಂಗನವಾಡಿ ಕಾರ್ಯಕರ್ತೆಯೊಬ್ಬರು ತಿಳಿಸಿದರು.

ವಿಶೇಷ ಕಾರ್ಯಾಚರಣೆ: 500ಕ್ಕೂ ಹೆಚ್ಚು ಪ್ರಕರಣ ದಾಖಲು

₹100 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

● ಕೆ.ಎಸ್.ಸುನಿಲ್

ಬೆಂಗಳೂರು: ನಗರದಲ್ಲಿ ಮಾದಕ ವಸ್ತುಗಳ ವಿರುದ್ಧ ನಿರಂತರ ಕಾರ್ಯಾಚರಣೆ ನಡೆಸುತ್ತಿರುವ ಪೊಲೀಸರು ಕಳೆದ ವರ್ಷ (2024) ಬರೋಬ್ಬರಿ ₹100 ಕೋಟಿ ಮೌಲ್ಯದ ವಿವಿಧ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಈ ಸಂಬಂಧ 550 ಪ್ರಕರಣಗಳನ್ನು ದಾಖಲಿಸಿ 2,662 ಕೆ.ಜಿ ವಿವಿಧ ಮಾದಕ ವಸ್ತುಗಳನ್ನು ವಶಪಡಿಸಿಕೊಂಡು, 742 ದಂಧೆಕೋರರನ್ನು ಬಂಧಿಸಿದ್ದಾರೆ. ಪೊಲೀಸರು ಕೈಗೊಂಡ ವಿಶೇಷ ಕಾರ್ಯಾಚರಣೆಗಳ ಫಲವಾಗಿ 2024ರಲ್ಲಿ ಡ್ರಗ್ಸ್ ಪ್ರಕರಣಗಳ ಸಂಖ್ಯೆ ಕೊಂಚ ಇಳಿಕೆಯಾಗಿದೆ.

2023ರಲ್ಲಿ 3,433 ಪ್ರಕರಣಗಳನ್ನು ದಾಖಲಿಸಿ 4,399 ಮಂದಿಯನ್ನು ಬಂಧಿಸಿ, ಸುಮಾರು ₹103 ಕೋಟಿ ಮೌಲ್ಯದ 5,387 ಕೆ.ಜಿ ಮಾದಕ ವಸ್ತು ವಶಕ್ಕೆ ಪಡೆದಿದ್ದರು. 2024ರಲ್ಲಿ ಗಾಂಜಾ, ಬ್ರೌನ್ ಶುಗರ್, ಅಫೀಮು, ಹೆರಾಯಿನ್ ಜೊತೆ ಸಿಂಥೆಟಿಕ್ ಡ್ರಗ್ಸ್ ಮಾರಾಟ ಪ್ರಮಾಣ ತುಸು ಇಳಿಕೆಯಾಗಿದೆ.

ಮಾದಕ ವಸ್ತು ಮಾರಾಟ ಜಾಲದಲ್ಲಿ ತೊಡಗಿದ್ದವರನ್ನು ಬಂಧಿಸಲಾಗುತ್ತಿದೆ. ಡ್ರಗ್ಸ್ ಖರೀದಿಸಿ ಸೇವಿಸುತ್ತಿದ್ದವರನ್ನು ಬಂಧಿಸದ ಕಾರಣ ಬಂಧಿತರ ಸಂಖ್ಯೆ ಕಡಿಮೆಯಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೆಡ್‌ಶೀಟ್ ಕವರ್, ಸೋಪ್ ಬಾಕ್ಸ್, ಚಾಕೋಲೇಟ್ ಬಾಕ್ಸ್, ಲಗೇಜ್ ಬ್ಯಾಗ್‌ಗಳಲ್ಲಿ ನಿಷೇಧಿತ ಮಾದಕವಸ್ತುಗಳನ್ನು ಅಡಗಿಸಿ ರೈಲು ಮತ್ತು ಬಸ್‌ಗಳ ಮೂಲಕ ಪ್ರಯಾಣಿಕರ ಸೋಗಿನಲ್ಲಿ ನಗರಕ್ಕೆ ತರಲಾಗುತ್ತಿದೆ. ಗೌಪ್ಯವಾದ ಸ್ಥಳದಲ್ಲಿ ಅವುಗಳನ್ನು ಇರಿಸಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತದೆ.

ಇಂತಹವರ ಕಾರ್ಯಚಟುವಟಿಕೆಗಳ ಮೇಲೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ.

ಗಾಂಜಾ, ಕೊಕೇನ್, ಎಂಡಿಎಂಎ ಮಾತ್ರೆ, ಎಕ್ಸ್‌ಟೆಸಿ ಟ್ಯಾಬ್ಲೆಟ್, ಸಿಂಥೆಟಿಕ್ ಡ್ರಗ್ಸ್, ಅಫೀಮು, ಬ್ರೌನ್ ಶುಗರ್ ಮತ್ತಿತರ ನಶೆ ಬರಿಸುವ ಮಾದಕವಸ್ತುಗಳನ್ನು ವಿದೇಶಿ ಪ್ರಜೆಗಳು ಮತ್ತು ಸ್ಥಳೀಯ ಡ್ರಗ್ಸ್ ಪೆಡ್ಲರ್‌ಗಳು ಸಂಗ್ರಹಿಸಿ ಮಾರಾಟ ಮಾಡುವ ವೇಳೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

'ಹೊರ ರಾಜ್ಯಗಳಿಂದ ಕಡಿಮೆ ಬೆಲೆಗೆ ಡ್ರಗ್ಸ್ ತರಿಸಿಕೊಂಡು ಸಣ್ಣ ಸಣ್ಣ ಪೊಟ್ಟಣಗಳಲ್ಲಿ ತುಂಬಿ ಹೆಚ್ಚಿನ ಬೆಲೆಗೆ ಪೆಡ್ಲರ್‌ಗಳು ಮಾರಾಟ ಮಾಡುತ್ತಾರೆ. ತ್ರಿಪುರಾ, ಬಿಹಾರ, ಆಂಧ್ರಪ್ರದೇಶ, ಒಡಿಶಾ ಗಡಿ ಭಾಗಗಳಲ್ಲಿ ಬೆಳೆದ ಗಾಂಜಾವನ್ನು ರೈಲು ಬಸ್‌ಗಳ ಮೂಲಕ ಪೊಲೀಸರ ಕಣ್ತಪ್ಪಿಸಿ ತರುತ್ತಿದ್ದಾರೆ. ನಗರದಲ್ಲಿ ಸಣ್ಣಪುಟ್ಟ ಸಿಗರೇಟ್ ಅಂಗಡಿಗಳಲ್ಲಿ ಕದ್ದುಮುಚ್ಚಿ ಮಾದಕವಸ್ತು ಮಾರಾಟ ಮಾಡಲಾಗುತ್ತಿದೆ. ಮಾದಕವಸ್ತು ಮಾರಾಟಗಾರರ ಮೇಲೆ ಆಗಾಗ್ಗೆ ದಾಳಿ ನಡೆಸಲಾಗುತ್ತಿದೆ' ಎಂದು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಯೊಬ್ಬರು ತಿಳಿಸಿದರು.

'ಮಾದಕವಸ್ತು ಮಾರಾಟ ಜಾಲ ಪ್ರಕರಣದಲ್ಲಿ ಬಂಧಿತರಿಂದ ಹೆಚ್ಚಾಗಿ ಎಂಡಿಎಂಎ, ಗಾಂಜಾ, ಸಿಂಥೆಟಿಕ್ ಡ್ರಗ್ಸ್ ವಶಕ್ಕೆ ಪಡೆದುಕೊಳ್ಳಲಾಗಿದೆ. ಅಧಿಕ ಬೆಲೆಯ ಸಿಂಥೆಟಿಕ್ ಡ್ರಗ್ಸ್ ದೆಹಲಿ ಹಾಗೂ ಮುಂಬೈನಿಂದ ನಗರಕ್ಕೆ ಬರುತ್ತಿದ್ದು, ಐಟಿ, ಬಿಟಿ ಉದ್ಯೋಗಿಗಳನ್ನು ಗುರಿಯಾಗಿಸಿಕೊಂಡು ಮಾರಾಟ ಮಾಡಲಾಗುತ್ತಿದೆ. ನಿರಂತರ ಜಾಗೃತಿ ಹಾಗೂ ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ಕೈಗೊಂಡ ಪರಿಣಾಮ ಕೊಂಚ ತಹಬದಿಗೆ ತರಲಾಗಿದೆ' ಎಂದು ತಿಳಿಸಿದರು.

'ಮಾದಕವಸ್ತು ಪೂರೈಕೆ ಮತ್ತು ಮಾರಾಟ ಜಾಲದಲ್ಲಿ ಸ್ಥಳೀಯ ಪೆಡ್ಲರ್ ಹಾಗೂ ವಿದೇಶಿ ಪೆಡ್ಲರ್‌ಗಳು ಭಾಗಿಯಾಗಿದ್ದಾರೆ. ಕೆಲ ದಿನಗಳ ಹಿಂದಷ್ಟೇ ವಿದೇಶಿ ಮಹಿಳೆಯನ್ನು ಬಂಧಿಸಿ ₹24 ಕೋಟಿ ಮೌಲ್ಯದ ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಅಫ್ರಿಕಾ ಮೂಲದವರು ಬಹುತೇಕ ಈ ಜಾಲದಲ್ಲಿ ತೊಡಗಿಸಿಕೊಂಡಿದ್ದಾರೆ' ಎಂದು ಮಾಹಿತಿ ನೀಡಿದರು.

ಅತಿ ಹೆಚ್ಚು ಪತ್ತೆಯಾದ ಮಾದಕ ವಸ್ತು

ಮಾದಕ ವಸ್ತು	ಪ್ರಕರಣಗಳ ಸಂಖ್ಯೆ	ವಶ (ಕೆ.ಜಿಗಳಲ್ಲಿ)	ಬಂಧಿತರು	ಮೌಲ್ಯ (ಕೋಟಿಗಳಲ್ಲಿ)
ಎಂಡಿಎಂಎ	92	35.62	128	₹50.93
ಗಾಂಜಾ	337	1,790	471	₹20.86
ಕೊಕೇನ್	11	3.94	15	₹7.55

ವಿದೇಶಿಯರ ಅಕ್ರಮ ವಾಸ

ನಗರದಲ್ಲಿ ವಿವಿಧೆಡೆ ವಾಸಿಸುತ್ತಿರುವ 411 ಮಂದಿ ವಿದೇಶಿ ಪ್ರಜೆಗಳ ವಾಸ ಸ್ಥಳಗಳಿಗೆ ಪೊಲೀಸರು ಭೇಟಿ ನೀಡಿ ವಿವರ ಪಡೆದುಕೊಂಡಿದ್ದಾರೆ. ಈ ಪೈಕಿ 29 ಮಂದಿ ವಿದೇಶಿಯರು ವೀಸಾ ಅವಧಿ ಮುಕ್ತಾಯಗೊಂಡ ಬಳಿಕವೂ ನಗರದಲ್ಲಿ ಅಕ್ರಮವಾಗಿ ವಾಸಿಸುತ್ತಿರುವುದು ಗೊತ್ತಾಗಿದೆ. ಹಾಗಾಗಿ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ)ಗೆ ಹಾಜರುಪಡಿಸಿ ಅವರ ಗಡೀಪಾರಿಗೆ ಕ್ರಮ ವಹಿಸಲು ಕೋರಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು

ಸಾರ್ವಜನಿಕರ ಆದ್ಯ ಗಮನಕ್ಕಾಗಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳು ಉತ್ತಮ ಹಾಗೂ ಮಿತವ್ಯಯಕರ ಸಾರಿಗೆ ಸೌಲಭ್ಯವನ್ನು ಸಾರ್ವಜನಿಕ ಪ್ರಯಾಣಿಕರಿಗೆ ಒದಗಿಸಿ ದೇಶದಲ್ಲಿಯೇ ಅತ್ಯುತ್ತಮ ಸಾರಿಗೆ ಸಂಸ್ಥೆಗಳು ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುತ್ತವೆ. ಇದಕ್ಕೆ ಕಾರಣ ಸಾರ್ವಜನಿಕ ಪ್ರಯಾಣಿಕರು ಸಾರಿಗೆ ಸಂಸ್ಥೆಗಳ ಮೇಲಿಟ್ಟಿರುವ ನಂಬಿಕೆ ಮತ್ತು ಅಭಿಮಾನ. ಸಾರಿಗೆ ಸಂಸ್ಥೆಗಳು ನಿರಂತರವಾಗಿ ಸುಧಾರಣಾ ಕ್ರಮಗಳನ್ನು ಅಳವಡಿಸಿಕೊಂಡು ಸಾರ್ವಜನಿಕ ಪ್ರಯಾಣಿಕರಿಗೆ ಉತ್ಕೃಷ್ಟ ಸೇವೆ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದರೂ ಸಹ, ಕೋವಿಡ್ ಕಾರಣದಿಂದಾಗಿ ರಾಜ್ಯದ ಸಾರಿಗೆ ಸಂಸ್ಥೆಗಳಿಗೆ ತೀವ್ರ ಹಿನ್ನಡೆಯಾಗಿ ಕೆಲವು ಮಾಹೆಗಳವರೆಗೆ ಸಂಪೂರ್ಣವಾಗಿ ಬಸ್ಸುಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯವಾಗಿದ್ದರಿಂದ ಸಂಸ್ಥೆಗಳ ಶಾಸನಬದ್ಧ ಪಾವತಿಗಳು ಹಾಗೂ ಇತರೆ ಅಪಾರವಾದ ಹೊಣೆಗಾರಿಕೆ ಕ್ರೋಢೀಕೃತವಾಗಿರುತ್ತದೆ.

ಮುಂದುವರೆದು, ಡೀಸೆಲ್ ಹಾಗೂ ಸಿಬ್ಬಂದಿ ವೆಚ್ಚದಲ್ಲಿ ಉಂಟಾಗುತ್ತಿರುವ ಗಣನೀಯ ಹೆಚ್ಚಳವು ಸಾರಿಗೆ ಸಂಸ್ಥೆಗಳಿಗೆ ಬಹುದೊಡ್ಡ ಹೊಡೆತ ನೀಡಿವೆ. ವಿವರ ಈ ಕೆಳಕಂಡಂತಿದೆ.

ವೆಚ್ಚದ ವಿವರ ಕೋಟಿ ರೂ. ಗಳಲ್ಲಿ

ಪ್ರತಿ ದಿನ ವೆಚ್ಚ (ಕೋಟಿ ರೂ.ಗಳಲ್ಲಿ)	2020 (ಡೀಸೆಲ್ ಪ್ರತಿ ಲೀಟರ್‌ಗೆ ರೂ.60.98)	2024 (ಡೀಸೆಲ್ ಪ್ರತಿ ಲೀಟರ್‌ಗೆ ರೂ.85.85)	ಪ್ರತಿದಿನ ವೆಚ್ಚದಲ್ಲಿ ಹೆಚ್ಚಳ
ಡೀಸೆಲ್	9.16	13.21	4.05
ಸಿಬ್ಬಂದಿ	12.85	18.36	5.51
ಒಟ್ಟು	22.01	31.57	9.56

ಡೀಸೆಲ್ ಹಾಗೂ ಸಿಬ್ಬಂದಿ ವೆಚ್ಚದಲ್ಲಿ ಉಂಟಾಗುವ ಹೆಚ್ಚಳವನ್ನು ಸರಿದೂಗಿಸಲು ಪ್ರಯಾಣಿಕ ಬಸ್ ದರಗಳನ್ನು ಈ ಹಿಂದಿನಿಂದಲೂ ಜಾರಿಯಲ್ಲಿರುವ ಸರ್ಕಾರದ ಆದೇಶದನ್ವಯ ಪರಿಷ್ಕರಿಸಬೇಕಿರುತ್ತದೆ. ನಿಗಮಗಳಿಂದ ಆಚರಣೆ ಮಾಡುತ್ತಿರುವ ಸಾರಿಗೆಗಳಿಗೆ ಹಾಲಿ ವಿಧಿಸುತ್ತಿರುವ ಪೈಸೆ/ಕಿ.ಮೀ ವಿವರಗಳನ್ನು ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಹೋಲಿಕೆ ಮಾಡಿದಾಗ ಕರಾರಸಾ ನಿಗಮದ ದರಗಳು ಕಡಿಮೆ ಇರುತ್ತವೆ. ವಿವರಗಳು ಕೆಳಕಂಡಂತಿವೆ.

ಇತರೇ ರಾಜ್ಯದ ನಿಗಮಗಳ ಹಾಲಿ ವಿಧಿಸುತ್ತಿರುವ ಪೈಸೆ/ಕಿ.ಮೀ ವಿವರಗಳು

ಸಾರಿಗೆ ವರ್ಗ/ ರಾಜ್ಯ	ನಗರ ಸಾರಿಗೆ (ಪೈಸೆ/ಕಿ.ಮೀ)	ಸಾಮಾನ್ಯ (ಪೈಸೆ/ಕಿ.ಮೀ)	ವೇಗದೂತ (ಪೈಸೆ/ಕಿ.ಮೀ)	ರಾಜಹಂಸ/ಡಿಲಕ್ಸ್ (ಪೈಸೆ/ಕಿ.ಮೀ)
ಕರ್ನಾಟಕ	81.47	65.90	100.57	145.00
ಆಂಧ್ರಪ್ರದೇಶ	123.24	102.00	125.00	162.00
ತೆಲಂಗಾಣ	131.00	104.00	126.00	164.00
ಮಹಾರಾಷ್ಟ್ರ	145.00	145.00	145.00	197.00

ಹಿಂದಿನ ಪ್ರಯಾಣ ದರ ಪರಿಷ್ಕರಣೆ ದಿನಾಂಕಗಳು

ಕ್ರ.ಸಂ	ನಿಗಮ/ಸಂಸ್ಥೆಗಳು	ಹಿಂದಿನ ಪ್ರಯಾಣ ದರ ದಿನಾಂಕ	ಶೇಕಡ ಹೆಚ್ಚಳ/ಇಳಿಕೆ
1	ಕರಾರಸಾ ನಿಗಮ ವಾಕರಸಾ ಸಂಸ್ಥೆ ಕಕರರಸಾ ನಿಗಮ	26/02/2020	12%
2	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ	25/04/2014 10/01/2015	17% – 2% ಒಟ್ಟಾರೆ 15%

ಮುಂದುವರೆದು, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ರಸ್ತೆ ಸಾರಿಗೆ ಕಾಯಿದೆ 1950ರ ಪ್ರಕಾರ ಅಸ್ತಿತ್ವಕ್ಕೆ ಬಂದಿರುತ್ತವೆ. ರಸ್ತೆ ಸಾರಿಗೆ ಸಂಸ್ಥೆಗಳು ಉಳಿಯಬೇಕಾದರೆ ಕಾಲಕಾಲಕ್ಕೆ ಡೀಸೆಲ್ ತೈಲದ ಬೆಲೆ ಮತ್ತು / ಅಥವಾ ನೌಕರರ ತುಟ್ಟಿಭತ್ಯೆಯಲ್ಲಿ ಹೆಚ್ಚಳವಾದಾಗ ಪ್ರಯಾಣ ದರಗಳನ್ನು ಪರಿಷ್ಕರಣೆ ಮಾಡಿ, ಆದಾಯವನ್ನು ಕ್ರೋಢೀಕರಿಸಿ ಉತ್ತಮವಾದ ಸಾರಿಗೆ ಸೌಲಭ್ಯವನ್ನು ಒದಗಿಸಬೇಕಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಸಾರಿಗೆ ಸೇವೆಗಳು ಪ್ರಗತಿದಾಯಕವಾಗಿ ಅಭಿವೃದ್ಧಿ ಹೊಂದುವ ಹಾದಿಯಲ್ಲಿದ್ದು, ಇದಕ್ಕೆ ಬೇಕಾಗುವ ಆರ್ಥಿಕ ಸಂಪನ್ಮೂಲವನ್ನು ಬಸ್ ಪ್ರಯಾಣ ದರ ಏರಿಕೆಯಿಂದ ಸಂಗ್ರಹವಾಗುವ ಆದಾಯದಿಂದಲೇ ಸರಿದೂಗಿಸಬೇಕಾಗಿರುತ್ತದೆ. ಆದ್ದರಿಂದ ರಾಜ್ಯದ ಜನರು ಬಸ್ ಪ್ರಯಾಣ ದರ ಏರಿಕೆಗೆ ಸಹಕರಿಸಿ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಅನುವು ಮಾಡಿಕೊಡಲು ಕೋರಲಾಗಿದೆ.

ಸುರಕ್ಷಿತ ಮತ್ತು ವಿಶ್ವಾಸಾರ್ಹ ಪ್ರಯಾಣದ ಪ್ರತೀಕ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಚಿತ್ರ ಸಂತೆ CHITRA SANTHE

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ಚಿತ್ರಕಲಾ ಪರಿಷತ್ತು
ಕುಮಾರ ಕೃಪಾ ರಸ್ತೆ, ಬೆಂಗಳೂರು–560 001

22ನೇ ಚಿತ್ರಸಂತೆ ಉದ್ಘಾಟನಾ ಕಾರ್ಯಕ್ರಮ
ಸಹಯೋಗ–ಕರ್ನಾಟಕ ಸರ್ಕಾರ

ದಿನಾಂಕ: 05.01.2025ರ ಭಾನುವಾರದಂದು ಬೆಳಗ್ಗೆ 10.30 ಗಂಟೆಗೆ

ಉದ್ಘಾಟಕರು:
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಕಲಾ ಪ್ರದರ್ಶನದ ಉದ್ಘಾಟನೆ:
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು
ಡಾ. ಎಂ.ಸಿ. ಸುಧಾಕರ್ – ಮಾನ್ಯ ಉನ್ನತ ಶಿಕ್ಷಣ ಸಚಿವರು
ಶ್ರೀ ಪಿ.ಸಿ. ಮೋಹನ್ – ಮಾನ್ಯ ಲೋಕಸಭಾ ಸದಸ್ಯರು, ಬೆಂಗಳೂರು ಕೇಂದ್ರ
ಶ್ರೀ ಎಸ್.ಟಿ. ಸೋಮಶೇಖರ್ – ಮಾನ್ಯ ಶಾಸಕರು, ಯಶವಂತಪುರ ವಿಧಾನಸಭಾ ಕ್ಷೇತ್ರ
ಶ್ರೀ ರಿಜ್ವಾನ್ ಅರ್ಷದ್ – ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಅಧ್ಯಕ್ಷತೆ
ಡಾ. ಬಿ. ಎಲ್. ಶಂಕರ್
ಅಧ್ಯಕ್ಷರು, ಕರ್ನಾಟಕ ಚಿತ್ರಕಲಾ ಪರಿಷತ್ತು

ಸರ್ವರಿಗೂ ಆದರದ ಸ್ವಾಗತ
ಡಾ. ಗೋಮತಿ ಗೌಡ – ಪ್ರಾಂಶುಪಾಲರು, ಚಿತ್ರಕಲಾ ಮಹಾವಿದ್ಯಾಲಯ
ಭೃಗು ಕುಮಾರ್ ಶರ್ಮ – ಪ್ರಾಂಶುಪಾಲರು, BSVA ಸಂಜೆ ಕಾಲೇಜು
ಶಶಿಧರ್ ಎಸ್.ಎನ್. – ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಚಿತ್ರಕಲಾ ಪರಿಷತ್ತು
ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು

ಚಿತ್ರಸಂತೆ ಸಮಯ: ಬೆಳಗ್ಗೆ 8.00 ರಿಂದ ರಾತ್ರಿ 8.00 ಗಂಟೆವರೆಗೆ

ಪ್ರದರ್ಶನ ಮತ್ತು ಮಾರಾಟದಲ್ಲಿ
22 ರಾಜ್ಯಗಳು
1500 ಕಲಾವಿದರು
40,000+ ಕಲಾಕೃತಿಗಳು

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು.
–ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ

PUBLIC NOTICE

NOTICE is hereby given that, our client intends to transact with the lands situated in Thornahalli Village, Kasaba Hobli, Maluru Taluk, Kolar District, from the respective owners, which is more fully described in the Schedule hereunder and hereinafter to as the "**Schedule Property**".

Any person having any subsisting claim, right, title or interest, in respect of the Schedule Property or any part thereof, in any manner including by way of easement, beneficial interest or pre-emption or under any agreement or other disposition or under any suit or award passed by any Court or Authority, arbitrator, *lis-pendens*, power of attorney, bequest, FSI, development rights, partnership, family arrangement or settlement or otherwise encumbrance howsoever ("**Claim**"), are hereby requested to respond with documentary proof to the undersigned within 10 (Ten) days from the date of publication of this notice, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim.

SCHEDULE PROPERTY

Sl. No.	Land owner	Sy. No.	Extent (excluding kharabh)		Kharabh (guntas)	Boundaries			
			Acre	Gunta		East by	West by	North by	South by
1.	Radhamma	133/1	5	-	15	Thornahalli Agrahara village boundary	Survey No. 134	Survey No. 133/2	40 feet road
2.		133/2	5	21	-	Thornahalli Agrahara village boundary	Survey Nos.134, 280,279, 278/3, 278/2, 277/4 and 277/2	Survey No. 135	Survey No. 133/1
3.	Jayaramappa	134/1	-	10	-	Survey No. 133	Survey No. 285 and cart road	Survey No. 134/2	Appa sandra plantation boundary
4.	Channamma, Nagaraja T S, Venkateshappa, Gowramma, Nagamma, Munilakshmi	134/2	2	-	2	Survey No. 133	Survey No. 134/3	Survey No. 280	Survey Nos. 134/1 and 285
5.	Narayana swamy, K Manjunath, Gowramma, Munirathna	134/3	1	30	2	Survey No. 134/2	Survey Nos. 285 and 282	Survey No. 280	Survey No. 285
6.	Narayanamma, Muniraju M, S N Lakshmi, Shankarappa, Manjunath, Pramilamma	280 part	-	31	-	Remaining land in Survey No. 280	Remaining land in Survey No. 280	Survey No. 279	Survey No. 282
7.	Muniyappa		-	28	-	Remaining land in Survey No. 280	Survey No. 281	Survey No. 279	Survey No. 282/1
8.	Krishnappa and K Srinivas murthy	282/2	1	13	-	Survey No. 282/3	Survey No. 282/1	Survey No. 280	Survey . No. 283
9.		285/1	1	2	7	Survey No. 134/1	Survey No. 285/2	Survey No. 134/2	Appa sandra plantation boundary
10.	Doddanna	285/3	1	24	4	Survey Nos.285/2 and 134/3	Survey Nos. 283 and 284/1	Survey No. 282/3	Appa sandra plantation boundary
11.		283 part	2	21	-	Survey No. 285/3	Remaining land in Survey No. 283	Survey No. 282	Survey No. 284
12.	T Subbarayappa	283 part	1	5	-	Remaining land in Survey No. 283	Remaining land in Survey No. 283	Remaining land in Survey No. 282	Remain ing land in Survey No. 284
13.	Shanthamma K V	285/2	-	38	2	Survey No. 285/1	Survey No. 285/3	Survey No. 134/3	Appa sandra plantation boundary
14.		277/3	1	12	-	Survey No. 277/4	Village boundary of Jodi Inam Guttahalli	Survey No. 277/1	Survey No. 278/1
15.		277/4	1	13	-	Survey No. 133/2	Survey No. 277/3	Survey No. 277/2	Survey No. 278/2
16.	Munishamappa	282/3	2	6	8	Survey No. 134 and cart road	Survey No. 282/2	Survey No. 280	Survey No. 283
17.		282/1	2	15	2	Survey No. 282/2	Survey No. 281	Survey No. 280	Survey No. 283
18.		280 part	2	4	6	Survey No. 133/2	Remaining land in Survey No. 280	Survey No. 279	Survey Nos. 282 and 134
19.	Jayaramappa	279	0	22	-	Remaining land in Survey No. 279	Survey No. 281	Survey No. 278/3	Survey No. 280

Dated this 3rd day of January 2025

Pavithra Thammaiah
Counsel
Khaitan & Co LLP
Embassy Quest, 3rd Floor, 45/1, Magrath Road, Bengaluru - 560 025
T: +91 80 4339 7000

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ- 561203

ಸಂ.: DPA/TP/CLU/18/2024-25 ದಿನಾಂಕ: 02.01.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಬೆಂ.ಅ.ರಾ.ವಿ.ನಿ.ಪ್ರಯೋ. ಪ್ರಾಧಿಕಾರದ ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀಮತಿ ಪುಟ್ಟಮ್ಮ ಕೋಂ ನರಸಪ್ಪ	ಯಲಹಂಕ	ಹೆಸರಘಟ್ಟ	ದಾಸನಹಳ್ಳಿ	11/4	1–20	ವ್ಯವಸಾಯ	ವಸತಿ

ಷರಾ: ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ಭೂ ಉಪಯೋಗ ಬದಲಾವಣೆ ಮಾಡಿಸಿ ಅಭಿವೃದ್ಧಿಪಡಿಸಲು ಸ್ವಯಂ ಇಚ್ಛಿಸಿದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದ್ದು, ಸದರಿ ಬಡಾವಣೆಯ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ ಮೂಲಭೂತ ವಸತಿ ಬೇಡಿಕೆಗಳನ್ನು ಪೂರೈಸುವ ಕಾರ್ಯ ಹಾಗೂ ಬಡಾವಣೆಯ ಮೂಲಭೂತ ಸೌಕರ್ಯ ಚಟುವಟಿಕೆಯಿಂದಾಗಿ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ'ಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ನಿಯಮ ಉಲ್ಲಂಘಿಸಿ ನಿರ್ಮಾಣ • ಸುತ್ತೋಲೆ ಹೊರಡಿಸಿದ ಪ್ರಧಾನ ವ್ಯವಸ್ಥಾಪಕರು

ಕಟ್ಟಡಗಳಿಗೆ ವಿದ್ಯುತ್ ಕಡಿತ: ಬೆಸ್ಕಾಂ

• ನವೀನ್ ಮಿನೇಜಸ್

ಬೆಂಗಳೂರು: ನಿಯಮಗಳನ್ನು ಉಲ್ಲಂಘಿಸಿ ನಿರ್ಮಿಸಿದ ಕಟ್ಟಡಗಳಿಗೆ ಶಾಶ್ವತ ಮತ್ತು ತಾತ್ಕಾಲಿಕ ವಿದ್ಯುತ್ ಸರಬರಾಜು ಕಡಿತ-ಗೊಳಿಸುವುದಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಪ್ರಕಟಿಸಿದೆ.

ನಾಗರಿಕ ಸಂಸ್ಥೆಗಳು, ಸಂಬಂಧಪಟ್ಟ ಪ್ರಾಧಿಕಾರಗಳು, ಪಂಚಾಯತ್ ರಾಜ್ ಇಲಾಖೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸೇರಿದಂತೆ ಇತರ ಸಂಸ್ಥೆಗಳಿಂದ ಮನವಿ ಬಂದ ಸಂದರ್ಭದಲ್ಲಿ ಮಾತ್ರ ಬೆಸ್ಕಾಂ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುತ್ತದೆ.

ಬೆಸ್ಕಾಂನ ಕಾರ್ಯಾಚರಣೆ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕರು (ಎಲೆಕ್ಟ್ರಿಕಲ್) ಈ ಸಂಬಂಧ ಇತ್ತೀಚೆಗೆ ಸುತ್ತೋಲೆ ಹೊರಡಿಸಿದ್ದಾರೆ. ಸಂಬಂಧಪಟ್ಟ ಪ್ರಾಧಿಕಾರದಿಂದ ಲಿಖಿತ ನಿರ್ದೇಶನಗಳನ್ನು ಪಡೆದ ಬಳಿಕ ಗ್ರಾಹಕರಿಗೆ ಏಳು ದಿನಗಳ ನೋಟಿಸ್ ನೀಡಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಅಧಿಕಾರಿಗಳಿಗೆ ಸುತ್ತೋಲೆಯಲ್ಲಿ ನಿರ್ದೇಶನ ನೀಡಿದ್ದಾರೆ. ಈ ಬಗ್ಗೆ ಯಾವುದೇ ಲೋಪಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಬಾಬುಸಾಪಾಳ್ಯದಲ್ಲಿ ಕಟ್ಟಡ ಕುಸಿದು ಒಂಬತ್ತು ಕಾರ್ಮಿಕರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತರು ನಡೆಸುತ್ತಿರುವ ವಿಚಾರಣೆಯನ್ನು ಬೆಸ್ಕಾಂ ತನ್ನ ಸುತ್ತೋಲೆಯಲ್ಲಿ ಉಲ್ಲೇಖಿಸಿದೆ.

'ಅಕ್ರಮ ಕಟ್ಟಡಗಳ ನಿರ್ಮಾಣದ ವಿರುದ್ಧ ಹೋರಾಡಲು ಬೆಸ್ಕಾಂನ ಈ ಆದೇಶ ಬಹಳ ಮಹತ್ವದ್ದಾಗಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್ಎಸ್ಬಿ) ಕೂಡ ಇದನ್ನು ಅನುಸರಿಸಬೇಕು' ಎಂದು ಹೇಳುತ್ತಾರೆ ಜಯನಗರ ನಿವಾಸಿ ಸಿ.ಎನ್.ಕುಮಾರ್.

ಬೆಂಗಳೂರು ಒಕ್ಕೂಟದ ಸಂಚಾಲಕ ಆರ್. ರಾಜಗೋಪಾಲನ್, 'ಬಿಬಿಎಂಪಿ ಕಾಯ್ದೆಯ ಸೆಕ್ಷನ್ 248 (3) ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಸೆಕ್ಷನ್ 15 (4)ರ ಪ್ರಕಾರ ಅಕ್ರಮವಾಗಿ ಕಟ್ಟಡ ನಿರ್ಮಿಸುವವರಿಗೆ ನೀಡುವ ದೃಢೀಕರಣ ಆದೇಶಗಳಲ್ಲಿ ವಿದ್ಯುತ್, ನೀರು ಮತ್ತು ವಿದ್ಯುತ್ ಸಂಪರ್ಕವನ್ನು ತಕ್ಷಣವೇ ಕಡಿತಗೊಳಿಸುವುದನ್ನು ಬಿಬಿಎಂಪಿ ಮಾಡಬೇಕು' ಎಂದು ಸಲಹೆ ನೀಡಿದರು.

'ಕಾಮಗಾರಿ ಸ್ಥಗಿತಗೊಳಿಸುವಂತೆ ಬಿಬಿಎಂಪಿ ನೀಡಿದ ನೋಟಿಸ್‌ಗಳನ್ನು ಲೆಕ್ಕಿಸದೇ ಕೆಲಸ ಮುಂದುವರಿಸುವುದನ್ನು ನೋಡಿದ್ದೇವೆ. ಕೆಲಸ ನಿಲ್ಲಿಸುವ ಪರಿಣಾಮಕಾರಿ ಮಾರ್ಗವೆಂದರೆ ವಿದ್ಯುತ್ ಮತ್ತು ನೀರು ಸರಬರಾಜನ್ನು ಕಡಿತಗೊಳಿಸುವುದು' ಎಂದು ಹೇಳಿದರು.

ಕರ್ನಾಟಕ ಗೃಹ ಮಂಡಳಿ

ಸಮನ್ವಯ ಕಛೇರಿ, 1ನೇ ಮಹಡಿ, ಅರ್ಕಾವತಿ ಬಡಾವಣೆ, ಬಿ.ಎಂ ರಸ್ತೆ, ಐಜೂರು ಪೊಲೀಸ್ ಸ್ಟೇಷನ್ ಹತ್ತಿರ, ರಾಮನಗರ–562159 ದೂ: 080–27275632.

ಸಂಖ್ಯೆ: ಕಗೃಮಂ/ಕಾಅ/ಸ.ಕ/105/2024–25 ದಿನಾಂಕ : 19.12.2024

ಪತ್ರಿಕಾ ಪ್ರಕಟಣೆ

ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ರಾಯಸಂದ್ರ ಗ್ರಾಮದಲ್ಲಿ ನಿರ್ಮಿಸಿರುವ ಸಂಯುಕ್ತ ವಸತಿ ಯೋಜನೆ ಬಡಾವಣೆಯ **MIG** ವರ್ಗದ ನಿವೇಶನ ಸಂಖ್ಯೆ: 1105ಯ ಹಂಚಿಕೆದಾರರಾದ ಕೃಷ್ಣ.ವಿ ರವರು ದಿನಾಂಕ: 29.10.2023 ರಂದು ಮರಣ ಹೊಂದಿರುತ್ತಾರೆ. ಈ ಹಿನ್ನಲೆಯಲ್ಲಿ ಸದರಿ ನಿವೇಶನವನ್ನು ದಿವಂಗತರ ವಾರಸುದಾರರು ಮತ್ತು ಧರ್ಮಪತ್ನಿಯಾದ ಶ್ರೀಮತಿ ಸುಮಾ.ಟಿ.ಎನ್ ಇವರ ಹೆಸರಿಗೆ ವರ್ಗಾವಣೆ ಮಾಡಲು ಪರಿಗಣಿಸಿದ್ದು, ಈ ಸಂಬಂಧ ಯಾವುದೇ ತಕರಾರು/ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆಯು ಪ್ರಕಟಣೆಗೊಂಡ ದಿನಾಂಕದಿಂದ 15 ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ತಕರಾರು ಅರ್ಜಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾಯೋಜನಾ ಕಛೇರಿ, ರಾಮನಗರ ಇಲ್ಲಿ ಸಲ್ಲಿಸಬಹುದಾಗಿದೆ. ನಿಗಧಿತ ದಿನಾಂಕದೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ದಿವಂಗತರ ವಾರಸುದಾರರು ಮತ್ತು ಧರ್ಮಪತ್ನಿಯಾದ ಶ್ರೀಮತಿ ಸುಮಾ.ಟಿ.ಎನ್ ರವರಿಗೆ ವರ್ಗಾವಣೆ ಮಾಡಿಕೊಡಲಾಗುವುದೆಂದು ಹಾಗೂ ನಂತರ ಬರುವ ಯಾವುದೇ ತಕರಾರು/ಮನವಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಸಮನ್ವಯ ಕಛೇರಿ, ರಾಮನಗರ

ಮಾದನಾಯಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ

ಮಾದನಾಯಕನಹಳ್ಳಿ ದಾಸನಪುರ ಹೋಬಳಿ ಬೆಂಗಳೂರು ಉತ್ತರ ತಾಲ್ಲೂಕು

ಚುನಾವಣಾ ನೋಟೀಸ್

ಮಾದನಾಯಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಮಾದನಾಯಕನಹಳ್ಳಿ ಗ್ರಾಮ ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು. ಈ ಸಂಘದ 5 ವರ್ಷದ ಅವಧಿಯ ಆಡಳಿತ ಮಂಡಳಿ ಚುನಾವಣೆಯನ್ನು ದಿನಾಂಕ: 25–01–2025ರ ಶನಿವಾರ ಬೆಳಿಗ್ಗೆ 9 ರಿಂದ 4 ಗಂಟೆಯವರೆಗೆ ಸಂಘದ ವಾಣಿಜ್ಯ ಮಳಿಗೆಯ ನೆಲಮಹಡಿಯಲ್ಲಿ ನಿಗಧಿಪಡಿಸಲಾಗಿದೆ.

ಆಕಾಂಕ್ಷೆಯುಳ್ಳ ಅಭ್ಯರ್ಥಿಗಳು ದಿನಾಂಕ 13–01–2025 ರಿಂದ 17–01–2025 ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದೆ. ದಿನಾಂಕ: 18–01–2025ರ ಶನಿವಾರ ನಾಮಪತ್ರ ಪರಿಶೀಲನೆ, ದಿ: 19–01–2025ರ ಭಾನುವಾರ 3 ಗಂಟೆಗೆ ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನವಾಗಿರುತ್ತದೆ. ದಿನಾಂಕ: 25–01–2025 ರಂದು ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದ್ದು, ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಅಂದೇ ಮತ ಎಣಿಕೆ ನಡೆದು ಫಲಿತಾಂಶ ಘೋಷಣೆಯಾಗಲಿದೆ.

ಸ್ಥಾನಗಳು: ಕೃಷಿ ಸಾಲಗಾರರ ಕ್ಷೇತ್ರ 08, ಕೃಷಿಯೇತರ ಸಾಲಗಾರರ ಕ್ಷೇತ್ರ 02, ಸಾಲಗಾರರಲ್ಲದ ಕ್ಷೇತ್ರ 02 ಒಟ್ಟು 12 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ವಿಶೇಷ ಸೂಚನೆ : ಮತದಾನ ಮಾಡಲು ಸದಸ್ಯರು ಸಂಘದಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.

ಸಹಿ/–ರಿಟರ್ನಿಂಗ್ ಅಧಿಕಾರಿ,
ಮಾದನಾಯಕನಹಳ್ಳಿ ಪ್ರಾ.ಕೃ.ಪ.ಸ.ಸಂ.ನಿ., ಮಾದನಾಯಕನಹಳ್ಳಿ

IN THE DEBTS RECOVERY TRIBUNAL - II, BENGALURU

(BSNL, Building, 4th Floor, "Telephone House" Rajbhavan Road, Bangalore - 560 001).

T.A.NO.1999/2017

STATE BANK OF INDIA ....applicant
SME City Credit Centre J.P.Nagar,
#1104, 2nd Floor, 24th Main, I Phase,
J.P. Nagar, Bangalore - 560 078.

Versus

Mrs. Indira Vasudev,
w/o Vasudev
(Proprietress of Sindu Enterprises),
Residing at #383, Challegata Road,
Rajeshwari Layout, Kumbaloodu Post,
Bangalore - 560 074. ....defendant(s)

Summons/Notice issued to Defendant under rule 23(Viii) of the Debts Recovery Tribunal (procedure) Rules,1993 by way of paper publication.

Whereas the applicant has instituted the above applicant u/s 19(1) of the Recovery of Debts Due to Banks and Financial Institutions Act, 1993 against you for the recovery of a sum of **Rs.25,81,594/- (Rupees Twenty Five Lakhs Eighty-One Thousand Five Hundred and Ninety-Four only)** mentioned therein together with current and future interest and other reliefs and the same stands posted to **31.01.2025 at 10.30. A.M** for your appearance. You are hereby require to show cause within 30 days of the publication of the summons or on the date and time mentioned above either in person or by a Legal Practioner or duly authorised agent, duly instructed as to why the relief prayed for should not be granted.

Take notice that in case of default the application will be heard and determined in your absence.

Given under my hand and the seal of this Tribunal on this 20th Day of September 2024.

Registrar
Debts Recovery Tribunal II,
Bengaluru

For further details, if any, please contact Branch Manager, State Bank of India, Kengeri branch (11282), # 1895, 1895/A, 1st Main Road (Ring Road), 2nd Cross, Kengeri Sattelite Town, Bengaluru-560060. Ph: 9449866634.

ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 'ಆಶಾ' ಪ್ರತಿಭಟನೆ 7ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಶಾ ಕಾರ್ಯಕರ್ತೆಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡುವ ಗೌರವಧನದ ಜೊತೆಗೆ ಪ್ರೋತ್ಸಾಹಧನ ಸೇರಿಸಿ ₹15 ಸಾವಿರ ಗೌರವಧನ ನಿಗದಿಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜನವರಿ 7ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ, 'ನಗರ ಪ್ರದೇಶದ ಆಶಾ ಕಾರ್ಯಕರ್ತೆಯರ ಹೆಚ್ಚುವರಿ ಕೆಲಸ ಮತ್ತು ನಗರ ಜೀವನದ ದುಬಾರಿ ವೆಚ್ಚಗಳಿಗೆ ಅನುಗುಣವಾಗಿ ₹20 ಸಾವಿರ ಗೌರವಧನ ಹೆಚ್ಚಿಸಬೇಕು. ಎಂಟು ವರ್ಷಗಳಿಂದ ಆಶಾನಿಧಿ ಪೋರ್ಟಲ್‌ನಲ್ಲಿ ಆಶಾ ಕಾರ್ಯಕರ್ತೆಯರು ಮಾಡಿದ ಕೆಲಸಗಳು ದಾಖಲಾಗದೇ, ಪ್ರೋತ್ಸಾಹ-ಧನವೂ ಬಂದಿಲ್ಲ. ರಾಜ್ಯದಾದ್ಯಂತ ಬಾಕಿ ಇರುವ ಮೂರು ತಿಂಗಳ ಪ್ರೋತ್ಸಾಹಧನ ಕೂಡಲೇ ಬಿಡು-ಗಡೆಗೊಳಿಸಬೇಕು' ಎಂದು ಆಗ್ರಹಿಸಿದರು.

'ಮೊಬೈಲ್ ಆಧಾರಿತ ಕೆಲಸಗಳನ್ನು ಒತ್ತಾಯ ಪೂರ್ವಕವಾಗಿ ಮಾಡಿಸಿಕೊಳ್ಳಬಾರದು. ಇಲ್ಲದಿದ್ದರೆ ಮೊಬೈಲ್ ಆಧಾರಿತ ಕೆಲಸಗಳಿಗೆ ಪ್ರೋತ್ಸಾಹಧನ ನಿಗದಿಪಡಿಸಬೇಕು. ಪಶ್ಚಿಮ ಬಂಗಾಳದ ಮಾದರಿಯಲ್ಲಿ ಸೇವಾ ನಿವೃತ್ತಿ ಪಡೆಯುವ ಆಶಾ ಕಾರ್ಯಕರ್ತೆಯರಿಗೆ ವರ್ಷಕ್ಕೆ ₹5 ಲಕ್ಷ ನೀಡಬೇಕು. ಪ್ರತಿವರ್ಷ ಆಶಾ ಕಾರ್ಯಕರ್ತೆ-ಯರಿಗೆ ಸಂಪೂರ್ಣ ಆರೋಗ್ಯ ತಪಾಸಣೆ ಸೌಲಭ್ಯ ಕಲ್ಪಿಸಬೇಕು. ನಮ್ಮನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಠ ವೇತನ, ಗ್ರಾಚ್ಯುಟಿ, ಭವಿಷ್ಯನಿಧಿ, ಕಾರ್ಮಿಕರ ರಾಜ್ಯ ವಿಮೆ ಸೌಲಭ್ಯ ಒದಗಿಸಬೇಕು' ಎಂದು ಒತ್ತಾಯಿಸಿದರು.

ಹಸಿರೀಕರಣಕ್ಕೆ 'ಬ್ಲೂಗ್ರೀನ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಸಿರೀಕರಣ, ಪರಿಸರ ಸ್ನೇಹಿ ನಗರವನ್ನಾಗಿಸುವ ಹವಾಮಾನ ಉಪಕ್ರಮ-ಗಳಲ್ಲಿ ಪಾಲ್ಗೊಳ್ಳುವ ವ್ಯಕ್ತಿ, ಸಮುದಾಯ, ಸಂಸ್ಥೆಗಳಿಗೆ 'ಬ್ಲೂಗ್ರೀನ್' ಪ್ರಶಸ್ತಿ ನೀಡಲು ಬೆಂಗಳೂರು ಹವಾಮಾನ ಕ್ರಿಯಾಕೋಶ ನಿರ್ಧರಿಸಿದೆ.

ಹವಾಮಾನ ಬದಲಾವಣೆಯನ್ನು ಎದುರಿಸಲು ನವೀನ ಪರಿಹಾರಗಳ ಜಾರಿ, ಸಮರ್ಥನೀಯ ಪರಿಣಾಮಕಾರಿ ಅಭ್ಯಾಸಗಳ-ನ್ನು ಅಳವಡಿಸಿಕೊಂಡವರಿಗೆ ಪ್ರಶಸ್ತಿಗಳನ್ನು ನೀಡಲಾಗುತ್ತದೆ ಎಂದು ಹವಾಮಾನ ಕ್ರಿಯಾ ಕೋಶದ ಮುಖ್ಯಸ್ಥೆ ಪ್ರೀತಿ ಗೆಹ್ಲೋಟ್ ಹೇಳಿದ್ದಾರೆ.

ಅರ್ಹರು ಜನವರಿ 30ರೊಳಗೆ ಅರ್ಜಿಯನ್ನು ಆನ್‌ಲೈನ್‌ನಲ್ಲಿ (http://bit.ly/BGAwardsApply) ಸಲ್ಲಿಸಬಹುದು ಅಥವಾ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು friendsofclimateactioncell@gmail.com ಮತ್ತು fellowsbcacbbmp@gmail.comಗೆ ಇಮೇಲ್ ಮಾಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ವಾರ್ತೆ

ಎಸ್. ಬಾಲಸುಬ್ರಹ್ಮಣ್ಯಂ

ಬೆಂಗಳೂರು: ಮೃದಂಗ ವಾದಕ ಎಸ್.ಬಾಲ ಸುಬ್ರಹ್ಮಣ್ಯಂ (71) ಗುರುವಾರ ನಿಧನರಾದರು. ವಯೋಸಹಜ ಅನಾರೋಗ್ಯದಿಂದ ಕೆ.ಆರ್.ರಸ್ತೆಯ ಸ್ವಗೃಹದಲ್ಲಿ ಕೊನೆಯುಸಿರೆಳೆದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ವರ್ಗದವರು ತಿಳಿಸಿದ್ದಾರೆ.

ಬಾಲಿ ಎಂದೇ ಜನಪ್ರಿಯರಾಗಿದ್ದ ಅವರು 'ಜೀ ಕನ್ನಡ' ವಾಹಿನಿಯ 'ಸರಿಗಮಪ' ಕಾರ್ಯಕ್ರಮದ ತೀರ್ಪುಗಾರರ ತಂಡದಲ್ಲಿ ಒಬ್ಬರಾಗಿ ಕೆಲಸ ಮಾಡಿದ್ದರು. ಸುಗಮ ಸಂಗೀತ ಕ್ಷೇತ್ರದ ಹಿರಿಯ ಕಲಾವಿದರಾದ ಬಾಳಪ್ಪ ಹುಕ್ಕೇರಿ, ಸಿ. ಅಶ್ವತ್ಥ್, ಮೈಸೂರು ಅನಂತ ಸ್ವಾಮಿ ಮೊದಲಾದವರೊಂದಿಗೆ ಕೆಲಸ ಮಾಡಿದ್ದರು. ಹಿನ್ನೆಲೆ ಸಂಗೀತದ ಕುರಿತು ಕೃತಿಯೊಂದನ್ನೂ ರಚಿಸಿದ್ದರು.

ಜಿ. ಆದೆಪ್ಪ



ಬೆಂಗಳೂರು: ದೊಡ್ಡನೆಕ್ಕುಂದಿ ನಿವಾಸಿ ಜಿ. ಆದೆಪ್ಪ (76) ಶನಿವಾರ (ಡಿಸೆಂಬರ್ 28ರಂದು) ನಿಧನರಾದರು. ಅವರಿಗೆ ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಇವರು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಲೆಕ್ಕಪತ್ರ ವಿಭಾಗದಲ್ಲಿ ದೀರ್ಘಕಾಲ ನೌಕರರಾಗಿ ಕಾರ್ಯನಿರ್ವಹಿಸಿ, ನಿವೃತ್ತಿಯಾಗಿದ್ದರು. ಆಂಧ್ರಪ್ರದೇಶದ ಲೇಪಾಕ್ಷಿಯ ಬಳಿಯ ಸ್ವಗ್ರಾಮದಲ್ಲಿ ಆದೆಪ್ಪ ಅವರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಫೆಬ್ರುವರಿ 28ರಿಂದ ಹಂಪಿ ಉತ್ಸವ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿ ಉತ್ಸವವನ್ನು ಫೆಬ್ರುವರಿ 28 ರಿಂದ ಮಾರ್ಚ್ 2ರವರೆಗೆ ಅದ್ದೂರಿಯಾಗಿ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಗುರುವಾರ ಅವರು ಮುಖ್ಯಮಂತ್ರಿಯವರನ್ನು ಭೇಟಿಯಾಗಿದ್ದರು. ಫೆಬ್ರುವರಿ 28ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಂಪಿ ಉತ್ಸವ ಉದ್ಘಾಟಿಸುವರು. ಮೂರು ದಿನ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ವಾರ್ತಾ ಇಲಾಖೆ ಪ್ರಕಟಣೆ ತಿಳಿಸಿದೆ.

'ಕಳೆದ ವರ್ಷ ಫೆಬ್ರುವರಿ 2ರಿಂದ 4ರವರೆಗೆ ಹಂಪಿ ಉತ್ಸವ ನಡೆದಿತ್ತು. ಈ ಸಲ ಬಿರು ಬೇಸಿಗೆಯಿದ್ದರೂ ಆತಂಕ ಬೇಡ. ಉತ್ತಮ ಮಳೆಯಾಗಿರುವ ಕಾರಣ ತುಂಗಭದ್ರಾ ಜಲಾಶಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಲಭ್ಯವಿದೆ. ಉತ್ಸವಕ್ಕೆ ನೀರಿನ ಕೊರತೆ ಕಾಡದು. ಜನವರಿ ಮೊದಲ ವಾರ ಸಾಕಷ್ಟು ಚಳಿ ಇರುವುದರಿಂದ ಫೆಬ್ರುವರಿ ಅಂತ್ಯದ ವೇಳೆಗೆ ಬಿಸಿಲಿನ ತೀವ್ರತೆ ಅಷ್ಟಾಗಿ ಕಾಡಲಿಕ್ಕಿಲ್ಲ' ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ 'ಪ್ರಜಾವಾಣಿ'ಗೆ ತಿಳಿಸಿದರು.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562123
ಇ–ಮೇಲ್: itstaff_ulb_mnhalli@yahoo.com ದೂರವಾಣಿ ಸಂಖ್ಯೆ: 080–23901864

ಕ್ರ.ಸಂ.: ಮಾ.ನ.ಕಾ/ತಾ.ಶಾ/ಸಿ.ಆರ್/15/2024–25 ದಿನಾಂಕ: 01.01.2025

ಟೆಂಡರ್ ಪ್ರಕಟಣೆ

ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ನಗರಸಭೆ ನಿಧಿ ಮತ್ತು 2022–23 ನೇ ಸಾಲಿನ ಎಸ್.ಎಫ್.ಸಿ ನಿಧಿ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ಹಾಗೂ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಮತ್ತು ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಗಾಗಿ ನೊಂದಯಿತ ಅರ್ಹ ಏಜೆನ್ಸಿದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವರ್ಗ
	ಸರ್ವಿಸ್ ಟೆಂಡರ್		
1	DMA/2024-25/SE4324	14.10	ಸಾಮಾನ್ಯ
	ಸರಬರಾಜು ಟೆಂಡರ್		
2	DMA/2024-25/IND4126	1.90	ಸಾಮಾನ್ಯ
	ಹೊಸ ಕಾಮಗಾರಿ ಟೆಂಡರ್		
3	DMA/2024-25/WS/WORK_INDENT34206	15.00	ಸಾಮಾನ್ಯ
4	DMA/2024-25/WS/WORK_INDENT34207	9.00	ಸಾಮಾನ್ಯ
	ಮರುಟೆಂಡರ್ ಕಾಮಗಾರಿಗಳು		
5	DMA/2024-25/WS/WORK_INDENT30494/call-2	35.00	ಸಾಮಾನ್ಯ

(1) ಆಕ್ಷೇಪಣೆ / ಮಾಹಿತಿಯನ್ನು ಸಲ್ಲಿಸಲು ದಿನಾಂಕ: 15.01.2025 ಸಂಜೆ 4.30 ಗಂಟೆ ವರೆಗೆ. (2) ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16.01.2025 ಸಂಜೆ 5.00 ಗಂಟೆ ವರೆಗೆ. (3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 17.01.2025 ಸಂಜೆ 5.15 ಗಂಟೆ ನಂತರ. (4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 21.01.2025 ಬೆಳಿಗ್ಗೆ 11.00 ಗಂಟೆ ನಂತರ. (5) ಹೆಚ್ಚಿನ ಮಾಹಿತಿಯನ್ನು **KPPP Portal** ನಲ್ಲಿ ಪಡೆಯಬಹುದಾಗಿದೆ.

ಕ್ರ.ಸಂ.	ವಿವರ	ಮಾಸಿಕ ಕನಿಷ್ಠ ಮೊತ್ತ (ರೂ. ಗಳಲ್ಲಿ)	ವರ್ಗ
	ಇ–ಹರಾಜು ಟೆಂಡರ್		
1	DMA/2024-25/AUCTION1992	5000/-	ಸಾಮಾನ್ಯ
2	DMA/2024-25/AUCTION1993	5000/-	ಸಾಮಾನ್ಯ

(1) ಮಾಹಿತಿಯನ್ನು ಸಲ್ಲಿಸಲು ದಿನಾಂಕ: 15.01.2025 ಸಂಜೆ 4.30 ಗಂಟೆ ವರೆಗೆ. (2) ಇ–ಹರಾಜುವಿನಲ್ಲಿ ಸ್ಪರ್ಧಿಸಲು ಕೊನೆಯ ದಿನಾಂಕ: 16.01.2025 ಸಂಜೆ 4.30 ಗಂಟೆ ವರೆಗೆ. (3) ಲೈವ್ ಬಿಡ್ ನಡೆಯುವ ದಿನಾಂಕ: 20.01.2025 ಬೆಳಿಗ್ಗೆ 10.30 ರಿಂದ ಸಂಜೆ 4.30 ಗಂಟೆವರೆಗೆ (ಡೆಲ್ಟಾ ಸಮಯ 5 ನಿಮಿಷಗಳು) (4) ಹೆಚ್ಚಿನ ಮಾಹಿತಿಯನ್ನು **KPPP Portal** ನಲ್ಲಿ ಪಡೆಯಬಹುದಾಗಿದೆ.

ಸಹಿ/– ಪೌರಾಯುಕ್ತರು
ನಗರಸಭೆ, ಮಾದನಾಯಕನಹಳ್ಳಿ

DIPR/CP/4086/SPAN/2024-25

PUBLIC NOTICE

My client intends to purchase the residential property, bearing No.38, R M V 2nd Stage H I G House, Bangalore having BBMP PID No. 100-767-38, Ward No.100 Sanjaynagar, the site measuring East to West 19.10 Meters and North to South 18.50 Meters, together with a residential building thereon consisting of Ground floor and the First floor, the said property owned by Mrs.Sheena Syed, daughter of Mr.Syed Mohammed Rawther and more particularly described in the Schedule hereunder and hereinafter referred to as the "Schedule Property". Any person/s, firms, societies, institutions, entity (corporate or otherwise) claiming to have any right, title, interest, benefit, claim or demand in, or to, the "Schedule Property" and/or any part thereof, by way of agreement of sale, exchange, gift, lease, tenancy, license, assignment, mortgage, charge, lien, trust, family arrangement/ settlement, encumbrance, inheritance, bequest, easement, possession, maintenance, development rights, order / decree / judgment of any Court, agreement, understanding or otherwise whatsoever, in respect of the "Schedule Property" or any part thereof, is required to intimate the same, together with attested true copies of all documentary evidence / proof in support thereof, to the undersigned, at the address given below, within **15 (fifteen) days** from the date of publication of this notice, failing which, any such claim or claims, if any, received post the expiry of the aforesaid time frame shall be considered as waived and/or abandoned.

Schedule

All the piece and parcel of the residential property, bearing No. 38, R M V 2nd Stage H I G House, Bangalore having BBMP PID No. 100-767-38, Ward No.100 Sanjaynagar, the site measuring East to West 19.10 Meters and North to South 18.50 Meters, together with the residential building thereon consisting of Ground floor and the First floor, and bounded on the

East by : Site No. 37,
West by : 3rd Main Road,
North by : 3rd Cross road,
South by : Site No.39.

Mr. Javaji Srinivasalu, Advocate,
No. 3 and 8, 9th B Main, Judicial Layout,
Allasandra, Bangalore — 560 065.
Phone: +91 98450 48334,
Mail: javajisrinivasalu@gmail.com

KARNATAK LINGAYAT EDUCATION SOCIETY

Since 1916
KLE SOCIETY
BELAGAVI

www.klesociety.org

CANCER CARE REVOLUTIONIZED

Inauguration of

KLE CANCER HOSPITAL, BELAGAVI

(DR. SAMPATKUMAR S. SHIVANAGI CANCER HOSPITAL)

Friday 3rd January, 2025 at 4.00 pm | District Stadium (JNMC Campus), Nehru Nagar, Belagavi

Chief Guest

SMT DROUPADI MURMU
Hon'ble President of India

Shri Pralhad Joshi
Hon'ble Minister for Consumer Affairs, Food and Public Distribution, New & Renewable Energy, Government of India



Dr. Prabhakar Kore
Hon'ble Chairman, KLE Society, Chancellor, KAHER, Belagavi

Shri Mahantesh S. Koujalgi
Hon'ble President, KLE Society, Belagavi

Dr. Sharanprakash Patil
Hon'ble Minister for Medical Education & Skill Development, Govt of Karnataka

Shri Satish Jarakiholi
Hon'ble Minister for Public Works Govt of Karnataka

Shri Jagadish Shettar
Hon'ble Former Chief Minister of Karnataka & Member of Parliament, Lok Sabha

Shri Asif (Raju) Sait
Hon'ble MLA, Belagavi North

Dr. Nitin Gangane
Hon'ble Vice Chancellor, KAHER

Shri Abhay Patil
Hon'ble MLA, Belagavi South

DONORS Dr. Sampatkumar S. Shivanagi Dr. (Smt.) Udaya S. Shivanagi

CLINICAL STRENGTHS

16 Hospital Locations | 4,500+ Healthcare Beds | 1,400 Free Healthcare Beds | 3,000 Professional Staff | 970+ Doctors

KLE FAMILY

310 Institutions | 1,45,000+ Students | 18,000+ Faculty

Pre-primary & School Education | Collegiate Education | Engineering & Technological University | Agricultural Education | KAHER (Deemed-to-be-University) | Management Education | Education in Law

ಬೆಂಗಳೂರಿನಲ್ಲಿಯೇ ಹೆಚ್ಚು • ಸಾಲಬಾಧೆ ಸೇರಿ ಹಲವು ಬಗೆಯ ಒತ್ತಡಗಳೇ ಕಾರಣ: ಒಡನಾಡಿ ಸಂಸ್ಥೆ

ಆತ್ಮಹತ್ಯೆ ಪ್ರವೃತ್ತಿ: ಪುರುಷರಲ್ಲೇ ಅಧಿಕ

• ಕೆ.ನರಸಿಂಹಮೂರ್ತಿ

ಮುಖ್ಯಾಂಶಗಳು

- ಆರ್‌ಟಿಐ ಅಡಿ ರಾಜ್ಯ ಅಪರಾಧ ದಾಖಲಾತಿ ವಿಭಾಗದ ಮಾಹಿತಿ
- ಸಾಮಾಜಿಕ ಒತ್ತಡ ಕಾರಣ

ಮೈಸೂರು: ರಾಜ್ಯದಲ್ಲಿ 2021ರಿಂದ 2023ರವರೆಗೆ ಮೂರು ವರ್ಷಗಳಲ್ಲಿ 28,324 ಪುರುಷರು ಆತ್ಮಹತ್ಯೆ ಮಾಡಿಕೊಂಡಿದ್ದು, ಇದು, ಮಹಿಳೆಯರ ಆತ್ಮಹತ್ಯೆ ಪ್ರಕರಣಗಳಿಗಿಂತ ಮೂರು ಪಟ್ಟಿಗೂ ಹೆಚ್ಚಿದೆ. ಈ ಅವಧಿಯಲ್ಲಿ 8,159 ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪುರುಷ–ಮಹಿಳೆಯರ ಆತ್ಮಹತ್ಯೆಯಲ್ಲಿ ರಾಜಧಾನಿ ಬೆಂಗಳೂರೇ ಮುಂದಿದೆ.

ಬೆಂಗಳೂರು ನಗರದ ನಂತರ, ಕ್ರಮವಾಗಿ ಬೆಳಗಾವಿ, ಬೆಂಗಳೂರು ಜಿಲ್ಲೆ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಹೆಚ್ಚು ಆತ್ಮಹತ್ಯೆಗಳು ನಡೆದಿವೆ. ಈ ನಾಲ್ಕೂ ಜಿಲ್ಲೆಗಳಲ್ಲಿ ತಲಾ ಸಾವಿರಕ್ಕೂ ಹೆಚ್ಚು ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಚಿಕ್ಕಮಗಳೂರು, ಹಾವೇರಿ, ಉಡುಪಿ, ವಿಜಯಪುರ, ದಾವಣಗೆರೆ, ಮೈಸೂರಿನಲ್ಲೂ ಹೆಚ್ಚಿವೆ.

ನಗರದ 'ಒಡನಾಡಿ' ಸೇವಾ ಸಂಸ್ಥೆಯು ಮಾಹಿತಿ ಹಕ್ಕು ಕಾಯ್ದೆ ಅಡಿ ಸಲ್ಲಿಸಿದ್ದ ಅರ್ಜಿಗೆ, ರಾಜ್ಯ ಅಪರಾಧ ದಾಖಲಾತಿ ವಿಭಾಗವು ಎಲ್ಲ ಜಿಲ್ಲೆಗಳು, ಪ್ರಮುಖ ನಗರಗಳು, ಕರ್ನಾಟಕ ರೈಲ್ವೆ ಮತ್ತು ಕೆಜಿಎಫ್ ಪೊಲೀಸ್ ಜಿಲ್ಲೆ ಸೇರಿ 38 ವಿಭಾಗಗಳ ಅಡಿ ನೀಡಿರುವ ಅಂಕಿ ಅಂಶದಲ್ಲಿ ಈ ಮಾಹಿತಿ ಇದೆ.

ಮೂರು ವರ್ಷದಲ್ಲಿ, ವರ್ಷದಿಂದ ವರ್ಷಕ್ಕೆ ಪುರುಷರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಿದ್ದರೆ, ಮಹಿಳೆಯರ ಆತ್ಮಹತ್ಯೆ ಪ್ರಕರಣಗಳು ಕಡಿಮೆಯಾಗಿವೆ ಎಂಬುದೂ ಅಂಕಿ ಅಂಶದಿಂದ ಗೊತ್ತಾಗುತ್ತದೆ.

ಒತ್ತಡವೇ ಕಾರಣ: ಪುರುಷರ ಆತ್ಮಹತ್ಯೆ ಪ್ರಕರಣಗಳೇ ಹೆಚ್ಚಿರುವುದರ ಬಗ್ಗೆ 'ಪ್ರಜಾವಾಣಿ'ಯೊಂದಿಗೆ ಆತಂಕ ವ್ಯಕ್ತಪಡಿಸಿದ 'ಒಡನಾಡಿ' ಸಂಸ್ಥೆಯ ನಿರ್ದೇಶಕ ಎಂ.ಎಲ್.ಪರಶುರಾಮ್, 'ಕೃಷಿಗಾಗಿ ಮಾಡಿದ ಸಾಲ ತೀರಿಸಲಾಗದ ಅಸಹಾಯಕತೆ, ಮಕ್ಕಳ ಶಿಕ್ಷಣ, ಮದುವೆಗಾಗಿ ಮಾಡಿದ ಸಾಲ, ಒಂಟಿತನ, ಕುಡಿತ, ಅನಾರೋಗ್ಯದಿಂದ ಮೂಡಿದ ಜಿಗುಪ್ಸೆ, ಲೈಂಗಿಕ ಅಶಕ್ತತೆ, ಪತ್ನಿ ಹಾಗೂ ಸಂಬಂಧಿಕರಿಂದ, ಮೇಲಧಿಕಾರಿಗಳಿಂದ ಕಿರುಕುಳ, ಅಕ್ರಮ ಸಂಬಂಧಗಳು ಸೇರಿ ಸಾಮಾಜಿಕ ಒತ್ತಡಗಳೂ ಹಲವು ಪುರುಷರ ಆತ್ಮಹತ್ಯೆಗೆ ಕಾರಣ' ಎಂದು ಪ್ರತಿಪಾದಿಸಿದರು.

'ಕೌಟುಂಬಿಕ ಮತ್ತು ಔದ್ಯೋಗಿಕ ಒತ್ತಡಗಳ ನಿರ್ವಹಣೆಯಲ್ಲಿ ಸೋಲು, ಜೀವನಪ್ರೀತಿಯನ್ನು ಮೂಡಿಸುವಲ್ಲಿ ಸಮೂಹ ಮಾಧ್ಯಮಗಳ ವೈಫಲ್ಯವೂ ಪುರುಷರನ್ನು ಆತ್ಮಹತ್ಯೆಗೆ ಪ್ರಚೋದಿಸಿರಬಹುದು' ಎಂದು ಅಭಿಪ್ರಾಯಪಟ್ಟರು.

ಅಧ್ಯಯನ ಅಗತ್ಯ: 'ಇಷ್ಟೊಂದು ಸಂಖ್ಯೆಯಲ್ಲಿ ಪುರುಷರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರ ಖಚಿತ ಹಿನ್ನೆಲೆ, ಕಾರಣ, ಪ್ರೇರಣೆ ಹಾಗೂ ಪರಿಹಾರಗಳ ಅಧ್ಯಯನ ತುರ್ತಾಗಿ ನಡೆಯಬೇಕು. ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಈ ನಿಟ್ಟಿನಲ್ಲಿ ಪ್ರಯತ್ನಿಸುವುದು ಅತ್ಯವಶ್ಯ' ಎಂದೂ ಹೇಳಿದರು.

ಆತ್ಮಹತ್ಯೆ ವರ್ಷಾವಾರು ವಿವರ

ವರ್ಷ	ಪುರುಷರು	ಮಹಿಳೆಯರು
2021	9,243	2,713
2022	9,523	2,783
2023	9,558	2,663
ಒಟ್ಟು	28,324	8,159

ಪುರುಷರು

ಬೆಂಗಳೂರು ನಗರ	4,839
ಬೆಳಗಾವಿ	1,896
ಬೆಂಗಳೂರು ಜಿಲ್ಲೆ	1,159
ಶಿವಮೊಗ್ಗ	1,142
ತುಮಕೂರು	1,006

ಮಹಿಳೆಯರು

ಬೆಂಗಳೂರು ನಗರ	1,776
ಬೆಳಗಾವಿ	462
ಬೆಂಗಳೂರು ಜಿಲ್ಲೆ	379
ತುಮಕೂರು	337
ಶಿವಮೊಗ್ಗ	329

ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಆತ್ಮಹತ್ಯೆಗಳನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚಿಂತಿಸಬೇಕು

ಎಂ.ಎಲ್.ಪರಶುರಾಮ್
'ಒಡನಾಡಿ' ನಿರ್ದೇಶಕರು

ಸುದ್ದಿ 2 ನಿಮಿಷ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆಗೂ ಚುನಾವಣೆ: ಜೋಶಿ

ಮಂಗಳೂರು: 'ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಮಾಡಲಾಗುತ್ತದೆ ಎಂದು ನಾನು ಹೇಳುವುದಿಲ್ಲ. ಆದರೆ, ಪ್ರಜಾಪ್ರಭುತ್ವ ನೆಲೆಯಲ್ಲಿ ನಮ್ಮ ಪಕ್ಷದ ಆಂತರಿಕ ಚುನಾವಣಾ ಪ್ರಕ್ರಿಯೆ ದೇಶದಾದ್ಯಂತ ಜಾರಿಯಲ್ಲಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಪಕ್ಷದ ಬೂತ್ ಹಂತದ ಚುನಾವಣೆಗಳು ಈಗಾಗಲೇ ಪೂರ್ಣಗೊಂಡಿದ್ದು, ಮಂಡಲ ಹಂತದ ಚುನಾವಣೆಗಳು ನಡೆಯುತ್ತಿವೆ. ಆ ಬಳಿಕ ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟದ ಪದಾಧಿಕಾರಿಗಳ ಆಯ್ಕೆಗೂ ಚುನಾವಣೆ ನಡೆಯುತ್ತದೆ. ಬಿ.ವೈ. ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಅವರು ಚುನಾವಣೆ ಮೂಲಕ ಆಯ್ಕೆಯಾಗಿದ್ದಲ್ಲ. ಚುನಾವಣೆಯಲ್ಲಿ ಈಗಿನ ಅಧ್ಯಕ್ಷರೇ ಮತ್ತೊಮ್ಮೆ ಆಯ್ಕೆಯಾಗಲೂಬಹುದು' ಎಂದರು.

'ಕಾಂಗ್ರೆಸ್‌ನವರಂತೆ ಕಾಗದದಲ್ಲಿ ತೋರಿಸುವುದಕ್ಕಾಗಿ ಮಾತ್ರ ನಾವು ಪಕ್ಷದ ಆಂತರಿಕ ಚುನಾವಣೆ ನಡೆಸುವುದಿಲ್ಲ. ಪಾರದರ್ಶಕವಾಗಿ ಚುನಾವಣೆ ನಡೆಸುತ್ತೇವೆ. ಕೇಂದ್ರ ಸಚಿವರಿಗೆ ಒಂದೊಂದು ರಾಜ್ಯದ ಚುನಾವಣೆಯ ಉಸ್ತುವಾರಿ ವಹಿಸಲಾಗಿದೆ. ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ನಮ್ಮ ರಾಜ್ಯದ ಉಸ್ತುವಾರಿಯನ್ನಾಗಿ ಹಾಗೂ ನನ್ನನ್ನು ಕೇರಳದ ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ' ಎಂದರು.

ಕರ್ತವ್ಯಲೋಪ: ಮೂವರು ಪೊಲೀಸರ ಅಮಾನತು

ಶ್ರೀರಂಗಪಟ್ಟಣ: ಕರ್ತವ್ಯಲೋಪದ ಕಾರಣಕ್ಕೆ ತಾಲ್ಲೂಕಿನ ಕೆ.ಆರ್.ಎಸ್ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಪುರುಷೋತ್ತಮ, ಕಾನ್‌ಸ್ಟೆಬಲ್‌ಗಳಾದ ಅನಿಲ್‌ಕುಮಾರ್ ಮತ್ತು ಪ್ರಭುಸ್ವಾಮಿ ಅವರನ್ನು ಗುರುವಾರ ಸೇವೆಯಿಂದ ಅಮಾನತು ಮಾಡಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಆದೇಶಿಸಿದ್ದಾರೆ.

'ಸಾರ್ವಜನಿಕರ ದೂರುಗಳಿಗೆ ಸ್ಪಂದಿಸದಿರುವುದು ಮತ್ತು ಅಶಿಸ್ತಿನ ವರ್ತನೆಯ ಕಾರಣ ಅಮಾನತು ಮಾಡಲಾಗಿದೆ' ಎಂದು ಠಾಣೆಯ ಸಿಪಿಐ ಟಿ.ಎಂ. ಪುನೀತ್ ತಿಳಿಸಿದ್ದಾರೆ.

'ಕೆ.ಆರ್.ಎಸ್. ಬೃಂದಾವನಕ್ಕೆ ಬಂದ ಪ್ರವಾಸಿಗರ ವಾಹನಗಳಿಂದ ಮೂವರು ಹಣ ವಸೂಲಿ ಮಾಡುತ್ತಿದ್ದರೆಂಬ ಆರೋಪದ ಮೇರೆಗೆ ಅಮಾನತು ಮಾಡಲಾಗಿದೆ' ಎನ್ನಲಾಗಿದ್ದು, ಅದಕ್ಕೆ ಸಂಬಂಧಿಸಿದ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಅಯ್ಯಪ್ಪಸ್ವಾಮಿ ಮಾಲೆ ಧರಿಸಿ, ಇರುಮುಡಿ ಹೊತ್ತ ಮುಸ್ಲಿಂ ಯುವಕ

ಪ್ರಜಾವಾಣಿ ವಾರ್ತೆ

ದೇವದುರ್ಗ (ರಾಯಚೂರು ಜಿಲ್ಲೆ): ಪಟ್ಟಣದ ಮುಸ್ಲಿಂ ಸಮುದಾಯದ ಯುವಕ ಬಾಬು ಗೌರಂಪೇಟ ಅವರು ಅಯ್ಯಪ್ಪ ಸ್ವಾಮಿ ಮಾಲೆ ಧರಿಸಿ, ಹಿಂದೂ–ಮುಸ್ಲಿಂ ನಡುವೆ ಸೌಹಾರ್ದ ಮೆರೆದಿದ್ದಾರೆ.

ಜಾತಿ, ಧರ್ಮಗಳ ನಡುವಿನ ತಿಕ್ಕಾಟಗಳಿಂದ ಸಾಮಾಜಿಕ ಸ್ವಾಸ್ಥ್ಯ ಹಾಳಾಗುತ್ತಿರುವ ಹೊತ್ತಿನಲ್ಲಿ ಗೌರಂಪೇಟ ವಾರ್ಡ್ ನಿವಾಸಿಯಾಗಿರುವ ಬಾಬು ಅವರು ಭಾವೈಕ್ಯಕ್ಕೆ ನಾಂದಿ ಹಾಡಿದ್ದಾರೆ.

ಬಾಬು ಅವರು ತಮ್ಮ ವಾರ್ಡ್‌ನ ಗೆಳೆಯರ ಬಳಗದವರೊಂದಿಗೆ 2014ರಿಂದ ಅಯ್ಯಪ್ಪಸ್ವಾಮಿ ಮಾಲೆ ಧರಿಸುತ್ತಿದ್ದಾರೆ. ಈ ಮೂಲಕ 'ದೇವನೊಬ್ಬ ನಾಮ ಹಲವು' ಎಂಬ ಸಂದೇಶ ಸಾರುತ್ತಿದ್ದಾರೆ.

ಪ್ರತಿ ವರ್ಷ ಮಾಲೆ ಧರಿಸಿ ಅಯ್ಯಪ್ಪನ ದರ್ಶನಕ್ಕೆ ತೆರಳುತ್ತಾರೆ. ಸರದಿಯಲ್ಲಿ ನಿಂತು ಅಯ್ಯಪ್ಪನ ದರ್ಶನ ಪಡೆಯುತ್ತಾರೆ. ಎಲ್ಲರಂತೆ ಅಯ್ಯಪ್ಪ ಸ್ವಾಮಿಗೆ ಪೂಜೆ ಸಲ್ಲಿಸುತ್ತಾರೆ.

'ಎಲ್ಲರ ಜೊತೆಗೂಡಿ ಶಬರಿಮಲೆಗೆ ತೆರಳಿ ಭಕ್ತಿ ಅರ್ಪಿಸಿ, ಗುರುವಾರ ಮನೆಗೆ ಮರಳಿದ್ದೇನೆ' ಎಂದು ಬಾಬು ಗೌರಂಪೇಟ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ಬಾಬು ಅವರು ಅಯ್ಯಪ್ಪ ಸ್ವಾಮಿ ಮಾಲೆ ಧರಿಸಿ, ಇರುಮುಡಿ ಹೊತ್ತು ಶಬರಿಮಲೆಯಲ್ಲಿ ದರ್ಶನಕ್ಕಾಗಿ ಸರತಿ ಸಾಲಿನಲ್ಲಿ ನಿಂತಿದ್ದ ಕ್ಷಣ...

ಭಕ್ತ ಸಾಗರ...
ಬೆಳಗಾವಿ ಜಿಲ್ಲೆ ಬೈಲಹೊಂಗಲ ಸಮೀಪದ ಇಂಚಲ ಗ್ರಾಮದ ಶಿವಯೋಗೀಶ್ವರ ಸಾಧು ಸಂಸ್ಥಾನಮಠದ ಪೀಠಾಧಿಪತಿ ಶಿವಾನಂದ ಭಾರತಿ ಸ್ವಾಮೀಜಿ ಅವರ 85ನೇ ವರ್ಷದ ವರ್ಧಂತಿ ಮಹೋತ್ಸವ, ಪೀಠಾರೋಹಣದ 55ನೇ ವರ್ಷಾಚರಣೆ ಪ್ರಯುಕ್ತ ಗುರುವಾರ ಶಿವಯೋಗೀಶ್ವರ ರಜತ ರಥೋತ್ಸವ ಹಾಗೂ ಮಹಾರಥೋತ್ಸವ ನಡೆಯಿತು

ಪ್ರಜಾವಾಣಿ ಚಿತ್ರ: ರವಿಕುಮಾರ ಎಂ. ಹುಲಕುಂದ

'ತನಿಖೆ ವಿಳಂಬವಾದರೆ ಸಾಕ್ಷ್ಯ ನಾಶದ ಆತಂಕ'

ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾಗೆ ಪತ್ರ ಬರೆಯುವೆ–ಸಚಿನ್ ಪಾಂಚಾಳ್ ಸಹೋದರಿ

ಪ್ರಜಾವಾಣಿ ವಾರ್ತೆ

ಬೀದರ್: 'ನನ್ನ ತಮ್ಮ ಆತ್ಮಹತ್ಯೆ ಮಾಡಿಕೊಂಡು ಎಂಟು ದಿನಗಳು ಕಳೆದರೂ ಯಾರ ವಿರುದ್ಧವೂ ಕ್ರಮ ಜರುಗಿಸಿಲ್ಲ. ತನಿಖೆ ಹೀಗೆಯೇ ವಿಳಂಬವಾದರೆ ಸಾಕ್ಷ್ಯ ನಾಶ ಆಗಬಹುದು' ಎಂದು ಮೃತ ಯುವ ಗುತ್ತಿಗೆದಾರ ಸಚಿನ್ ಪಾಂಚಾಳ್ ಅವರ ಸಹೋದರಿ ಸುರೇಖಾ ಆತಂಕ ವ್ಯಕ್ತಪಡಿಸಿದರು.

'ಸಿಐಡಿ, ಸಿಬಿಐ ಸೇರಿದಂತೆ ಯಾವುದಾದರೂ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಿ. ತಪ್ಪಿತಸ್ಥರು ಯಾರೇ ಇರಲಿ ಅವರ ವಿರುದ್ಧ ಕ್ರಮ ಜರುಗಿಸಬೇಕು. ಘಟನೆ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆಯಲು ನಿರ್ಧರಿಸಿದ್ದೇವೆ' ಎಂದು ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ತಮ್ಮನ ಸಾವಿನ ವಿಷಯದಲ್ಲಿ ಯಾರೂ ರಾಜಕಾರಣ ಮಾಡುವುದು ಬೇಡ. ಆತ ಮರಣ ಪತ್ರದಲ್ಲಿ ಯಾರ‍್ಯಾರ ಹೆಸರುಗಳನ್ನು ಬರೆದಿದ್ದಾನೋ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ನಿರ್ಲಕ್ಷ್ಯ ತೋರಿದ ಪೊಲೀಸ್ ಮೇಲಧಿಕಾರಿಗಳ ಮೇಲೆಯೂ ಕ್ರಮ ಕೈಗೊಳ್ಳಬೇಕು. ಅಮಾಯಕ ಪೊಲೀಸರನ್ನು ಅಮಾನತುಗೊಳಿಸಲಾಗಿದೆ. ಧನ್ನೂರ ಠಾಣೆಯ ಪಿಎಸ್‌ಐ ವಿಶ್ವಾರಾಧ್ಯ ಅವರನ್ನು ಕಲಬುರಗಿಗೆ ವರ್ಗಾವಣೆಗೊಳಿಸಿದ್ದಾರೆ. ನಮಗೆ ಇದು ಬೇಕಿಲ್ಲ. ಬೀದರ್‌ನ ಗಾಂಧಿ ಗಂಜ್ ಠಾಣೆ, ಭಾಲ್ಕಿ ತಾಲ್ಲೂಕಿನ ಧನ್ನೂರ ಠಾಣೆಯ ಪೊಲೀಸ್ ಮೇಲಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. ಇವರಿಂದಾಗಿ ಕೆಳಹಂತದ ಸಿಬ್ಬಂದಿ ನಮ್ಮ ದೂರು ಸ್ವೀಕರಿಸಲಿಲ್ಲ' ಎಂದು ಹೇಳಿದರು.

ಸಚಿನ್ ಅವರು ಮರಣಪತ್ರದಲ್ಲಿ ಯಾರ‍್ಯಾರ ಹೆಸರು ಬರೆದಿದ್ದಾರೋ ಅವರ ವಿರುದ್ಧ ಹಾಗೂ ನಿರ್ಲಕ್ಷ್ಯ ತೋರಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು

ವಿಜಯಕುಮಾರ ಪತ್ತಾರ, ರಾಜ್ಯ ಘಟಕದ ಅಧ್ಯಕ್ಷ, ವಿಶ್ವಕರ್ಮ ಮಹಾ ಒಕ್ಕೂಟ

ತಮ್ಮನ ಸಾವಿನ ವಿಷಯದಲ್ಲಿ ರಾಜಕೀಯ ಬೇಡ. ಆರೋಪಿಗಳ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳುವುದು ಬಿಟ್ಟು, ಅಪರಾಧಿಗಳು ಎಂಬಂತೆ ನಮ್ಮೊಂದಿಗೆ ವರ್ತಿಸುತ್ತಿದ್ದಾರೆ

ಸುರೇಖಾ
ಸಚಿನ್ ಪಾಂಚಾಳ್ ಅಕ್ಕ

ಬಿಜೆಪಿಯವರು ಅಂಗಿ ಹರಿದುಕೊಂಡರೂ ರಾಜೀನಾಮೆ ನೀಡಲಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಅವರ ತಂದೆ ಅವರು ಯಾವತ್ತೂ ರಾಜಕಾರಣದಲ್ಲಿ ಇಷ್ಟು ದುರಹಂಕಾರದ ಹೇಳಿಕೆ ನೀಡಿದ್ದನ್ನು ನೋಡಿಲ್ಲ. ಪ್ರಿಯಾಂಕ್ ಅವರಿಗೆ ದುರಹಂಕಾರ ತಲೆಗೇರಿದೆ. ಜನರೇ ಪಾಠ ಕಲಿಸುತ್ತಾರೆ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

'ರಾಜು ಕಪನೂರ ಅವರಿಂದ ಸಚಿನ್ ಹಣ ತೆಗೆದುಕೊಂಡ ವಿಚಾರ ನಮಗೆ ಗೊತ್ತಿಲ್ಲ. ಕಲಬುರಗಿಯಲ್ಲಿ ಸಚಿನ್ ಕಚೇರಿ ಮಾಡಿದ್ದ ಎಂದು ನಮಗೆ ತಿಳಿಸಿದ್ದ. ಆದರೆ, ನಾವೆಂದೂ ಅಲ್ಲಿಗೆ ಹೋಗಿ ನೋಡಿರಲಿಲ್ಲ. ಇತ್ತೀಚೆಗೆ ಗುತ್ತಿಗೆದಾರ ಸಂಘದವರು ನಮ್ಮ ಮನೆಗೆ ಬಂದು, ಸಚಿನ್ ಅವರ ಬಳಿ ಲೈಸೆನ್ಸ್ ಇದೆಯೋ ಇಲ್ಲವೋ ಎಂದು ಕೇಳಿದ್ದರು. ನಮಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳಿದ್ದೆ' ಎಂದರು.

ವ್ಯತಿರಿಕ್ತ ಹೇಳಿಕೆ: 'ಸಚಿನ್ ಶವದ ಬಳಿ ಮೊಬೈಲ್ ಫೋನ್, ಸಿಮ್ ಸಿಕ್ಕಿದೆ ಎಂದು ರೈಲ್ವೆ ಪೊಲೀಸರು ತಿಳಿಸಿದ್ದರು. ಈಗ ಇಲ್ಲ ಎನ್ನುತ್ತಿದ್ದಾರೆ. ಸಚಿನ್‌ಗೆ ಸಂಬಂಧಿಸಿದ ಯಾವ್ಯಾವ ವಸ್ತುಗಳು ಸಿಕ್ಕಿವೆ ಎನ್ನುವುದರ ಬಗ್ಗೆಯೂ ಪೊಲೀಸರು ತಿಳಿಸುತ್ತಿಲ್ಲ. ಎಲ್ಲವೂ ತನಿಖೆ ನಂತರ ಗೊತ್ತಾಗಲಿದೆ ಎಂದು ಹೇಳುತ್ತಿದ್ದಾರೆ' ಎಂದು ವಿವರಿಸಿದರು.

ಕಣ್ಣೀರು ಹಾಕಿದ ಸಹೋದರಿ: 'ನಮ್ಮ ತಂದೆ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರೆ, ತಾಯಿ ಪ್ಯಾರಾಲಿಸಿಸ್ ರೋಗಿ. ಇಬ್ಬರಿಗೂ ಆರೋಗ್ಯ ಸಮಸ್ಯೆ ಇರುವ ಕಾರಣ ಸಚಿನ್ ಮರಣ ಪತ್ರ ಬರೆದಿರುವ ವಿಷಯ ತಿಳಿಸಿರಲಿಲ್ಲ. ಆತ ಮರಣ ಹೊಂದಿದ ನಂತರ ನಮ್ಮ ತಂದೆಗೆ ವಿಷಯ ತಿಳಿಸಿದ್ದೆವು. ಮನೆಗೆ ಶವ ಬಂದಾಗ ತಾಯಿಗೆ ಗೊತ್ತಾಗಿದೆ. ಈ ಘಟನೆ ನಂತರ ಇಬ್ಬರೂ ಹಗಲಿರುಳು ಕಣ್ಣೀರು ಹಾಕುತ್ತಿದ್ದಾರೆ' ಎಂದು ಹೇಳುತ್ತಲೇ ಸಚಿನ್ ಸಹೋದರಿ ಸುರೇಖಾ ಬಿಕ್ಕಿ ಬಿಕ್ಕಿ ಅತ್ತರು.

ಬಾರ್‌ನಲ್ಲಿ 2 ತಾಸು ಕಳೆದಿದ್ದ ಸಚಿನ್

ಸಚಿನ್ ಪಾಂಚಾಳ್ ಅವರು ಆತ್ಮಹತ್ಯೆ ಮಾಡಿಕೊಂಡ ದಿನಕ್ಕೂ ಎರಡು ದಿನಗಳ ಮೊದಲು ಬೀದರ್‌ನ ಬಾರ್‌ವೊಂದರಲ್ಲಿ ಎರಡು ಗಂಟೆಗೂ ಹೆಚ್ಚು ಇದ್ದಿದ್ದು, ಸಿಸಿಟಿವಿಯಲ್ಲಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಡಿ.24ರಂದು ಸಂಜೆ 6.27ರ ವೇಳೆಗೆ ಮಾಸ್ಕ್ ಧರಿಸಿಕೊಂಡು ಸಚಿನ್ ಬಾರ್‌ಗೆ ಬಂದು ಬಿಯರ್ ಕುಡಿದು, ಊಟ ಮಾಡಿ ರಾತ್ರಿ 8.46ಕ್ಕೆ ಅಲ್ಲಿಂದ ನಿರ್ಗಮಿಸಿದ್ದರು. ಬಾರ್‌ನಿಂದಲೇ ಸಹೋದರಿ ಸಂಗೀತಾ ಅವರಿಗೆ ಸಚಿನ್ ಕರೆ ಮಾಡಿ ಮಾತನಾಡಿದ್ದು, ಅದೇ ಅವರ ಕೊನೆಯ ಕರೆಯಾಗಿತ್ತು ಎನ್ನಲಾಗಿದೆ.

ಹೋಟೆಲ್‌ನ ವೇಟರ್ ಕೃಷ್ಣ ಎಂಬುವವರ ಮೊಬೈಲ್‌ನಿಂದ ಕರೆ ಮಾಡಿ ಸಹೋದರಿಯಿಂದ ₹1,500 ಹಾಕಿಸಿಕೊಂಡಿದ್ದರು. ₹650 ಬಿಲ್ ಪಾವತಿಸಿ, ಉಳಿದ ಹಣ ಕೃಷ್ಣ ಅವರಿಂದ ಪಡೆದಿದ್ದರು. ಯಾರ ಕರೆಯೂ ಸ್ವೀಕರಿಸದಂತೆ ಕೃಷ್ಣ ಅವರಿಗೆ ಸಚಿನ್ ಹೇಳಿದ್ದರು ಎನ್ನುವುದು ಗೊತ್ತಾಗಿದೆ.

ಮರುದಿನ, ಡಿ.25ರಂದು ಸಚಿನ್ ಮರಣ ಪತ್ರ ಬರೆದು, ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿದ್ದರು. ಆ ದಿನ ಸಚಿನ್ ಸಹೋದರಿಯರು ಕೃಷ್ಣ ಅವರಿಗೆ ಕರೆ ಮಾಡಿದ್ದರು.

ಡಿ.26ರಂದು ಸಚಿನ್ ಆತ್ಮಹತ್ಯೆ ಮಾಡಿಕೊಂಡಿದ್ದರು.

'ಸಚಿನ್ ಬಂದು ಹೋಗಿರುವುದು ನಿಜ. ನನ್ನ ಮೊಬೈಲ್‌ಗೆ ಫೋನ್ ಪೇ ಮಾಡಿಸಿಕೊಂಡು ಹಣ ಪಾವತಿಸಿದ್ದರು. ಯಾರೊಂದಿಗೂ ನನ್ನ ವಿಚಾರ ಮಾತನಾಡದಂತೆ ಹೇಳಿದ್ದರು. ಮರುದಿನ ಅವರ ಸಹೋದರಿ ಕರೆ ಮಾಡಿ ವಿಚಾರಿಸಿದ್ದರು. ಅವರ ಸಂಬಂಧಿಕರೊಬ್ಬರು ಹೋಟೆಲ್‌ಗೆ ಬಂದು ವಿಚಾರಿಸಿದ್ದರು' ಎಂದು ಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಎರಡು ತಿಂಗಳ ಹಿಂದೆಯೇ ಮನೆ ಖಾಲಿ

ಕಲಬುರಗಿ: ನಗರದ ಹುಮನಾಬಾದ್ ರಸ್ತೆಯ ಕಪನೂರ ಕೈಗಾರಿಕಾ ಪ್ರದೇಶದ ಗೋಲ ಲೇಔಟ್‌ನ ಮನೆಯೊಂದರ ಮೊದಲನೇ ಮಹಡಿಯ ಬಾಡಿಗೆ ಮನೆಯಲ್ಲಿ ಸಚಿನ್ ಪಾಂಚಾಳ್ ವಾಸವಾಗಿದ್ದರು ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸ್ಥಳೀಯರೊಬ್ಬರು ತಿಳಿಸಿದರು.

'ಬೀದರ್ ಮೂಲದ ಸಚಿನ್, ಬಾಡಿಗೆ ಮನೆಯನ್ನೇ ಕಚೇರಿಯಂತೆ ಮಾಡಿಕೊಂಡಿದ್ದರು. ಆಗಾಗ ಮನೆಗೆ ಬಂದು ಹೋಗುತ್ತಿದ್ದರು. ಎರಡು ತಿಂಗಳ ಹಿಂದೆಯೇ ಆತನ ಸ್ನೇಹಿತರೊಬ್ಬರು ಮನೆಗೆ ಬಂದು, ಮನೆಯಲ್ಲಿ ಇರಿಸಿದ್ದ ಸಾಮಗ್ರಿಗಳನ್ನು ತೆಗೆದುಕೊಂಡು ಹೋದರು' ಎಂದು ಹೇಳಿದರು.

'ಖರ್ಗೆ ಹೆಸರಿಗೆ ಮಸಿ, ಬಿಜೆಪಿ ಸಂಚು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಮುಖಂಡರು ತಮ್ಮ ವರಿಷ್ಠರನ್ನು ಮೆಚ್ಚಿಸಲು ನನ್ನ ರಾಜೀನಾಮೆ ಕೇಳುತ್ತಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರಿಗೆ ಮಸಿ ಬಳಿಯಲು ಸಂಚು ನಡೆಸಿದ್ದಾರೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

ಚಿತ್ತಾಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಮಣಿಕಂಠ ರಾಠೋಡ ಧ್ವನಿ ಇರುವ ಆಡಿಯೊ ಬಿಡುಗಡೆ ಮಾಡಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಮಣಿಕಂಠ ರಾಠೋಡ ಅವರ ಮೇಲೆ ಸುಮಾರು 30 ಪ್ರಕರಣಗಳಿವೆ. ಬಿಜೆಪಿ ಅವರ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ. ಈಗ ಅವರ ನೇತೃತ್ವದಲ್ಲೇ ಕಲಬುರಗಿ ಚಲೋ ಹಮ್ಮಿಕೊಂಡಿದೆ ಎಂದು ಟೀಕಿಸಿದರು.

'ಛಲವಾದಿ ನಾರಾಯಣಸ್ವಾಮಿ ಅವರಿಗೆ ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಸ್ಥಾನ ಸಿಕ್ಕಿರುವುದೇ ನನ್ನ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರನ್ನು ಟೀಕಿಸಲು. ನಮ್ಮ ವಿರುದ್ಧ ಟೀಕಿಸುವವರೆಗೂ ಅವರು ವಿರೋಧಪಕ್ಷದ ನಾಯಕರಾಗಿರುತ್ತಾರೆ' ಎಂದರು.

ಪ್ರಿಯಾಂಕ್ ಪರ ನಿಲ್ಲಿ: ಸಿ.ಎಂ

ಬೆಂಗಳೂರು: ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಹಿನ್ನೆಲೆಯಲ್ಲಿ ಬಿಜೆಪಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಗುರಿ ಮಾಡಿ ರಾಜೀನಾಮೆಗೆ ಒತ್ತಾಯಿಸುತ್ತಿರುವ ವಿಚಾರ ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಗೆ ಬಂದಿತು.

'ಈ ವಿಚಾರದಲ್ಲಿ ಎಲ್ಲರೂ ಪ್ರಿಯಾಂಕ್ ಪರ ನಿಲ್ಲುವುದರ ಜತೆಗೆ, ಬಿಜೆಪಿಗೆ ತಕ್ಕ ಉತ್ತರ ನೀಡಬೇಕು. ಹೋರಾಟಗಳಿಗೆ ಹೆದರಬೇಕಾಗಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು ಎಂದು ಮೂಲಗಳು ತಿಳಿಸಿವೆ. ಸಭೆಯಲ್ಲಿ ಪ್ರಿಯಾಂಕ್ ಖರ್ಗೆ ಅವರು ಘಟನೆಯ ಕುರಿತು ಪೂರ್ಣ ವಿವರ ನೀಡಿ, ತಮ್ಮ ಪಾತ್ರ ಇಲ್ಲ ಎಂದು ವಿವರಣೆ ನೀಡಿದರು.

'ಬಿಜೆಪಿ ಒಡೆದ ಮನೆಯಾಗಿದೆ. ಪ್ರತಿಯೊಬ್ಬರೂ ತಮ್ಮ ಬೇಳೆ ಬೇಯಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಬಿಜೆಪಿಯವರ ಅವಧಿಯ ಕೇಸುಗಳನ್ನು ಮುಂದಿಟ್ಟುಕೊಂಡು ತಕ್ಕ ಉತ್ತರ ನೀಡಬೇಕು. ಅವರ ಮುಖಕ್ಕೆ ಕನ್ನಡಿ ಹಿಡಿಯಲು ಹಿಂದೇಟು ಹಾಕಬೇಕಾಗಿಲ್ಲ. ' ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಧರ್ಮಸ್ಥಳ: 'ಶ್ರೀ ಸಾನ್ನಿಧ್ಯ' ಉದ್ಘಾಟನೆ 7ರಂದು

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ದೇವರ ದರ್ಶನಕ್ಕಾಗಿ ಸರತಿಯಲ್ಲಿ ನಿಲ್ಲುವ ಭಕ್ತರ ಅನುಕೂಲಕ್ಕಾಗಿ ನಿರ್ಮಿಸಿರುವ ಹೊಸ ಸಂಕೀರ್ಣ 'ಶ್ರೀ ಸಾನ್ನಿಧ್ಯ'ವನ್ನು ಇದೇ 7ರಂದು ಮಧ್ಯಾಹ್ನ 2 ಗಂಟೆಗೆ ಉಪರಾಷ್ಟ್ರಪತಿ ಜಗದೀಪ್ ಧನಕರ್ ಉದ್ಘಾಟಿಸುವರು.

ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಧರ್ಮಸ್ಥಳದ ಹೇಮಾವತಿ ಹೆಗ್ಗಡೆ, ಲೋಕಸಭಾ ಸದಸ್ಯ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕ ಹರೀಶ್ ಪೂಂಜ ಭಾಗವಹಿಸುವರು.

2.75ಲಕ್ಷ ಚದರ ಅಡಿ ವಿಸ್ತೀರ್ಣದ ಸಂಕೀರ್ಣ ಎರಡು ಅಂತಸ್ತು ಹೊಂದಿದ್ದು ಆಧುನಿಕ ತಂತ್ರಜ್ಞಾನ ಬಳಸಿ ಭಕ್ತರ ಅನುಕೂಲಕ್ಕೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. 16 ವಿಶಾಲ ಸಭಾಭವನಗಳಲ್ಲಿ ಭಕ್ತರು ವಿಶ್ರಾಂತಿ ಪಡೆಯಬಹುದಾಗಿದೆ. ಪ್ರತಿ ಸಭಾಭವನದಲ್ಲಿ 800 ಮಂದಿ ವಿಶ್ರಾಂತಿ ಪಡೆದುಕೊಳ್ಳಲು ಅವಕಾಶವಿದೆ. ಮಕ್ಕಳ ಆರೈಕೆ ಕೊಠಡಿ, ಶೌಚಾಲಯ, ಕ್ಯಾಂಟೀನ್ ಸೌಲಭ್ಯವೂ ಇದೆ. ಸೂಚನಾಫಲಕಗಳು ಹಾಗೂ ಸಿಸಿಟಿವಿ ಕ್ಯಾಮೆರಾಗಳೂ ಇವೆ. ಸಂಕೀರ್ಣದ ಪ್ರವೇಶದ್ವಾರದ ಎದುರು ಧರ್ಮಸ್ಥಳದ ಇತಿಹಾಸ ಮತ್ತು ಪರಂಪರೆಯನ್ನು ಬಿಂಬಿಸುವ ಆಕರ್ಷಕ ಕಲಾಕೃತಿಗಳನ್ನು ಇರಿಸಲಾಗಿದೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಶ್ರೀ ಸಾನ್ನಿಧ್ಯ

ಮೈಸೂರಿಗೆ ಹೈಟೆಕ್ ಬಸ್ ನಿಲ್ದಾಣ

ಪ್ರಜಾವಾಣಿ ವಾರ್ತೆ

ಸಚಿವ ಸಂಪುಟ ನಿರ್ಧಾರ

ಬೆಂಗಳೂರು: ಮೈಸೂರು ಬನ್ನಿಮಂಟಪದಲ್ಲಿ ₹120 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಬಸ್ ನಿಲ್ದಾಣ ನಿರ್ಮಾಣದ ಕಾಮಗಾರಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

14 ಎಕರೆ ನಿವೇಶನದಲ್ಲಿ ವಿಭಾಗೀಯ ಕಚೇರಿ ಬಸ್ ಘಟಕಗಳು ಮತ್ತು ವಾಣಿಜ್ಯ ಮಳಿಗೆಗಳನ್ನು ಒಳಗೊಂಡ ಅತ್ಯಾಧುನಿಕ ಕೇಂದ್ರೀಯ ಬಸ್ ನಿಲ್ದಾಣ ನಿರ್ಮಿಸಲಾಗುವುದು. ಮೈಸೂರಿನ ಈಗಿನ ಬಸ್ ನಿಲ್ದಾಣವು ಅತಿ ಕಿರಿದಾಗಿದ್ದು, ಮೈಸೂರು ಜನದಟ್ಟಣೆಗೆ ಅನುಗುಣವಾಗಿಲ್ಲ. ಪ್ರತಿ ದಿನ ಬಸ್ ನಿಲ್ದಾಣಕ್ಕೆ 3,500 ಬಸ್‌ಗಳು ಬಂದು– ಹೋಗುತ್ತವೆ. ಆದ್ದರಿಂದ ಹೊಸ ಬಸ್ ನಿಲ್ದಾಣದ ಅಗತ್ಯವಿದೆ ಎಂದು ಹೇಳಿದರು.

ಪ್ರಮುಖ ತೀರ್ಮಾನಗಳು:

- ಉಡುಪಿ ಜಿಲ್ಲೆ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣಕ್ಕೆ ₹209.13 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ. ಭೂಸ್ವಾಧೀನಕ್ಕಾಗಿ ಅಂದಾಜು ಪರಿಷ್ಕರಣೆ
- ಮಲ್ಪೆ, ಗಂಗೊಳ್ಳಿ ಮತ್ತು ಮಂಗಳೂರು ಬಂದರುಗಳ ಆಧುನೀಕರಣ, ಆಮದಳ್ಳಿ, ಹಾರವಾಡ, ಬೇಲೆಕೇರಿ ಮತ್ತು ತದಡಿ ಮೀನುಗಾರಿಕೆ ಬಂದರು ಹಾಗೂ ಇಳಿದಾಣ ಕೇಂದ್ರಗಳಲ್ಲಿ ಹೂಳೆತ್ತಲು ₹84.57 ಕೋಟಿಗೆ ಅನುಮೋದನೆ
- ಹೊಸ ಗೋಶಾಲೆಗಳ ನಿರ್ಮಾಣದ ಬದಲಿಗೆ ಈಗ ಕಾರ್ಯ ನಿರ್ವಹಿಸುತ್ತಿರುವ 14 ಜಿಲ್ಲೆಗಳಲ್ಲಿನ ಗೋಶಾಲೆಗಳನ್ನು ಬಲವರ್ಧನೆಗೊಳಿಸಲು ₹10.50 ಕೋಟಿ ಅನುದಾನ ಬಳಕೆ
- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸಾಲದ ಮಿತಿಯನ್ನು ₹500 ಕೋಟಿಯಿಂದ ₹5,000 ಕೋಟಿಗೆ ಹೆಚ್ಚಿಸಲು ಮತ್ತು ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ₹5,000 ಕೋಟಿ ಸಾಲ ಪಡೆಯಲು ಸರ್ಕಾರದ ಗ್ಯಾರಂಟಿ ನೀಡಲು ಒಪ್ಪಿಗೆ
- ವಿಧಾನಪರಿಷತ್ ಸದಸ್ಯ ಕೆ.ಎ. ತಿಪ್ಪೇಸ್ವಾಮಿ ಅವರು ಇದೇ ತಿಂಗಳು ನಿವೃತ್ತಿ ಹೊಂದಲಿದ್ದು, ಆ ಸ್ಥಾನಕ್ಕೆ ನಾಮ ನಿರ್ದೇಶನ ಮಾಡುವ ಅಧಿಕಾರ ಮುಖ್ಯಮಂತ್ರಿಗೆ ನೀಡಲಾಗಿದೆ
- ಕರ್ನಾಟಕ ಸಣ್ಣ ನೀರಾವರಿ ಇಲಾಖೆ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಗಳ ಕರಡುವಿಗೆ ಒಪ್ಪಿಗೆ ನೀಡಲಾಗಿದೆ. ಜಲ ಸಂಪನ್ಮೂಲ ಇಲಾಖೆಯಿಂದ ಸಣ್ಣ ನೀರಾವರಿ ಇಲಾಖೆಯನ್ನು ಬೇರ್ಪಡಿಸಿದ ನಂತರ ನಿಯಮ ರೂಪಿಸಿರಲಿಲ್ಲ
- ಬಿಬಿಎಂಪಿ 3ನೇ ಹಂತದ ಆಯ್ದ ರಸ್ತೆಗಳ ವೈಟ್ ಟಾಪಿಂಗ್ ಕಾಮಗಾರಿ ನಡೆಸಲು ಹೊರಡಿಸಿದ್ದ ಆದೇಶಗಳನ್ನು ಹಿಂದಕ್ಕೆ ಪಡೆಯಲಾಗಿದೆ. ₹1,172 ಕೋಟಿ ಮೊತ್ತದ ವೈಟ್ ಟಾಪಿಂಗ್ ಕಾಮಗಾರಿ ಐದು ವರ್ಷವಾದರೂ ಆರಂಭವಾಗಿಲ್ಲ
- ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ವಸತಿ ಶಾಲೆಗಳು, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳಿಗೆ ಬೆಡ್ ಶೀಟ್, ಸೊಳ್ಳೆ ಪರದೆ, ಟ್ರಾಕ್ ಸೂಟ್, ನೈಟ್ ಡ್ರೆಸ್‌ಗಳ ಪೂರೈಕೆಗೆ ₹56.92 ಕೋಟಿ
- ಕೇಂದ್ರ ಸರ್ಕಾರ ವಿಶೇಷ ಬಂಡವಾಳ ನೆರವಿನ ಯೋಜನೆ ಭಾಗ 7(ಎ) ಅಡಿ ರಾಜ್ಯಕ್ಕೆ ಬಂಡವಾಳ ವೆಚ್ಚಕ್ಕಾಗಿ ದೀರ್ಘಾವಧಿ ಸಾಲದ ರೂಪದಲ್ಲಿ ನೀಡಿರುವ ₹137.85 ಕೋಟಿ ಅನುದಾನ ವಿನಿಯೋಗಿಸಲು ಸಂಪುಟ ಅನುಮೋದನೆ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಬೈರತಿ ಸುರೇಶ್ ಅಸಮಾಧಾನ

ಸ್ಮಾರ್ಟ್ ಸಿಟಿ ಕಾಮಗಾರಿ ತನಿಖೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳು ತೃಪ್ತಿದಾಯಕವಾಗಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು, ಈ ಬಗ್ಗೆ ತನಿಖೆ ನಡೆಸಿ ವರದಿ ನೀಡಿ ಎಂದು ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಶಿವಮೊಗ್ಗ ಹಾಗೂ ತುಮಕೂರು ನಗರಗಳಲ್ಲಿ ಸ್ಮಾರ್ಟ್‌ಸಿಟಿ ಯೋಜನೆ ಅಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ಅವರು ಗುರುವಾರ ನಡೆಸಿದರು.

ಯೋಜನೆಯ ಅನುದಾನವನ್ನು ರಸ್ತೆ, ಚರಂಡಿ ಮತ್ತು ಉದ್ಯಾನ ನಿರ್ಮಾಣಕ್ಕೆ ಬಳಸಲಾಗಿದೆ ಎಂದು ಅಧಿಕಾರಿಗಳು ವಿವರ ನೀಡಿದಾಗ, ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. 'ಕಾಮಗಾರಿಗಳ ಗುಣಮಟ್ಟವೂ ಸರಿಯಾಗಿಲ್ಲ. ತನಿಖೆಗಾಗಿ ಸಮಿತಿ ರಚಿಸಬೇಕು' ಎಂದು ಅವರು ಸೂಚಿಸಿದರು.

'ಸ್ಮಾರ್ಟ್ ಶಾಲೆಗಳು, ಆಸ್ಪತ್ರೆ, ಗ್ರಂಥಾಲಯ, ಬಸ್ ನಿಲ್ದಾಣದಂತಹ ಸ್ವತ್ತು ಸೃಷ್ಟಿಸುವ ಯೋಜನೆಗಳಿಗೆ ಈ ಅನುದಾನವನ್ನು ಬಳಸಿಕೊಳ್ಳಬೇಕಿತ್ತು. ಯೋಜನೆ ಅಡಿ ಬಿಡುಗಡೆಯಾದ ಬಹುತೇಕ ಅನುದಾನವನ್ನು ರಸ್ತೆ-ಚರಂಡಿ ನಿರ್ಮಾಣಕ್ಕೆ ಬಳಸಲಾಗಿದೆ. ಉಳಿಕೆ ಮತ್ತು ಕೊನೆಯ ಹಂತದ ಅನುದಾನವನ್ನು ಸ್ಮಾರ್ಟ್ ಶಾಲೆಗಳ ನಿರ್ಮಾಣಕ್ಕೆ ಬಳಸಿ' ಎಂದು ಸಂಬಂಧಿತ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದರು.

ತನಿಖಾ ಸಮಿತಿಯು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಎಂಜಿನಿಯರ್, ಲೋಕೋಪಯೋಗಿ ಇಲಾಖೆ ಮುಖ್ಯ ಎಂಜಿನಿಯರ್, ಆಯಾ ಸ್ಮಾರ್ಟ್ ಸಿಟಿ ವ್ಯಾಪ್ತಿಯ ವಿಶ್ವವಿದ್ಯಾಲಯಗಳ ತಾಂತ್ರಿಕ ಪರಿಣತರು ಮತ್ತು ಐಐಎಸ್‌ಸಿಯ ಒಬ್ಬ ತಜ್ಞರನ್ನು ಹೊಂದಿರಲಿದೆ.

₹6,817.75 ಕೋಟಿ
ಸ್ಮಾರ್ಟ್ ಸಿಟಿ ಯೋಜನೆ ಅಡಿ ಕೇಂದ್ರ (50%) ರಾಜ್ಯದಿಂದ (50%) ಬಿಡುಗಡೆಯಾದ ಅನುದಾನ

₹6,405.78 ಕೋಟಿ
ಬಳಕೆಯಾದ ಅನುದಾನ

₹411.97 ಕೋಟಿ
ಬಳಕೆಯಾಗದೇ ಉಳಿದಿರುವ ಅನುದಾನ. ಸ್ಮಾರ್ಟ್ ಶಾಲೆಗಳ ನಿರ್ಮಾಣಕ್ಕೆ ಈ ಅನುದಾನ ಬಳಸುವಂತೆ ಸಚಿವರ ಸೂಚನೆ

ಅನುದಾನ ಬಳಕೆ ವಿವರ

ನಗರ	ಬಿಡುಗಡೆಯಾದ ಅನುದಾನ	ಬಳಕೆ
ಬೆಳಗಾವಿ	₹990 ಕೋಟಿ	₹921.07 ಕೋಟಿ
ದಾವಣಗೆರೆ	₹990 ಕೋಟಿ	₹917.44 ಕೋಟಿ
ಹುಬ್ಬಳ್ಳಿ-ಧಾರವಾಡ	₹990 ಕೋಟಿ	₹904.82 ಕೋಟಿ
ಮಂಗಳೂರು	₹879.75 ಕೋಟಿ	₹859.36 ಕೋಟಿ
ಶಿವಮೊಗ್ಗ	₹990 ಕೋಟಿ	₹963.48 ಕೋಟಿ
ತುಮಕೂರು	₹990 ಕೋಟಿ	₹961.79 ಕೋಟಿ
ಬೆಂಗಳೂರು*	₹988 ಕೋಟಿ	₹877.82 ಕೋಟಿ

*ಬೆಂಗಳೂರು ಸ್ಮಾರ್ಟ್ ಸಿಟಿ ಕಾಮಗಾರಿಗಳ ತನಿಖೆಗೆ ಸೂಚನೆ ನೀಡಿಲ್ಲ

ಮುಖ್ಯಾಂಶಗಳು

- ಪ್ರಮುಖ ನಗರಗಳ ಸ್ಮಾರ್ಟ್‌ಸಿಟಿ ಪ್ರಗತಿ ಪರಿಶೀಲನೆ
- ಸ್ವತ್ತು ಸೃಷ್ಟಿಸುವ ಯೋಜನೆಗೆ ಬಳಕೆಯಾಗದ ಅನುದಾನ–ಸಚಿವರ ಅತೃಪ್ತಿ

ಕೆಲ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಅಗತ್ಯದಷ್ಟು ದೊರೆಯದ ಮಾನವ ಶರೀರ

ಅಧ್ಯಯನಕ್ಕೆ ಮೃತದೇಹಗಳ ಕೊರತೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದ ಕೆಲವು ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮಾನವ ಮೃತದೇಹಗಳ ಕೊರತೆ ಎದುರಿಸುತ್ತಿವೆ. ಇದರಿಂದಾಗಿ ವೈದ್ಯಕೀಯ ವಿದ್ಯಾರ್ಥಿಗಳ ಅಧ್ಯಯನ ಮತ್ತು ಸಂಶೋಧನೆಗೆ ತೊಡಕಾಗುತ್ತಿದೆ.

ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ನಿಯಮಾವಳಿ ಪ್ರಕಾರ ತಲಾ 25 ವಿದ್ಯಾರ್ಥಿಗಳಿಗೆ ಒಂದು ಮಾನವ ಮೃತದೇಹ ಅಗತ್ಯ. ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ನಿಯಮಾವಳಿ ಪ್ರಕಾರ ಒಂದು ಮೃತದೇಹಕ್ಕೆ ತಲಾ 10 ವಿದ್ಯಾರ್ಥಿ ಗಳನ್ನು ಗೊತ್ತುಪಡಿಸಲು ಅವಕಾಶವಿದೆ. ಎಂಸಿಐ ನಿಯಮಾವಳಿ ಅನ್ವಯ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ 300ಕ್ಕೂ ಅಧಿಕ ಮಾನವ ಮೃತದೇಹಗಳ ಅಗತ್ಯವಿದೆ. ಆದರೆ, ಇಷ್ಟು ಸಂಖ್ಯೆಯಲ್ಲಿ ಮೃತದೇಹಗಳು ಲಭ್ಯವಾಗುತ್ತಿಲ್ಲ.

ಎಂಬಿಬಿಎಸ್ ಪದವಿ ಕೋರ್ಸ್‌ಗಳಿಗೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಥಮ ವರ್ಷಕ್ಕೆ 3,500 ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದಾರೆ. ಎಂಬಿಬಿಎಸ್ ಪದವಿಯಲ್ಲಿ ಶರೀರ ವಿಜ್ಞಾನ ವಿಷಯವನ್ನು

ಕೆಲವೆಡೆ ವೈದ್ಯಕೀಯ ಅಧ್ಯಯನ ಮತ್ತು ಸಂಶೋಧನೆಗೆ ಮಾನವ ಮೃತದೇಹಗಳ ಬದಲು, ತಂತ್ರಜ್ಞಾನ ಆಧಾರಿತ ಮಾದರಿಗಳನ್ನೂ ಬಳಸಿಕೊಳ್ಳಲಾಗುತ್ತಿದೆ

ಡಾ.ಶರಣಪ್ರಕಾಶ ಪಾಟೀಲ
ವೈದ್ಯಕೀಯ ಶಿಕ್ಷಣ ಸಚಿವ

ಅಧ್ಯಯನ ಮಾಡಬೇಕಿದೆ. ಅದಕ್ಕಾಗಿ ನಿಗದಿತ ಸಂಖ್ಯೆಯಲ್ಲಿ ಮೃತ-ದೇಹಗಳನ್ನು ಒದಗಿಸಬೇಕಾಗುತ್ತದೆ. ಎಂಸಿಐ ಪ್ರಕಾರ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಸಾರ ತಲಾ 10–15 ಮೃತ ದೇಹಗಳು ಅಗತ್ಯವಿದೆ. ಕೆಲ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮೃತ ದೇಹಗಳು ದೊರೆಯುತ್ತಿಲ್ಲ. ವಾರ್ಷಿಕ 301 ಮೃತದೇಹಗಳು ಅಗತ್ಯವಿದ್ದು, ಸ್ವೀಕರಿಸುತ್ತಿರುವ ದೇಹಗಳ ಸಂಖ್ಯೆ 200ರ ಗಡಿಯ ಆಸುಪಾಸಿನಲ್ಲಿದೆ. 93 ಮೃತ ದೇಹಗಳ ಕೊರತೆ ಎದುರಾಗುತ್ತಿದೆ.

10 ಕಡೆ ಕೊರತೆ: ರಾಜ್ಯದಲ್ಲಿನ 24 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 10 ಕಾಲೇಜುಗಳು ಮೃತದೇಹಗಳ ಕೊರತೆ ಎದುರಿಸುತ್ತಿವೆ. ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಯು 10 ಹಾಗೂ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಮೃತದೇಹಗಳ ಕೊರತೆ ಎದುರಿಸುತ್ತಿವೆ. ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಸೇರಿ ಕೆಲ ವೈದ್ಯಕೀಯ ಕಾಲೇಜುಗಳಿಗೆ ಎಂಸಿಐ ಗೊತ್ತುಪಡಿಸಿದ ಸಂಖ್ಯೆಗಿಂತ ಹೆಚ್ಚಿನ ಸಂಸ್ಥೆಯಲ್ಲಿ ಮೃತದೇಹಗಳು ಲಭ್ಯವಾಗುತ್ತಿವೆ. ಬಿಎಂಸಿಆರ್‌ಐಗೆ ಎಂಸಿಐ ಪ್ರಕಾರ 10 ದೇಹಗಳು ಅಗತ್ಯವಿದೆ. ಸಂಸ್ಥೆಯಡಿ ವಿಕ್ಟೋರಿಯಾ ಸೇರಿ ವಿವಿಧ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿರುವುದರಿಂದ ಇಲ್ಲಿ ವಾರ್ಷಿಕ 20ಕ್ಕೂ ಅಧಿಕ ದೇಹಗಳನ್ನು ದಾನವಾಗಿ ಪಡೆಯಲಾಗುತ್ತಿದೆ.

‘ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅಧ್ಯಯನ ಮಹತ್ವದ್ದಾಗಿದೆ. ಮೃತ ದೇಹದ ಮೂಲಕ ಮನುಷ್ಯನ ದೇಹ ರಚನೆ, ಅಂಗಾಂಗಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ. ರೋಗಗಳಿಗೆಚಿಕಿತ್ಸೆ, ಶಸ್ತ್ರಚಿಕಿತ್ಸೆಯ ಅಧ್ಯಯನಕ್ಕೂ ಸಹಕಾರಿಯಾಗಲಿದೆ. ವ್ಯಕ್ತಿಗಳು ದೇಹ ದಾನದ ಪ್ರತಿಜ್ಞೆ ಕೈಗೊಂಡಿದ್ದರೂ ಮೃತರ ಕುಟುಂಬಸ್ಥರು ದೇಹಗಳನ್ನು ಹಸ್ತಾಂತರ ಮಾಡದಿದ್ದರಿಂದ ಕೆಲವೆಡೆ ಕೊರತೆ ಎದುರಾಗಿದೆ. ಆಸ್ಪತ್ರೆಗಳಲ್ಲಿನ ಅನಾಥ ಶವಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗುತ್ತಿದೆ’ ಎಂದು ಬಿಎಂಸಿಆರ್‌ಐ ಪ್ರಾಧ್ಯಾಪಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಮೃತದೇಹದ ಅಧಿಕ ಕೊರತೆ ಎದುರಿಸುತ್ತಿರುವ ಸಂಸ್ಥೆಗಳು

ವೈದ್ಯಕೀಯ ಸಂಸ್ಥೆ	ದೇಹದ ಕೊರತೆ
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ	15
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ	14
ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆ	10
ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆ	09
ಹಾವೇರಿ ವೈದ್ಯಕೀಯ ವಿಜ್ಞಾನ ಸಂಸ್ಥೆ	09
ಚಿಕ್ಕಬಳ್ಳಾಪುರದ ನಂದಿ ವೈದ್ಯಕೀಯ ವಿಜ್ಞಾನ ಸಂಸ್ಥೆ	09

ಸಾಕಾರವಾಗದ ದಾನದ ಪ್ರತಿಜ್ಞೆ

ಕರ್ನಾಟಕ ಅಂಗರಚನಾ ಶಾಸ್ತ್ರ ಕಾಯ್ದೆ 1957 ಮತ್ತು ತಿದ್ದುಪಡಿ 1999ರ ನಿಯಮದಡಿ ವೈದ್ಯಕೀಯ ಶಿಕ್ಷಣ ಮತ್ತು ಶಂಶೋಧನೆಯ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯಗಳು ಮೃತದೇಹವನ್ನು ದಾನವಾಗಿ ಪಡೆಯಬಹುದಾಗಿದೆ. ಮೃತ ದೇಹವು 6 ಗಂಟೆಗಳ ಬಳಿಕ ಕೊಳೆಯಲು ಪ್ರಾರಂಭವಾಗುತ್ತದೆ. ಆದ್ದರಿಂದ ವ್ಯಕ್ತಿ ಮೃತಪಟ್ಟ 6 ಗಂಟೆಯೊಳಗೆ ದೇಹವನ್ನು ದಾನವಾಗಿ ಪಡೆಯ-ಬೇಕಾಗುತ್ತದೆ. ವ್ಯಕ್ತಿ ಬದುಕಿರುವಾಗಲೇ ತಮ್ಮ ದೇಹ ದಾನದ ಬಗ್ಗೆ ಸಮ್ಮತಿಯ ಉಯಿಲನ್ನು ಅಧಿಕೃತ ವೈದ್ಯಕೀಯ ಸಂಸ್ಥೆಗಳಲ್ಲಿ ನೋಂದಾಯಿಸಬಹುದು.

ಅರ್ಜಿ ಸಲ್ಲಿಸದಿದ್ದಲ್ಲಿ, ಮೃತ ವ್ಯಕ್ತಿಯ ದೇಹ ದಾನಕ್ಕೆ ಕುಟುಂಬಸ್ಥರು ಇಚ್ಛಿಸಿದರೆ ಅಫಿಡವಿಟ್ ಮೂಲಕ ಅರ್ಜಿ ಸಲ್ಲಿಸಬೇಕಾಗುತ್ತದೆ. ಮರಣದ ಕಾರಣವನ್ನು ದೃಢೀಕರಿಸಿದ ಪ್ರಮಾಣಪತ್ರದೊಂದಿಗೆ ಮೃತದೇಹವನ್ನು ಹಸ್ತಾಂತರಿಸಬೇಕಾಗುತ್ತದೆ. ವ್ಯಕ್ತಿಗಳು ಜೀವಿತಾವಧಿಯಲ್ಲಿ ದಾನಕ್ಕೆ ಪ್ರತಿಜ್ಞೆ ಕೈಗೊಂಡಿದ್ದರೂ ಮರಣ ಹೊಂದಿದ ಸಂದರ್ಭದಲ್ಲಿ ಕುಟುಂಬಸ್ಥರು ವೈದ್ಯಕೀಯ ಸಂಸ್ಥೆಗಳಿಗೆ ಮಾಹಿತಿ ನೀಡದ ಪರಿಣಾಮ ದೇಹ ದಾನಕ್ಕೆ ಹಿನ್ನಡೆಯಾಗುತ್ತಿದೆ.

86 ಮಂದಿಗೆ ‘ಮಾಧ್ಯಮ ಅಕಾಡೆಮಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಶಶಿಕಾಂತ್ ಶೆಂಬೆಳ್ಳಿ

ಕೆ. ಓಂಕಾರಮೂರ್ತಿ

ಸಂಧ್ಯಾ ಹೆಗಡೆ

ಡಿ.ಎಂ. ಕುರ್ಕೆ ಪ್ರಶಾಂತ್

ಮಾಲತಿ ಭಟ್

ಪ್ರಭು ಬ. ಅಡವಿಹಾಳ

ಸಿದ್ದಯ್ಯ ಹಿರೇಮಠ

ಬೆಂಗಳೂರು: ಕರ್ನಾಟಕ ಮಾಧ್ಯಮ ಅಕಾಡೆಮಿಯು 2023 ಹಾಗೂ 2024ನೇ ಸಾಲಿನ ಪ್ರಶಸ್ತಿಗಳನ್ನು ಗುರುವಾರ ಪ್ರಕಟಿಸಿದ್ದು, ಎರಡು ವರ್ಷಗಳ ಪ್ರಶಸ್ತಿಗೆ 86 ಮಂದಿ ಆಯ್ಕೆಯಾಗಿದ್ದಾರೆ.

‘ಜೀವಮಾನದ ಸಾಧನೆ ಪ್ರಶಸ್ತಿ’ಗೆ ಅ.ಚ.ಶಿವಣ್ಣ, ವಾರ್ತಾ ಭಾರತಿಯ ಸಂಪಾದಕ ಅಬ್ದುಸ್ಸಲಾಂ ಪುತ್ತಿಗೆ ಆಯ್ಕೆಯಾಗಿದ್ದಾರೆ. ವಾರ್ಷಿಕ ಪ್ರಶಸ್ತಿಗೆ ‘ಪ್ರಜಾವಾಣಿ’ಯ ಸಿದ್ದಯ್ಯ ಹಿರೇಮಠ, ಶಶಿಕಾಂತ್ ಶೆಂಬೆಳ್ಳಿ ಸೇರಿ 60 ಮಂದಿ ಭಾಜನರಾಗಿದ್ದಾರೆ.

ಎರಡು ವರ್ಷಗಳ ದತ್ತಿ ಪ್ರಶಸ್ತಿಗಳನ್ನೂ ಅಕಾಡೆಮಿ ಪ್ರಕಟಿಸಿದೆ. 2023ನೇ ಸಾಲಿನ ದತ್ತಿ ಪ್ರಶಸ್ತಿಗಳಿಗೆ ‘ಪ್ರಜಾವಾಣಿ’ಯ ಸಂಧ್ಯಾ ಹೆಗಡೆ ಸೇರಿ 11 ಮಂದಿ ಹಾಗೂ 2024ನೇ ಸಾಲಿಗೆ ‘ಪ್ರಜಾವಾಣಿ’ಯ ಕೆ. ಓಂಕಾರಮೂರ್ತಿ, ಡಿ.ಎಂ. ಕುರ್ಕೆ ಪ್ರಶಾಂತ್, ಪ್ರಭು ಬ. ಅಡವಿಹಾಳ ಸೇರಿ 13 ಮಂದಿ ಆಯ್ಕೆಯಾಗಿದ್ದಾರೆ.

ವಾರ್ಷಿಕ ಪ್ರಶಸ್ತಿ: 2023ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಗಂಗಾಧರ ಮೊದಲಿಯಾರ್, ಉಷಾರಾಣಿ ಎನ್., ಸುಶೀಲೇಂದ್ರ ನಾಯಕ್, ವಾಸುದೇವ ಹೊಳ್ಳ, ಆಲ್ಫ್ರೆಡ್ ಟೆನ್ನಿಸನ್, ಮಾಲತಿ ಭಟ್, ಮನು ಅಯ್ಯಪ್ಪ, ಹರಿಯಬ್ಬೆ ಹೆಂಜಾರಪ್ಪ, ವಿಲಾಸ್ ನಾಂದೋಡ್ಕರ್, ಶಿವಕುಮಾರ್ ಬೆಳ್ಳಿತಟ್ಟೆ, ಸಿದ್ದಯ್ಯ ಹಿರೇಮಠ, ಶಶಿಕಾಂತ್ ಶೆಂಬೆಳ್ಳಿ, ಮನೋಜ್‌ಗೌಡ ಪಾಟೀಲ, ಆನಂದ ಬೈದನಮನೆ, ಮಧು ಜವಳಿ, ಎಂ.ಆರ್. ದಿನೇಶ್, ತಾರಾನಾಥ್, ಕೆ. ಮಲ್ಲಿಕಾರ್ಜುನ ಸಾಣಾಪೂರ, ಜಯಪ್ರಕಾಶ್, ಪುಂಡಲೀಕ ಭೀ. ಬಾಳೋಜಿ, ಇಬ್ರಾಹಿಂ ಅಡ್ಕಸ್ಥಳ, ಅನ್ನು ಮಂಗಳೂರು (ಪುಂಡಲೀಕ ಪೈ), ನಿಹಾಲ್ ಕಿದ್ವಾಯಿ, ರೋಹಿಣಿ ಸ್ವಾಮಿ, ಭಾವನಾ ನಾಗಯ್ಯ, ಮುನೀರ್ ಅಹ್ಮದ್ ಆಜಾದ್, ಹನುಮಾನ್ ಸಿಂಗ್ ಜಮಾದಾರ್, ಜೈಮುನಿ, ಶಿವಮೂರ್ತಿ ಗುರುಮಠ ಹಾಗೂ ಸಿರಾಜ್ ಬಿಸ್ರಳ್ಳಿ ಆಯ್ಕೆಯಾಗಿದ್ದಾರೆ.

2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಎ.ಎಸ್. ಬಾಲಸುಬ್ರಹ್ಮಣ್ಯ, ರಿಷಿಕೇಷ್ ಬಹದ್ದೂರ್ ದೇಸಾಯಿ, ಸುಭಾಷ್ ಹೂಗಾರ, ಟಿ. ಗುರುರಾಜ್, ಕುಮಾರನಾಥ್ ಯು.ಕೆ., ಸಿದ್ದು ಕಾಳೋಜಿ, ಆರ್.ಕೆ. ಜೋಷಿ, ಪ್ರಕಾಶ್ ಶೇಟ್, ಆರುಂಡಿ ಶ್ರೀನಿವಾಸಮೂರ್ತಿ, ರವೀಶ್ ಎಚ್.ಎಸ್., ಭಾನುಪ್ರಕಾಶ್, ಮಹೇಶ ಶೆಟಗಾರ, ರಮೇಶ್ ಜಹಗೀರದಾರ, ನಿರುಪಮಾ, ದಿನೇಶ್ ಗೌಡಗೆರೆ, ಡಿ.ಸಿ. ಮಹೇಶ್, ಎಚ್.ಎಸ್. ಹರೀಶ್, ಶರಣಯ್ಯ ಒಡೆಯರ್, ಅಶ್ವಿನಿ ಎಂ. ಶ್ರೀಪಾದ, ರಿಜ್ವಾನ್ ಅಸದ್, ಬನ್ನಿ ಕಾಳಪ್ಪ, ಮನುಜಾ ವೀರಪ್ಪ, ಜಯಂತ ಜಿ., ವಿಖಾರ್ ಅಹ್ಮದ್ ಸಯೀದ್, ಡಿ.ಎನ್. ಶಾಂಭವಿ ನಾಗರಾಜ್, ರಮೇಶ್ (ಹಾಬಿ ರಮೇಶ್), ಸೋಮಶೇಖರ ಕಿಲಾರಿ, ನಾರಾಯಣಸ್ವಾಮಿ, ಅನೀಸ್ ನಿಸಾರ್ ಹಮೀದ್, ಹಾಗೂ ಸಂದೀಪ್ ಸಾಗರ್ ಆಯ್ಕೆಯಾಗಿದ್ದಾರೆ.

ಜೀವಮಾನದ ಸಾಧನೆ ಪ್ರಶಸ್ತಿಯು ತಲಾ ₹50 ಸಾವಿರ, ವಾರ್ಷಿಕ ಪ್ರಶಸ್ತಿ ತಲಾ ₹25 ಸಾವಿರ ಹಾಗೂ ದತ್ತಿ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಒಳಗೊಂಡಿವೆ. 2023ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದ ಗಂಗಾಧರ ಮೊದಲಿಯಾರ್ ಅವರು ಪ್ರಶಸ್ತಿ ನಿರಾಕರಿಸಿದ್ದು, ‘ನನಗೆ ಪ್ರಶಸ್ತಿ ದಯಪಾಲಿಸಿರುವುದಕ್ಕೆ ಅಧ್ಯಕ್ಷರಿಗೆ ಧನ್ಯವಾದಗಳು. ಜೀವಮಾನ ಸಾಧನೆಗಾಗಿ ರಾಜ್ಯ ಸರ್ಕಾರವು ನೀಡುವ ‘ಟಿಎಸ್‌ಆರ್ ಪ್ರಶಸ್ತಿ’ಯನ್ನು 2014ರಲ್ಲಿ ನನಗೆ ನೀಡಿ ಗೌರವಿಸಿದೆ. ಆದ್ದರಿಂದ ಮತ್ತೆ ಈ ಪ್ರಶಸ್ತಿ ಸ್ವೀಕರಿಸಲು ಮನಸ್ಸು ಒಪ್ಪುತ್ತಿಲ್ಲ. ಈ ಪ್ರಶಸ್ತಿ ಉದಯೋನ್ಮುಖ ಪತ್ರಕರ್ತರಿಗೆ ಸಲ್ಲಲಿ’ ಎಂದು ತಿಳಿಸಿದ್ದಾರೆ.

24 ಮಂದಿಗೆ ದತ್ತಿ ಪ್ರಶಸ್ತಿ

‘ಡಾ.ಬಿ.ಆರ್. ಅಂಬೇಡ್ಕರ್ ಮೂಕನಾಯಕ’ ಪ್ರಶಸ್ತಿಗೆ ಕೆ. ನೀಲಾ, ರಹಮತ್ ತರೀಕೆರೆ ಅವರನ್ನು ಆಯ್ಕೆ ಮಾಡಲಾಗಿದೆ.

‘ಅಭಿಮಾನಿ ದತ್ತಿ’ ಪ್ರಶಸ್ತಿಗೆ ರವಿಕುಮಾರ ಚನ್ನಬಸಪ್ಪ ಕಗ್ಗಣ್ಣವರ, ವಿಜಯ್ ಕೋಟ್ಯಾನ್, ಕೆ. ಓಂಕಾರಮೂರ್ತಿ, ಡಿ.ಎಂ. ಕುರ್ಕೆ ಪ್ರಶಾಂತ್, ‘ಮೈಸೂರು ದಿಗಂತ ದತ್ತಿ’ ಪ್ರಶಸ್ತಿಗೆ ಶಿವಾನಂದ ಗೊಂಬಿ, ಬಿ.ಕೆ. ದೇವಯ್ಯ, ನಂದೀಶ್ ಮಲ್ಲೇನಹಳ್ಳಿ, ‘ಅಭಿಮನ್ಯು ದತ್ತಿ’ ಪ್ರಶಸ್ತಿಗೆ ಸಂಧ್ಯಾ ಹೆಗಡೆ, ಪ್ರಭು ಬ. ಅಡವಿಹಾಳ, ‘ಪ್ರಜಾ ಸಂದೇಶ ದತ್ತಿ’ ಪ್ರಶಸ್ತಿಗೆ ಶಿಲ್ಪಾ ಪಿ., ಮೊಹಮ್ಮದ್ ಅಖೀಲ್ ಉಡೇವು, ಮಾಧ್ಯಮ ಮಹಾಸಾಧಕ ಸಿ.ವಿ. ರಾಜಗೋಪಾಲ್ ದತ್ತಿ’ ಪ್ರಶಸ್ತಿಗೆ ಕ.ಮ. ರವಿಶಂಕರ್, ಮ್ಯುರಿಯಲ್ ನಿರ್ಮಲಾ ಡಿಸಿಲ್ವ, ‘ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕೆಯುಡಬ್ಲ್ಯುಜೆ ದತ್ತಿ’ ಪ್ರಶಸ್ತಿಗೆ ವಿ. ವೆಂಕಟೇಶ್, ಎಚ್. ಎಸ್. ಸುಧೀಂದ್ರಕುಮಾರ್, ‘ಆಂದೋಲನ’ ಪ್ರಶಸ್ತಿಗೆ ಸಂಜೆ ದರ್ಶನ, ಹೊಸಪೇಟೆ ಟೈಮ್ಸ್, ‘ಬಸವರಾಜ ದೊಡ್ಡಮನಿ ಅವರು ಸ್ಥಾಪಿಸಿರುವ ಕೃಷಿಯಲ್ಲಿ ಅತ್ಯುತ್ತಮ ವರದಿ, ಲೇಖನ, ಅಂಕಣ ಬರಹಗಾರರ ಪ್ರಶಸ್ತಿಗೆ ಎಚ್.ಪಿ. ಪುಣ್ಯವತಿ, ಕೀರ್ತನಾ ಕುಮಾರಿ ಕೆ., ವೆಂಕಟೇಶ್, ‘ಅರಗಿಣಿ’ ಪ್ರಶಸ್ತಿಗೆ ತುಂಗರೇಣುಕ ಹಾಗೂ ಶ್ಯಾಮಪ್ರಸಾದ್ ಆಯ್ಕೆಯಾಗಿದ್ದಾರೆ.

ಸಂದೀಪ್ ನಾರಾಯಣ್‌ಗೆ ‘ಎಸ್.ಎಂ.ಕೃಷ್ಣ ಸಂಗೀತ ಪ್ರಶಸ್ತಿ’

ಸಂದೀಪ್ ನಾರಾಯಣ್

ಬೆಂಗಳೂರು: ಶ್ರೀ ರಾಮಸೇವಾ ಮಂಡಳಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಪ್ರಸಕ್ತ ವರ್ಷದಿಂದ ಆರಂಭಿಸಿರುವ ‘ಎಸ್.ಎಂ.ಕೃಷ್ಣ ಸ್ಮಾರಕ ರಾಷ್ಟ್ರೀಯ ಸಂಗೀತ ಪ್ರಶಸ್ತಿ’ಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕ ಸಂದೀಪ್ ನಾರಾಯಣ್ ಆಯ್ಕೆಯಾಗಿದ್ದಾರೆ. ಎಸ್.ಎಂ.ಕೃಷ್ಣ ಅವರ ಕುಟುಂಬದ ಸದಸ್ಯರು ಟ್ರಸ್ಟ್‌ನಲ್ಲಿ ಈ ಪ್ರಶಸ್ತಿ ಸ್ಥಾಪಿಸಿದ್ದಾರೆ. ಪ್ರಶಸ್ತಿ ₹1 ಲಕ್ಷ ನಗದು ಒಳಗೊಂಡಿದೆ. ಇಲ್ಲಿನ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಏಪ್ರಿಲ್ 6ರಂದು ಸಂಜೆ 5.45ಕ್ಕೆ ‘87ನೇ ಶ್ರೀ ರಾಮನವಮಿ ಸಂಗೀತೋತ್ಸವ’ದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಇದೇ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್. ವರದರಾಜ್ ತಿಳಿಸಿದ್ದಾರೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ರಾಜೀನಾಮೆಗೆ ವಿಪಕ್ಷ ನಾಯಕ ಅಶೋಕ ಪಟ್ಟು

ಬಾಣಂತಿಯರ ಸಾವು; ನ್ಯಾಯಾಂಗ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ನಡೆದಿರುವ ಬಾಣಂತಿಯರ ಸರಣಿ ಸಾವಿನ ಪ್ರಕರಣಗಳನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ರಾಜೀನಾಮೆ ಪಡೆಯಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಕಾಂಗ್ರೆಸ್ ನೇತೃತ್ವದ ಸರ್ಕಾರ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ಮೂಲಕ ₹2 ಸಾವಿರ ನೀಡುವ ಬದಲು, ಬಾಣಂತಿಯರ ಬದುಕಿಗೆ ‘ಗ್ಯಾರಂಟಿ’ ನೀಡಬೇಕು. ಬಡ ಮಹಿಳೆಯರ ಜೀವ ಉಳಿಸಬೇಕು ಎಂದರು.

ರಾಜ್ಯದಲ್ಲಿ ಬಾಣಂತಿಯರ ಮರಣ ಮೃದಂಗ ನಿಂತಿಲ್ಲ. ಇದುವರೆಗೆ 736 ತಾಯಂದಿರು ಮೃತಪಟ್ಟಿದ್ದಾರೆ. ಇದು ಸರ್ಕಾರಿ ಪ್ರಾಯೋಜಿತ ಕೊಲೆ, ಸರ್ಕಾರವೇ ನೇರ ಹೊಣೆ. ಹುಬ್ಬಳ್ಳಿಯಲ್ಲಿ ಬಾಣಂತಿ ಸತ್ತಿದ್ದಕ್ಕೆ ಅವರ ಪತಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ತಿಪಟೂರಿನಲ್ಲೂ ಒಬ್ಬ ಬಾಣಂತಿ ಮೃತಪಟ್ಟಿದ್ದಾರೆ. ಕಾಂಗ್ರೆಸ್ ಬೆಳಗಾವಿ ಶತಮಾನೋತ್ಸವ ಸಮಾವೇಶ ನಡೆಸುವಾಗಲೇ ಬಾಣಂತಿಯರು ಮೃತಪಟ್ಟಿದ್ದಾರೆ. ಆದರೆ, ದೊಡ್ಡದೊಡ್ಡ ಕಟೌಟ್ ಹಾಕಿಸಿಕೊಂಡು ಬೀಗುತ್ತಿದ್ದ ಹಿರಿಯ ನಾಯಕರು ಅವರ ಮನೆಗಳಿಗೆ ಭೇಟಿ ನೀಡಲಿಲ್ಲ ಎಂದು ದೂರಿದರು.

ಸರ್ಕಾರ ಎಲ್ಲವನ್ನೂ ಸರಿಯಾಗಿ ನಿಭಾಯಿಸಿದೆ ಎಂದು ಆರೋಗ್ಯ ಸಚಿವರು ಸದನದಲ್ಲೇ ಸ್ಪಷ್ಟನೆ ನೀಡಿದ್ದರು. ಆದರೆ, ಔಷಧಿ ಕಂಪನಿಗಳು ಪೂರೈಸಿದ ಔಷಧದ ವಿಚಾರದಲ್ಲಿ ಔಷಧ ನಿಯಂತ್ರಕರು ಮಾಡಿರುವ ತಪ್ಪುಗಳ ಬಗ್ಗೆ ಸರ್ಕಾರದ ಅಧೀನ ಕಾರ್ಯದರ್ಶಿಗಳು ನೋಟಿಸ್ ನೀಡಿದ್ದಾರೆ. ಆಸ್ಪತ್ರೆಗಳಿಗೆ ಪೂರೈಕೆಯಾದ 462 ಔಷಧಗಳು ಕಳಪೆ ಎಂದು ಸರ್ಕಾರವೇ ಹೇಳಿದೆ. ಇದು ಸರ್ಕಾರದ ದ್ವಿಮುಖ ನೀತಿಗೆ ಹಿಡಿದ ಕನ್ನಡಿ ಎಂದರು.

‘ದೆಹಲಿಯಿಂದ ಒತ್ತಡ’



‘ಪ್ರಿಯಾಂಕ್ ಖರ್ಗೆ ಪರ ಮಾತನಾಡುವಂತೆ ಕಾಂಗ್ರೆಸ್ ನಾಯಕರಿಗೆ ದೆಹಲಿಯಿಂದ ಒತ್ತಡ ಬರುತ್ತಿದೆ. ಮೂವರಿಗೆ ಕರೆ ಬರುತ್ತಿದ್ದು, ಮೂವರು ಮಾತ್ರವೇ ಮಾತನಾಡುತ್ತಿ ದ್ದಾರೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು. ‘ಸಿದ್ದರಾಮಯ್ಯ ತಮ್ಮ ಕುರ್ಚಿ ಉಳಿಸಿಕೊಳ್ಳಲು ಮಾತನಾಡುತ್ತಿದ್ದಾರೆ. ಮುಖ್ಯಮಂತ್ರಿ ಹುದ್ದೆಗೆ ಮುಂದೆ ಬರಬೇಕಿರುವ ಕಾರಣ ಡಿ.ಕೆ.ಶಿವಕುಮಾರ್ ಮತ್ತು ಗೃಹ ಸಚಿವರಾಗಿರುವ ಕಾರಣಕ್ಕೆ ಜಿ.ಪರಮೇಶ್ವರ ಮಾತನಾಡುತ್ತಿದ್ದಾರೆ. ಆದರೆ ಒತ್ತಡಕ್ಕೆ ಬಗ್ಗದೆ ಪ್ರಿಯಾಂಕ್ ಅವರ ರಾಜೀನಾಮೆ ಪಡೆಯಬೇಕು’ ಎಂದರು.

ಪ್ರಿಯಾಂಕ್ ವಿರುದ್ಧ ನಾಳೆ ಹೋರಾಟ



ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹಿಸಿ ಕಲಬುರಗಿಯಲ್ಲಿ ಜ. 4ರಂದು ಬಿಜೆಪಿ ಹೋರಾಟ ನಡೆಸಲಿದೆ ಎಂದು ಅಶೋಕ ತಿಳಿಸಿದರು.

ಪ್ರಿಯಾಂಕ್ ಖರ್ಗೆ ಹೆಸರು ಮೃತ ಸಚಿನ್ ಅವರ ಮರಣಪತ್ರದಲ್ಲಿದೆ. ಸಚಿವರ ಆಪ್ತನೇ ಈ ಘಟನೆಗೆ ಕಾರಣ. ಆದರೆ, ಎಐಸಿಸಿ ಅಧ್ಯಕ್ಷರ ಮಗನಾಗಿರುವ ಒಂದೇ ಕಾರಣಕ್ಕೆ ಅವರ ರಾಜೀನಾಮೆ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದೇಟು ಹಾಕುತ್ತಿದ್ದಾರೆ. ಹೆದರಿ ನಡುಗುತ್ತಿದ್ದಾರೆ ಎಂದರು.

www.deccanherald.com / www.prajavani.net | Follow us on:

ಆನೇಕಲ್ ತಾಲ್ಲೂಕಿನ ಹೆಬ್ಬಗೋಡಿ ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಸೀವಿಂಗ್ ಸಿಸ್ಟಮ್ ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ಬೆಂಕಿ ಹೊತ್ತಿ ಉರಿಯಿತು

ಹೆಬ್ಬಗೋಡಿಯ 4 ಗಾರ್ಮೆಂಟ್ಸ್ ಗೋದಾಮಿಗೆ ಬೆಂಕಿ: ಭಾರಿ ನಷ್ಟ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿಯಲ್ಲಿರುವ ಗಾರ್ಮೆಂಟ್ಸ್ ಕಂಪನಿಗಳ ಗೋದಾಮುಗಳಿಗೆ ಗುರುವಾರ ಬೆಂಕಿ ತಗುಲಿ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಬಟ್ಟೆ ಹಾಗೂ ಚರ್ಮದ ಸಾಮಗ್ರಿಗಳು ಸುಟ್ಟು ಬೂದಿಯಾಗಿವೆ. ಬೆಂಕಿ ಕಂಡ ಕೂಡಲೇ ಗೋದಾಮಿನಲ್ಲಿದ್ದ ನೂರಾರು ಕಾರ್ಮಿಕರು ಹಾಗೂ ಸಿಬ್ಬಂದಿ ಹೊರಗೆ ಓಡಿ ಬಂದು ಪ್ರಾಣ ಉಳಿಸಿಕೊಂಡರು.

ತಾಲ್ಲೂಕಿನ ಹೆಬ್ಬಗೋಡಿ ಕೈಗಾರಿಕಾ ಪ್ರದೇಶದಲ್ಲಿರುವ ಸೀವಿಂಗ್ ಸಿಸ್ಟಮ್ ಪ್ರೈವೇಟ್ ಲಿಮಿಟೆಡ್, ಐಐಜಿಎಂ ಒರಿಯನ್ ಆಪರೇಲ್ ಟ್ರಿಮ್ಸ್ ಮತ್ತು ಇಂಡಿಯಾ ಏಜೆನ್ಸಿಸ್ ಸೇರಿದಂತೆ ನಾಲ್ಕು ಗಾರ್ಮೆಂಟ್ಸ್ ಕಂಪನಿಗಳಿಗೆ ಸೇರಿದ ಗೋದಾಮುಗಳು ಒಂದೆ ಕಡೆ ಇವೆ. ಎಲ್ಲಾ ನಾಲ್ಕೂ ಗೋದಾಮುಗಳಲ್ಲಿದ್ದ ವಸ್ತುಗಳು ಸುಟ್ಟು ಕರಕಲಾಗಿವೆ.

ಸಂಜೆ 5ಕ್ಕೆ ಗೋದಾಮಿನಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿತು. ರಾಸಾಯನಿಕ, ಬಟ್ಟೆ, ಚರ್ಮದ ವಸ್ತುಗಳು ಸೇರಿದಂತೆ ಸುಲಭವಾಗಿ ಬೆಂಕಿ ಹೊತ್ತಿಕೊಳ್ಳುವ ಸಾಮಗ್ರಿಗಳಿಗೆ ಹಠಾತ್ತನೇ ಬೆಂಕಿಯ ಕೆನ್ನಾಲಿಗೆ ವ್ಯಾಪಿಸಿತು. ಕ್ಷಣ ಮಾತ್ರದಲ್ಲಿ ದಟ್ಟ ಹೊಗೆ ಸುತ್ತಮುತ್ತಲಿನ ಪ್ರದೇಶವನ್ನು ಆವರಿಸಿಕೊಂಡಿತು.

ಆನೇಕಲ್ ತಾಲ್ಲೂಕಿನಲ್ಲಿ ಐದು ಕೈಗಾರಿಕಾ ಪ್ರದೇಶಗಳಿದ್ದು ಪದೇ ಪದೇ ಇಂಥ ದುರಂತ ಮರುಕಳಿಸದಂತೆ ಕ್ರಮ ವಹಿಸಬೇಕು ಎಂದು ಸ್ಥಳದಲ್ಲಿದ್ದ ಕಾರ್ಮಿಕರು ಒತ್ತಾಯಿಸಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಾಗರಾಜು, ಡಿವೈಎಸ್‌ಪಿ ಮೋಹನ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಹೊತ್ತಿ ಉರಿದ ಗೋದಾಮು

- **2024ರ ಸೆ.26:** ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಏರಿಯಾನ್ ಟೆಕ್ನಾಲಜಿ ಕಂಪನಿಯಲ್ಲಿ ಬೆಂಕಿ
- **ನ. 9:** ಅತ್ತಿಬೆಲೆ ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಶ್ರೀರಾಮ್ ವುಡ್ ಅಂಡ್ ಫರ್ನಿಚರ್ ಕಂಪನಿಯಲ್ಲಿ ಅಗ್ನಿ ಅವಘಡ

ಐವತ್ತು ಅಡಿ ಎತ್ತರದಿಂದ ಬೆಂಕಿಗೆ ನೀರು

ಏರಿಯಲ್ ಲ್ಯಾಡರ್ ಪ್ಲಾಟ್ ಫಾರ್ಮ್ ಬಳಸಿ 50 ಅಡಿ ಎತ್ತರದಿಂದ ಪಾಮ್ ಮಿಶ್ರಿತ ನೀರನ್ನು ಹಾಕುವ ಮೂಲಕ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಈ ಕಾರ್ಯಕ್ಕೆ ಒಂದು ತಾಸಿಗೂ ಅಧಿಕ ಸಮಯ ಹಿಡಿಯಿತು.

ಸಂಜೆ 7ರ ಸುಮಾರಿಗೆ ಬೆಂಕಿ ನಿಯಂತ್ರಣಕ್ಕೆ ಬಂದರೂ ಕೈಗಾರಿಕಾ ಪ್ರದೇಶದ ಸುತ್ತಲೂ ದಟ್ಟ ಹೊಗೆ ತುಂಬಿಕೊಂಡಿತ್ತು. ಕಾರ್ಮಿಕರು ಸ್ಥಳದಲ್ಲಿ ಜಮಾಯಿಸಿದ್ದರು.

ಸುದ್ದಿ 2 ನಿಮಿಷ

ಪಿಎಸ್‌ಐ ನೇಮಕಾತಿ ಆದೇಶ ಪತ್ರ ನೀಡಲು ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ಇತ್ತೀಚೆಗೆ ನಡೆದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರ ನೀಡಬೇಕು ಎಂದು ರಾಜ್ಯ ವಿದ್ಯಾರ್ಥಿಗಳ ಅಸೋಸಿಯೇಷನ್ ಅಧ್ಯಕ್ಷ ಕಾಂತ್‌ಕುಮಾರ್ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ಪಿಎಸ್‌ಐ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ಹಗರಣ ನಡೆದಿತ್ತು. ಹೈಕೋರ್ಟ್ ನಿರ್ದೇಶನದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ವತಿಯಿಂದ ಮರು ಪರೀಕ್ಷೆ ನಡೆಸಲಾಗಿತ್ತು. ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಅಂಕಪಟ್ಟಿಯನ್ನು ಕೆಇಎ ಪೊಲೀಸ್ ಇಲಾಖೆಗೆ ಹಸ್ತಾಂತರಿಸಿತ್ತು ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಭ್ಯರ್ಥಿಗಳಿಗೆ ಸರ್ಕಾರ ನೇಮಕಾತಿ ಆದೇಶ ನೀಡಲು ವಿಳಂಬ ಧೋರಣೆ ಅನುಸರಿಸುತ್ತಿದೆ. ದಾಖಲಾತಿ ಪರಿಶೀಲನೆ, ದೈಹಿಕ ತಪಾಸಣೆ, ಸಿಂಧುತ್ವ ಪ್ರಮಾಣಪತ್ರ ಸೇರಿ ಎಲ್ಲಾ ಕಾರ್ಯಗಳು ಪೂರ್ಣಗೊಂಡಿದ್ದರೂ ಆದೇಶ ಪತ್ರ ನೀಡಲು ಹಿಂದೇಟು ಹಾಕುತ್ತಿದೆ ಎಂದಿದ್ದಾರೆ.

ಅಧಿವೇಶನ ಮುಗಿದ ಬಳಿಕ ಆದೇಶ ಪತ್ರ ನೀಡಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ತಿಳಿಸಿದ್ದರು. ಆದರೆ, ಅಧಿವೇಶನ ಮುಗಿದು ಎರಡು ವಾರ ಕಳೆದರೂ ಆದೇಶ ನೀಡಿಲ್ಲ. ಕೂಡಲೇ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ತಮಟೆ ಬಾರಿಸುವ ವಿಚಾರಕ್ಕೆ ಗಲಾಟೆ: ಯುವಕನ ಮೇಲೆ ಹಲ್ಲೆ

ಬೆಂಗಳೂರು: ತಮಟೆ ಬಾರಿಸುವ ವಿಚಾರಕ್ಕೆ ಚಾಮರಾಜಪೇಟೆಯಲ್ಲಿ ಎರಡು ಗುಂಪುಗಳ ಮಧ್ಯೆ ನಡೆದ ಗಲಾಟೆಯಲ್ಲಿ ಯುವಕನೊಬ್ಬನ ಮೇಲೆ ಕೆಲವರು ದೊಣ್ಣೆಗಳಿಂದ ಹಲ್ಲೆ ನಡೆಸಿ ಪರಾರಿ ಆಗಿದ್ದಾರೆ.

ಭಕ್ಷಿಗಾರ್ಡನ್ ನಿವಾಸಿ ಅವಿನಾಶ್(29) ಗಾಯಗೊಂಡವರು.

ಕೃತ್ಯ ಎಸಗಿದ ಆರೋಪಿಗಳ ಸುಳಿವು ಲಭ್ಯವಾಗಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಚಾಮರಾಜಪೇಟೆಯಲ್ಲಿ ವೃದ್ಧರೊಬ್ಬರು ಮೃತಪಟ್ಟಿದ್ದರು. ಟಿ.ಆರ್. ಮಿಲ್ ಸಮೀಪದ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲು ಕುಟುಂಬಸ್ಥರು ಸಿದ್ಧತೆ ನಡೆಸಿದ್ದರು. ಮೃತದೇಹವನ್ನು ಮೆರವಣಿಗೆ ಮೂಲಕ ಕೊಂಡೊಯ್ಯಲಾಗುತ್ತಿತ್ತು. ಅವಿನಾಶ್ ಅವರು ತಮಟೆ ಬಾರಿಸುತ್ತಿದ್ದರು. ಆಗ ಕೆಲವು ಯುವಕರು ಗಲಾಟೆ ಮಾಡಿದ್ದಾರೆ. ಮಾತಿನ ಚಕಮಕಿ ನಡೆದು ದೊಣ್ಣೆ ಹಾಗೂ ಮರದ ಪಟ್ಟಿಯಿಂದ ಅವಿನಾಶ್ ತಲೆ ಹಾಗೂ ದೇಹದ ಇತರೆ ಭಾಗಗಳಿಗೆ ಥಳಿಸಿ ಪರಾರಿ ಆಗಿದ್ದಾರೆ. ಗಾಯಗೊಂಡ ಅವಿನಾಶ್ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಯುವತಿಯರ ಫೋಟೊ ತೆಗೆದ ಪ್ರಯಾಣಿಕ: ₹5,000 ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊದಲ್ಲಿ ಪ್ರಯಾಣಿಸುತ್ತಿರುವಾಗ ಮಹಿಳೆಯರು, ಯುವತಿಯರ ಫೋಟೊ ತೆಗೆಯುತ್ತಿದ್ದ ಆರೋಪಿ ಮಹೇಶ್‌ಗೆ ಬಿಎಂಆರ್‌ಸಿಎಲ್ ₹5,000 ದಂಡ ವಿಧಿಸಿದೆ.

ಡಿ.25ರಂದು ಬೆಳಿಗ್ಗೆ 9ಕ್ಕೆ ಯುವತಿಯೊಬ್ಬರು ಮೆಜೆಸ್ಟಿಕ್‌ನಿಂದ ಜೆ.ಪಿ.ನಗರಕ್ಕೆ ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದರು. ಅವರನ್ನು ಹಿಂಬಾಲಿಸಿಕೊಂಡು ಬಂದ ವ್ಯಕ್ತಿ ಫೋಟೊ ತೆಗೆದಿದ್ದರು. ಇದನ್ನು ಯುವತಿ ಗಮನಿಸಿದ್ದರು. ಆ ವ್ಯಕ್ತಿ ಇದೇ ರೀತಿ ಬೇರೆ ಬೇರೆ ಮಹಿಳೆಯರ ಫೋಟೊ ತೆಗೆಯತೊಡಗಿದ್ದರು. ಯುವತಿ ಬಂದು ಆರೋಪಿಯ ಕಪಾಳಕ್ಕೆ ಹೊಡೆದಿದ್ದಾರೆ. ಅದೇ ಸಮಯದಲ್ಲಿ ಕೆಲಸ ಮುಗಿಸಿ ತೆರಳುತ್ತಿದ್ದ ಬಿಎಂಆರ್‌ಸಿಎಲ್ ಭದ್ರತಾ ಸಿಬ್ಬಂದಿ ಸುಜಿತ್ ಮತ್ತು ಎಸ್.ಜಿ. ರಾಮ್ ಬಹದ್ದೂರ್ ತಾಪಾ ಯುವತಿಯ ನೆರವಿಗೆ ಬಂದು ಆರೋಪಿಯನ್ನು ಹಿಡಿದಿದ್ದರು.

ಬಳಿಕ ಆರೋಪಿಯನ್ನು ಜಯನಗರ ಠಾಣೆ ಪೊಲೀಸರ ವಶಕ್ಕೆ ಒಪ್ಪಿಸಲಾಯಿತು. ಮೆಟ್ರೊದಲ್ಲಿ ಫೋಟೊ ತೆಗೆದ ಪ್ರಕರಣಕ್ಕೆ ಬಿಎಂಆರ್‌ಸಿಎಲ್ ₹5,000 ದಂಡ ವಿಧಿಸಿದೆ. ಪೊಲೀಸರು ವಿಚಾರಣೆ ನಡೆಸಿದಾಗ ಆಯುರ್ವೇದಿಕ್ ವೈದ್ಯ ಎಂದು ಆರೋಪಿ ತಿಳಿಸಿದ್ದಾನೆ. ತಪ್ಪೊಪ್ಪಿಗೆ ಬರೆಸಿಕೊಂಡು ಆರೋಪಿಯನ್ನು ಬಿಡುಗಡೆ ಮಾಡಲಾಗಿದೆ.

ಐಶ್ವರ್ಯಾಗೆ ಕಾರು ಉಡುಗೊರೆ ಕೊಟ್ಟ ರಾಜಕಾರಣಿ?

ಬಿಎಂಡಬ್ಲ್ಯು ಸೇರಿ 3 ಕಾರು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಪಡೆದು ಹಣ ನೀಡದೇ ವಂಚಿಸಿದ್ದ ಆರೋಪ ಎದುರಿಸುತ್ತಿರುವ ರಾಜರಾಜೇಶ್ವರಿ ನಗರ ನಿವಾಸಿ ಐಶ್ವರ್ಯಾಗೌಡ ಹಾಗೂ ಹರೀಶ್ ದಂಪತಿಯಿಂದ ಮೂರು ಐಷಾರಾಮಿ ಕಾರುಗಳನ್ನು ರಾಜರಾಜೇಶ್ವರಿ ನಗರ ಠಾಣೆ ಪೊಲೀಸರು ಜಪ್ತಿ ಮಾಡಿದ್ದಾರೆ.

‘ಆರೋಪಿಗಳಿಂದ ಔಡಿ, ಬಿಎಂಡಬ್ಲ್ಯು ಮತ್ತು ಫಾರ್ಚೂನರ್ ಕಾರು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಚಿನ್ನಾಭರಣ ಮಳಿಗೆಗಳ ಮಾಲೀಕರು ಹಾಗೂ ಸ್ಥಿತಿವಂತರಿಗೆ ಆರೋಪಿ ದಂಪತಿ ವಂಚಿಸುತ್ತಿದ್ದರು. ಇದೇ ಹಣದಿಂದ ಐಷಾರಾಮಿ ಕಾರುಗಳನ್ನು ಖರೀದಿಸಿದ್ದಾರೆ. ಮೂರು ಕಾರುಗಳು ಹರೀಶ್ ಹೆಸರಿನಲ್ಲಿವೆ. ಚುನಾವಣೆ ಸಂದರ್ಭದಲ್ಲಿ ಆರ್ಥಿಕ ಸಹಾಯ ಮಾಡಿದ್ದಕ್ಕೆ ರಾಜಕೀಯ ಮುಖಂಡರೊಬ್ಬರು ಐಶ್ವರ್ಯಾ ದಂಪತಿಗೆ ಉಡುಗೊರೆಯಾಗಿ ಕಾರೊಂದನ್ನು ನೀಡಿದ್ದರು ಎಂಬ ಮಾಹಿತಿ ಇದ್ದು, ಅದನ್ನೂ ಪರಿಶೀಲಿಸಲಾಗುತ್ತಿದೆ. ಕಾರು ಖರೀದಿಯ ಹಣದ ಮೂಲ ಪತ್ತೆ ಮಾಡಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎರಡನೇ ನೋಟಿಸ್ ಜಾರಿ: ‘ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ಸಂಬಂಧ ಹೈಕೋರ್ಟ್‌ನಿಂದ ಷರತ್ತುಬದ್ಧ ಜಾಮೀನು ಪಡೆದುಕೊಂಡಿರುವ ಆರೋಪಿಗಳು, ಪೊಲೀಸ್ ಕಸ್ಟಡಿಯಿಂದ ಬುಧವಾರ ಬೆಳಿಗ್ಗೆಯೇ ಬಿಡುಗಡೆ ಆಗಿದ್ದರು. ಬಿಡುಗಡೆಯಾದ ಬಳಿಕ ಐಶ್ವರ್ಯಾ ನಾಪತ್ತೆ ಆಗಿದ್ದಾರೆ. ಪತಿ ಹರೀಶ್ ಮನೆಯಲ್ಲೇ ಇದ್ದು, ಅವರ ಸಮ್ಮುಖದಲ್ಲೇ ಮನೆ ಶೋಧಿಸಿ ಚಿನ್ನಾಭರಣ, ಬೆಳ್ಳಿ, ಕಾರುಗಳನ್ನು ಜಪ್ತಿ ಮಾಡಲಾಗಿದೆ. ವಿಚಾರಣೆಗೆ ಬರುವಂತೆ ಆರೋಪಿಗಳಿಗೆ ಎರಡನೇ ನೋಟಿಸ್ ಜಾರಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಐ.ಟಿ. ಅಧಿಕಾರಿಗಳಿಗೆ ಮಾಹಿತಿ

‘ಐಶ್ವರ್ಯಾ ಅವರ ಆದಾಯ ಮೂಲದ ಬಗ್ಗೆ ಕೆಲವೊಂದು ಅನುಮಾನಗಳಿದ್ದು, ದಂಪತಿ ಮಂಡ್ಯದ ಬಳಿ ಸಿಮೆಂಟ್ ಕಾರ್ಖಾನೆ ತೆರೆದಿದ್ದಾರೆ. ಅದಕ್ಕೆ ಹಣದ ಮೂಲ ಯಾವುದು ಎಂಬುದು ತಿಳಿದು ಬಂದಿಲ್ಲ. ಇದೇ ರೀತಿ ಹಲವರಿಗೆ ಕೋಟ್ಯಂತರ ರೂಪಾಯಿ ವಂಚಿಸಿದ್ದಾರೆ ಎಂಬ ಆರೋಪವಿದ್ದು, ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಾಗುತ್ತಿದೆ. ಬ್ಯಾಂಕ್ ವ್ಯವಹಾರದಲ್ಲಿ ಹಣ ಅಕ್ರಮ ವರ್ಗಾವಣೆ ಕಂಡು ಬಂದಿದ್ದು, ಆದಾಯ ತೆರಿಗೆ ಇಲಾಖೆಗೆ ಮಾಹಿತಿ ನೀಡಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸ್ನೇಹ ಬೆಳೆಸಿ ₹3.25 ಕೋಟಿ ನಗದು, 450 ಗ್ರಾಂ. ಚಿನ್ನಾಭರಣ ಪಡೆದು ಐಶ್ವರ್ಯಾಗೌಡ ವಂಚಿಸಿದ್ದಾರೆ’ ಎಂದು ಆರೋಪಿಸಿ, ರಾಜರಾಜೇಶ್ವರಿ ನಗರದ ನಿವಾಸಿ ಶಿಲ್ಪಾಗೌಡ ಅವರು ರಾಜರಾಜೇಶ್ವರಿ ನಗರ ಪೊಲೀಸರಿಗೆ ದೂರು ನೀಡಿದ್ದರು. ₹8.41 ಕೋಟಿ ಸಾಲ ಪಡೆದು ವಂಚಿಸಿದ್ದ ಆರೋಪದ ಅಡಿ ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿ ಮಾಲೀಕರಾದ ವನಿತಾ ಎಸ್. ಐತಾಳ್ ಅವರೂ ದಂಪತಿ ವಿರುದ್ಧ ಚಂದ್ರಾಲೇಔಟ್ ಠಾಣೆಗೆ ದೂರು ನೀಡಿದ್ದರು.

ಅಪರಾಧ ಸುದ್ದಿ

ಶ್ವೇತಾಗೌಡ ಕಸ್ಟಡಿಗೆ ಪಡೆಯಲು ಪೊಲೀಸರ ಸಿದ್ಧತೆ

ಮಾಜಿ ಸಚಿವ ವರ್ತೂರು ಪ್ರಕಾಶ್ ಅವರ ಹೆಸರು ಹೇಳಿಕೊಂಡು ಚಿನ್ನಾಭರಣ ಮಳಿಗೆ ಮಾಲೀಕರಿಗೆ ₹2.42 ಕೋಟಿ ವಂಚಿಸಿದ್ದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಶ್ವೇತಾಗೌಡ ಅವರನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದುಕೊಳ್ಳಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ಸಂಬಂಧ ಬಾಗಲಗುಂಟೆ ನಿವಾಸಿ ಶ್ವೇತಾ ಗೌಡ ಅವರನ್ನು ಪೊಲೀಸರು ಬಂಧಿಸಿದ್ದರು. ಚಿನ್ನಾಭರಣ ಪಡೆದು ವಂಚಿಸಿದ್ದಾರೆ ಎಂದು ಆರೋಪಿಸಿ ಶಿವಮೊಗ್ಗದ ಮಹಿಳೆಯೊಬ್ಬರು ಶ್ವೇತಾಗೌಡ ಅವರ ವಿರುದ್ಧ ದೂರು ನೀಡಿದ್ದು, ಇದೇ ಠಾಣೆಯಲ್ಲಿ ಇನ್ನೊಂದು ಪ್ರಕರಣ ದಾಖಲಾಗಿದೆ.

‘ಎರಡನೇ ಪ್ರಕರಣದಲ್ಲಿ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಗುವುದು. ಇದಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ನ್ಯಾಯಾಲಯಕ್ಕೆ ಶೀಘ್ರದಲ್ಲೇ ಅರ್ಜಿ ಸಲ್ಲಿಸಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಪಾರ್ಟಿಗೆ ಬಂದಿದ್ದ ಯುವತಿ ಜತೆಗೆ ಅಸಭ್ಯ ವರ್ತನೆ: ಪ್ರಕರಣ ದಾಖಲು

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ಬೆಳ್ಳಂದೂರಿನ ಪಬ್‌ವೊಂದರಲ್ಲಿ ಯುವಕನೊಬ್ಬ ಯುವತಿ ಜತೆಗೆ ಅನುಚಿತವಾಗಿ ವರ್ತಿಸಿದ್ದು, ಈ ಸಂಬಂಧ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಒಡಿಶಾದ ಯುವತಿಗೆ ಕಿರುಕುಳ ನೀಡಿದ್ದ ಆರೋಪದಡಿ ಪ್ರಕರಣದ ದಾಖಲಿಸಿಕೊಳ್ಳಲಾಗಿದೆ. ಹೊಸ ವರ್ಷದ ಪಾರ್ಟಿಗೆಂದು ಯುವತಿಯು ಸ್ನೇಹಿತನ ಜತೆಗೆ ಪಬ್‌ಗೆ ಬಂದಿದ್ದರು. ಅದೇ ಪಬ್‌ನಲ್ಲಿದ್ದ ಆರೋಪಿ, ಮದ್ಯ ಸೇವಿಸುವಂತೆ ಯುವತಿಯನ್ನು ಕೇಳಿಕೊಂಡಿದ್ದ. ಅದನ್ನು ಯುವತಿ ನಿರಾಕರಿಸಿದ್ದರು. ಆಗ ಅನುಚಿತವಾಗಿ ವರ್ತಿಸಿದ್ದ ಆರೋಪಿ, ಸ್ಥಳದಿಂದ ಪರಾರಿ ಆಗಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

‘ಅಸಭ್ಯ ವರ್ತನೆ ಮತ್ತು ಕಿರುಕುಳ ನೀಡಿದ ಆರೋಪದ ಅಡಿ ಯುವತಿ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

ದೂರು ನೀಡಲು ತೆರಳಿದ್ದ ಮಹಿಳೆಗೆ ಠಾಣೆಯಲ್ಲೇ ಲೈಂಗಿಕ ಕಿರುಕುಳ

ಮಧುಗಿರಿ: ದೂರು ನೀಡಲು ತೆರಳಿದ್ದ ಮಹಿಳೆಯೊಬ್ಬರ ಜತೆ ಪೊಲೀಸ್ ಅಧಿಕಾರಿಯೊಬ್ಬರು ಅನುಚಿತವಾಗಿ ವರ್ತಿಸಿ, ಲೈಂಗಿಕ ಕಿರುಕುಳ ನೀಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಜಮೀನು ವ್ಯಾಜ್ಯ ಕುರಿತು ದೂರು ನೀಡಲು ತೆರಳಿದ್ದ ಮಹಿಳೆ ಪಾವಗಡ ತಾಲ್ಲೂಕಿನವರು ಎನ್ನಲಾಗಿದೆ. ಮಹಿಳೆಯ ಮೇಲೆ ಕಚೇರಿಯ ಶೌಚಾಲಯದಲ್ಲಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಈ ದೃಶ್ಯವನ್ನು ಶೌಚಾಲಯದ ಕಿಟಕಿಯಿಂದ ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗಿದೆ ಎಂದು ಹೇಳಲಾಗುತ್ತಿದೆ.

ಹಿರಿಯ ಅಧಿಕಾರಿಗಳಿಗೆ ವರದಿ: ವಿಡಿಯೊ ಪರಿಶೀಲಿಸಲಾಗಿದೆ. ಮಹಿಳೆ ಯಾರೆಂಬುದು ಗೊತ್ತಿಲ್ಲ. ಈವರೆಗೂ ಯಾರೂ ದೂರು ನೀಡಿಲ್ಲ. ಡಿವೈಎಸ್‌ಪಿ ವಿರುದ್ಧ ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ. ಅವರ ಸೂಚನೆ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ಸ್ಪಷ್ಟಪಡಿಸಿದ್ದಾರೆ.

ಅಪಘಾತ: ಫುಡ್ ಡೆಲಿವರಿ ಯುವಕ ಸಾವು

ಬೆಂಗಳೂರು: ಕೆ.ಜಿ. ಹಳ್ಳಿ ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ ಯುವಕ ಮೃತಪಟ್ಟಿದ್ದಾರೆ.

ಪಶ್ಚಿಮ ಬಂಗಾಳದ ಸುಮಾಂಜ್ ಮಾಂಝಿ(21) ಮೃತಪಟ್ಟವರು.

‘ಕೆಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಸುಮಾಂಜ್ ಮಾಂಝಿ ಅವರು ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದರು. ಗುರುವಾರ ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಫುಡ್ ಡೆಲಿವರಿ ಮಾಡಲು ವೇಗವಾಗಿ ತೆರಳುತ್ತಿದ್ದರು. ಆಗ ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕೆಳಕ್ಕೆ ಉರುಳಿ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳೀಯರು ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಅವರು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

ಸಂಕ್ರಾಂತಿ ಹಾಗೂ ಮದುವೆ ಸಮಾರಂಭಗಳ ಪ್ರಯುಕ್ತ ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ | OPENING TODAY
ಅಭಿವೃದ್ಧಿ ಸಿಲ್ಕ್ ಇಂಡಿಯ® 2025 | Exclusive Wedding Collections
ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ : ಧರ್ಮಾವರಂ, ಉಪ್ಪಡಾ, ಗೊಡ್ವಾಲ್, ಮಂಗಲಗಿರಿ ಹಾಗೂ ಪೂಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ ಮಹಾರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೊತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು
ವೈಟ್ ಪೆಟಲ್ಸ್ ಬಿ.ಎಂ.ಟಿ.ಸಿ. ಬಸ್ ಡಿಪೋ, ಮಾರುತಿ ಮಂದಿರದ ಹತ್ತಿರ ವಿಜಯನಗರ, ಬೆಂಗಳೂರು | 3 ರಿಂದ 12 ಜನವರಿ 2025 ರವರೆಗೆ ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ
Entry Free | All Credit & Debit Cards Accepted | Contact : 63641 65152, 99008 03345

PUBLIC NOTICE

ಸಾರ್ವಜನಿಕ ತಿಳುವಳಿಕೆ

ಶ್ರೀಮತಿ ಉಮಾ ಮಹೇಶ್ವರಿ ಎಂ. ಮೆ॥ ರಾಡಿಸನ್ ಬೆಂಗಳೂರು ಸಿಟಿ ಸೆಂಟರ್ ರವರು # 2 ಗಂಗಾಧರ ಚೆಟ್ಟಿ ರಸ್ತೆ, ಹಲಸೂರು, ಬೆಂಗಳೂರು–560042 ಇಲ್ಲಿ ರೆಕಾರ್ಡೆಡ್/ಲೈವ್ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ಈ ಬಗ್ಗೆ ಸಾರ್ವಜನಿಕರ ಆಕ್ಷೇಪಣೆ/ಸಲಹೆಗಳು ಏನಾದರೂ ಇದ್ದಲ್ಲಿ, ಅವುಗಳನ್ನು ಲಿಖಿತ ಮೂಲಕ ಸಹಿಯೊಂದಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ 15 ದಿನಗಳೊಳಗಾಗಿ ಉಪ ಪೊಲೀಸ್ ಆಯುಕ್ತರು(ಆಡಳಿತ), ಪೊಲೀಸ್ ಆಯುಕ್ತರವರ ಕಚೇರಿ, ನಂ. 1, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು–560001 ರವರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ಸಲಹೆಗಳು ಬಾರದಿದ್ದಲ್ಲಿ ಅರ್ಜಿದಾರರು ಸದರಿ ಸ್ಥಳದಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
ಉದ್ದೇಶಿತ ಕೇಂದ್ರದ ಚಕ್ಕುಬಂದಿ
1. ಪೂರ್ವಕ್ಕೆ : ರಸ್ತೆ, 2. ಪಶ್ಚಿಮಕ್ಕೆ : ಹರ್ಮಿಟೇಜ್ ಅಪಾರ್ಟ್‌ಮೆಂಟ್, 3. ಉತ್ತರಕ್ಕೆ : ರೈನ್‌ಬೋ ಮ್ಯೂಸಿಕ್ ಸ್ಟೂಡಿಯೋ, 4. ದಕ್ಷಿಣಕ್ಕೆ : ಎಂಬೆಸಿ ಎರೋಸ್ ಅಪಾರ್ಟ್‌ಮೆಂಟ್.
ಸಹಿ/–
ಪೊಲೀಸ್ ಆಯುಕ್ತರು
ಬೆಂಗಳೂರು ನಗರ
ದಿನಾಂಕ : 03.01.2025

RENTAL PROPERTIES

Accommodation Available

Commercial

AVAILABLE GROUND Floor 1600 sqft, 1st Floor 1500 Sqft, 200 To 800 Sqft For Rent in Koramangala Call 9845167755

Flats

2BHK FOR senior living in Devanahalli. 24K. Ph: 9482562481

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Anjanapura

BDA-SITES WANTED @ Banashankari 6th Stage Anjanapura 20x30, 30x40, 40x60 50x80 Immediate Settlement Call Rajesh: 9945610779.

REAL ESTATE SELLING

Flat

M G Road And Around

OPPOSITE OBEROI N/E Corner Apartment 3 BHK /4Toilets /2Car- parking Price 3.5Crores Negotioble:8884501767

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact: +91 9845114560 | +91 9901641752 | 080-45557163/164

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

PERSONAL

Change of Name

I, WASEEM SALIM. Residing at #29 Ground_floor, 18th Cross Thigalarapalya Main, Raghavendra Layout, Peenya 2nd stage, Bengaluru-58 have changed my name as WASEEM KHAN. S, vide affidavit dated 31/12/2024 before Notary V.Anjanappa, Bengaluru

CHANGE OF NAME
I, **KOWSALYA** alias **KOUSALYA** residing at # 9, Abbaiah Garden, Viveknagar, Bengaluru-560047, have changed my name to **M. KONDAMMA** vide affidavit dated 19-11-2024, before notary B.M.Chandrashekar, Bengaluru. Henceforth I shall be called as **M. KONDAMMA** only

CHANGE OF NAME
I, **Vijay Kumar K.V,** residing at F.No.G4,G5,Sy.No.2464/2308-2/3A/4A, Buildafina Lumos Apartment, Harlur VTC: H S R Layout, PO: HSR Layout, District: Bengaluru, State: Karnataka Pin code: 560102 has mentioned my name as **VIJAYA KUMAR K.V** in some documents. Hereby declaring that my correct name is **VIJAY KUMAR K.V.** only. vide affidavit dated 01-01-2025 before notary B.M Chandrashekar

CHANGE OF NAME
I, **Arthi Sharma,** residing at B-005, Master Classic Residency, 2nd Cross, Surabhi layout, Shivanahalli, Yelahanka Bengaluru-560064, have changed my name to **ARTHI SHARMA A S** Vide affadiavit dated 02.01.2025 before Notary Sarala Kumari, Yelahanka, Bengaluru

Lost

LOST
I, **MOHAMMED MAJID SALAMA BIN TALEB,** residing at Bhadra Enclave Apartment building, No. 51, 13th Cross Road Post, St thomas Town, Kacharakanahalli, Bengaluru-560084, have lost my **Passport No. 10884443, Validity 12/2028, Place of issue Republic of Yemen,** while in transit please contact : 9353733665

ಮೂರು ತಿಂಗಳಲ್ಲಿ ₹900 ಕೋಟಿ ಸಂಗ್ರಹದ ಗುರಿ; ಕಾಯ್ದೆ ಪ್ರಕಾರ ಕಾರ್ಯಾಚರಣೆ

ತೆರಿಗೆ ಪಾವತಿಸದಿದ್ದರೆ ಆಸ್ತಿ ಹರಾಜು

• ಆರ್. ಮಂಜುನಾಥ್

ಬೆಂಗಳೂರು: ಆಸ್ತಿ ತೆರಿಗೆ ಸುಸ್ತಿದಾರರಿಗೆ ದಂಡ ವಿಧಿಸುವ ಜೊತೆಗೆ, ನೋಟಿಸ್ ಅವಧಿಯೊಳಗೆ ತೆರಿಗೆ ಪಾವತಿ ಮಾಡದಿದ್ದರೆ, ಸ್ಥಿರಾಸ್ತಿ, ಚರಾಸ್ತಿಗಳನ್ನು ಮಾರಾಟ ಅಥವಾ ಹರಾಜು ಹಾಕಿ ಬಾಕಿ ವಸೂಲಿ ಮಾಡಲು ಬಿಬಿಎಂಪಿ ಮುಂದಾಗಿದೆ.

ಆಸ್ತಿ ತೆರಿಗೆ ಸಂಗ್ರಹದಲ್ಲಿ ಪ್ರಸಕ್ತ ಆರ್ಥಿಕ ವರ್ಷದ ಗುರಿ ಸಾಧಿಸಲು ಇನ್ನೂ ಮೂರು ತಿಂಗಳು ಬಾಕಿ ಉಳಿದಿದ್ದು, ಸುಮಾರು ₹900 ಕೋಟಿ ಪಾವತಿ ಆಗಬೇಕಿದೆ. ಇದಕ್ಕಾಗಿ 'ವಿಶೇಷ ಅಭಿಯಾನ'ವನ್ನು ಆರಂಭಿಸಲಿದ್ದು, ಕಾಯ್ದೆ ಪ್ರಕಾರ ತನಗಿರುವ ಎಲ್ಲ ಅಧಿಕಾರವನ್ನೂ ಬಳಸಿಕೊಳ್ಳಲು ಪಾಲಿಕೆ ನಿರ್ಧರಿಸಿದೆ. ಬಿಬಿಎಂಪಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹೊಂದಿದ್ದ ಗುರಿಯಲ್ಲಿ ಶೇ 82.90ರಷ್ಟು ಸಾಧನೆ ಮಾಡಿದ್ದು, ತೆರಿಗೆ ಸಂಗ್ರಹದಲ್ಲಿ ದಾಖಲೆ ಸೃಷ್ಟಿಸಿದೆ.

'ಆಸ್ತಿ ತೆರಿಗೆ ಪಾವತಿ ಮಾಡದಿದ್ದವರಿಗೆ ಮೊದಲು ನೋಟಿಸ್ ಜಾರಿ ಮಾಡಲಾಗುತ್ತದೆ. ಆ ಅವಧಿಯಲ್ಲೂ ಪಾವತಿ ಮಾಡದಿದ್ದರೆ, ಬೀಗಮುದ್ರೆ ಹಾಕಿ ಮತ್ತೊಮ್ಮೆ ಗಡುವು ನೀಡಲಾಗುತ್ತದೆ. ಅದನ್ನೂ ಮೀರಿದರೆ ಆಸ್ತಿ ಮುಟ್ಟುಗೋಲು, ಹರಾಜು ಹಾಕಲು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಒಂದು ಬಾರಿ ಪರಿಹಾರ ಯೋಜನೆ (ಒಟಿಎಸ್) ಅಂತ್ಯಗೊಂಡ ಸಮಯದಲ್ಲಿ ಹೇಳಿದ್ದರು. ಅದು ಇದೀಗ ಅನುಷ್ಠಾನವಾಗುತ್ತಿದೆ.

ಒಟಿಎಸ್ ಯೋಜನೆ ಅಂತ್ಯವಾದ ನಂತರ ಡಿಸೆಂಬರ್ 3ರಿಂದಲೇ ಸುಸ್ತಿದಾರರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಜನವರಿಯಲ್ಲಿ 'ವಿಶೇಷ ಅಭಿಯಾನ' ಹಮ್ಮಿಕೊಳ್ಳಲಿರುವ ಬಿಬಿಎಂಪಿ ಕಂದಾಯ ವಿಭಾಗದ ಸಿಬ್ಬಂದಿ, ಸುಸ್ತಿದಾರರಿಂದ ಆಸ್ತಿ ತೆರಿಗೆ ಸಂಗ್ರಹಿಸಲು ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ. ಜ. 6ರಿಂದ ಬೀಗಮುದ್ರೆ ಹಾಕಲಾಗುತ್ತದೆ. ಅದಕ್ಕೂ ಮಣಿಯದಿದ್ದರೆ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಮುಂದಿನ 15 ದಿನಗಳಲ್ಲೂ ತೆರಿಗೆ ಪಾವತಿಸದಿದ್ದರೆ ವಾಹನ ಸೇರಿ ಚರಾಸ್ತಿ, ಸ್ಥಿರಾಸ್ತಿಯನ್ನು ಮಾರಾಟ ಅಥವಾ ಹರಾಜು ಹಾಕಲು ಬಿಬಿಎಂಪಿ ನಿರ್ಧರಿಸಿದೆ. ಈ ಎಲ್ಲ ಕ್ರಮಗಳನ್ನು ಕೈಗೊಳ್ಳುವ ಮೂಲಕ ಮಾರ್ಚ್ ಅಂತ್ಯದ ವೇಳೆಗೆ ಎಲ್ಲ ಸುಸ್ತಿದಾರರಿಂದ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದು ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿಗಳು ತಿಳಿಸಿದರು.

ಆಸ್ತಿ ತೆರಿಗೆ ಸಂಗ್ರಹ

ವಲಯ	2024–25ರ ಗುರಿ	ಸಂಗ್ರಹ 2024 (ಡಿ.31ರವರೆಗೆ)	ಸಂಗ್ರಹ 2023 (ಡಿ.31ರವರೆಗೆ)	2023–24ಕ್ಕಿಂತ 2024–25ರಲ್ಲಿ ಹೆಚ್ಚಳ(ಶೇಕಡ)
	(₹ಕೋಟಿಗಳಲ್ಲಿ)			
ಪೂರ್ವ	891.89	721.40	581.47	24.06%
ಪಶ್ಚಿಮ	610.39	489.34	340.77	43.60%
ದಕ್ಷಿಣ	769.50	622.68	467.91	33.08%
ಆರ್.ಆರ್. ನಗರ	434.35	340.84	220.31	54.71%
ಬೊಮ್ಮನಹಳ್ಳಿ	585.11	427.18	354.49	20.51%
ದಾಸರಹಳ್ಳಿ	164.95	138.11	92.82	48.79%
ಮಹದೇವಪುರ	1,309.04	1,161.71	896.59	29.57%
ಯಲಹಂಕ	445.24	418.44	292.25	43.18%

ಅಂಕಿ ಅಂಶಗಳು

₹5,210.48 ಕೋಟಿ
2024–25ರಲ್ಲಿನ ಒಟ್ಟು ಆಸ್ತಿ ತೆರಿಗೆ ಸಂಗ್ರಹದ ಗುರಿ

₹4,319.70 ಕೋಟಿ
ಡಿಸೆಂಬರ್ 31ರವರೆಗಿನ ಸಂಗ್ರಹ

82.90%
ಡಿಸೆಂಬರ್ 31ರವರೆಗೆ ಶೇಕಡಾವಾರು ಸಂಗ್ರಹ

33.05%
2023–24ರ ಸಾಲಿಗಿಂತ 2024–25ರಲ್ಲಿ ಹೆಚ್ಚಳ (ಡಿ.31ರವರೆಗೆ)

₹890.78 ಕೋಟಿ
ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬಾಕಿ

ಆಸ್ತಿ ತೆರಿಗೆ ಪಾವತಿಗೆ ಬಹಳಷ್ಟು ಸಮಯ ನೀಡಲಾಗಿದೆ. ಇನ್ನು ಕಾನೂನು ಪ್ರಕಾರ ಕಾರ್ಯಾಚರಣೆ ನಡೆಯುತ್ತದೆ

ಮುನೀಶ್ ಮೌದ್ಗಿಲ್, ವಿಶೇಷ ಆಯುಕ್ತ, ಕಂದಾಯ ವಿಭಾಗ, ಬಿಬಿಎಂಪಿ

ಜಾರಕಿಹೊಳಿ ನಿವಾಸದಲ್ಲಿ ಸಿ.ಎಂ ಸಚಿವರಿಗೆ ಔತಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ನಿವಾಸದಲ್ಲಿ ಗುರುವಾರ ರಾತ್ರಿ ಆಯೋಜಿಸಿದ್ದ ಔತಣ ಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲವು ಸಚಿವರು ಮತ್ತು ಶಾಸಕರು ಪಾಲ್ಗೊಂಡಿದ್ದರು.

ಸತೀಶ ಜಾರಕಿಹೊಳಿ

ಸಂಪುಟ ಸಭೆಯ ಬಳಿಕ ಸಚಿವರ ಅಧಿಕೃತ ನಿವಾಸದಲ್ಲಿ ಔತಣಕೂಟ ಆಯೋಜಿಸಲಾಗಿತ್ತು. ಸಚಿವ ಸಂಪುಟ ಪುನರ್‌ರಚನೆ ಕುರಿತು ಕಾಂಗ್ರೆಸ್‌ನಲ್ಲಿ ಚರ್ಚೆ ಆರಂಭವಾಗಿರುವಾಗಲೇ ಜಾರಕಿಹೊಳಿ ನಿವಾಸದಲ್ಲಿ ಔತಣಕೂಟದ ನೆಪದಲ್ಲಿ ಸಭೆ ನಡೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲಕ್ಕೆ ಕಾರಣವಾಗಿದೆ.

ಗೃಹ ಸಚಿವ ಜಿ. ಪರಮೇಶ್ವರ, ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಸಹಕಾರ ಸಚಿವ ಕೆ.ಎನ್. ರಾಜಣ್ಣ ಸೇರಿದಂತೆ ಏಳು ಸಚಿವರು ಹಾಗೂ 35ಕ್ಕೂ ಹೆಚ್ಚು ಶಾಸಕರು ಔತಣಕೂಟದಲ್ಲಿ ಪಾಲ್ಗೊಂಡಿದ್ದರು.

'ಶಸ್ತ್ರ ತ್ಯಜಿಸಿ, ಕಾನೂನಾತ್ಮಕ ಹೋರಾಟ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕ್ಸಲ್ ಚಳವಳಿಯಲ್ಲಿ ಸಕ್ರಿಯವಾಗಿರುವವರು ಶಸ್ತ್ರಾಸ್ತ್ರ ತೊರೆದು ಮುಖ್ಯವಾಹಿನಿಗೆ ಬರಬೇಕೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಯನ್ನು ಸ್ವಾಗತಿಸಿರುವ 'ಶಾಂತಿಗಾಗಿ ನಾಗರಿಕರ ವೇದಿಕೆ', 'ನಕ್ಸಲರು ಶಸ್ತ್ರಗಳನ್ನು ತ್ಯಜಿಸಿ, ಹೋರಾಟ ಗಳನ್ನು ಕಾನೂನಾತ್ಮಕವಾಗಿ ಮುಂದುವರಿಸಲು ಇದೊಂದು ಅವಕಾಶ' ಎಂದು ಪ್ರತಿಪಾದಿಸಿದೆ.

ವೇದಿಕೆ ಪರವಾಗಿ ಹೇಳಿಕೆ ಬಿಡುಗಡೆ ಮಾಡಿರುವ ಎನ್.ವೆಂಕಟೇಶ್, ಬಿ.ಟಿ.ಲಲಿತಾ ನಾಯ್ಕ್, ಕಲ್ಕುಳಿ ವಿಠ್ಠಲ ಹೆಗ್ಡೆ, ಪ್ರೊ.ವಿ.ಎಸ್.ಶ್ರೀಧರ, ಪ್ರೊ.ನಗರಗೆರೆ ರಮೇಶ್, ತಾರಾ ರಾವ್, 'ಶರಣಾಗತಿ ನೀತಿಯನ್ನು ಇನ್ನಷ್ಟು ಸರಳಗೊಳಿಸಿ, ಸಮರ್ಪಕವಾಗಿ ಜಾರಿ ಮಾಡಲಾಗುವುದು ಎಂಬ ಸರ್ಕಾರದ ಭರವಸೆಯೂ ಶಾಂತಿ ಸ್ಥಾಪನೆಗೆ ಮುನ್ನುಡಿಯಾಗಿದೆ. ನಕ್ಸಲ್ ಹೋರಾಟಗಾರರು ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆಂದು ನಾಗರಿಕ ಸಮಾಜ ಆಶಿಸುತ್ತದೆ' ಎಂದಿದ್ದಾರೆ.

ಸಾಂವಿಧಾನಿಕ, ಪ್ರಜಾತಾಂತ್ರಿಕ ಹೋರಾಟಗಳು ಆರೋಗ್ಯಕರ ಸಮಾಜಕ್ಕೆ ಮುಖ್ಯ. ಆದರೆ, ಅದನ್ನು ಹಿಂಸಾತ್ಮಕ ಚಳುವಳಿಗಳ ಮೂಲಕವೇ ಮಾಡಬೇಕೆನ್ನುವುದು ಸರಿಯಾದ ಮಾರ್ಗವಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಮುಖ್ಯವಾಹಿನಿಗೆ ಬರುವವರ ಜೀವನ ನಿರ್ವಹಣೆಗೆ ಬೇಕಾದ ಸೌಲಭ್ಯ ಮತ್ತು ಕಾನೂನು ನೆರವು ನೀಡಿ, ಘನತೆಯಿಂದ ನಡೆಸಿಕೊಳ್ಳುವುದು ಸರ್ಕಾರದ ಹೊಣೆ. ಈಗಾಗಲೇ ಹೊರಗೆ ಬಂದಿರುವ ನಕ್ಸಲರ ಪರಿಸ್ಥಿತಿ ಅಯೋಮಯವಾಗಿದೆ. ನ್ಯಾಯಾಲಯ ಗಳಲ್ಲಿ ಹಲವು ಪ್ರಕರಣಗಳು, ನಿಧಾನ ಗತಿಯ ವಿಚಾರಣೆ, ಜಮೀನು ಹಂಚಿಕೆ ಯಲ್ಲಿನ ಆಡಳಿತದ ನಿರ್ಲಕ್ಷ್ಯ ಇತ್ಯಾದಿ ಸಮಸ್ಯೆಗಳಿಂದಾಗಿ ಅವರ ಬದುಕು ಅತಂತ್ರವಾಗಿದೆ ಎಂದು ಹೇಳಿದ್ದಾರೆ.

ಈಗಾಗಲೇ ಮುಖ್ಯವಾಹಿನಿಗೆ ಬಂದಿರುವವರ ಪುನರ್ವಸತಿ ಮತ್ತು ಕಾನೂನು ನೆರವಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ನವೆಂಬರ್ 18ರಂದು ನಡೆದ ವಿಕ್ರಂ ಗೌಡ ಎನ್‌ಕೌಂಟರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಚಿತ್ರಾವಳಿ

ಕೇಂದ್ರೀಯ ಅಬಕಾರಿ ಮತ್ತು ಜಿಎಸ್‌ಟಿ ಅಧಿಕಾರಿಗಳು, ಸಿಬ್ಬಂದಿ ಮತ್ತು ಕುಟುಂಬ ಸದಸ್ಯರ ವೇದಿಕೆ 'ಸಂಪ್ರಭ' ಗುರುವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಸಮ್ಮಿಲನ ಸಂಗೀತ ಕಾರ್ಯಕ್ರಮದಲ್ಲಿ ವೇದಿಕೆ ಅಧ್ಯಕ್ಷ ಜಿ. ನಾರಾಯಣಸ್ವಾಮಿ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ, ಜಿಎಸ್‌ಟಿ ಪ್ರಧಾನ ಮುಖ್ಯ ಆಯುಕ್ತ ಪ್ರಮೋದ ಕುಮಾರ್ ಅಗರವಾಲ್, ಡಿಜಿಪಿ ಮಾಲಿನಿ ಕೃಷ್ಣಮೂರ್ತಿ, ಕೇಂದ್ರ ಪರೋಕ್ಷ ತೆರಿಗೆ ಮಂಡಳಿಯ ಮಾಜಿ ಸದಸ್ಯ ಬಿ.ಪಿ. ನಾಗೇಂದ್ರ ಕುಮಾರ್, ಚಿತ್ರನಟ ಮದನ್ ಪಟೇಲ್, ವೇದಿಕೆ ಕಾರ್ಯದರ್ಶಿ ವಿಜಯ್ ಬಳ್ಳಾರಿ ಉಪಸ್ಥಿತರಿದ್ದರು

ನಗರದ ಪೂರ್ಣಪ್ರಜ್ಞಾ ವಿದ್ಯಾಪೀಠದಲ್ಲಿ ಬುಧವಾರ ನಡೆದ ಉಡುಪಿ ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿ ಅವರ ಪಂಚಮಹಾಸಮಾರಾಧನೆ ಕಾರ್ಯಕ್ರಮದಲ್ಲಿ ಪೇಜಾವರ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮತ್ತು ಸಂಸದ ತೇಜಸ್ವಿ ಸೂರ್ಯ ಚರ್ಚೆಯಲ್ಲಿ ತೊಡಗಿದ್ದರು

ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಪ್ರೆಸ್ ಕ್ಲಬ್‌ನ 2024ನೇ ಸಾಲಿನ ವರ್ಷದ ವ್ಯಕ್ತಿ, ಮೂವರಿಗೆ ವಿಶೇಷ ಪ್ರಶಸ್ತಿ, ಐವರಿಗೆ ಪ್ರೆಸ್ ಕ್ಲಬ್ ಸುವರ್ಣ ಮಹೋತ್ಸವ ಪ್ರಶಸ್ತಿ ಹಾಗೂ 50 ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

'ಪ್ರಜಾವಾಣಿ'ಯ ಸಹಾಯಕ ಸಂಪಾದಕ ಎನ್. ಉದಯಕುಮಾರ್, 'ಸುಧಾ' ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ, 'ಪ್ರಜಾವಾಣಿ'ಯ ಮುಖ್ಯ ವರದಿಗಾರ ರಾಜೇಶ್ ರೈ ಚಟ್ಲ ಅವರು 'ವಾರ್ಷಿಕ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

ಪತ್ರಕರ್ತರಾದ ಜಾಣಗೆರೆ ವೆಂಕಟರಾಮಯ್ಯ, ಇಂದೂಧರ ಹೊನ್ನಾಪುರ, ಸುಭಾಶ್ ಕೆವಿನ್ ರೈ, ಜಿ.ಎಸ್. ಕೃಷ್ಣಮೂರ್ತಿ, ಡಾ. ನಾಗೇಶ್ ಬಸವರಾಜ್ ಅವರಿಗೆ 'ಪ್ರೆಸ್ ಕ್ಲಬ್ ಸುವರ್ಣ ಮಹೋತ್ಸವ' ಪ್ರಶಸ್ತಿ ಪ್ರಕಟವಾಗಿದೆ.



ಎನ್. ಉದಯಕುಮಾರ್



ರಘುನಾಥ ಚ.ಹ.

ರಾಜೇಶ್ ರೈ ಚಟ್ಲ

ಸಾಂಬಸದಾಶಿವರೆಡ್ಡಿ, ಟಿ.ಕೆ. ತ್ಯಾಗರಾಜ್, ಲೋಕೇಶ್ ಕಾಯರ್ಗ, ಕೆ.ಎಸ್. ಸೋಮಶೇಖರ್, ಅಲ್ಫೋನ್ಸ್ ವಿ. ರಾಜ್, ನಾಗೇಶ್ ಪ್ರಭು, ಜಿ.ಆರ್. ಎನ್. ಸೋಮಶೇಖರ್, ಅಲ್ಫ್ರೆಡ್ ಟೆನ್ನಿಸನ್, ಎಂ.ಪಿ. ಸುಶೀಲಾ, ಕೆ.ಬಿ. ಪಂಕಜಾ, ಬಿ. ರಮೇಶ್ ಬಾಬು, ಟಿ. ರಾಘವನ್, ಶಿವರಾಮ, ವಿನೋದ್ ಕುಮಾರ್ ಬಿ.ನಾಯಕ್, ಮನುಜಾ ವೀರಪ್ಪ, ಸಿ. ಪ್ರಕಾಶ್, ಶ್ರೀಕಾಂತ್ ಹುಣಸವಾಡಿ, ಜಗದೀಶ್ ಬೆಳ್ಳಿಯಪ್ಪ, ಕೆ.ಎಸ್. ಗಣೇಶ್, ಎಸ್. ಸತೀಶ್, ಸಿ.ಬಿ. ಜಯಶ್ರೀ, ಸಿದ್ದಪ್ಪ ಕಾಳೋಜಿ, ಎನ್. ಸಿದ್ದೇಗೌಡ, ಎಂ. ಶ್ರೀಕಾಂತ, ಯತಿರಾಜು, ಎಚ್.ಪಿ. ಪುಣ್ಯವತಿ, ಕೆ.ಎಸ್. ಜಗನ್ನಾಥ್, ಕೆ.ಎಚ್. ದೇವಿಪ್ರಸಾದ್ ರೈ, ದಯಾಶಂಕರ್ ಮೈಲಿ, ಎನ್.ಎ.ಎಂ. ಇಸ್ಮಾಯಿಲ್, ಎಸ್. ರಾಜು ಮಳವಳ್ಳಿ, ಕಾಂತರಾಜೇ ಅರಸ್, ಅನೀಸ್ ನಿಸಾರ್ ಅಹ್ಮದ್, ಎ. ಉಮೇಶ್, ಕೆಂಚೇಗೌಡ, ಸಿ.ಜಿ. ರಮೇಶ್, ಆರ್.ಎಚ್. ಲಕ್ಷ್ಮಿಪ್ರಸನ್ನ, ಕೆ. ಶಿವಕುಮಾರ, ಎಂ. ರಮೇಶ್ ಪಾಳ್ಯ, ಎಂ.ಆರ್. ಸುರೇಶ್, ಶಿವಕುಮಾರ್ ಮೆಣಸಿನಕಾಯಿ, ಕೆ. ಸುಂದರ, ಎಂ. ಸತೀಶ್‌ಕುಮಾರ್, ಜಿ.ಎಸ್. ಗಂಗಾಧರ್, ಹರಿಪ್ರಸಾದ್, ಶೈಲೇಂದ್ರ ಬೋಜಕ್, ಆರ್.ಎಚ್. ಜಯಪ್ರಕಾಶ್ ಅವರು 'ವಾರ್ಷಿಕ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನು 'ವರ್ಷದ ವ್ಯಕ್ತಿ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇಂಧನ ಸಚಿವ ಕೆ.ಜೆ. ಜಾರ್ಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರಿಗೆ 'ವಿಶೇಷ ಪ್ರಶಸ್ತಿ' ಪ್ರಕಟಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರೆಸ್ ಕ್ಲಬ್ ಆವರಣದಲ್ಲಿ ಜನವರಿ 12ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ ಎಂದು ಪ್ರೆಸ್ ಕ್ಲಬ್ ಅಧ್ಯಕ್ಷ ಆರ್. ಶ್ರೀಧರ ಹಾಗೂ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೊ.ಎಚ್ಚೆಲ್ಕೆ ವೈಚಾರಿಕ ಪ್ರಶಸ್ತಿಗೆ ಸಿದ್ದನಗೌಡ ಪಾಟೀಲ ಆಯ್ಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: ನಗರದ ಪ್ರೊ.ಎಚ್.ಎಲ್. ಕೇಶವಮೂರ್ತಿ ಪ್ರತಿಷ್ಠಾನ ನೀಡುವ 7ನೇ ವರ್ಷದ 'ಪ್ರೊ. ಎಚ್ಚೆಲ್ಕೆ ವೈಚಾರಿಕ ಪ್ರಶಸ್ತಿ'ಗೆ ಪ್ರಗತಿಪರ ಚಿಂತಕ ಸಿದ್ದನಗೌಡ ಪಾಟೀಲ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.

ಪ್ರಶಸ್ತಿ ಪ್ರದಾನ ಸಮಾರಂಭ ಜ.4ರಂದು ಬೆಳಿಗ್ಗೆ 10.30ಕ್ಕೆ ನಗರದ ಕರ್ನಾಟಕ ಸಂಘದ ಆವರಣದಲ್ಲಿರುವ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆಯಲಿದೆ. 'ಗಾಂಧಿ ಸ್ಮಾರಕ ನಿಧಿ'ಯ ಕಾರ್ಯಾಧ್ಯಕ್ಷ ಎನ್. ವಿಶುಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.



ಸಿದ್ದನಗೌಡ ಪಾಟೀಲ

ವಿಮರ್ಶಕಿ ಎಂ.ಎಸ್. ಆಶಾದೇವಿ ಪ್ರಶಸ್ತಿ ಪುರಸ್ಕೃತರ ಕುರಿತು ಮಾತನಾಡಲಿದ್ದಾರೆ. ಪ್ರತಿಷ್ಠಾನದ ಅಧ್ಯಕ್ಷ ಗುರುಪ್ರಸಾದ್ ಕೆರಗೋಡು ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಕೆ.ರಾಜೇಂದ್ರ ಪ್ರಸಾದ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. 'ಪ್ರೊ.ಎಚ್.ಎಲ್. ಕೇಶವಮೂರ್ತಿ ಅವರ ಕೊನೆಯ ಪುಸ್ತಕ 'ಎಲ್ಲಾ ಶ್ರೀಮಾನ್‌ಗಳು 420ಗಳೇ' ಪುಸ್ತಕ ಇದೇ ಸಂದರ್ಭ ದಲ್ಲಿ ಬಿಡುಗಡೆಯಾಗಲಿದೆ' ಎಂದು ಮಾಹಿತಿ ನೀಡಿದ್ದಾರೆ.

52 ಬೈಕ್‌ಗಳು ಬೆಂಕಿಗೆ ಆಹುತಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ಪೊಲೀಸ್ ಠಾಣೆ ವ್ಯಾಪ್ತಿಯ ಬಿ. ನಾರಾಯಣಪುರದ ಗೋವಿಂದಪ್ಪ ಕಾಂಪ್ಲೆಕ್ಸ್ ಬಳಿಯ ಯಮಹಾ ಬೈಕ್ ಶೋರೂಂನಲ್ಲಿ ಬುಧವಾರ ರಾತ್ರಿ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿದ್ದು, ಶೋರೂಂ ಸಂಪೂರ್ಣ ಬೆಂಕಿಗೆ ಆಹುತಿಯಾಗಿದೆ.

ನಾಗರಭಾವಿ ನಿವಾಸಿ ಪ್ರಶಾಂತ್ ಎಂಬುವರಿಗೆ ಸೇರಿದ ಶೋರೂಂನಲ್ಲಿ ಬುಧವಾರ ರಾತ್ರಿ 8.40ರ ಸುಮಾರಿಗೆ ಘಟನೆ ಸಂಭವಿಸಿದೆ. ರಾತ್ರಿ 7 ಗಂಟೆಗೆ ಶೋರೂಂನ ಸಿಬ್ಬಂದಿ ಕೆಲಸ ಮುಗಿಸಿ ಮನೆಗೆ ತೆರಳಿದ್ದರು. ಅಗ್ನಿ ಅವಘಡದಿಂದ ಶೋರೂಂನಲ್ಲಿದ್ದ 52 ಬೈಕ್‌ಗಳು ಬೆಂಕಿಗೆ ಆಹುತಿ ಆಗಿವೆ. ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ ಎಂದು ಮಾಲೀಕರು ಹೇಳಿದ್ದಾರೆ.

ಬೆಂಕಿಗೆ ಆಹುತಿಯಾದ ಬೈಕ್ ಶೋರೂಂ

ಈ ಅಗ್ನಿ ಅವಘಡದಿಂದ ಹಿಂಬದಿಯಿರುವ ಪುಷ್ಪಚಂದ್ ಚೋರ್ಡಿಯಾ ಮಾಲೀಕತ್ವದ ಖಿವ್ ರಾಜ್, ಟ್ರಯಂಪ್, ಮತ್ತು ರಾಯಲ್ ಎನ್‌ಫೀಲ್ಡ್ ಶೋರೂಂಗೂ ಬೆಂಕಿ ತಗುಲಿತ್ತು. ಸ್ಥಳೀಯರು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು.

ಯಾವುದೇ ಪ್ರಾಣಾಪಾಯವಾಗಿಲ್ಲ ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ತಿಳಿಸಿದರು.

ವೆಂಕಟೇಶ್ ಕುಮಾರ್ ಅಬಕಾರಿ ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂವರು ಐಎಎಸ್ ಹಾಗೂ ಇಬ್ಬರು ಐಎಫ್ಎಸ್ ಅಧಿಕಾರಿಗಳನ್ನು ಸರ್ಕಾರ ವರ್ಗಾವಣೆ ಮಾಡಿದೆ.

ಜಿ.ರವಿಶಂಕರ್– ಕಾರ್ಯದರ್ಶಿ, ಕೃಷಿ ಇಲಾಖೆ. ಆರ್. ವೆಂಕಟೇಶ್ ಕುಮಾರ್– ಆಯುಕ್ತ, ಅಬಕಾರಿ ಇಲಾಖೆ. ಅಕ್ರಂ ಪಾಶಾ– ಆಯುಕ್ತ, ಹಿಂದುಳಿದ ವರ್ಗಗಳ ಇಲಾಖೆ. ಎಸ್.ಎಸ್.ಲಿಂಗರಾಜ–ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿ. ಸರೀನಾ ಸಿಕ್ಕಾಲಿಗರ್–ಡಿಸಿಎಫ್, ಕೋಲಾರ.

ಮೈಸೂರು ರೇಸ್

ಐರನ್ ಕ್ಲಾಡ್ ಗೆಲ್ಲುವ ನಿರೀಕ್ಷೆ

ಚಾಮುಂಡಿ ಮಿಲಿಯನ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆ ಯಾಗಿದ್ದು, ಐರನ್ ಕ್ಲಾಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಫ್ಲೈಯಿಂಗ್ ಫಾಲ್ಕನ್ 2, ಶ್ಯಾಡೊ ಸೈಮ್ 8, ಎಮಿರಾಲ್ಡ್ ಕ್ವೀನ್ 7
2ನೇ ರೇಸ್: ಮಿರಾಕಲ್ ಹನಿ 11, ಧುರಂದರ್ 10, ಫ್ರೀ ಸ್ಪಿರಿಟೆಡ್ 3
3ನೇ ರೇಸ್: ಫಸ್ಟ್ ಇಂಪ್ರೆಷನ್ 5, ರಿವರ್ ಆಫ್ ಗೋಲ್ಡ್ 3, ನೆವೆಡ ಗೋಲ್ಡ್ 1
4ನೇ ರೇಸ್: ನ್ಯಾಚುರಲ್ ವಾರಿಯರ್ 1, ಎಲಿವಾಡೊ 5, ಸ್ಪಿರಿಚ್ಯುಯಲ್ ಫೋರ್ಸ್ 3
5ನೇ ರೇಸ್: ಐರನ್ ಕ್ಲಾಡ್ 3, ಶುಭಾಂಕರ್ 1, ಕಲಮಿಟ್ಸ 4
6ನೇ ರೇಸ್: ಮ್ಯಾಗ್ನಸ್ 5, ಆಭುಶನ್ 3, ಫೆರೆಟ್ಟಿ 1
7ನೇ ರೇಸ್: ಬ್ರೇಕ್ ಅವೇ 2, ಆರಿಲೆ 3, ಡಿಲಾರ್ಡ್ 5

ಉತ್ತಮ ಬೆಟ್: ಮ್ಯಾಗ್ನಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಗೊರೂರು ಪಂಕಜಗೆ ಅಮ್ಮ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಎಸ್ ಕಲಾ ಸಂಗಮ ಟ್ರಸ್ಟ್ ನೀಡುವ ಪ್ರತಿಷ್ಠಿತ ಅಮ್ಮ ಪ್ರಶಸ್ತಿಗೆ ಸಾಹಿತಿ ಗೊರೂರು ಪಂಕಜ ಅವರು ಆಯ್ಕೆಯಾಗಿದ್ದಾರೆ.

ಗೊರೂರು ಪಂಕಜ ಅವರನ್ನು ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಗಾಗಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಜನವರಿ 4 ರಂದು ಮೈಸೂರಿನಲ್ಲಿ ನಡೆಯಲಿರುವ ಸಂಕ್ರಾಂತಿ ಸಂಭ್ರಮ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಸ್ಥಾಪಕ ಅಧ್ಯಕ್ಷ ಬಿ.ಕೆ. ಶಿವಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರ ನೇಮಕ: ಇಂದಿನಿಂದ ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2024-25ನೇ ಸಾಲಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಕಾಲೇಜು ಶಿಕ್ಷಣ ಇಲಾಖೆ ಅನುಮತಿ ನೀಡಿದ್ದು, ಅರ್ಜಿ ಸಲ್ಲಿಕೆಗೆ ಜ.8ರವರೆಗೆ ಅವಕಾಶ ನೀಡಲಾಗಿದೆ.

ಸಂಸ್ಕೃತ ಮತ್ತು ಚಿತ್ರಕಲಾ ಕಾಲೇಜುಗಳೂ ಸೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಕಾಯಂ ಅಧ್ಯಾಪಕರಿಗೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಯುವ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಸೂಚಿಸಲಾಗಿದೆ.

ಹೈಕೋರ್ಟ್ ನಿರ್ದೇಶನದಂತೆ ಯುಜಿಸಿ ನಿಯಮಗಳ ಪ್ರಕಾರ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಬೇಕಿದೆ. ತೀರ್ಪು ಪ್ರಶ್ನಿಸಿ, ರಾಜ್ಯ ಸರ್ಕಾರ ಪುನರ್‌ಪರಿಶೀಲನಾ ಅರ್ಜಿ ಸಲ್ಲಿಸಿದ್ದು, ಪ್ರಕರಣವು ವಿಚಾರಣೆಯ ಹಂತದಲ್ಲಿದೆ. ಈಗಾಗಲೇ 2, 4 ಹಾಗೂ 6ನೇ ಸೆಮಿಸ್ಟರ್ ತರಗತಿಗಳು ಆರಂಭವಾಗಿರುವ ಕಾರಣ ವಿದ್ಯಾರ್ಥಿಗಳ ಹಿತಾಸಕ್ತಿ ಗಮನದಲ್ಲಿ ಇಟ್ಟುಕೊಂಡು ಯುಜಿಸಿ ಅರ್ಹತೆ ಇಲ್ಲದವರನ್ನೂ ನೇಮಕ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಈ ನೇಮಕ ಹೈಕೋರ್ಟ್ ನೀಡುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತೆ ಮಂಜುಶ್ರೀ ಹೇಳಿದ್ದಾರೆ.

ಜ.3ರಿಂದಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಜ.9ರಂದು ಮೆರಿಟ್ ಪಟ್ಟಿ ಪ್ರಕಟಿಸಲಾಗುವುದು. ಜ.20ರಿಂದ 29ರವರೆಗೆ ಕಾಲೇಜುಗಳ ಆಯ್ಕೆಗೆ ಕೌನ್ಸೆಲಿಂಗ್ ನಡೆಸಲಾಗುವುದು. 30ರಂದು ಆಯ್ಕೆಯಾದವರ ಅಂತಿಮಪಟ್ಟಿ ಪ್ರಕಟಿಸಲಾಗುವುದು ಎಂದು ಇಲಾಖೆ ಹೇಳಿದೆ.

ನಗರದಲ್ಲಿ ಇಂದು

ಬಹುಮಾನ ವಿತರಣಾ ದಿನ: ಅಧ್ಯಕ್ಷತೆ: ಬಿ.ಎಂ. ಪಾರ್ಥಸಾರಥಿ, ಅತಿಥಿಗಳು: ಸುನಿತಾ ಮುರಳಿ, ಸಂತೋಷ್ ಬಿ.ಎಸ್., ಡಬ್ಲ್ಯು. ಡಿ. ಅಶೋಕ್, ಸಿ. ಪ್ರಶಾಂತ್ ಕುಮಾರ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಸ್ವತಂತ್ರ ಪಿಯು ಕಾಲೇಜು, ಕೆಂಗೇರಿ ಉಪನಗರ, ಬೆಳಿಗ್ಗೆ 10

ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ 2025: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಅತಿಥಿಗಳು: ಬಿ.ಎನ್. ಬಚ್ಚೇಗೌಡ, ಈ. ಗೋವಿಂದರಾಜು, ಕೃಷ್ಣ ಬೈರೇಗೌಡ, ಕೆ. ವೆಂಕಟೇಶ್, ಡಾ.ಎಂ.ಸಿ. ಸುಧಾಕರ್, ಜಿ.ಟಿ. ದೇವೇಗೌಡ, ಎನ್. ಚೆಲುವರಾಯಸ್ವಾಮಿ, ರಾಮಲಿಂಗಾರೆಡ್ಡಿ, ಡಾ.ಸಿ.ಎನ್. ಮಂಜುನಾಥ್, ಕೆ. ಗೋಪಾಲಯ್ಯ, ಆಯೋಜನೆ: ಫಸ್ಟ್ ಸರ್ಕಲ್, ಸ್ಥಳ: ಗೇಟ್ ಸಂಖ್ಯೆ 4, ಗಾಯತ್ರಿ ಗ್ರ್ಯಾಂಡ್ ಮತ್ತು ಗಾಯತ್ರಿ ವೃಕ್ಷ ಅರಮನೆ ಮೈದಾನ, ಬೆಳಿಗ್ಗೆ 10



ನಿರ್ಮಲಾನಂದನಾಥ ಸ್ವಾಮೀಜಿ

ಶಾಲಾ–ಕಾಲೇಜು ವಾರ್ಷಿಕೋತ್ಸವ ಸಮಾರಂಭ: ಸಾನ್ನಿಧ್ಯ: ಚಿದ್ಘನ ಸ್ವಾಮೀಜಿ, ಅಧ್ಯಕ್ಷತೆ: ಅಮೃತಕುಮಾರ ಸ್ವಾಮೀಜಿ, ಅತಿಥಿಗಳು: ಮನೋಜ ಕುಮಾರ್ ಕೊಳ್ಳಾ, ಗಿರಿಜಮ್ಮ ಎಚ್.ಎನ್., ಆಯೋಜನೆ: ಜನತಾ ವಿದ್ಯಾಲಯ, ಸ್ಥಳ: ಜಂಗಮಕ್ಷೇತ್ರ ಪ್ರಾರ್ಥನಾ ಮಂದಿರ, ಒಂದನೇ ಮುಖ್ಯರಸ್ತೆ, ಒಂಬತ್ತನೇ ಅಡ್ಡರಸ್ತೆ ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

ಕುವೆಂಪು ಜನ್ಮದಿನದ ಅಂಗವಾಗಿ 'ಮತ್ತೆ ಮತ್ತೆ ಕುವೆಂಪು' ಉಪನ್ಯಾಸ: ರಹಮತ್ ತರೀಕೆರೆ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಆವರಣ, ಮಲ್ಲತ್ತಹಳ್ಳಿ, ಸಂಜೆ 5



9ನೇ ವಾರ್ಷಿಕ ಘಟಿಕೋತ್ಸವ: ಅತಿಥಿಗಳು: ಮಮಿದಾಳ ಜಗದೇಶ್ ಕುಮಾರ್, ಎಂ.ಆರ್. ಜಯರಾಮ್, ಆಯೋಜನೆ: ಎಂ.ಎಸ್. ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, ಸ್ಥಳ: ರಾಮಯ್ಯ ಮೆಡಿಕಲ್ ಕಾಲೇಜಿನ ಸಭಾಂಗಣ, ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, ಗಂಗೋತ್ರಿ ಕ್ಯಾಂಪಸ್, ಎಂಎಸ್ಆರ್ ನಗರ, ಬೆಳಿಗ್ಗೆ 10.30

ಏಳನೇ ಬೆಂಗಳೂರು ಜಿಲ್ಲಾ ಮಹಿಳಾ ಸಮ್ಮೇಳನ: 'ಮಹಿಳೆಯರ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಿ, ಮರ್ಯಾದೆ ಹತ್ಯೆ, ಬಾಲ್ಯ ವಿವಾಹ, ಸ್ತ್ರೀ ಭ್ರೂಣ ಹತ್ಯೆ ನಿಲ್ಲಿಸಿ, ಮಹಿಳೆಯರಿಗೆ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ಭದ್ರತೆ ಖಾತ್ರಿಪಡಿಸಿ' ವಿಷಯಗಳ ಕುರಿತು ಚರ್ಚೆ, ಆಯೋಜನೆ: ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಎಸ್–ವ್ಯಾಸ ವಿಶ್ವವಿದ್ಯಾಲಯ ನೂತನ ಕ್ಯಾಂಪಸ್ ಉದ್ಘಾಟನೆ: ಜೆ.ಪಿ. ನಡ್ಡಾ, ಅತಿಥಿ: ನಿರ್ಮಲಾನಂದನಾಥ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಎಸ್–ವ್ಯಾಸ ವಿಶ್ವವಿದ್ಯಾಲಯ, ಸತ್ವ ಗ್ಲೋಬಲ್ ಸಿಟಿ, ಮೈಸೂರು ರಸ್ತೆ, ರಾಜರಾಜೇಶ್ವರಿನಗರ, ಮಧ್ಯಾಹ್ನ 2.30

47ನೇ ವಾರ್ಷಿಕೋತ್ಸವ: ಅತಿಥಿಗಳು: ಬಿ.ಎ. ಬಸವರಾಜ, ಗೋವಿಂದಪ್ಪ ಸಿ.ಎನ್., ಅಧ್ಯಕ್ಷತೆ: ಕೆ.ವಿ. ಮುನಿಸ್ವಾಮಿ, ಆಯೋಜನೆ ಮತ್ತು ಸ್ಥಳ: ಶ್ರೀ ವೆಂಕಟೇಶ್ವರ ಇಂಗ್ಲಿಷ್ ನರ್ಸರಿ, ಪ್ರಾಥಮಿಕ ಮತ್ತು ಪ್ರೌಢಶಾಲೆ, ಕೆ.ಆರ್. ಪುರ, ಮಧ್ಯಾಹ್ನ 3.30

'ಡಾ. ಮನಮೋಹನಸಿಂಗ್ ಅವರ ನೀತಿಗಳು: ಭಾರತದ ವರ್ತಮಾನ ಹಾಗೂ ಭವಿಷ್ಯ' ಕುರಿತ ವಿಚಾರಸಂಕಿರಣ: ಭಾಗವಹಿಸುವವರು: ಯೋಗೇಂದ್ರ ಯಾದವ್, ಎಲ್.ಕೆ. ಅತೀಕ್, ಆಯೋಜನೆ: ಜಾಗೃತ ಕರ್ನಾಟಕ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 4.30ರಿಂದ

'ನಿರಂತರಂ' ರಾಷ್ಟ್ರೀಯ ಸಂಗೀತ ಮತ್ತು ನೃತ್ಯೋತ್ಸವ: ಅತಿಥಿಗಳು: ಶ್ರೀನಿವಾಸ ಜಿ. ಕಪ್ಪಣ್ಣ, ಆರ್.ವಿ. ರಾಘವೇಂದ್ರ, ಗಾಯನ: ಲಾವಣ್ಯ ಕೃಷ್ಣಮೂರ್ತಿ, ಭರತನಾಟ್ಯ ಪ್ರದರ್ಶನ: ಶಶಾಂಕ್ ಈಶ್ವರ್, ಅಕ್ಷಿಣಿ ಕಮ್ಮ, ಅದಿತಿ ರಾಮ್, ಆಯೋಜನೆ: ಸಂಗೀತ ಸಂಭ್ರಮ ಸಂಸ್ಥೆ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5ರಿಂದ

ಎ. ರವೀಂದ್ರ ಅವರ 'ಸದ್ಧರ್ಮಗೀತ' ಪುಸ್ತಕ ಬಿಡುಗಡೆ: ಶಿವರಾಜ ವಿ. ಪಾಟೀಲ, ಪುಸ್ತಕದ ಕುರಿತು: ಮಲ್ಲೇಪುರಂ ಜಿ. ವೆಂಕಟೇಶ್, ಪ್ರಾಸ್ತಾವಿಕ ಮಾತು: ಸಿ. ಸೋಮಶೇಖರ, ಆಯೋಜನೆ: ಸೆಂಟರ್ ಫಾರ್ ಸಸ್ಟೇನಬಲ್ ಡೆವಲಪ್‌ಮೆಂಟ್, ಐಎಎಸ್ ಅಧಿಕಾರಿಗಳ ಸಂಘ, ಸ್ಥಳ: ಐಎಎಸ್ ಅಧಿಕಾರಿಗಳ ಸಂಘ, ಇನ್‌ಫೆಂಟ್ರಿ ರಸ್ತೆ, ಸಂಜೆ 5.30

ವಾರ್ಷಿಕೋತ್ಸವ: ಶಾರದಾ ದಿವಸ, 'ಕರ್ಮಯೋಗಿಯಾಗಿ ಶ್ರೀಮಾತೆ ಶಾರದಾದೇವಿ' ಉಪನ್ಯಾಸ: ಸ್ವರ್ಣಗೌರಿ, 'ಆಧುನಿಕ ಕೌಟುಂಬಿಕ ವ್ಯವಸ್ಥೆಯಲ್ಲಿ ಶ್ರೀಮಾತೆಯವರ ಪ್ರಸ್ತುತತೆ' ಉಪನ್ಯಾಸ: ಮಾತಾ ತ್ಯಾಗಮಯಿ, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 5.30ರಿಂದ

'ಕಪ್ಪೆ ರಾಜಕುಮಾರ' ನಾಟಕ ಪ್ರದರ್ಶನ: ನಿರ್ದೇಶನ: ಶ್ರೀದತ್ತ, ಅತಿಥಿ: ಡಾ.ಸಿ. ಆರ್. ಚಂದ್ರಶೇಖರ್, ಆಯೋಜನೆ: ಟೆಂಟ್ ಸಿನಿಮಾ, ಸ್ಥಳ: ಟೆಂಟ್ ಸಿನಿಮಾ ನಾಗತಿಹಳ್ಳಿ ಸಿನಿಮಾ ಶಾಲೆ, ಬನಶಂಕರಿ ಎರಡನೇ ಹಂತ, ಸಂಜೆ 6.30

'ಚಿಣ್ಣರ ರಂಗ ಸಂಕ್ರಾಂತಿ' ಎರಡು ನಾಟಕಗಳ ಪ್ರದರ್ಶನ, ಕೃಷ್ಣಮೂರ್ತಿ ಬಿಳಿಗೆರೆ ಅವರಿಗೆ ಸನ್ಮಾನ: ಅತಿಥಿಗಳು: ಕೃಷ್ಣಮೂರ್ತಿ ಬಿಳಿಗೆರೆ, ಜೋಗಿ, ಬಿ.ವಿ. ರಾಜಾರಾಮ್, 'ಋಷ್ಯಮೂಕ', 'ಕೃಬು' ನಾಟಕ ಪ್ರದರ್ಶನ, ಆಯೋಜನೆ: ವಿಜಯನಗರ ಬಿಂಬ, ಸ್ಥಳ: ರವೀಂದ್ರ ಕಲಾಕ್ಷೇತ್ರ ಜೆ.ಸಿ. ರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಶ್ರೀನಗರ ಕಿಟ್ಟಿ, ರಚಿತಾ ರಾಮ್

ಶ್ರೀನಗರ ಕಿಟ್ಟಿ, ರಚಿತಾ ರಾಮ್ ಜೋಡಿಯಾಗಿ ನಟಿಸಿರುವ 'ಸಂಜು ವೆಡ್ಸ್ ಗೀತಾ–2' ಸಿನಿಮಾ ಜ.10ರಂದು ತೆರೆ ಕಾಣಲಿದೆ. ಈ ಸಿನಿಮಾ ಕುರಿತು ನಾಯಕ ಶ್ರೀನಗರ ಕಿಟ್ಟಿ ಒಂದಷ್ಟು ಮಾಹಿತಿ ಹಂಚಿಕೊಂಡಿದ್ದಾರೆ...

ರೇಷ್ಮೆಯ ಜೊತೆಗೆ ಪ್ರೀತಿಯ ಪಯಣ

ವಿನಾಯಕ ಕೆ.ಎಸ್.

- **ಚಿತ್ರದಲ್ಲಿ ನಿಮ್ಮ ಪಾತ್ರವೇನು?**

ಇದು ರೇಷ್ಮೆ ಬೆಳೆಗಾರನ ಕಥೆ. ಹೀಗಾಗಿ ರೇಷ್ಮೆ ಬೆಳೆಗಾರನಾಗಿ ಕಾಣಿಸಿಕೊಂಡಿರುವೆ. ಶಿಡ್ಲಘಟ್ಟ ರೇಷ್ಮೆ ಬೆಳೆಗೆ ಜನಪ್ರಿಯ. ಇಲ್ಲಿ ರೇಷ್ಮೆ ದೇಶದ ಬೇರೆ ಕಡೆಗಳಿಗೆ ಹೋಗುತ್ತದೆ. ನಮ್ಮ ರೈತರಿಗೆ ಸರಿಯಾದ ಬೆಲೆ ಸಿಗುವುದಿಲ್ಲ. ವರ್ಷಕ್ಕೆ ನೂರಾರು ಜನ ಇದರಿಂದಾಗಿ ಆತ್ಮಹತ್ಯೆ ಮಾಡುಕೊಳ್ಳುತ್ತಿದ್ದಾರೆ. ಹೀಗಾಗಿ ನನ್ನದೇ ಕಂಪನಿ ಮಾಡಿ ಊರಿನ ರೈತರಿಗೆ ನ್ಯಾಯ ಒದಗಿಸುವ ಪಾತ್ರ. ನಮ್ಮ ರೇಷ್ಮೆಯನ್ನು ಬ್ರ್ಯಾಂಡ್ ಮಾಡುವ ಕಥೆ. ಅಲ್ಲಿನ ರೈತರ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ಕ್ರಮದತ್ತ ಬೆಳಕು ಚೆಲ್ಲಿದ್ದೇವೆ. ಜೊತೆಗೆ 'ಸಂಜು ವೆಡ್ಸ್ ಗೀತಾ'ದಂತೆ ಇಲ್ಲಿಯೂ ಪ್ರೇಮಕಥೆ ಬರುತ್ತದೆ. ಉತ್ಕಟವಾದ ಪ್ರೇಮಕಥೆ. ಪ್ರತಿ ಹುಡುಗಿಯೂ ತನಗೆ ಇಂಥ ಹುಡುಗ ಸಿಗಬೇಕು ಎಂದು ಬಯಸುವಂತಹ ಪಾತ್ರ. ಪ್ರೀತಿಯ ಬಲೆಗೆ ಬೀಳುವ ಹುಡುಗನಾಗಿಯೂ ಕಾಣಿಸಿಕೊಳ್ಳುತ್ತೇನೆ. ಬೆಳೆಗಾರನ ಜೊತೆಗೆ ನಾಯಕನ ವೈಯಕ್ತಿಕ ಬದುಕು, ಪ್ರೀತಿ ಎಲ್ಲವೂ ಈ ಪಾತ್ರದಲ್ಲಿ ಕಾಣಿಸುತ್ತದೆ.

- **'ಸಂಜು ವೆಡ್ಸ್ ಗೀತಾ'ದ ಕಥೆಯೇ ಮುಂದುವರಿಯುತ್ತಾ...**

ಇಲ್ಲ. ಆ ಕಥೆ ಅಥವಾ ಪಾತ್ರದ ಮುಂದುವರಿಕೆ ಇದಲ್ಲ. ಅಲ್ಲಿ ನಾಯಕ–ನಾಯಕಿ ಇಬ್ಬರೂ ಸತ್ತಿರುತ್ತಾರೆ. ಹೀಗಾಗಿ ಅಲ್ಲಿನ ಕಥೆ ಬರುವುದಿಲ್ಲ. ಆ ಶೀರ್ಷಿಕೆ ಬ್ರ್ಯಾಂಡ್ ಆಗಿತ್ತು. ಅದನ್ನು ಬಳಸಿಕೊಂಡಿದ್ದೇವೆ. ಅದೇ ರೀತಿಯ ಕಥೆ. ಪಾತ್ರ ಪೋಷಣೆ ಕೂಡ ಮೊದಲ ಭಾಗದಂತೆ ಇದೆ. ಹಾಡುಗಳೇ ಚಿತ್ರದ ಜೀವಾಳ. 'ಸಂಜು ವೆಡ್ಸ್ ಗೀತಾ'ದಲ್ಲಿಯೂ ಹಾಡುಗಳು ಸೊಗಸಾಗಿದ್ದವು. ಎಲ್ಲ ಹಾಡುಗಳು ಹಿಟ್ ಆಗಿದ್ದವು. ಅವುಗಳನ್ನು ಕವಿರಾಜ್ ಬರೆದಿದ್ದರು. ಇದರಲ್ಲಿಯೂ ಅವರೇ ಎಲ್ಲ ಹಾಡುಗಳನ್ನು ಬರೆದಿದ್ದಾರೆ. ಎದೆಗೆ ನಾಟುವ ರೀತಿಯಲ್ಲಿ ಬರೆದಿದ್ದಾರೆ. 'ಸಂಜು ವೆಡ್ಸ್ ಗೀತಾ'ದ ಹಾಡಿನ ಸಾಲುಗಳಿಗೆ ನಾನು ವೈಯಕ್ತಿಯವಾಗಿ ಅಭಿಮಾನಿಯಾಗಿದ್ದೆ.

- **ಮೊದಲ ಭಾಗಕ್ಕಿಂತ ಎಷ್ಟು ಭಿನ್ನವಾಗಿರುತ್ತದೆ?**

'ಸಂಜು ವೆಡ್ಸ್ ಗೀತಾ' ನನ್ನ ಕೆರಿಯರ್‌ಗೆ ತಿರುವು ಕೊಟ್ಟ ಸಿನಿಮಾ. ಈ ಸಿನಿಮಾದಲ್ಲಿಯೂ ಅದೇ ರೀತಿಯ ಮ್ಯಾಜಿಕ್ ನಿರೀಕ್ಷೆ ಮಾಡುತ್ತಿರುವೆ. ಗೆಳೆಯ ನಾಗಶೇಖರ್ ನನಗಾಗಿ ಈ ಚಿತ್ರ ಮಾಡಿಕೊಟ್ಟಿದ್ದಾರೆ. ಈ ಚಿತ್ರದಲ್ಲಿ ಹಳೆಯ ತಂಡ ಬಹುತೇಕ ಪುನರಾವರ್ತನೆಗೊಂಡಿದೆ. ತುಂಬ ವಿಸ್ತಾರವಾದ ಕಥೆ. ಅದನ್ನು ಎಲ್ಲರಿಗೂ ಅರ್ಥವಾಗುವಂತೆ ನಿರ್ದೇಶಕರು ಸ್ಕ್ರೀನ್‌ಪ್ಲೆ ಮಾಡಿದ್ದಾರೆ. ಸಿನಿಮಾದಲ್ಲಿ ಅದ್ದೂರಿತನವಿದೆ. ಒಂದು ನವಿರಾದ ಪ್ರೇಮಕಥೆಯ ಜೊತೆಗೆ ಮಾಸ್ ಅಂಶಗಳು ಇವೆ. ತಾಂತ್ರಿಕವಾಗಿ ತುಂಬ ಶ್ರೀಮಂತವಾಗಿದೆ. ಇವತ್ತಿಗೆ ಬೇಕಾದ ಮನರಂಜನೆ ಇದೆ. ಶ್ರಮ ಹಾಕದೆ ಯಾವ ಕೆಲಸವೂ ಆಗಲ್ಲ ಎಂದು ನಂಬಿಕೊಂಡು ಬಂದವನು. ಈ ಚಿತ್ರದಲ್ಲಿ ಎಲ್ಲರ ಶ್ರಮ ಹೆಚ್ಚಿದೆ. ಹೀಗಾಗಿ ಚಿತ್ರವೂ ಉತ್ತಮವಾಗಿ ಮೂಡಿಬಂದಿದೆ.

- **'ಗೌಳಿ'ಯ ಮಾಸ್ ಅವತಾರದಿಂದ ಮತ್ತೆ ಪ್ರೇಮಕಥೆಯತ್ತ ಹೊರಳಿದ್ದೇಕೆ?**

ಪ್ರತಿ ಸಿನಿಮಾದಲ್ಲಿಯೂ ಭಿನ್ನವಾಗಿದ್ದನ್ನು ಪ್ರಯತ್ನಿಸುತ್ತೇನೆ. ಎಲ್ಲ ಸಿನಿಮಾಗಳನ್ನು ಪ್ರೀತಿ ಮತ್ತು ಶ್ರಮದಿಂದ ಮಾಡಿರುತ್ತೇವೆ. ಅದೇ ರೀತಿ 'ಗೌಳಿ'ಯಲ್ಲಿ ಭಿನ್ನವಾದ ಕಥೆ ಇಟ್ಟುಕೊಂಡು ಪ್ರಯತ್ನ ಮಾಡಿದ್ದೆವು. ಸಿನಿಮಾಗೆ ಪ್ರಶಂಸೆ ಮಾತು ಕೇಳಿಬಂತು. ಆದರೆ ಚಿತ್ರಮಂದಿರದಲ್ಲಿ ಇನ್ನಷ್ಟು ಪ್ರೋತ್ಸಾಹ ಸಿಗಬೇಕಿತ್ತು. ಹಾಗಂತ ಮಾಸ್ ನಾಯಕನಾಗಿಯೇ ಮುಂದುವರಿಯಬೇಕೆಂದು ಮಾಡಿದ್ದಲ್ಲ.

- **ಈತನಕದ ಸಿನಿಪಯಣ ಹೇಗಿತ್ತು?**

ಹೆಚ್ಚು ಏರಿಳಿತಗಳಿಲ್ಲ. ಪಯಣ ಅದೇ ರೀತಿ ಮುದ್ದಾಗಿ ಹೋಗುತ್ತಿದೆ. ಉತ್ತಮ ಸಿನಿಮಾಗಳು ಸಿಗುತ್ತಿವೆ. ಒಳ್ಳೊಳ್ಳೆ ಪಾತ್ರಗಳನ್ನು ಮಾಡುತ್ತಿರುವೆ.

- **ನಿಮ್ಮ ಮುಂದಿನ ಸಿನಿಮಾಗಳು...**

'ಟೆರರ್' ಸಿನಿಮಾದಲ್ಲಿ ಪಾತ್ರ ಮಾಡುತ್ತಿದ್ದೇನೆ. 'ಮಹಾದೇವ', 'ಮುಧೋಳ್' ಚಿತ್ರಗಳಲ್ಲಿ ಖಳನಟನಾಗಿ ಕಾಣಿಸಿಕೊಂಡಿರುವೆ. 'ಸಂಜು' ತಂಡದ ಜೊತೆಯೇ ಇನ್ನೊಂದು ಸಿನಿಮಾ ಮಾತುಕತೆ ನಡೆಯುತ್ತಿದೆ. ❖

ಹಾಡುಗಳೇ ಚಿತ್ರದ ಟ್ರೇಲರ್

'ಸಂಜು ವೆಡ್ಸ್ ಗೀತಾ ಮ್ಯೂಸಿಕಲ್ ಹಿಟ್ ಸಿನಿಮಾ. ಹೀಗಾಗಿ ಈ ಚಿತ್ರದ ಹಾಡುಗಳಿಗೂ ಸಾಕಷ್ಟು ತಲೆಕೆಡಿಸಿಕೊಂಡಿದ್ದೆ. ಶ್ರೀಧರ್ ವಿ.ಸಂಭ್ರಮ್ ತುಂಬಾ ಚೆನ್ನಾಗಿ ಹಾಡು ಮಾಡಿಕೊಟ್ಟಿದ್ದಾರೆ. ಐದು ಹಾಡುಗಳಿದ್ದು ಅವೇ ಚಿತ್ರಕ್ಕೆ ಆಹ್ವಾನ ಪತ್ರಿಕೆ. ಹೀಗಾಗಿ ಪ್ರತ್ಯೇಕವಾಗಿ ಟ್ರೇಲರ್ ಬಿಡುವುದಿಲ್ಲ. ಇದು ರೇಷ್ಮೆ ಬೆಳೆಗಾರರ ಕಥೆ. ಈ ರೀತಿ ಕಥೆ ಮಾಡು ಎಂದು ಐಡಿಯಾ ಕೊಟ್ಟವರು ನಟ ಸುದೀಪ್. ಅವರ ಕನಸಿನ ಕಥೆ ಇದು. ಅವರ ಸಾಕಷ್ಟು ಮಾರ್ಗದರ್ಶನ ಈ ಚಿತ್ರಕ್ಕಿದೆ. ನಮ್ಮ ಶಿಡ್ಲಘಟ್ಟ, ಬೆಂಗಳೂರು ಗ್ರಾಮೀಣ ಭಾಗದ ರೇಷ್ಮೆ ಬೇರೆ ಊರಿಗೆ ಹೋಗಿ ಕಾಂಜಿವರಂ, ಧರ್ಮಾವರಂ ಮೊದಲಾದ ಬ್ರ್ಯಾಂಡ್ ಆಗಿ ನಮ್ಮ ಮಾರುಕಟ್ಟೆಗೆ ವಾಪಸ್ ಬರುತ್ತದೆ. ನಾವೇ ಯಾಕೆ ಇದನ್ನು ಬ್ರ್ಯಾಂಡ್ ಮಾಡಬಾರದು, ನಮ್ಮ ರೈತರು ಉದ್ಧಾರವಾಗಬಾರದೆಂಬ ಆಲೋಚನೆ ಹೊಂದಿರುವ ಕಥೆ. ಸಂದೇಶದ ಜೊತೆಗೆ ನವಿರಾದ ಪ್ರೇಮವಿದೆ. ಹೀಗಾಗಿ ವಿದೇಶಗಳಲ್ಲಿಯೂ ಚಿತ್ರೀಕರಣ ಮಾಡಿದ್ದೇವೆ' ಎನ್ನುತ್ತಾರೆ ನಿರ್ದೇಶಕ ನಾಗಶೇಖರ್.

ಅಂಜಲಿ ಅನೀಶ್

'ಮನದ ಕಡಲು' ಹಾಡು ಬಿಡುಗಡೆ

ಯೋಗರಾಜ್ ಭಟ್ ನಿರ್ದೇಶಿಸಿ ಗಣೇಶ್ ನಟಿಸಿದ್ದ ಸೂಪರ್ ಹಿಟ್ ಚಿತ್ರ 'ಮುಂಗಾರು ಮಳೆ' ಚಿತ್ರಕ್ಕೆ 18 ವರ್ಷ ತುಂಬಿದ ಸಂಭ್ರಮ. ಹೀಗಾಗಿ ಚಿತ್ರತಂಡ ಆ ಚಿತ್ರದ ನಿರ್ಮಾಪಕ ಇ. ಕೃಷ್ಣಪ್ಪ ನಿರ್ಮಿಸಿ, ಭಟ್ಟರು ನಿರ್ದೇಶಿಸಿರುವ 'ಮನದ ಕಡಲು' ಚಿತ್ರದ ಹಾಡಿನ ಬಿಡುಗಡೆ ಸಮಾರಂಭ ಹಮ್ಮಿಕೊಂಡಿತ್ತು. 'ಹೂ ದುಂಬಿಯ ಕಥೆಯ ಬರೆದವನ್ಯಾರು' ಹಾಡಿಗೆ ಕಲಾವಿದರ ಹೊರತಾದ ಅಂದಿನ ಮುಂಗಾರು ಮಳೆ ತಂಡ ಸಾಕ್ಷಿಯಾಗಿತ್ತು.

'ಮುಂಗಾರು ಮಳೆ' ಬಿಡುಗಡೆಯಾಗಿ ಹದಿನೆಂಟು ವರ್ಷವಾಯಿತು ಎಂಬುದನ್ನು ನಂಬಲಿಕ್ಕೆ ಆಗುತ್ತಿಲ್ಲ. ನಿನ್ನೆ ಮೊನ್ನೆ ಆದ ಹಾಗಿದೆ. 'ಮನದ ಕಡಲು' ಚಿತ್ರಕ್ಕಾಗಿ ಆ ಹಳೆಯ ತಂಡ ಮತ್ತೆ ಒಂದಾಗಿದೆ. ಕೃಷ್ಣಪ್ಪನವರ ಬಳಿಗೆ ಕಥೆ ತೆಗೆದುಕೊಂಡು ಹೋಗಿ ಸ್ಟಾರ್ ನಟರನ್ನು ನಾಯಕನಾಗಿ ಸೂಚಿಸಿದೆ. ಹೊಸಬರಿಗೆ ಅವಕಾಶ ಕೊಡುವುದಿದ್ದರೆ ಮಾತ್ರ ಈ ಚಿತ್ರ ಮಾಡಿ ಎಂದರು. ಹೀಗಾಗಿ 'ಮುಂಗಾರು ಮಳೆ'ಯಂತೆ ಇಲ್ಲಿಯೂ ಹೊಸ ಕಲಾವಿದರಿಗೆ ಅವಕಾಶ ನೀಡಿರುವೆ. 'ಹೂ ದುಂಬಿಯ ಕಥೆಯ ಬರೆದವನ್ಯಾರು' ಎಂಬ ಸಾಲನ್ನು ನಿರ್ಮಾಪಕರ ಬಳಿ ಹೇಳಿದಾಗ, ನಿನ್ನಂಥವರೇ ಯಾರೋ ತಲೆಕೆಟ್ಟವರು ಬರೆದಿರುತ್ತಾರೆ ಎಂದು ಹಾಸ್ಯದ ಚಟಾಕಿ ಹಾರಿಸಿದರು. ಈ ಹಾಡು ಹುಟ್ಟಿದ್ದು ನಿರ್ಮಾಪಕರ ತೋಟದ ಮನೆಯಲ್ಲಿ. ಕಂಪೋಸ್ ಆಗಿದ್ದು ನನ್ನ ಆಫೀಸ್‌ನ ಮೇಲಿರುವ ಸ್ಟುಡಿಯೋದಲ್ಲಿ. ಹರಿಕೃಷ್ಣ ಅವರ ಸಂಗೀತ ಸಂಯೋಜನೆಯಲ್ಲಿ ಸಂಚಿತ್ ಹೆಗಡೆ ಗಾಯನ, ಮುರಳಿ ನೃತ್ಯ ಸಂಯೋಜನೆಯಲ್ಲಿ ಈ ಹಾಡು ಮೂಡಿಬಂದಿದೆ' ಎಂದು ಹಾಡು ಹುಟ್ಟಿದ ಬಗೆಯನ್ನು ವಿವರಿಸಿದರು ಯೋಗರಾಜ್ ಭಟ್.

ಈ ಹಿಂದೆ 'ಫಿಸಿಕ್ಸ್ ಟೀಚರ್' ಸಿನಿಮಾದಲ್ಲಿ ಕಾಣಿಸಿಕೊಂಡಿದ್ದ ಸುಮುಖಗೆ ರಾಶಿಕಾ ಶೆಟ್ಟಿ, ಅಂಜಲಿ ಅನೀಶ್ ಜೋಡಿಯಾಗಿದ್ದಾರೆ. 'ಸಿನಿಮಾ ಎಂಬುದೇ ಜೂಜಾಟ. ಸಿನಿಮಾ ಮಾಡುವ ರಿಸ್ಕ್ ತೆಗೆದುಕೊಳ್ಳುತ್ತೇವೆ ಎಂದರೆ ಹೊಸಬರಿಗೆ ಮಾಡೋಣ ಎಂದು ನಿರ್ದೇಶಕರಿಗೆ ಹೇಳಿದೆ. ಯಾವುದೇ ಕೊರತೆ ಬಾರದ ಹಾಗೆ ಒಂದೊಳ್ಳೆ ಸಿನಿಮಾ ಮಾಡಿದ್ದೀನಿ. ಮುಂದಿನದ್ದು ಪ್ರೇಕ್ಷಕರಿಗೆ ಬಿಟ್ಟಿದ್ದು. 'ಮುಂಗಾರು ಮಳೆ' ಬಳಿಕ ಎರಡು ಸಿನಿಮಾ ಮಾಡಿ ಕೈ ಸುಟ್ಟುಕೊಂಡೆ. ಸಿನಿಮಾ ನನ್ನ ಮುಖ್ಯ ಬಿಸಿನೆಸ್ ಅಲ್ಲ. ಮಾಡಿದರೆ ಒಂದೊಳ್ಳೆ ಸಿನಿಮಾ ಮಾಡಬೇಕು ಎಂಬ ಹಂಬಲವಷ್ಟೆ. ಈ ಸಿನಿಮಾ ಯಶಸ್ವಿಯಾಗುತ್ತದೆಂಬ ಭರವಸೆಯಿದೆ' ಎಂದರು ನಿರ್ಮಾಪಕ ಇ.ಕೃಷ್ಣಪ್ಪ.

ದತ್ತಣ್ಣ, ಶಿವಧ್ವಜ್, ಸೂರಜ್ ಮುಂತಾದವರು ಚಿತ್ರದಲ್ಲಿದ್ದಾರೆ. ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣವಿದೆ. ಪ್ರೇಮಿಗಳ ದಿನಕ್ಕೆ ಚಿತ್ರ ಬಿಡುಗಡೆ ಮಾಡಲು ತಂಡ ಆಲೋಚಿಸಿದೆ. ❖

ಗುರುನಂದನ್, ತಪಸ್ವಿನಿ

ಗುರುನಂದನ್ ಹೊಸ ಚಿತ್ರ 'ಮಿಸ್ಟರ್ ಜಾಕ್'

'ಫಸ್ಟ್ ರ್‍ಯಾಂಕ್ ರಾಜು' ಖ್ಯಾತಿಯ ಗುರುನಂದನ್ ನಿರ್ಮಿಸಿ, ನಟಿಸುತ್ತಿರುವ ಹೊಸ ಸಿನಿಮಾಕ್ಕೆ 'ಮಿಸ್ಟರ್ ಜಾಕ್' ಎಂದು ಹೆಸರಿಡಲಾಗಿದೆ. ಇತ್ತೀಚೆಗಷ್ಟೇ ಚಿತ್ರದ ಶೀರ್ಷಿಕೆ ಹಾಗೂ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಸುಮಂತ್ ಗೌಡ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಮಂಡಿಮನೆ ಟಾಕೀಸ್ ಬ್ಯಾನರ್‌ನಿಂದ ಚಿತ್ರ ನಿರ್ಮಾಣಗೊಳ್ಳುತ್ತಿದೆ. 'ಇದು ನನ್ನ ಮೊದಲ ಚಿತ್ರ. ಗುರುನಂದನ್ ಅವರಿಗೆ ಕಥೆ ಹೇಳಿದಾಗ, ಅವರಿಗೆ ಇಷ್ಟವಾಯಿತು. ನಾನೇ ಈ ಚಿತ್ರವನ್ನು ನಿರ್ಮಾಣ ಮಾಡುತ್ತೇನೆ ಎಂದರು. ಇಲ್ಲಿ ನಾಯಕನ ಹೆಸರು ಜಾನಕಿರಾಮ್. ಸ್ಟ್ಯಾಂಡಪ್ ಕಾಮಿಡಿಯನ್‌ಗಳ ಕಥೆ. ಅವರು ತಮ್ಮ ಹೆಸರನ್ನು ಚಿಕ್ಕದಾಗಿ ಇಟ್ಟುಕೊಳ್ಳುತ್ತಾರೆ. ಹಾಗಾಗಿ, ನಾಯಕ ತನ್ನನ್ನು 'ಮಿಸ್ಟರ್ ಜಾಕ್' ಎಂದು ಗುರುತಿಸಿಕೊಳ್ಳುತ್ತಿರುತ್ತಾರೆ. ಇದೊಂದು ರೊಮ್ಯಾಂಟಿಕ್ ಕಾಮಿಡಿ ಮತ್ತು ಫ್ಯಾಮಿಲಿ ಡ್ರಾಮಾ. ಗುರುನಂದನ್ ಅವರನ್ನು ಬೇರೆ ತರಹ ತೋರಿಸುವ ಪ್ರಯತ್ನವನ್ನು ಚಿತ್ರದಲ್ಲಿ ಮಾಡುತ್ತಿದ್ದೇವೆ. ಚಿತ್ರದಲ್ಲಿ ನಾಲ್ಕು ಹಾಡುಗಳಿವೆ' ಎಂದರು ನಿರ್ದೇಶಕರು.

'ಇದುವರೆಗೂ ಸ್ಟ್ಯಾಂಡಪ್ ಕಾಮಿಡಿಯನ್‌ಗಳ ಬಗ್ಗೆ ಕನ್ನಡದಲ್ಲಿ ಯಾರೊಬ್ಬರೂ ಚಿತ್ರ ಮಾಡಿರಲಿಲ್ಲ. ಅಂಥದ್ದೊಂದು ಪ್ರಯತ್ನವನ್ನು ನಾವು ಈ ಚಿತ್ರದ ಮೂಲಕ ಮಾಡುತ್ತಿದ್ದೇವೆ. ಸ್ನೇಹಿತರು ಸಹ ನಿರ್ಮಾಪಕರಾಗಿ ಕೈ ಜೋಡಿಸಿದರು. ಬೆಂಗಳೂರು ಸುತ್ತಮುತ್ತ ಶೇ 75ರಷ್ಟು ಚಿತ್ರೀಕರಣ ಮುಗಿಸಿದ್ದೇವೆ. ಕೊನೆಯ ಹಂತದ ಚಿತ್ರೀಕರಣ ಜನವರಿ ಮೊದಲ ವಾರದಿಂದ ಶುರುವಾಗಲಿದೆ. ಒಂದು ಹಾಡು ಹೊರತುಪಡಿಸಿದರೆ, ಜನವರಿಯಲ್ಲಿ ಮಿಕ್ಕೆಲ್ಲಾ ಭಾಗದ ಚಿತ್ರೀಕರಣ ಮುಗಿಯಲಿದೆ' ಎಂದು ಮಾಹಿತಿ ನೀಡಿದರು ಗುರುನಂದನ್.

ಚಿತ್ರದಲ್ಲಿ ನಾಯಕಿಯಾಗಿ 'ಹರಿಕಥೆ ಅಲ್ಲ ಗಿರಿಕಥೆ' ಖ್ಯಾತಿಯ ತಪಸ್ವಿನಿ ಪೂಣಚ್ಚ ನಟಿಸುತ್ತಿದ್ದಾರೆ. ಮಿತ್ರ, ಧರ್ಮಣ್ಣ ಕಡೂರು, ಗೋಪಾಲಕೃಷ್ಣ ದೇಶಪಾಂಡೆ, ಗಿರಿ, ಸುಷ್ಮಿತಾ ಮುಂತಾದವರು ತಾರಾಗಣದಲ್ಲಿದ್ದಾರೆ. ಚಿತ್ರಕ್ಕೆ ಕಿರಣ್ ರವೀಂದ್ರನಾಥ್ ಸಂಗೀತ ಸಂಯೋಜಿಸುತ್ತಿದ್ದು, ಶಿವಸೇನ ಛಾಯಾಚಿತ್ರಗ್ರಹಣವಿದೆ. ❖

ಸ್ಯಾಂಡಲ್‌ವುಡ್‌ಗೆ ಮರಳಿದ ಖಳನಟ

ಪ್ರಭಾಕರ್

'ಗಜಕೇಸರಿ', 'ನಟಸಾರ್ವಭೌಮ' ಮುಂತಾದ ಚಿತ್ರಗಳಲ್ಲಿ ನಟಿಸಿದ್ದ ತೆಲುಗಿನ ಪ್ರಮುಖ ಖಳನಟ ಪ್ರಭಾಕರ್ 'ಮುಗಿಲ ಮಲ್ಲಿಗೆ' ಚಿತ್ರದೊಂದಿಗೆ ಸ್ಯಾಂಡಲ್‌ವುಡ್‌ಗೆ ಮರಳಿದ್ದಾರೆ. ಆರ್.ಕೆ.ಗಾಂಧಿ ನಿರ್ದೇಶನದ ಈ ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.

'ಖಳನಾಯಕನ ಪಾತ್ರಗಳಿಗಷ್ಟೇ ಸೀಮಿತವಾಗಿದ್ದ ಪ್ರಭಾಕರ್, ನಮ್ಮ ಸಿನಿಮಾದ ಭಾವನಾತ್ಮಕ ದೃಶ್ಯಗಳ ಜೊತೆಗೆ ಹಾಡೊಂದರಲ್ಲಿಯೂ ಕಾಣಿಸಿಕೊಂಡಿದ್ದಾರೆ. ಸತ್ಯವಾರ, ಮುತ್ತುಸಂದ್ರದ ಸುತ್ತಮುತ್ತ ಈ ದೃಶ್ಯಗಳು ಚಿತ್ರೀಕರಣಗೊಂಡಿವೆ' ಎಂದು ಮಾಹಿತಿ ನೀಡಿದರು ನಿರ್ದೇಶಕರು.

ಎ.ನಾಗರಾಜ್ ರೆಡ್ಡಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಅಭಿನಂದನ್ ಶೆಟ್ಟಿ ಛಾಯಾಚಿತ್ರಗ್ರಹಣ, ಅನಿರುದ್ಧ ಶಾಸ್ತ್ರಿ ಸಂಗೀತ, ವಿನಯ್ ಜಿ ಆಲೂರು ಸಂಕಲನವಿದೆ. ಥ್ರಿಲ್ಲರ್ ಮಂಜು, ಭವ್ಯಾ, ಸನತ್, ಸಹನಾ ಚಂದ್ರಶೇಖರ್ ಮುಂತಾದವರು ತಾರಾಗಣದಲ್ಲಿದ್ದಾರೆ. ❖

ಎರಡು ಚಿತ್ರಗಳು ತೆರೆಗೆ

ವರ್ಷದ ಅಂತ್ಯದಲ್ಲಿ ತೆರೆಕಂಡ 'ಯುಐ' ಹಾಗೂ 'ಮ್ಯಾಕ್ಸ್' ಚಿತ್ರಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಈ ವಾರ ಹೊಸ ಚಿತ್ರಗಳ ಸಂಖ್ಯೆ ಕಡಿಮೆಯಾಗಿದೆ.

ಯುವನಟ ಅರ್ಜುನ್ ನಾಯಕನಾಗಿ ನಟಿಸಿರುವ 'ಗನ್ಸ್ ಅಂಡ್ ರೋಸಸ್' ಚಿತ್ರ ಇಂದು(ಜ.3) ಬಿಡುಗಡೆಯಾಗುತ್ತಿದೆ. ಎಚ್.ಆರ್.ನಟರಾಜ್ ಅವರು ದ್ರೋಣ ಕ್ರಿಯೇಷನ್ಸ್ ಲಾಂಛನದಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದು, ಶ್ರೀನಿವಾಸ್ ಕುಮಾರ್ ನಿರ್ದೇಶಿಸಿದ್ದಾರೆ.

'ಇಪ್ಪತ್ತೈದು ವರ್ಷಗಳಿಂದ ಸಾಕಷ್ಟು ಚಿತ್ರಗಳಿಗೆ ಸಹ ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದೇನೆ. ಇದು ಮೊದಲ ನಿರ್ದೇಶನದ ಚಿತ್ರ. ಯಶ್ವಿಕ ನಿಷ್ಕಲ ಈ ಚಿತ್ರದ ನಾಯಕಿ. ಕಿಶೋರ್, ಅವಿನಾಶ್, ಶೋಭರಾಜ್, ನೀನಾಸಂ ಅಶ್ವಥ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಶಶಿಕುಮಾರ್ ಸಂಗೀತ ನೀಡಿದ್ದಾರೆ. ಜನಾರ್ದನ್ ಬಾಬು ಛಾಯಾಚಿತ್ರಗ್ರಹಣ, ಸಂಜೀವ್ ರೆಡ್ಡಿ ಸಂಕಲನ ಹಾಗೂ ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ' ಎಂದಿದ್ದಾರೆ ನಿರ್ದೇಶಕರು.

'ಭೂಗತ ಜಗತ್ತಿನಲ್ಲಿ ನಡೆಯುವ ಪ್ರೇಮಕಥೆ. ಹಾಗಾಗಿ ಚಿತ್ರಕ್ಕೆ 'ಗನ್ಸ್ ಅಂಡ್ ರೋಸಸ್' ಎಂದು ಹೆಸರಿಡಲಾಗಿದೆ. ನಮ್ಮ ಸುತ್ತಮುತ್ತ ನಡೆಯುತ್ತಿರುವ ಡ್ರಗ್ಸ್ ಮಾಫಿಯಾ ಮುಂತಾದ ವಿಷಯಗಳನ್ನಿಟ್ಟುಕೊಂಡು ಕಥೆ ಸಿದ್ಧಗೊಂಡಿದೆ' ಎಂದಿದೆ ಚಿತ್ರತಂಡ.

ಸ್ವೇಚ್ಛಾ:

ಯುವನಟರಾದ ಅನ್ವಿಶ್ ಹಾಗೂ ಪವಿತ್ರಾ ಜೋಡಿಯಾಗಿ ನಟಿಸಿರುವ 'ಸ್ವೇಚ್ಛಾ' ಚಿತ್ರಕ್ಕೆ ಸುರೇಶ್ ರಾಜು ನಿರ್ದೇಶನವಿದೆ.

'ಎರಡು ಕಥೆಗಳನ್ನು ಪ್ಯಾರಲಲ್ ಆಗಿ ಹೇಳಲು ಪ್ರಯತ್ನಿಸಿದ್ದು, ಐದು ಪಾತ್ರಗಳು, ಅವರವರ ಸ್ವೇಚ್ಛೆಗೋಸ್ಕರ ಯಾವ ರೀತಿ ಹೋರಾಟ ನಡೆಸುತ್ತವೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಲು ಪ್ರಯತ್ನಿಸಿರುವೆ. ನವರಸಗಳನ್ನೂ ಒಳಗೊಂಡ ಪ್ರೇಮಕಥೆಯಾಗಿದ್ದು, 90ರ ದಶಕದ ಹಾಗೂ ಈಗಿನ ಕಾಲಘಟ್ಟದ ಕಥೆಗಳನ್ನು ಪ್ಯಾರಲಲ್ ಆಗಿ ಹೇಳುತ್ತಾ ಸಾಗುತ್ತದೆ. ಕೂಲಿ ಕೆಲಸ ಮಾಡುವ ಹುಡುಗನೊಬ್ಬನ ಪ್ರೀತಿ ಎಷ್ಟರಮಟ್ಟಿಗೆ ಗಾಢವಾಗಿರುತ್ತದೆ, ಮುಂದೆ ಅದು ಯಾವೆಲ್ಲ ಆಯಾಮಗಳನ್ನು ಪಡೆದುಕೊಳ್ಳುತ್ತದೆ ಎಂದು ಒಂದು ಕಥೆಯಲ್ಲಿ ಹೇಳಲು ಪ್ರಯತ್ನಿಸಿದರೆ, ಮತ್ತೊಂದರಲ್ಲಿ ತಾಯಿ ಮಗಳ ಬಾಂಧವ್ಯದ ಕಥೆಯನ್ನು ಹೇಳಿದ್ದೇವೆ' ಎನ್ನುತ್ತಾರೆ ನಿರ್ದೇಶಕರು.

ಸ್ಟಾರ್ ಮಸ್ತಾನ್ ಹಾಗೂ ಕೆ.ಆರ್. ಮುರಹರಿ ರೆಡ್ಡಿ ಬಂಡವಾಳ ಹೂಡಿದ್ದಾರೆ. ಚಿತ್ರದ ಐದು ಹಾಡುಗಳಿಗೆ ಲೋಕಿ ತವಸ್ಯ ಸಂಗೀತ ಸಂಯೋಜನೆ ಮಾಡಿದ್ದಾರೆ. ರಾಯಚೂರು, ಬೂರ್ದಿಪಾಡು, ಶ್ರೀರಂಗಪಟ್ಟಣ ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಎಸ್. ಸತೀಶ್ ಛಾಯಾಚಿತ್ರಗ್ರಹಣವಿದೆ.

ಯಶ್ವಿಕ ನಿಷ್ಕಲ

ಬಲರಾಮನಿಗೆ ಜೊತೆಯಾದ ಪ್ರಿಯಾ ಆನಂದ್

ವಿನೋದ್ ಪ್ರಭಾಕರ್ ಅಭಿನಯದ 'ಬಲರಾಮನ ದಿನಗಳು' ಚಿತ್ರದ ನಾಯಕಿಯಾಗಿ ಪ್ರಿಯಾ ಆನಂದ್ ಚಿತ್ರತಂಡ ಸೇರಿಕೊಂಡಿದ್ದಾರೆ. 'ರಾಜಕುಮಾರ', 'ಜೇಮ್ಸ್', 'ಕರಟಕ ದಮನಕ' ಮೊದಲಾದ ಚಿತ್ರಗಳಲ್ಲಿ ಪ್ರಿಯಾ ನಟಿಸಿದ್ದರು. ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ನಿರ್ಮಿಸುತ್ತಿರುವ ಚಿತ್ರಕ್ಕೆ 'ಆ ದಿನಗಳು' ಖ್ಯಾತಿಯ ಕೆ.ಎಂ.ಚೈತನ್ಯ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಇದು ವಿನೋದ್ ಪ್ರಭಾಕರ್ ಅಭಿನಯದ 25ನೇ ಚಿತ್ರ. ಈಗಾಗಲೇ ಎರಡು ಹಂತಗಳ ಚಿತ್ರೀಕರಣ ಮುಕ್ತಾಯವಾಗಿದ್ದು, ಜನವರಿ 15ರಿಂದ ಮೂರನೇ ಹಂತದ ಚಿತ್ರೀಕರಣ ಆರಂಭ ವಾಗಲಿದೆ. 1980ರ ಕಾಲಘಟ್ಟದಲ್ಲಿ ನಡೆಯುವ ಕಥೆಯಾಗಿದೆ' ಎಂದಿದೆ ಚಿತ್ರತಂಡ. ನಾಯಕಿಯನ್ನು ಪರಿಚಯಿಸುವ ಪೋಸ್ಟರ್ ಅನ್ನು ತಂಡ ಬಿಡುಗಡೆ ಮಾಡಿದೆ.

'ಕಾಲ', 'ಕಬಾಲಿ' ಸೇರಿದಂತೆ ಅನೇಕ ಸೂಪರ್ ಹಿಟ್ ಚಿತ್ರಗಳಿಗೆ ಸಂಗೀತ ನೀಡಿರುವ ಖ್ಯಾತ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣನ್ ಈ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟಿದ್ದಾರೆ. ❖

ಪ್ರಿಯಾ ಆನಂದ್

ಲಂಬಾಣಿ ಸಮುದಾಯದ ಗೋರ್ ಗಡ್

ತನು ಜೋಡಿ

ಲಂಬಾಣಿ ಸಮುದಾಯದ ಕಥೆಯನ್ನು ಹೊಂದಿರುವ 'ಗೋರ್ ಗಡ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಶಶಿಕುಮಾರ್.ಜೆ.ಕೆ ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ ಚಿತ್ರವನ್ನು ಡಿಎಸ್‌ಕೆ ಪ್ರೊಡಕ್ಷನ್ ನಿರ್ಮಿಸುತ್ತಿದೆ.

'ಇದು ನನ್ನ ನಿರ್ದೇಶನದ ನಾಲ್ಕನೆ ಚಿತ್ರ. 'ಗೋರ್' ಎಂದರೆ ಸಮುದಾಯ. 'ಗಡ್' ಎನ್ನುವುದು ಸಾಮ್ರಾಜ್ಯ. ಬಂಜಾರ ಜನಾಂಗದ ಆಚರಣೆ, ಆಚಾರ, ವಿಚಾರ, ಲಂಬಾಣಿಗಳ ಉಡುಗೆ, ತೊಡುಗೆ, ಪೂಜಿಸುವ ವಿಧಾನ ಎಲ್ಲವೂ ಶ್ರೀಮಂತಿಕೆಯಿಂದ ಕೂಡಿದೆ. ಆದರೆ ಆಧುನಿಕತೆಯ ಭರಾಟೆಯಲ್ಲಿ ಇವೆಲ್ಲವೂ ನಶಿಸಿ ಹೋಗುತ್ತಿವೆ. ವಿದ್ಯಾವಂತರು ನಗರಕ್ಕೆ ಬರುತ್ತಿದ್ದಾರೆ. ಇವೆಲ್ಲವನ್ನೂ ಇಟ್ಟುಕೊಂಡು ಚಿತ್ರಕಥೆ ಸಿದ್ಧಗೊಂಡಿದೆ. ಹೂವಿನ ಹಡಗಲಿ, ದಾವಣಗೆರೆ, ಚಿತ್ರದುರ್ಗ, ಹೊಸದುರ್ಗ, ಹೊಸೂರು ಮೊದಲಾದೆಡೆ ಚಿತ್ರೀಕರಣಗೊಳ್ಳಲಿದೆ. ಕನ್ನಡ ಸೇರಿದಂತೆ ತೆಲುಗು, ತಮಿಳು, ಲಂಬಾಣಿ, ಮರಾಠಿ ಭಾಷೆಗಳಲ್ಲಿ ಚಿತ್ರ ನಿರ್ಮಾಣವಾಗುತ್ತಿದೆ' ಎಂದರು ನಿರ್ದೇಶಕರು.

ಡಿಎಸ್‌ಕೆ ಧನುಷ್ ನಾಯ್ಡುಗೆ ತನು ಜೋಡಿಯಾಗಿದ್ದಾರೆ. ಗೀತಾಮಿಲನ್, ಭವ್ಯಪ್ರವೀಣ್, ವಿಜಯ್‌ಕುಮಾರ್ ಮುಂತಾದವರು ಚಿತ್ರದಲ್ಲಿದ್ದಾರೆ. ಐದು ಹಾಡುಗಳಿಗೆ ಕುಬೇರ ನಾಯಕ್.ಎಲ್. ಸಂಗೀತ ನೀಡುತ್ತಿದ್ದು, ಧನ್‌ಪಾಲ್ ಛಾಯಾಚಿತ್ರಗ್ರಹಣ, ರವಿ ರಾಥೋಡ್ ಸಂಕಲನವಿದೆ. ❖

‘ನೈಸ್’ ಪರಿಹಾರ ನೀಡದೆ ನಿದ್ದೆ’

ಸೂಕ್ತ ಪರಿಹಾರ ನೀಡದೆ ಭೂಸ್ವಾಧೀನ ಮಾಡುವಂತಿಲ್ಲ: ‘ಸುಪ್ರೀಂ’ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಲ್ಯಾಣ ರಾಜ್ಯದಲ್ಲಿ ಆಸ್ತಿಯ ಹಕ್ಕು ಒಬ್ಬ ಮನುಷ್ಯನ ಮಾನವ ಹಕ್ಕು ಆಗಿದೆ ಹಾಗೂ ಸಂವಿಧಾನದ 300 ಎ ಪರಿಚ್ಛೇದದ ಅಡಿಯಲ್ಲಿ ಸಾಂವಿಧಾನಿಕ ಹಕ್ಕು ಆಗಿರುತ್ತದೆ. ಯಾವುದೇ ವ್ಯಕ್ತಿಗೆ ಸರಿಯಾದ ಪರಿಹಾರ ನೀಡದೆ ಆತನ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ.ವಿ.ವಿಶ್ವನಾಥನ್ ಅವರನ್ನು ಒಳಗೊಂಡ ಪೀಠವು ಕರ್ನಾಟಕ ಸರ್ಕಾರದ ಅಧಿಕಾರಿಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿತು. ಬೆಂಗಳೂರು–ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಗಾಗಿ ವಶಪಡಿಸಿಕೊಂಡ ಭೂಮಿಗೆ ಪರಿಹಾರ ನೀಡದೇ ಭೂಮಾಲೀಕರಾದ ಬರ್ನಾರ್ಡ್ ಫ್ರಾನ್ಸಿಸ್ ಜೋಸೆಫ್ ವಾಜ್ ಮತ್ತು ಇತರರಿಗೆ 22 ವರ್ಷ ಅಲೆದಾಡುವಂತೆ ಮಾಡಿದ ಅಧಿಕಾರಿಗಳ ಉದಾಸೀನತೆ ಹಾಗೂ ಗಾಢ ನಿದ್ರೆ ಬಗ್ಗೆ ನ್ಯಾಯಪೀಠ ಕಿಡಿಕಾರಿತು.

ಸಂವಿಧಾನದ 142ನೇ ವಿಧಿಯಲ್ಲಿನ ವಿಶೇಷ ಅಧಿಕಾರ ಬಳಸಿಕೊಂಡ ನ್ಯಾಯಪೀಠವು, 2019ರ ಏಪ್ರಿಲ್ 22ಕ್ಕೆ ಅನ್ವಯವಾಗುವಂತೆ ವಿವಾದಿತ ಭೂಮಿಯ ಮಾರುಕಟ್ಟೆ ಮೌಲ್ಯ ನಿರ್ಧರಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು. ಜತೆಗೆ, ಎರಡು ತಿಂಗಳಲ್ಲಿ ಪರಿಹಾರ ಮೊತ್ತವನ್ನು ಪಾವತಿ ಮಾಡುವಂತೆ ವಿಶೇಷ ಭೂಸ್ವಾಧೀನ ಅಧಿಕಾರಿಗೆ ಸೂಚಿಸಿತು.

‘2003ರ ಮಾರುಕಟ್ಟೆ ಮೌಲ್ಯವನ್ನು ನೀಡಬೇಕೆಂದು ಸೂಚಿಸಿದರೆ ನ್ಯಾಯದ ಅಪಹಾಸ್ಯ ಮಾಡಿದಂತೆ ಆಗುತ್ತದೆ’ ಎಂದೂ ಪೀಠ ಅಭಿಪ್ರಾಯಪಟ್ಟಿತು. ಸಂವಿಧಾನದ 300ಎ ಪರಿಚ್ಛೇದದ ಪ್ರಕಾರ, ಯಾವುದೇ ವ್ಯಕ್ತಿಯನ್ನು ಭೂ ವಂಚಿತರನ್ನಾಗಿ ಮಾಡುವ ಅವಕಾಶ ಇಲ್ಲ ಎಂದು ಹೇಳಿತು.

‘ಮೇಲ್ಮನವಿದಾರರಿಗೆ 2025ರಲ್ಲಿ 2003ರ ಮಾರುಕಟ್ಟೆ ದರದ ಪ್ರಕಾರ ಪರಿಹಾರ ನೀಡಿ ಎಂದು ಹೇಳಲು ಸಾಧ್ಯವಿಲ್ಲ. ಅವರಿಗೆ ಆದ್ಯತೆ ಮೇರೆಗೆ ಪರಿಹಾರ ಒದಗಿಸುವುದು ಮುಖ್ಯವಾಗಿದೆ. 2003ರಿಂದ 2019ರವರೆಗೆ ರಾಜ್ಯ ಸರ್ಕಾರ ಹಾಗೂ ಕೆಐಎಡಿಬಿ ಗಾಢ ನಿದ್ರೆಯಲ್ಲಿ ಇದ್ದಿದ್ದರಿಂದ ಮತ್ತು ನ್ಯಾಯಾಂಗ ನಿಂದನೆ ನೋಟಿಸ್ ಜಾರಿಯಾದ ಬಳಿಕ ಎಚ್ಚೆತ್ತುಕೊಂಡಿದ್ದರಿಂದ ವಿಶೇಷ ಭೂಸ್ವಾಧೀನ ಅಧಿಕಾರಿಗೆ ಮಾರುಕಟ್ಟೆ ಮೌಲ್ಯದ ದಿನಾಂಕವನ್ನು ಬದಲಿಸುವ ಅಧಿಕಾರ ಇಲ್ಲ’ ಎಂದು ಪೀಠ ಅಭಿಪ್ರಾಯಪಟ್ಟಿತು.

ನ್ಯಾಯಾಲಯವು ಮೇಲ್ಮನವಿಯನ್ನು ಅಂಗೀಕರಿಸಿತು. ಕರ್ನಾಟಕ ಹೈಕೋರ್ಟ್ ವಿಭಾಗೀಯ ಪೀಠ 2022ರ ನವೆಂಬರ್ 22ರಂದು ನೀಡಿದ್ದ ತೀರ್ಪನ್ನು ರದ್ದುಗೊಳಿಸಿತು.

ಪ್ರಕರಣವೇನು?

ಮೇಲ್ಮನವಿದಾರರು 1995ರಿಂದ 1997ರ ಅವಧಿಯಲ್ಲಿ ವಿವಿಧ ನಿವೇಶನಗಳನ್ನು ಖರೀದಿಸಿದ್ದರು. ಈ ನಡುವೆ, ಬೆಂಗಳೂರು–ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಗಾಗಿ ರಾಜ್ಯ ಸರ್ಕಾರ ಹಾಗೂ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ (ನೈಸ್) ಒಪ್ಪಂದ ಮಾಡಿಕೊಂಡಿದ್ದವು. ಈ ಒಪ್ಪಂದದ ಪ್ರಕಾರ, ರಾಜ್ಯ ಸರ್ಕಾರವು 13,237 ಎಕರೆಯನ್ನು ವ್ಯಕ್ತಿಗಳಿಂದ ಮತ್ತು 6,956 ಎಕರೆ ಸರ್ಕಾರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ತೀರ್ಮಾನಿಸಿತ್ತು. ಈ ಯೋಜನೆ ಅನುಷ್ಠಾನಕ್ಕಾಗಿ ನೈಸ್ ಸಂಸ್ಥೆಗೆ 20,193 ಎಕರೆಯನ್ನು ವರ್ಗಾಯಿಸಲು ಒಪ್ಪಿಗೆ ನೀಡಲಾಗಿತ್ತು.

ಅಗತ್ಯ ಜಮೀನಿನ ಭೂಸ್ವಾಧೀನಕ್ಕಾಗಿ ನೈಸ್ ಸಂಸ್ಥೆಯು ಕೆಐಎಡಿಬಿಗೆ 1998ರಲ್ಲಿ ಅರ್ಜಿ ಸಲ್ಲಿಸಿತ್ತು. ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಕಾಯ್ದೆ 1966ರ ಸೆಕ್ಷನ್ 28ರ ಪ್ರಕಾರ, ಭೂಸ್ವಾಧೀನಕ್ಕಾಗಿ ಕೆಐಎಡಿಬಿಯು 2003ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ಭೂಮಾಲೀಕರಿಂದ ಆಕ್ಷೇಪಣೆ ಸ್ವೀಕರಿಸಲಾಗಿತ್ತು, ನಂತರ ಈ ಜಾಗಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಜಾಗಗಳನ್ನು ನೈಸ್ ಸಂಸ್ಥೆಗೆ ವರ್ಗಾವಣೆ ಮಾಡಲಾಗಿತ್ತು. ಭೂಮಾಲೀಕರಿಗೆ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಂಡಿರಲಿಲ್ಲ. ಭೂಸ್ವಾಧೀನದ ಅಧಿಸೂಚನೆ ರದ್ದುಗೊಳಿಸುವಂತೆ ಭೂಮಾಲೀಕರು ಹೈಕೋರ್ಟ್ ಮೊರೆಹೋಗಿದ್ದರು.

ಭೂಸ್ವಾಧೀನದ ಅಧಿಸೂಚನೆಗಳನ್ನು ರದ್ದುಗೊಳಿಸಲು ನಿರಾಕರಿಸಿದ ಪೀಠವು, ಭೂಮಾಲೀಕರಿಗೆ ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡಲು ಯಾವುದೇ ನಿರ್ದೇಶನ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿತು. ಬಳಿಕ ಭೂಮಾಲೀಕರು ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರ ಮನವಿಯನ್ನು ಪರಿಗಣಿಸುವಂತೆ ಪೀಠವು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು. ಆದರೆ, ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ನಂತರ ಭೂಮಾಲೀಕರು ನ್ಯಾಯಾಂಗ ನಿಂದನೆ ಮೊಕದ್ದಮೆ ಹೂಡಿದ್ದರು.

ಅಬ್ಬಬ್ಬಾ ಚಳಿ..

ಚಳಿ ಹೆಚ್ಚಾಗಿದ್ದರಿಂದ ಕಲಬುರಗಿ ನಗರದಲ್ಲಿ ಗುರುವಾರ ಮುಂಜಾನೆ ಜನ ಬೆಚ್ಚನೆಯ ಹೊದಿಕೆ ಹೊದ್ದು ಬೆಂಕಿ ಕಾಯಿಸಿಕೊಂಡರು

ಚಿತ್ರ: ತಾಜುದ್ದೀನ್ ಆಜಾದ್

ಪಡಿತರ ಸಾಗಣೆ ಅಕ್ರಮ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಡಿತರ ಸಾಗಣೆಯಲ್ಲಿ ಅಕ್ರಮ ಎಸಗಿರುವ ಅಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರವು ಕಠಿಣ ಕ್ರಮ ತೆಗೆದುಕೊಳ್ಳಬೇಕು’ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅಧ್ಯಕ್ಷೆ ಮೀನಾಕ್ಷಿ ಬಾಳಿ ಹಾಗೂ ಪ್ರಧಾನ ಕಾರ್ಯದರ್ಶಿ ದೇವಿ ಅವರು, ‘ಪ್ಯಾನ್‌ಗೆ ಆಧಾರ್ ಜೋಡಣೆ ಸಂಬಂಧ ವಿಧಿಸಲಾದ ದಂಡವನ್ನು ಆದಾಯ ತೆರಿಗೆ ಎಂದು ಭ್ರಮಿಸಿದ ಸರ್ಕಾರವು, ಲಕ್ಷಾಂತರ ಬಡಜನರ ಬಿಪಿಎಲ್ ಚೀಟಿಗಳನ್ನು ರದ್ದುಪಡಿಸಿತ್ತು. ಆದರೆ ಬಡವರಿಗೆಂದು ಮೀಸಲಿರಿಸಲಾದ ಪಡಿತರ ಸಾಗಣೆಯಲ್ಲಿ ಅಕ್ರಮ ಎಸಗಿದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತದೆ’ ಎಂದು ಪ್ರಶ್ನಿಸಿದ್ದಾರೆ.

‘ಪಡಿತರ ಸಾಗಣೆಯಲ್ಲಿ ಭಾರಿ ಅಕ್ರಮ ನಡೆದಿರುವುದನ್ನು ಸಿಎಜಿ ತನ್ನ ವರದಿಯಲ್ಲಿ ಬಹಿರಂಗಪಡಿಸಿದೆ. ಈ ಬಗ್ಗೆ ಸರ್ಕಾರ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

ಎರಡೇ ದಿನದಲ್ಲಿ ₹716 ಕೋಟಿ ಮೌಲ್ಯದ ಮದ್ಯ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷಾಂತ್ಯ ಮತ್ತು ಹೊಸ ವರ್ಷವನ್ನು ಬರಮಾಡಿಕೊಳ್ಳುವ ಸಂದರ್ಭದಲ್ಲಿ ರಾಜ್ಯದಾದ್ಯಂತ ಮದ್ಯ ಮಾರಾಟ ಭರ್ಜರಿ ಪ್ರಮಾಣದಲ್ಲಿ ನಡೆದಿದೆ. ಡಿಸೆಂಬರ್ 28 ಮತ್ತು 31ರಂದು ಒಟ್ಟು ₹716.58 ಕೋಟಿ ಮೊತ್ತದ ಮದ್ಯ ಮಾರಾಟವಾಗಿದೆ.

ರಾಜ್ಯದಾದ್ಯಂತ ಇದ್ದ ವಿಪರೀತ ಚಳಿಯಲ್ಲಿ ಹೊಸ ವರ್ಷವನ್ನು ಬರಮಾಡಿಕೊಳ್ಳಲು ಮದ್ಯಪ್ರಿಯರು ಐಎಂಎಲ್ ಮೊರೆಹೋಗಿದ್ದಾರೆ. ಎರಡೂ ದಿನ ಒಟ್ಟು 6.97 ಲಕ್ಷ ಪೆಟ್ಟಿಗೆಗಳಷ್ಟು ಬಿಯರ್ ಮಾರಾಟವಾಗಿದ್ದರೆ, ಅದೇ ಅವಧಿಯಲ್ಲಿ 11.05 ಲಕ್ಷ ಪೆಟ್ಟಿಗೆಗಳಷ್ಟು ಐಎಂಎಲ್ ಮಾರಾಟವಾಗಿದೆ. ಒಟ್ಟಾರೆ 18.03 ಲಕ್ಷ ಪೆಟ್ಟಿಗೆಗಳಷ್ಟು ಮದ್ಯ ಮಾರಾಟವಾಗಿದೆ.

ಎರಡೂ ದಿನ ಒಟ್ಟು ₹577.75 ಕೋಟಿ ಮೊತ್ತದ ಐಎಂಎಲ್ ಮಾರಾಟವಾಗಿದ್ದರೆ, ₹138.33 ಕೋಟಿ ಮೊತ್ತದ ಬಿಯರ್ ಮಾರಾಟವಾಗಿದೆ. ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ದಾಖಲೆ ಸಂಖ್ಯೆಯಲ್ಲಿ ಮದ್ಯ ಮಾರಾಟವಾಗಿದೆ ಎಂದು ಮದ್ಯ ಮಾರಾಟಗಾರರ ಸಂಘಗಳ ಒಕ್ಕೂಟ ತಿಳಿಸಿದೆ.

ದಾಖಲೆ ಸಂಖ್ಯೆಯ ಮಾರಾಟ

ವಿವರ	ಡಿಸೆಂಬರ್ 28ರ ಮಾರಾಟ	ಡಿಸೆಂಬರ್ 31ರ ಮಾರಾಟ
ಐಎಂಎಲ್	6.22 ಲಕ್ಷ ಪೆಟ್ಟಿಗೆಗಳು	4.83 ಲಕ್ಷ ಪೆಟ್ಟಿಗೆಗಳು
ಬಿಯರ್	4.04 ಲಕ್ಷ ಪೆಟ್ಟಿಗೆಗಳು	2.92 ಲಕ್ಷ ಪೆಟ್ಟಿಗೆಗಳು
ಒಟ್ಟು	10.27 ಲಕ್ಷ ಪೆಟ್ಟಿಗೆಗಳು,	7.76 ಲಕ್ಷ ಪೆಟ್ಟಿಗೆಗಳು
ಮೌಲ್ಯ		
ಐಎಂಎಲ್	₹327.50 ಕೋಟಿ	₹250.25 ಕೋಟಿ
ಬಿಯರ್	₹80.58 ಕೋಟಿ	₹57.75 ಕೋಟಿ
ಒಟ್ಟು	₹408.58 ಕೋಟಿ	₹308 ಕೋಟಿ

ರಾಮದಾಸ್, ನಾಗೇಂದ್ರ ವಿಚಾರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ಬಿಜೆಪಿಯ ಮಾಜಿ ಶಾಸಕರಾದ ಎಸ್.ಎ. ರಾಮದಾಸ್ ಮತ್ತು ಎಲ್. ನಾಗೇಂದ್ರ ಗುರುವಾರ ಇಲ್ಲಿನ ಲೋಕಾಯುಕ್ತ ಎಸ್.ಪಿ. ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು.

ರಾಮದಾಸ್

ಎಲ್. ನಾಗೇಂದ್ರ

ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ರಾಮದಾಸ್ ಹಾಗೂ ಸಂಜೆ 5ರಿಂದ ರಾತ್ರಿ 7ರವರೆಗೆ ನಾಗೇಂದ್ರ ವಿಚಾರಣೆ ಎದುರಿಸಿದರು. ಲೋಕಾಯುಕ್ತ ಎಸ್.ಪಿ. ಟಿ.ಜೆ. ಉದೇಶ್ ನೇತೃತ್ವದ ತಂಡವು ವಿಚಾರಣೆ ನಡೆಸಿತು.

ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಬದಲಿ ನಿವೇಶನ ನೀಡುವ ಸಂಬಂಧ ನಿರ್ಣಯ ಕೈಗೊಳ್ಳಲಾದ ಸಭೆಯಲ್ಲಿ ಈ ಇಬ್ಬರೂ ಮುಡಾ ಸದಸ್ಯರಾಗಿ ಪಾಲ್ಗೊಂಡಿದ್ದರು. ಹೀಗಾಗಿ ವಿಚಾರಣೆಗೆ ಹಾಜರಾಗುವಂತೆ ಇಬ್ಬರಿಗೂ ನೋಟಿಸ್ ನೀಡಲಾಗಿತ್ತು.

ಸುಧಾ ಓದಿರಿ

INDIAN ACADEMY OF SCIENCES
P.B. 8005, C.V.Raman Avenue, Sadashivanagar, Bengaluru - 560 080.

Invites sealed bids in two bid format for works of
PAINTING AND FINISHING IN OFFICE BUILDING
of Indian Academy of Sciences, Sadashivanagar, Bengaluru.
Full details about issue of bid is available in the Academy website
https://ww.ias.ac.in/About_IAsc/Tender_notices/
Last date for receipt of bids: **13th January 2025 (12 noon)**
Place: **Bengaluru**
Date: **03/01/2025** **Executive Secretary**

भारतीय विज्ञान अकादमी
पी.बी. 8005, सी.वी.रमन एवेन्यू, सदाशिवनगर, बेंगलुरु - 560 080

भारतीय विज्ञान अकादमी, सदाशिवनगर, बेंगलुरु के कार्यालय भवन के पेंटिंग व फिनिशिंग हेतु दो बिड प्रारूप में सीलबंद बोलियाँ (बिड) आमंत्रित हैं।
बोली जारी करने से सूंबंधित पूर्ण जानकारी अकादमी की वेबसाइट
https://ww.ias.ac.in/About_IAsc/Tender_notices/
पर उपलब्ध है।
बोलियां प्राप्त करने की अंतिम तारीख: 13 जनवरी 2025 (दोपहर 1200 बजे)
स्थान: बेंगलुरु, दिनांक: 03/01/2025 कार्यकारी सचिव

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.
E-mail: mdktbs.tender@gmail.com Website:https://textbooks.karnataka.gov.in
ಸಂಖ್ಯೆ: A7/E-39928/ KTBS/ADM/TBTR/2/2024 ದಿನಾಂಕ: 02.01.2025
(ಟೆಂಡರ್ ಸಂಖ್ಯೆ: KTBS/2024-25/IND0010)

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2025–26 ನೇ ಸಾಲಿಗೆ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಅಂದಾಜು **1058.67 ಲಕ್ಷ** ಪಠ್ಯಪುಸ್ತಕಗಳು, 4 ರಿಂದ 9 ನೇ ತರಗತಿಯ ವಿದ್ಯಾರ್ಥಿಗಳಿಗೆ **129.05 ಲಕ್ಷ** ಅಭ್ಯಾಸ ಪುಸ್ತಕಗಳು ಮತ್ತು 1 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ **47.47 ಲಕ್ಷ** ಶಾಲಾ ದಿನಚರಿಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 16.01.2025 ರಂದು ಸಂಜೆ 5:30 ರವರೆಗೂ** ಸಲ್ಲಿಸಬಹುದಾಗಿರುತ್ತದೆ.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ : **https://kppp.karnataka.gov.in** ಸಹಾಯವಾಣಿ: +91–8046010000/+91–8068948777, ಇಲಾಖೆಯ ವೆಬ್‌ಸೈಟ್: **https://textbooks.karnataka.gov.in**

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ನಗರಸಭಾ ಕಾರ್ಯಾಲಯ, ಹಿರಿಯೂರು. (ಚಿತ್ರದುರ್ಗ ಜಿಲ್ಲೆ)
E-Mail:ka.hiriyur.cmc@gmail.com ಕಛೇರಿ ಸಹಾಯವಾಣಿ: 08193–296220
ನಂ.ನ.ಸ.ಹಿ/ತಾ.ವಿ/ನ.ನಿ/ಟೆಂ.ಸಿಆರ್:17/2024–25 ದಿನಾಂಕ: 31.12.2024

ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3&ಕೆ.ಡಬ್ಲ್ಯೂ–3&1ರ ನಿಬಂಧನೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಹಿರಿಯೂರು ನಗರಸಭೆ ವ್ಯಾಪ್ತಿಯಲ್ಲಿ ಉದ್ದಿಮೆ ನಿಧಿ ಮತ್ತು ನಗರಸಭೆ ನಿಧಿ ಅನುದಾನಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್/ವಿದ್ಯುತ್ ಗುತ್ತಿಗೆದಾರರಿಂದ/ಏಜೇನ್ಸಿದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karantaka.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.

ಕ್ರ. ಸಂ.	ಕಾಮಗಾರಿಗಳ ಇಂಡೆಂಟ್ ವಿವರ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ.ಗಳಲ್ಲಿ	ಕೊನೆಯ ದಿನಾಂಕ ಸಂಜೆ 5.00)	ತೆರೆಯುವ ಕೊನೆಯ ದಿನಾಂಕ ಸಂಜೆ 5.15)
1	DMA/2024-25/BD/WORK_INDENT34045	76.50	129050.00	15/01/2025	16/01/2025
2	DMA/2024-25/BD/WORK INDENT34213	2.10	4435.00		
3	DMA/2024-25/EL/W_I 22852/CALL-2	1.50	2581.00	16/01/2025	17/01/2025

ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಅಭಿಯಂತರರನ್ನು ಸಂಪರ್ಕಿಸಬಹುದು
DIPR/CTA/KSMCA/471/2024-25 ಸಹಿ/– ಪೌರಾಯುಕ್ತರು, ನಗರಸಭೆ, ಹಿರಿಯೂರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ–5/ಟೆಂಡರ/2024–25/3368 ದಿನಾಂಕ : 26–12–2024

:: ಇ–ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ–ಲಕೋಟೆ ಪದ್ದತಿಯಲ್ಲಿ) ::

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ : **Package No.3 of 17 works** 1. Constn of Road from Batagera- Siddapur Abdul Sab field to Ranjol Madana road at Bhutapur 2.Constn of Road from Madhavar main road to upto Partappa field at Mahavar 3.Constn of Road From Bhatagera B Dariyapur field to Jangamanor 4. Constn of Road from Basavaraj Kalappa Revgonda field to upto Nala at Totnalli 5. Constn of Road from Yadalli Telkur main road to upto Graveyard 6.Constn of road from Tarnalli to upto Kamalavati River 7.Constn of road from Tarnalli main road to upto Chandrashetty field 8.Constn of road from Bibballi adarsh School to upto Nala 9.Constn of road from Beejnalli to 8 Number Gate 10.Constn of road from Kumbar Doddi to upto siri field 1.50km at Kukkunda 11.seemi gate road reddy gouda field to Korenul field 12.Constn of road from Ramalinga Kalal field to Hanama mamaza field at Handarki 13. Hanganalli 14. Allolli 15.Udagi 16. Udagi 17. Habal T village in Sedam Taluka under 5054 for the year 2023-24. **Indent No. RDPR/2024-25/RD/WORK_INDENT9976/CALL-2,** 2) ಲೆಕ್ಕ ಶೀರ್ಷಿಕೆ : **2023–24ನೇ ಲೆಕ್ಕ ಶೀರ್ಷಿಕೆ 5054,** 3) ಟೆಂಡರಿಗಿಟ್ಟ ಅಂದಾಜು ಮೊತ್ತ : ರೂ. **73,57,193.94,** 4) ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ : 26–12–2024 ರಿಂದ 06–01–2025 ಸಾಯಂಕಾಲ 4:00 ಗಂಟೆವರೆಗೆ, 6) ಟೆಂಡರ ಅರ್ಜಿ ಬೆಲೆ : ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, 7) ಇ.ಎಂ.ಡಿ. : ರೂ. 1,47,500.00, 8) ಟೆಂಡರ ಸಲ್ಲಿಸುವ ದಿನಾಂಕ : 26–12–2024 ರಿಂದ 06–01–2025 ಸಾಯಂಕಾಲ 4:00 ಗಂಟೆವರೆಗೆ, 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 07–01–2025 ಸಾಯಂಕಾಲ 4:00 ಗಂಟೆ ನಂತರ, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ : 08–01–2025 ಬೆಳಿಗ್ಗೆ 11:00 ಗಂಟೆ ನಂತರ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ, ರಾಜಾಪೂರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/794/ಕೆ.ಎಸ್.ಎಂ.ಸಿ.&ಎ/2024–25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/910/854 ಫ್ಯಾಕ್ಸ್: 080–25536105
E-mail: purchase@kmf.coop
ಸಂಖ್ಯೆ.ಕಹಾಮ/ಖರೀದಿ/ಟೆಂಡರ್–723/2024–25 ದಿನಾಂಕ: 31.12.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (Through KPP Portal)
(KMF/2024-25/SE3046, SE3044 & SE3045)

ಕರ್ನಾಟಕ ಹಾಲು ಮಹಾಮಂಡಳವು ಮಾತೃ ಡೇರಿ, ಯಲಹಂಕ ಮತ್ತು ನಂದಿನಿ ಐಸ್ ಕ್ರೀಂ ಪ್ಲಾಂಟ್., ಬಳ್ಳಾರಿ ಘಟಕಗಳಿಗೆ ಅಗತ್ಯವಿರುವ ವಿವಿಧ ಸಾಗಾಣಿಕಾ ಸೇವೆಗಳಿಗೆ ಹಾಗೂ ಟ್ಯಾಕ್ಸಿ ಸೇವೆಗೆ ಅರ್ಹ ಬಿಡ್ಡುದಾರರಿಂದ ಟೆಂಡರ್ ಆಹ್ವಾನಿಸಿದೆ.

ಟೆಂಡರ್ ದಾಸ್ತಾವೇಜುಗಳನ್ನು eProcurement website https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಟೆಂಡರ್ ದಾಖಲಾತಿಯಲ್ಲಿ ನಮೂದಿಸಿರುವ ಇ.ಎಂ.ಡಿ ಪಾವತಿಸಿ ಭಾಗವಹಿಸಬಹುದಾಗಿದೆ. ಇನ್ನಿತರೆ ದಾಖಲಾತಿಗಳನ್ನು ಟೆಂಡರ್ ದಾಸ್ತಾವೇಜಿನಲ್ಲಿ ನೋಡಬಹುದಾಗಿದೆ.

ಟೆಂಡರ್ ಡೌನ್‌ಲೋಡ್ ಪ್ರಾರಂಭದ ದಿನಾಂಕ: 02.01.2025 ರಿಂದ, ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 04.01.2025 ರಂದು ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 09.01.2025 ರಂದು ಸಂಜೆ 5.00 ಗಂಟೆಯವರೆಗೆ, ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ: 10.01.2025 ರಂದು ಸಂಜೆ 05.10 ಗಂಟೆಗೆ, ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕ: ತಾಂತ್ರಿಕ ಟೆಂಡರ್ ಪರಿಶೀಲನೆಯ ನಂತರ.

ಕರ್ನಾಟಕ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಸರ್ವೇಕ್ಷಣಾ ಘಟಕ/ಜಿಲ್ಲಾ ಎನ್.ಸಿ.ಡಿ ಘಟಕ,
ಮೈಸೂರು ಜಿಲ್ಲೆ, ಮೈಸೂರು.
ಎನ್.ಪಿ.ಸಿ. ಆಸ್ಪತ್ರೆ ಆವರಣ, ನಜ಼ರ್‌ಬಾದ್, ಮೈಸೂರು – 570010
ದೂರವಾಣಿ ಸಂಖ್ಯೆ :0821–2438147, 2443178
E-Mail Id :dsomysuru@gmail.com/ ncdmysuru01@gmail.com
ಸಂ.: ಡಿಎಸ್‌ಯು/ಎನ್.ಸಿ.ಡಿ/ಮೈ/254/2024–25 ದಿ: 30.12.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಎನ್.ಪಿ.–ಎನ್.ಸಿ.ಡಿ ಕಾರ್ಯಕ್ರಮದಡಿಯಲ್ಲಿ ಮೈಸೂರು ಜಿಲ್ಲೆ Day Care Chemotherapy Centreಗೆ ಸಂಬಂಧಿಸಿದಂತೆ Hub Centreನ ಆಯ್ಕೆ ಮಾಡಲು Expression of interestನ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸುವ ಬಗ್ಗೆ ಅಧಿಸೂಚನೆ ಸಂಖ್ಯೆ: ಡಿ.ಎಸ್.ಯು/ಎನ್.ಸಿ.ಡಿ/ಮೈ/20/2024–25 ದಿನಾಂಕ: 30.12.2024.

ಇ–ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ ಮತ್ತು ಸಮಯ ದಿ: 30.12.2024 ರಂದು ಮಧ್ಯಾಹ್ನ 03:00 ಗಂಟೆಗೆ. 2) ಪ್ರೀಬಿಡ್ ಸಭೆ ನಡೆಯುವ ದಿನಾಂಕ ಮತ್ತು ಸಮಯ ದಿ: 07.01.2025 ರಂದು ಬೆಳಿಗ್ಗೆ 11:00 ಗಂಟೆಗೆ. 3) ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ ದಿ: 17.01.2025 ರಂದು ಸಂಜೆ 04:30 ಗಂಟೆಗೆ 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿ: 18.01.2025 ರಂದು ಸಂಜೆ 05:00 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿ: 24.01.2025 ರಂದು ಸಂಜೆ 05:30 ಗಂಟೆಗೆ ಅಥವಾ ನಂತರ. 6) ಟೆಂಡರ್ ತೆರೆಯುವ ಸ್ಥಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ನಜರ್‌ಬಾದ್, ಮೈಸೂರು

ಹೆಚ್ಚಿನ ಮಾಹಿತಿಗಾಗಿ: ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣಾಧಿಕಾರಿಗಳ ಕಛೇರಿ, ಎನ್.ಪಿ.ಸಿ ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು–10 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು/ಕಾರ್ಯಕ್ರಮಾಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.
DIPR/DDMYS/1032/KSMCA/696/2024-25

ಭಾರತ ಸರಕಾರ
ವಿಶೇಷ ಭೂಸ್ವಾಧೀನಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ, ಧಾರವಾಡ.
ಸಂಖ್ಯೆ: ವಿಭೂ/ರಾಹೆ–367ಬೈಪಾಸ್/ಸಿಆರ್/2024–25 ದಿನಾಂಕ:02–01–2025

ಸಾರ್ವಜನಿಕ ಪ್ರಕಟಣೆ

ರಾಷ್ಟ್ರೀಯ ಹೆದ್ದಾರಿ–367 ರ ಕಿ.ಮೀ 10.00 ರಿಂದ 47.00 ರಲ್ಲಿ ಬಾಣಾಪೂರ ಗದ್ದನಕೇರಿ ಸೆಕ್ಷನ್‌ರಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರ, ಯಲಬುರ್ಗಾ ಮತ್ತು ಗದಗ ಜಿಲ್ಲೆಯ ಗಜೇಂದ್ರಗಡ ಪಟ್ಟಣಗಳಿಗೆ ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಸಲುವಾಗಿ ಭೂಸ್ವಾಧೀನ ಐತೀರ್ಪು ಮತ್ತು ಭೂ–ಪರಿಹಾರ ಪಾವತಿ ಕುರಿತು, ಭೂಮಾಲೀಕರಿಗೆ / ಹಿತಾಸಕ್ತಿಯುಳ್ಳವರ ಮಾಹಿತಿಗಾಗಿ ಪ್ರಕಟಣೆ.

ರಾಷ್ಟ್ರೀಯ ಹೆದ್ದಾರಿ–367ರ ಕಿಕಿ.ಮೀ 10.00 ರಿಂದ 47.00 ರಲ್ಲಿ ಬಾಣಾಪೂರ ಗದ್ದನಕೇರಿ ಸೆಕ್ಷನ್‌ರಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರ, ಯಲಬುರ್ಗಾ ಮತ್ತು ಗದಗ ಜಿಲ್ಲೆಯ ಗಜೇಂದ್ರಗಡ ಪಟ್ಟಣಗಳಿಗೆ ಬೈಪಾಸ್ ರಸ್ತೆ ನಿರ್ಮಾಣ ಮಾಡಲು ಸಲುವಾಗಿ ಭೂಸ್ವಾಧೀನಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956ರ ಸೆಕ್ಷನ್ 3 (A) ರ ಅಧಿಸೂಚನೆ ಮತ್ತು ಸೆಕ್ಷನ್ 3(D) ರ ಅಧಿಸೂಚನೆಗಳನ್ನು ಭಾರತ ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಎಲ್ಲಾ ಭೂ–ಮಾಲೀಕರಿಗೆ ಹಾಗೂ ಹಿತಾಸಕ್ತಿಯುಳ್ಳವರ ಗಮನಕ್ಕೆ ತರಲಾಗಿದ್ದು ಹಾಗೂ ದಿನಪತ್ರಿಕೆಗಳಲ್ಲಿಯೂ ಸಹ ಪ್ರಕಟಿಸಲಾಗಿರುತ್ತದೆ.

ಜಮೀನು/ಕಟ್ಟಡದ ಭೂಸ್ವಾಧೀನದ ಪರಿಹಾರಕ್ಕೆ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956ರ ಸೆಕ್ಷನ್ 3(G) ರಂತೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯಿಂದ (1) ಕುಕನೂರ ಬೈಪಾಸ್‌ಗೆ ಸಂಬಂಧಿಸಿದ ಕೊಪ್ಪಳ ಜಿಲ್ಲೆಯ ಕುಕನೂರ ತಾಲೂಕಿನ ಕುಕನೂರ, ಹರಿಶಂಕರ ಬಂಡಿ ಹಾಗೂ ರಾಜೂರ (2) ಯಲಬುರ್ಗಾ ಬೈಪಾಸ್‌ಗೆ ಸಂಬಂಧಿಸಿದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಯಲಬುರ್ಗಾ ಹಾಗೂ ಹೊಸಳ್ಳಿ, (3) ಗಜೇಂದ್ರಗಡ ಬೈಪಾಸ್‌ಗೆ ಸಂಬಂಧಿಸಿದ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಉಣಚಗೇರಿ, ಪುರ್ತಗೇರಿ ಹಾಗೂ ರಾಜೂರ ಗ್ರಾಮಗಳಿಗೆ ಸಂಬಂಧಿಸಿದ ಭೂಮಿಗೆ ಐತೀರ್ಪಿನ ಆದೇಶವನ್ನು **ದಿನಾಂಕ: 18–10–2024** ರಂದು ಹೊರಡಿಸಲಾಗಿರುತ್ತದೆ. ಕೇಂದ್ರ ಭೂ–ಸಾರಿಗೆ ಮಂತ್ರಾಲಯದಿಂದ ಭೂ–ಪರಿಹಾರದ ಮೊತ್ತವನ್ನು ಈ ಕೆಳಗೆ ಸಹಿ ಮಾಡಿದವರ ಅಧಿಕಾರಿ ಮುಖಾಂತರ ನೀಡಲಾಗುತ್ತದೆ. ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 ರಂತೆ ಸಂಬಂಧಿಸಿದ ಭೂಮಾಲೀಕರಿಗೆ / ಆಸಕ್ತ ವ್ಯಕ್ತಿಗಳಿಗೆ ಸೂಚನಾ ಪತ್ರವನ್ನು ಈಗಾಗಲೇ ವೈಯಕ್ತಿಕವಾಗಿ ನೀಡಲಾಗಿರುತ್ತದೆ. ಆದುದರಿಂದ ಭೂಪರಿಹಾರ ಮೊತ್ತವನ್ನು ಎಲ್ಲಾ ಸಂಬಂಧಿಸಿದ ಭೂಮಾಲೀಕರಿಗೆ ಈ ಮೂಲಕ ನೀಡಲಾಗುತ್ತಿದೆ ಎಂಬ ಈ ಹೆಚ್ಚುವರಿ ಸಾರ್ವಜನಿಕ ಪ್ರಕಟಣೆಯನ್ನು ಸಂಬಂಧಿಸಿದ ಭೂಮಾಲೀಕರಿಗೆ / ಹಿತಾಸಕ್ತಿಯುಳ್ಳವರ ಮಾಹಿತಿಗಾಗಿ ನೀಡಲಾಗಿದೆ. ಮುಂದುವರೆದು ಈ ಮೂಲಕ ಸೂಚಿಸುವುದೇನೆಂದರೆ.

- ಈಗಾಗಲೇ ಬ್ಯಾಂಕ ವಿವರಗಳನ್ನು ಸಲ್ಲಿಸಿರುವವರಿಗೆ ಭೂ–ಪರಿಹಾರ ಮೊತ್ತವನ್ನು ಸಂಬಂಧಿಸಿದ ಎಲ್ಲ ಭೂ–ಮಾಲೀಕರಿಗೆ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸಲಾಗುತ್ತಿದೆ.
- ಭೂ ಪರಿಹಾರದ ಮೊತ್ತವನ್ನು ಪಡೆದುಕೊಳ್ಳಲು ಆರ್ಹರಾದ ವ್ಯಕ್ತಿಗಳು 30 ದಿನಗಳ ಒಳಗಾಗಿ (**ಅಂದರೆ ದಿನಾಂಕ: 02–02–2025 ರೊಳಗಾಗಿ**) ಪರಿಹಾರ ಮೊತ್ತವನ್ನು ಈ ಕೆಳಗೆ ಸಹಿ ಮಾಡಿದವರಿಂದ ಪಡೆಯಲು ಸೂಚಿಸಲಾಗಿದೆ.
- ನಿಗದಿಪಡಿಸಲಾದ ಭೂ–ಪರಿಹಾದ ಮೊತ್ತವನ್ನು ಸಂಬಂಧಿಸಿದ ಭೂ–ಮಾಲೀಕರಿಗೆ / ಆಸ್ತಕ ವ್ಯಕ್ತಿಗಳಿಗೆ ಪಾವತಿಸಲಾಗುತ್ತಿದೆ ಎಂದು ಈ ಹೆಚ್ಚುವರಿ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಸುತ್ತಾ, ಸೂಚನಾ ಪತ್ರದಲ್ಲಿ ಉಲ್ಲೇಖಿಸಿದ ದಾಖಲೆಗಳನ್ನು/ ವಿವರಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸದೇ ಇದ್ದಲ್ಲಿ ಅಥವಾ ಭೂ–ಪರಿಹಾರವನ್ನು ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಪಡೆದುಕೊಳ್ಳದ್ದರೆ ಪರಿಹಾರದ ಮೊತ್ತವನ್ನು ಕೋರ್ಟಿಗೆ ಜಮಾ ಮಾಡಲಾಗುವುದು.
- ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956ರ ಸೆಕ್ಷನ್ 3(A) ಪ್ರಕಟಣೆಯನ್ನು ನೀಡಿದ ದಿನಾಂಕದಿಂದ ಅಂದರೆ ಕುಕನೂರ ಹಾಗೂ ಯಲಬುರ್ಗಾ ಬೈಪಾಸ್‌ಗೆ ಸಂಬಂದಿಸಿದ ಜಮೀನುಗಳಲ್ಲಿ **ದಿನಾಂಕ: 06–02–2023** ಮತ್ತು ಗಜೇಂದ್ರಗಡ ಬೈಪಾಸ್‌ಗೆ ಸಂಬಂದಿಸಿದ ಜಮೀನುಗಳಲ್ಲಿ **ದಿನಾಂಕ: 24–07–2024** ರ ನಂತರ ಯಾವುದೇ ಕೃಷಿ ಚಟುವಟಿಕೆಗೆ ಅವಕಾಶವಿರುವುದಿಲ್ಲ ಮತ್ತು ಅದಕ್ಕೆ ಪರಿಹಾರ ನೀಡಲಾಗುವುದಿಲ್ಲವೆಂದು ಸಂಬಂಧಿಸಿದವರಿಗೆ ತಿಳಿಯಪಡಿಸಿದೆ.

ಸಹಿ/– ಕ್ಯಾಪ್ಟನ್ ಶ್ರೀನಿವಾಸಗೌಡ, (ಕ.ಆ.ಸೇ)
ವಿಶೇಷ ಭೂಸ್ವಾಧೀನಾಧಿಕಾರಿಗಳು,
ರಾಷ್ಟ್ರೀಯ ಹೆದ್ದಾರಿಗಳು, ಧಾರವಾಡ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ ನಂ. 29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು–570017
Company Identity Number [CIN]: U40109KA2004SGC035177
Email: gmit@cescmysore.org | **website:** https://www.cescmysore.org
ನಂ.ಚಾವಿಸನಿನಿ/ಪ್ರ.ವ್ಯ(ಐಟಿ&ಎಮ್‌ಐಎಸ್)/ಉ.ಪ್ರ.ವ್ಯ(ಖರೀದಿ)/ಸ.ಪ್ರ.ವ್ಯ(ಯೋ–3)/2024–25/23494 ದಿನಾಂಕ: 01-01-2025

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಪಿ.ಎಂ–ಕುಸುಮ್–ಸಿ ಅಡಿಯಲ್ಲಿ ಮೈಸೂರು ಸೆಸ್ಕ್ ವ್ಯಾಪ್ತಿಯಲ್ಲಿ ಸೌರ ವಿದ್ಯುತ್ ಸ್ಥಾವರಗಳ ವಿನ್ಯಾಸ, ಸಮೀಕ್ಷೆ, ಸರಬರಾಜು, ಪರೀಕ್ಷೆ, ಚಾಲನೆ ಮತ್ತು ನಿರ್ವಹಣೆಗಳೊಂದಿಗೆ ಸೌರ ವಿದ್ಯುತ್ ಸ್ಥಾವರಗಳ ಸ್ವಂತವಾಗಿ ನಿರ್ಮಾಣ ಮತ್ತು ಕಾರ್ಯಚರಣೆಯ ಆಧಾರದ ಮೇಲೆ ಸೌರ ವಿದ್ಯುತ್ ಉತ್ಪಾದಕರಗಳ ಆಯ್ಕೆಗಾಗಿ ಅರ್ಹ ಬಿಡ್ಡುದಾರರಿಂದ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸುತ್ತಿದೆ. CESC ಕಾರ್ಯ ವ್ಯಾಪ್ತಿಯಲ್ಲಿ ಉಪಕೇಂದ್ರ ಮಟ್ಟದಲ್ಲಿ ಆಯ್ದ ಕೃಷಿ ಫೀಡರ್‌ಗಳು ಮತ್ತು ಅದಕ್ಕೆ ಸಂಬಂಧಿಸಿದ 11KV ಮಾರ್ಗ ನಿರ್ಮಾಣ ಮತ್ತು ಸೌರ ಸ್ಥಾವರಗಳ ದುರಸ್ಥಿ ಮಾನಿಟರಿಂಗ್ ವ್ಯವಸ್ಥೆಯನ್ನು RESCO ರೀತಿಯಲ್ಲಿ 25 ವರ್ಷಗಳವರೆಗೆ ನಿರ್ವಹಿಸಲು.

SL NO.	NAME OF THE DISTRICT	DIVISION OF CESC	SUB STATION	TALUK	ENQUIRY NO/DATE
1	MYSORE	V V MOHALLA	YELWALA (KARAKANAHALLI)	MYSORE	CESC/IT&MIS/PM-KUSUM C/ 2024-25/186-201
2			JAIPURA	MYSORE	
3		N R MOHALLA	MEGALAPURA	MYSORE	
4		NANJANGUD	HULLALLI	NANJANGUD	
5			THANDYA	NANJANGUD	
6			220KV TUBINAKERE	MANDYA	
7			CHIKKAMANDYA	MANDYA	
8	MANDYA	MANDYA	V.C. FARM	MANDYA	
9			TUMBAKERE	MANDYA	
10		PANDAVAPURA	66/11KV S R PATNA	SRIRANGAPATNA	
11	HASSAN	SAKLESHPURA	BELUR	BELUR	
12			HAGARE	BELUR	
13		H N PURA	HADAVANAHALLI	H N PURA	
14			DODDAKADANOOR	H N PURA	
15			DODDAHALLI	H N PURA	
16	CHAMARAJANAGAR	CHAMARAJANAGAR	GUNDLUPET	GUNDLUPETE	

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in**ನಲ್ಲಿ **ದಿನಾಂಕ: 03–01–2025ರ** ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ **support@eprochelpdesk.com** ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/–
ಪ್ರಧಾನ ವ್ಯವಸ್ಥಾಪಕರು(ಐ.ಟಿ & ಎಮ್.ಐ.ಎಸ್)
ಸೆಸ್ಕ್., ಮೈಸೂರು
DIPR/MYS/KAVITA/1041/2024-25

ಜಿಲ್ಲಾ ಪಂಚಾಯತ್, ತುಮಕೂರು.
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ತುಮಕೂರು. ದೂರವಾಣಿ: 0816–2273724
ಮೌಲಾನಾ ಆಜಾದ್ ಭವನ, ಇಂದಿರಾ ಕಾಲೇಜು ಮುಂಭಾಗ, ಉಪ್ಪಾರಹಳ್ಳಿ, ತುಮಕೂರು–572102
website:gokdom.karnataka.gov.in/TUMAKURU E-mail:domtumkur@gmail.com
ಸಂಖ್ಯೆ:ಅಸಂಕಇ/ತು/ಆ.ಟೆಂ/ಸಿಆರ್–92/2023–24 ದಿನಾಂಕ:26/12/2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

2024–25ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳಿಗೆ ಹಾಗೂ ಮೊರಾರ್ಜಿದೇಸಾಯಿ ವಸತಿಶಾಲೆ/ ಕಾಲೇಜುಗಳಿಗೆ ಆಹಾರ, ತರಕಾರಿ ಮತ್ತು ಇತರೆ ಸಾಮಗ್ರಿಗಳ ಸರಬರಾಜುಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ನಿಯಮಗಳನ್ವಯ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ (E-Procurement) ಮೂಲಕ ದ್ವಿ–ಲಕೋಟೆಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್‌ಗೆ ಇಟ್ಟ ಮೊತ್ತ **ರೂ.955.24 ಲಕ್ಷ**ಗಳು.
2) ಇ.ಎಮ್.ಡಿ. ಮೊತ್ತ **ರೂ.14.32 ಲಕ್ಷ**ಗಳು.
3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: **26/12/2024**.
4) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **09/01/2025**.

ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: **26/12/2024 ರಿಂದ ದಿನಾಂಕ:–09/01/2025 ರ ವರೆಗೆ** website: **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಹಾಗೂ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ, ಇಂದಿರಾ ಕಾಲೇಜು ಮುಂಭಾಗ, ಉಪ್ಪಾರಹಳ್ಳಿ, ತುಮಕೂರು–572102. (ದೂರವಾಣಿ ಸಂಖ್ಯೆ: 0816–2273724) ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಶಬ್ಬೀರ ಅಹ್ಮದ
ಜಿಲ್ಲಾ ಅಧಿಕಾರಿ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ತುಮಕೂರು.
DIPR/TUM/RO- 131/24-25/Oysters

ಸುಭಾಷಿತ

ಲೋಕವೆಲ್ಲಾ ಬಗ್ಗುವುದು ಶ್ರೇಷ್ಠವಾದ ಬುದ್ಧಿಗೆ ತಾನೇ?
-ಬಿ.ಎಂ.ಶ್ರೀಕಂಠಯ್ಯ

ಬಿರೇನ್ ಸಿಂಗ್ ಕ್ಷಮೆ ಯಾಚನೆ ಹೊಣೆಗಾರಿಕೆ ಇಲ್ಲದ ಟೊಳ್ಳು ಮಾತು

ಮಣಿಪುರ ರಾಜ್ಯದಲ್ಲಿ ನಡೆದಿರುವ ವಿದ್ಯಮಾನಗಳ ವಿಚಾರವಾಗಿ ಅಲ್ಲಿನ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಕ್ಷಮೆ ಯಾಚಿಸಿರುವುದಕ್ಕೆ ಕಾರಣ ಏನು ಎಂಬುದು ಸ್ಪಷ್ಟವಾಗಿಲ್ಲ. 'ನಮ್ಮ ಹಿಂದಿನ ತಪ್ಪುಗಳನ್ನು ಮರೆಯುವಂತೆ, ಕ್ಷಮಿಸುವಂತೆ ಹಾಗೂ ಶಾಂತಿಯುತವಾದ ಮತ್ತು ಸಮೃದ್ಧವಾದ ಮಣಿಪುರದಲ್ಲಿ ಒಟ್ಟಾಗಿ ಹೊಸ ಜೀವನ ಆರಂಭಿಸುವಂತೆ ಎಲ್ಲ ಸಮುದಾಯಗಳಲ್ಲಿಯೂ ಮನವಿ ಮಾಡಿಕೊಳ್ಳಲು ಬಯಸುವೆ' ಎಂದು ಸಿಂಗ್ ಅವರು ಹೇಳಿದ್ದಾರೆ. ಇದು ಅವರು ನೀಡಿರುವ ಹೊಸ ವರ್ಷದ ಸಂದೇಶವಾಗಿರಬಹುದು, ಇದಕ್ಕೆ ಹೆಚ್ಚಿನ ಅರ್ಥ ಇಲ್ಲದಿರಬಹುದು. ಅಲ್ಲದೆ, ಬಹಳ ತಡವಾಗಿ ಬಂದಿರುವ ತೀರಾ ಚಿಕ್ಕ ಮಾತು ಇದು ಎಂದೂ ಭಾವಿಸಬಹುದು. ಸರಿಸುಮಾರು ಈ ಎರಡು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ನಡೆದ ಹಿಂಸಾಚಾರಕ್ಕೆ ಸಿಂಗ್ ಅವರು ಹೊಣೆ ಹೊತ್ತುಕೊಂಡಿದ್ದಾರೆ ಎನ್ನುವ ಸೂಚನೆಗಳು ಅವರ ಮಾತುಗಳಲ್ಲಿ ಇಲ್ಲ. ವಿಷಾದ ವ್ಯಕ್ತಪಡಿಸುವುದಾಗಿ ಸಿಂಗ್ ಹೇಳಿದ್ದಾರೆ. ಆದರೆ ವಿಷಾದ ವ್ಯಕ್ತಪಡಿಸುವುದಕ್ಕೂ ಪಶ್ಚಾತ್ತಾಪಪಡುವುದಕ್ಕೂ ವ್ಯತ್ಯಾಸ ಇದೆ. ಸಾರ್ವಜನಿಕರಿಗೆ ಉತ್ತರದಾಯಿ ಆಗಬೇಕಿರುವ ಹುದ್ದೆಗಳಲ್ಲಿ ಇರುವವರು ಪಶ್ಚಾತ್ತಾಪ ಇಲ್ಲದ ಕ್ಷಮೆ ಯಾಚನೆಯ ಮಾತನಾಡಿದಾಗ ಅದು ಟೊಳ್ಳಾಗಿ ಕಾಣಿಸುತ್ತದೆ. ಇಂತಹ ಹುದ್ದೆಗಳಲ್ಲಿ ಇರುವವರು ತಿಳಿದೋ ತಿಳಿಯದೆಯೋ ಆಗುವ ಲೋಪಗಳಿಗೆ ಹೊಣೆಗಾರರಾಗುತ್ತಾರೆ. ಮಣಿಪುರದಲ್ಲಿ ಆಗಿರುವುದು ಇಬ್ಬರು ವ್ಯಕ್ತಿಗಳ ನಡುವಿನ ಸಂಗತಿಯಲ್ಲ, ಕ್ಷಮಿಸು–ಮರೆತುಬಿಡು ಎಂದು ಹೇಳಬಹುದಾದ ಸಂಗತಿಯೂ ಅಲ್ಲ.

ಕ್ಷಮೆ ಯಾಚನೆಗೆ ಅರ್ಥ ಬರಬೇಕಾದರೆ, ಆಗಿರುವುದಕ್ಕೆ ಹೊಣೆ ಹೊತ್ತುಕೊಳ್ಳಬೇಕು ಮತ್ತು ಅದಕ್ಕೆ ಅನುಗುಣವಾಗಿ ಕೆಲಸಗಳೂ ಆಗಬೇಕು

ಮಣಿಪುರದಲ್ಲಿನ ಸಮಸ್ಯೆಗಳಿಗೆ ಬಿರೇನ್ ಸಿಂಗ್ ಅವರೂ ಕಾರಣ. ಏಕೆಂದರೆ, ಅವರು ತಮ್ಮನ್ನು ಮೈತೇಯಿ ಸಮುದಾಯದ ಜೊತೆ ಗುರುತಿಸಿಕೊಂಡರು. ಮೈತೇಯಿ ಸಮುದಾಯವು ಕುಕಿ ಸಮುದಾಯದ ಜೊತೆ ಹೊಂದಿರುವ ಸಂಘರ್ಷವೇ ಅಲ್ಲಿನ ಸಮಸ್ಯೆಗೆ ಮೂಲ ಕಾರಣ. ಮಣಿಪುರದ ಸಂಘರ್ಷದ ವಿಚಾರವಾಗಿ ಸಿಂಗ್ ಅವರು ತೃಪ್ತಿಕರ ಅಲ್ಲವೇ ಅಲ್ಲದ ಬಗೆಯಲ್ಲಿ ವಿವರಣೆಗಳನ್ನು ನೀಡಿದ್ದಾರೆ. ಸರ್ಕಾರದ ನೇತೃತ್ವ ವಹಿಸಿದವರಾಗಿ ಸಿಂಗ್ ಅವರು ತಮ್ಮದೇ ಪಕ್ಷದ ಶಾಸಕರ ಮತ್ತು ಮಿತ್ರಪಕ್ಷಗಳ ಶಾಸಕರ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅವರು ಕ್ಷಮೆ ಯಾಚನೆಯ ಮಾತು ಆಡುವುದು ವಿಶ್ವಾಸಾರ್ಹ ಆಗುವುದಿಲ್ಲ. ಕೇಂದ್ರ ಗೃಹ ಸಚಿವಾಲಯವು ಈಚೆಗೆ ಬಿಡುಗಡೆ ಮಾಡಿರುವ ವಾರ್ಷಿಕ ವರದಿಯು ಮಣಿಪುರದ ಈಗಿನ ಸ್ಥಿತಿಯನ್ನು ಸರಿಯಾಗಿ ಗ್ರಹಿಸುವ ಕೆಲಸ ಮಾಡಿಲ್ಲ. ಪಡೆಗಳನ್ನು ರವಾನಿಸಿದ್ದುದು, ಹಣಕಾಸಿನ ನೆರವು ಒದಗಿಸಿದ್ದುದು, ರಾಜ್ಯದ ಅಧಿಕಾರಿಗಳ ಜೊತೆ ಸಮಾಲೋಚನೆ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಣಿಪುರಕ್ಕೆ ಭೇಟಿ ನೀಡಿದ್ದುದು ಅಲ್ಲಿನ ಸಂಘರ್ಷವನ್ನು ಕೊನೆಗೊಳಿಸಲು ಕೈಗೊಂಡ ಕ್ರಮಗಳು ಎಂದು ವರದಿ ಹೇಳುತ್ತದೆ. ಈ ಕ್ರಮಗಳಿಂದ ಪ್ರಯೋಜನ ಆಗಿಲ್ಲ. ಹದಗೆಟ್ಟಿದ್ದ ಅಲ್ಲಿನ ಪರಿಸ್ಥಿತಿಯು ಇನ್ನಷ್ಟು ಮತ್ತಷ್ಟು ಹದಗೆಟ್ಟಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಅಲ್ಲಿಗೆ ಭೇಟಿ ನೀಡದೇ ಇದ್ದುದು ಅಲ್ಲಿನ ಸ್ಥಿತಿಯ ಬಗ್ಗೆ ಕಾಳಜಿ ಇಲ್ಲವಾಗಿದ್ದುದನ್ನು ತೋರಿಸುತ್ತದೆ. ಮಣಿಪುರದಲ್ಲಿ ರಾಜ್ಯ ಸರ್ಕಾರವು ಕೇಂದ್ರದ ನೆರವಿನೊಂದಿಗೆ ಪರಿಸ್ಥಿತಿಯನ್ನು ಸಹಜವಾಗಿಸುವ ಕೆಲಸ ಮಾಡುತ್ತಿದೆ ಎಂದು ಹೇಳಿರುವುದು, ವಾಸ್ತವವನ್ನು ತಪ್ಪಾಗಿ ತೋರಿಸಿದ್ದಕ್ಕೆ ಸಾಕ್ಷ್ಯವಾಗಿ ನಿಲ್ಲುತ್ತದೆ.

ಮಣಿಪುರದಲ್ಲಿ ಆಗಿರುವ ಹಾನಿಯನ್ನು ಕ್ಷಮೆ ಯಾಚನೆಯು ಸರಿಪಡಿಸುವುದಿಲ್ಲ. ಕ್ಷಮೆ ಕೇಳಿದ ನಂತರವೂ ಬಿರೇನ್ ಸಿಂಗ್ ಅವರು ಮಣಿಪುರದ ಇಂದಿನ ಸಮಸ್ಯೆಗಳಿಗೆ ಕಾಂಗ್ರೆಸ್ ನೇತೃತ್ವದ ಈ ಹಿಂದಿನ ಸರ್ಕಾರಗಳೇ ಹೊಣೆ ಎಂದು ದೂರಿದ್ದಾರೆ. ಅವರು ಕ್ಷಮೆ ಕೇಳಿದ ನಂತರ ಪಶ್ಚಿಮ ಇಂಫಾಲ್‌ನಲ್ಲಿ ಉಗ್ರರಿಂದ ದಾಳಿ ನಡೆದಿದೆ. ಮಣಿಪುರವು ಈಗ ಭೌಗೋಳಿಕವಾಗಿ, ರಾಜಕೀಯವಾಗಿ ಮತ್ತು ಮಾನಸಿಕವಾಗಿ ಎರಡು ಹೋಳಾಗಿದೆ. ಎರಡು ಗುಂಪುಗಳ ನಡುವೆ ಅರ್ಥಪೂರ್ಣವಾದ ಸಂವಾದ ಸಾಧ್ಯವಾಗುತ್ತಿಲ್ಲ. ರಾಜ್ಯ ಸರ್ಕಾರದ ಮೇಲೆ, ಮುಖ್ಯಮಂತ್ರಿಯ ಮೇಲೆ ವಿಶ್ವಾಸ ಉಳಿದಿಲ್ಲ. ಕ್ಷಮೆ ಯಾಚನೆಗೆ ಅರ್ಥ ಬರಬೇಕು ಎಂದಾದರೆ, ಆಗಿರುವುದಕ್ಕೆ ಹೊಣೆ ಹೊತ್ತುಕೊಳ್ಳುವ ಕೆಲಸವೂ ಅದರ ಜೊತೆಯಲ್ಲೇ ಆಗಬೇಕು. ಹೊಣೆಗೆ ಅನುಗುಣವಾಗಿ ಕೆಲಸಗಳೂ ಆಗಬೇಕು. ಪ್ರಜಾತಂತ್ರದಲ್ಲಿ ಉತ್ತರದಾಯಿತ್ವಕ್ಕೆ ಬಹಳ ಬೆಲೆ ಇದೆ.

ದಿನದ ಟ್ವೀಟ್

ಜೀನ್ಸ್ 'ರಾಜಧಾನಿ'ಗೆ ಸಿಗಲಿ ಬೆಂಬಲ

ಭಾರತದ ಜೀನ್ಸ್ ರಾಜಧಾನಿ ಎಂದು ಕರೆಯಲಾಗುವ ಕರ್ನಾಟಕದ ಬಳ್ಳಾರಿಗೆ ಜಾಗತಿಕವಾಗಿ ಹೆಚ್ಚಿನ ಪ್ರಮಾಣದಲ್ಲಿ ಜೀನ್ಸ್ ಆರ್ಡರ್‌ಗಳು ಬರುತ್ತಿವೆ. ಬಾಂಗ್ಲಾದೇಶದಲ್ಲಿನ ರಾಜಕೀಯ ಅನಿಶ್ಚಿತ ಸ್ಥಿತಿ ಇದಕ್ಕೆ ಕಾರಣ. 500 ಜೀನ್ಸ್ ತಯಾರಿಕಾ ಘಟಕಗಳಲ್ಲಿ ಪ್ರತಿ ಘಟಕವೂ ಶೇ 30ರಷ್ಟು ಬೆಳವಣಿಗೆಯೊಂದಿಗೆ ಸುಮಾರು ₹ 5 ಲಕ್ಷದಿಂದ ₹ 10 ಲಕ್ಷ ಲಾಭ ಗಳಿಸುತ್ತಿದೆ! ಸೂಕ್ತ ಬೆಂಬಲ ವ್ಯವಸ್ಥೆಯ ಮೂಲಕ ಈ ಅವಕಾಶವನ್ನು ಬಲಪಡಿಸಬೇಕಾದ ಅಗತ್ಯವಿದೆ.

ಮಹೇಶ್ ಬಿ.ಆರ್.

ಕಿಡಿನುಡಿ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರೀತಿಯ ಅಂಗಡಿ (ಮೊಹಬ್ಬತ್ ಕಿ ದುಕಾನ್) ಬಗ್ಗೆ ಮಾತನಾಡುತ್ತಾರೆ. ಆದರೆ, ಕಾಂಗ್ರೆಸ್ ಪಕ್ಷದ ರಾಜ್ಯ ನಾಯಕರು ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಇಲ್ಲಿ ಪ್ರೀತಿ ಮಾರಾಟವಾಗುತ್ತಿಲ್ಲ. ಅದೀಗ ಹತ್ಯೆ ಹಾಗೂ ಆತ್ಮಹತ್ಯೆಯ ಅಂಗಡಿಯಾಗಿದೆ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 3-1-2000

• ಜೀವಕ್ಕೆ ಕುತ್ತಾಗುತ್ತಿದ್ದ ಉಗ್ರರ ಮೇಲಿನ ದಾಳಿ ಯತ್ನ

ಹೈದರಾಬಾದ್, ಜ. 2 (ಪಿಟಿಐ)– 'ಮುಖವಾಡ ಧರಿಸಿದ್ದ ಅಪಹರಣಕಾರರ ಮೇಲೆ ವಿಮಾನದ ಸಿಬ್ಬಂದಿ ದಾಳಿ ನಡೆಸುವ ಯಾವುದೇ ಯತ್ನ ಮುಗ್ಧ ಪ್ರಯಾಣಿಕರ ಬದುಕಿಗೆ ಮಾರಕವಾಗುತ್ತಿತ್ತು' ಎಂದು ಅಪಹೃತ ವಿಮಾನದಲ್ಲಿದ್ದ ಗಗನಸಖಿ ಸ್ವಪ್ನಾ ಮೆನನ್ ಹೇಳಿದರು.

'ನನ್ನ ಪ್ರಾಣ ಕಳೆದುಕೊಳ್ಳಲು ನಾನು ಚಿಂತಿಸುತ್ತಿರಲಿಲ್ಲ. ಆದರೆ, ದಾಳಿ ನಡೆಸುವ ನಮ್ಮ ಯಾವುದೇ ಯತ್ನ ಪ್ರಯಾಣಿಕರ ಪ್ರಾಣವನ್ನು ಪಣಕ್ಕಿಟ್ಟಂತಾಗುತ್ತಿತ್ತು' ಎಂದು ಏಳು ರಾತ್ರಿ ಅಪಹೃತ ವಿಮಾನದಲ್ಲಿ ಕಳೆದು ಬಿಡುಗಡೆಯಾಗಿ ಮನೆಗೆ ಬಂದಿರುವ ಮೆನನ್ ತಮ್ಮ ತಾಯಿ ವಾಸಂತಿ ಅವರೊಡನೆ ನಿರುಮ್ಮಳರಾಗಿ ಸುದ್ದಿಸಂಸ್ಥೆಯೊಂದಿಗೆ ಮಾತನಾಡುತ್ತಾ ತಿಳಿಸಿದರು.

• ಪಾಕಿಸ್ತಾನಕ್ಕೆ ಬಂದರೆ ವಿಮಾನ ಅಪಹರಣಕಾರರ ಬಂಧನ

ಇಸ್ಲಾಮಾಬಾದ್, ಜ. 2 (ಪಿಟಿಐ)– 'ಇಂಡಿಯನ್ ಏರ್‌ಲೈನ್ಸ್'ನ ಅಪಹರಣಕಾರರು ಮತ್ತು ಭಾರತ ಬಿಡುಗಡೆ ಮಾಡಿದ ಉಗ್ರಗಾಮಿಗಳು ಪಾಕಿಸ್ತಾನವನ್ನು ಪ್ರವೇಶಿಸಿದಲ್ಲಿ ಅವರನ್ನು ಸೆರೆಹಿಡಿದು ಅಂತರರಾಷ್ಟ್ರೀಯ ಕಾನೂನಿನನ್ವಯ ವಿಚಾರಣೆ ನಡೆಸಲಾಗುವುದು ಎಂದು ಇಲ್ಲಿನ ಸರ್ಕಾರ ತಿಳಿಸಿದೆ.

ಆದರೆ, ಉಗ್ರಗಾಮಿಗಳು ಬಯಸಿದಲ್ಲಿ ತಮ್ಮ ಪ್ರಾಂತ್ಯಕ್ಕೆ ಬರಲು ಅನುಮತಿ ನೀಡಲಾಗುವುದು ಎಂದು ಪಾಕ್ ಆಕ್ರಮಿತ ಕಾಶ್ಮೀರದ ಪ್ರಧಾನಮಂತ್ರಿ ಹೇಳಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 3-1-1975

• ಅರಬ್ ಎಮಿರೇಟ್ಸ್‌ನಿಂದ ಕಚ್ಚಾತೈಲ ನಿರೀಕ್ಷೆ

ನವದೆಹಲಿ, ಜ. 2– ಭಾರತ ಮತ್ತು ಐಕ್ಯ ಅರಬ್ ಎಮಿರೇಟ್ಸ್ ಮಧ್ಯೆ ಹಣಕಾಸು, ವಿಜ್ಞಾನ ಮತ್ತು ತಾಂತ್ರಿಕ ಸಹಕಾರಕ್ಕಾಗಿ ಒಂದು ಜಂಟಿ ಆಯೋಗ ಶೀಘ್ರವೇ ಅಸ್ತಿತ್ವಕ್ಕೆ ಬರುತ್ತದೆ.

ಉಭಯ ರಾಷ್ಟ್ರಗಳ ನಿಯೋಗಗಳು ಇಂದು ಇಲ್ಲಿ ನಡೆಸಿದ ಇಡೀ ದಿನದ ಚರ್ಚೆ ನಂತರ, ಪರಸ್ಪರ ಸಹಕಾರಕ್ಕಾಗಿ ಜಂಟಿ ಆಯೋಗದ ನಿರ್ಧಾರ ಕೈಗೊಳ್ಳಲಾಯಿತು.

ನಿರ್ದಿಷ್ಟವಾದ ಐದು ವರ್ಷಗಳ ಅವಧಿಗೆ ಸುಲಭ ಪಾವತಿ ಷರತ್ತಿನ ಮೇಲೆ ಭಾರತಕ್ಕೆ ಕಚ್ಚಾ ಎಣ್ಣೆ ಸರಬರಾಜು ಸಲಹೆಗೆ ಐಕ್ಯ ಅರಬ್ ಎಮಿರೇಟ್ಸ್ (ಯು.ಎ.ಇ) ಸಮ್ಮತಿಸುವ ಸಂಭವವಿದೆ.

ಐಕ್ಯ ಅರಬ್ ಎಮಿರೇಟ್ಸ್‌ನ ಪೆಟ್ರೋಲಿಯಂ ಮತ್ತು ಕೈಗಾರಿಕೆ ಸಚಿವ ಮಾನಾ ಸಯೀದ್ ಅಲ್ ಒಟ್ಟೈಬಾ ಅವರು ಇಂದು ಬೆಳಿಗ್ಗೆ ಇಲ್ಲಿ ಭಾರತದ ಪೆಟ್ರೋಲಿಯಂ ಮತ್ತು ರಾಸಾಯನಿಕ ಸಚಿವರಾದ ಕೆ.ಡಿ. ಮಾಳವೀಯ ಅವರ ಜತೆ ನಡೆಸಿದ ಚರ್ಚೆಯಲ್ಲಿ ಈ ಬಗ್ಗೆ ಸೂಚನೆ ಸಿಕ್ಕಿತು.

• ಪಗಾರಕ್ಕೆ ಪರದಾಟ

ಹುಬ್ಬಳ್ಳಿ, ಜ. 2– ಹೊಸ ವರ್ಷದ ಪ್ರಥಮ ದಿನವಾದ ನಿನ್ನೆ ಇಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ನೌಕರರು 'ನಿಯಮದಷ್ಟು ಮಾತ್ರ ಕೆಲಸ'ದ ಧೋರಣೆಯನ್ನು ಅನುಸರಿಸಿದ ಪರಿಣಾಮವಾಗಿ, 5 ಸಹಸ್ರ ಮಂದಿ ಸರ್ಕಾರಿ ನೌಕರರಿಗೆ ವೇತನ ಹಾಗೂ 4 ಸಹಸ್ರ ಮಂದಿಗೆ ನಿವೃತ್ತಿ ವೇತನ ದೊರೆಯಲಿಲ್ಲ.

ಆದಾಗ್ಯೂ ತಾಲ್ಲೂಕು ಉಪ ಖಜಾನೆ ಅಧಿಕಾರಿಗಳು ಮಧ್ಯಾಹ್ನ 1 ಗಂಟೆ ಹೊತ್ತಿಗೆ ಸ್ಟೇಟ್ ಬ್ಯಾಂಕಿನಿಂದ ಹಣ ಪಡೆದು ರಾತ್ರಿ ಬಹಳ ಹೊತ್ತಿನವರೆಗೆ ಸುಮಾರು 2 ಸಹಸ್ರ ಮಂದಿಗೆ ವೇತನ ಪಾವತಿಸಿ, ಬೆಳಗಿನ ಜಾವ ಎರಡು ಗಂಟೆಗೆ ಖಜಾನೆಯನ್ನು ಮುಚ್ಚಿದರೆಂದು ಹೇಳಲಾಗಿದೆ.

ಡಿಎಂಕೆ ಒತ್ತಡಕ್ಕೆ ಮನಮೋಹನ ಸಿಂಗ್ ಯಾಕೆ ಮಣಿದರು?

ಇತಿಹಾಸದಲ್ಲಿ ದಾಖಲಾಗದ ಸತ್ಯ

ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

'ವರ್ತಮಾನದ ಮಾಧ್ಯಮ ಮತ್ತು ವಿರೋಧ ಪಕ್ಷಗಳಿಗಿಂತ ಇತಿಹಾಸ ನನ್ನ ಬಗ್ಗೆ ಕರುಣಾಮಯಿಯಾಗಿರುತ್ತದೆ' ಎಂಬ ಭರವಸೆಯನ್ನು ಪ್ರಧಾನಿಯಾಗಿ ತಾವು ಎದುರಿಸಿದ್ದ ಕೊನೆಯ ಪತ್ರಿಕಾಗೋಷ್ಠಿಯಲ್ಲಿ ಮನಮೋಹನ ಸಿಂಗ್ ವ್ಯಕ್ತಪಡಿಸಿದ್ದರು. ಆದರೆ ಇತಿಹಾಸ ಸತ್ಯವನ್ನು ಸೃಷ್ಟಿಸುವುದಿಲ್ಲ, ದಾಖಲಿಸುತ್ತದೆ ಅಷ್ಟೆ. ಸತ್ಯ ಎನ್ನುವುದು ಸಾಪೇಕ್ಷವಾಗಿರುವ ಕಾರಣ, ಇತಿಹಾಸದಲ್ಲಿ ದಾಖಲಾಗುವ ಸತ್ಯ ಕೂಡಾ ಅರ್ಧಸತ್ಯವಾಗಿರುವ ಸಾಧ್ಯತೆಯೇ ಹೆಚ್ಚು.

ಅಂತಹದ್ದೊಂದು ಸತ್ಯ- ಪ್ರಧಾನಿಯಾಗಿದ್ದ ಮನಮೋಹನ ಸಿಂಗ್ ಮತ್ತು ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಸೋನಿಯಾ ಗಾಂಧಿ ಅವರ ನಡುವಿನ ಸಂಬಂಧ. ಇವರಿಬ್ಬರೂ ಈ ಬಗ್ಗೆ ಮುಕ್ತವಾಗಿ ಮಾತನಾಡಿಲ್ಲ. ಮೂರನೆಯವರ ಬರಹ ಮತ್ತು ಮಾತುಗಳ ಆಧಾರದಲ್ಲಿಯೇ ಇಬ್ಬರ ಸಂಬಂಧವನ್ನು ವ್ಯಾಖ್ಯಾನ ಮಾಡಲಾಗುತ್ತಿದೆ. ಇಲ್ಲಿಯವರೆಗೆ ಜಗತ್ತಿಗೆ ತಿಳಿಯದೇ ಇದ್ದ ಸತ್ಯವನ್ನು ಸೋನಿಯಾ ಅವರು ಈಗ ಹೊರಹಾಕಿದರೂ ಅದರ ದೃಢೀಕರಣ ಇಲ್ಲವೇ ನಿರಾಕರಣೆಗೆ ಸಿಂಗ್ ಅವರು ಈಗ ಇಲ್ಲದೇ ಇರುವ ಕಾರಣ ಅದು ಕೂಡಾ ಅರ್ಧಸತ್ಯವಾಗಿರುತ್ತದೆ.

ಆದ್ದರಿಂದ ಈ ವಿಷಯಕ್ಕೆ ಸಂಬಂಧಿಸಿದ ಸತ್ಯವು ಇತಿಹಾಸದ ಪುಟದಲ್ಲಿ ದಾಖಲಾಗದೆ ಹೋಗುವ ಸಾಧ್ಯತೆಯೇ ಹೆಚ್ಚು. ಆದರೆ ಎಲ್ಲರೂ ಒಪ್ಪಿಕೊಳ್ಳಲೇಬೇಕಾಗಿರುವ ಒಂದು ಸತ್ಯ ಇದೆ. ಅದು, ಪ್ರಧಾನ ಮಂತ್ರಿಯಾಗಿ ಮನಮೋಹನ ಸಿಂಗ್ ಮತ್ತು ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿ ಸೋನಿಯಾ ಗಾಂಧಿ ಇಲ್ಲದೇ ಹೋಗಿದ್ದರೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಎರಡು ಅವಧಿಗೆ ಬಿಡಿ, ಮೊದಲನೆಯ ಅವಧಿಯನ್ನೂ ಪೂರ್ಣಗೊಳಿಸುತ್ತಿರಲಿಲ್ಲ ಎಂಬ ಸತ್ಯ.

ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಅದರ ಮುಂದಿರುವ ಸವಾಲುಗಳಲ್ಲಿ ಮೊದಲನೆಯದು, ಸರ್ಕಾರ ನಡೆಸುವುದು. ಎರಡನೆಯದು, ಪಕ್ಷವನ್ನು ಸಂಭಾಳಿಸುವುದು. ಮೈತ್ರಿ ಸರ್ಕಾರದಲ್ಲಿ ಇದು ಇನ್ನೂ ಹೆಚ್ಚು ಸವಾಲಿನ ಕೆಲಸ. ಈ ಎರಡು ಕೆಲಸಗಳನ್ನು ಮಾಡಲು ಇವರಿಬ್ಬರ ನಡುವೆ ಪರಸ್ಪರ ಒಪ್ಪಿತವಾದ, ಪರಿಪೂರ್ಣವಾದ ಶ್ರಮವಿಭಜನೆಯ ವ್ಯವಸ್ಥೆ ಇತ್ತು. ಸರ್ಕಾರ ನಡೆಸುವ ಕೆಲಸ ಪ್ರಧಾನಿಯವರದ್ದು, ಮೈತ್ರಿಕೂಟವನ್ನು ಸಂಭಾಳಿಸಿಕೊಂಡು ಹೋಗುವ ಹೊಣೆ ಕಾಂಗ್ರೆಸ್ ಅಧ್ಯಕ್ಷರದ್ದಾಗಿತ್ತು. ಆ ಕಾಲದಲ್ಲಿ ಇದ್ದದ್ದು ಈಗಿನ ಸೋನಿಯಾ ಅಲ್ಲ. 2004ರ ಲೋಕಸಭಾ ಚುನಾವಣೆಯಲ್ಲಿ ಯಾರೂ ನಿರೀಕ್ಷಿಸದೇ ಇದ್ದ ಗೆಲುವು ತಂದುಕೊಟ್ಟ ಸೋನಿಯಾ ಅವರು ಜಗತ್ತಿನ ಆ ಕಾಲದ ಅತ್ಯಂತ ಪ್ರಭಾವಶಾಲಿ ನಾಯಕರಲ್ಲೊಬ್ಬರು ಎಂದು ಕೊಂಡಾಡುವ ಮಟ್ಟಿಗೆ ಅವರ ಪ್ರಭಾವಳಿ ಬೆಳೆದಿತ್ತು. ಇದರ ಜೊತೆಗೆ ಮನೆಬಾಗಿಲಿಗೆ ಬಂದಿದ್ದ ಪ್ರಧಾನಿ ಪಟ್ಟವನ್ನು ಬಿಟ್ಟುಕೊಟ್ಟ ಅವರ ಅಪರೂಪದ ನಡವಳಿಕೆ ಕಾಂಗ್ರೆಸ್ ಪಕ್ಷದೊಳಗೆ ಮಾತ್ರವಲ್ಲ ಮಿತ್ರಪಕ್ಷಗಳ ನಡುವೆಯೂ ಅವರಿಗೆ ಗೌರವದ ಸ್ಥಾನವನ್ನು ತಂದುಕೊಟ್ಟಿತ್ತು. ಇಂದಿಗೂ ಬಿಜೆಪಿಯೇತರ ಪಕ್ಷಗಳ ಜೊತೆಯಲ್ಲಿ ಸೋನಿಯಾ ಗಾಂಧಿ ಅವರಿಗೆ ಹಾರ್ದಿಕವಾದ ಸಂಬಂಧ ಇದೆ. ನಾಳೆ ಅವರು ಮಮತಾ ಬ್ಯಾನರ್ಜಿ ಅವರಿಂದ ಹಿಡಿದು ಮಾಯಾವತಿ ಅವರವರೆಗೆ ಯಾರನ್ನೇ ಊಟ- ತಿಂಡಿಗೆ ಕರೆದರೂ ಅವರು ಖಂಡಿತ ಹಾಜರಾಗುತ್ತಾರೆ.

ಸೋನಿಯಾ ಅವರ ಎದುರಿಗೆ ತಮ್ಮ ಪಕ್ಷ ಮತ್ತು ಮಿತ್ರಪಕ್ಷಗಳ ನಾಯಕರ ಭಿನ್ನದನಿಗಳನ್ನು ಸಂಭಾಳಿಸಿಕೊಂಡು ಹೋಗುವ ಕಠಿಣ ಸವಾಲಿತ್ತು. ಸಿಂಗ್ ಅವರು ಕಾಂಗ್ರೆಸ್ ಪಕ್ಷ ಇಲ್ಲವೇ ಮಿತ್ರಪಕ್ಷಗಳ ಸರ್ವಾನುಮತದ ಆಯ್ಕೆಯಾಗಿರಲಿಲ್ಲ. ಪ್ರಧಾನಿ ಪಟ್ಟದ ಆಕಾಂಕ್ಷಿಗಳಾಗಿದ್ದ ಪ್ರಣವ್ ಮುಖರ್ಜಿ, ಅರ್ಜುನ್ ಸಿಂಗ್, ನಟವರ್ ಸಿಂಗ್ ಸೇರಿದಂತೆ ಬಹುತೇಕ ಹಿರಿಯ ನಾಯಕರು ಮನಮೋಹನ ಸಿಂಗ್ ಆಯ್ಕೆಯಿಂದ ಅಸಂತುಷ್ಟರಾಗಿದ್ದರು. ಮಿತ್ರಪಕ್ಷಗಳಲ್ಲಿ 61 ಸದಸ್ಯರ ನಿರ್ಣಾಯಕ ಸಂಖ್ಯಾಬಲದ ಎಡಪಕ್ಷಗಳು ಮತ್ತು ಮನಮೋಹನ ಸಿಂಗ್ ನಡುವಿನ ಸೈದ್ಧಾಂತಿಕ ಸಂಘರ್ಷ ಯಾವುದೇ ಕ್ಷಣದಲ್ಲಿ ಸ್ಫೋಟಗೊಳ್ಳುವಂತಿತ್ತು. ಸೋನಿಯಾ ಅವರಂತಹ ಒಂದು ರಕ್ಷಣಾ ಕೋಟೆ ಇಲ್ಲದೇ ಹೋಗಿದ್ದರೆ ಸಿಂಗ್ ಮೊದಲ ಆರು ತಿಂಗಳಲ್ಲಿಯೇ ಪ್ರಧಾನಿ ಪಟ್ಟ ತೊರೆದು, ಪಾಠ ಮಾಡಲು ಯಾವುದಾದರೂ ಯೂನಿವರ್ಸಿಟಿ ಹುಡುಕಿಕೊಂಡು ಹೋಗುತ್ತಿದ್ದರು.

ಹಣಕಾಸು ಸಚಿವರಾಗಿ ನೆಹರೂಪ್ರಣೀತ ಸಮಾಜವಾದಿ ಆರ್ಥಿಕ ಚಿಂತನೆಯಿಂದ ಕಾಂಗ್ರೆಸ್ ಪಕ್ಷವನ್ನು ಮಾರುಕಟ್ಟೆ ಆರ್ಥಿಕ ನೀತಿಯ ಕಡೆಗೆ ಎಳೆದುಕೊಂಡು ಹೋಗುತ್ತಿದ್ದ ಸಿಂಗ್ ಅವರನ್ನು ನಿಯಂತ್ರಣದಲ್ಲಿ ಇಟ್ಟಿದ್ದು ಕೂಡಾ ಸೋನಿಯಾ ಅವರೇ. ಇಂದು ಯುಪಿಎ ಸರ್ಕಾರದ ಸಾಧನೆಗಳೆಂದು ಬಿಂಬಿಸಲಾಗುತ್ತಿರುವ ಆಹಾರದ ಹಕ್ಕು, ಶಿಕ್ಷಣದ ಹಕ್ಕು, ಮಾಹಿತಿ ಹಕ್ಕು ಮತ್ತು ನರೇಗಾ ಯೋಜನೆಗಳು ಸೋನಿಯಾ ಅಧ್ಯಕ್ಷರಾಗಿದ್ದ ರಾಷ್ಟ್ರೀಯ ಸಲಹಾ ಮಂಡಳಿಯ ಮೂಸೆಯಿಂದ ರೂಪುಗೊಂಡಂತಹವು. ಆ ಮಂಡಳಿಯ ಅಧ್ಯಕ್ಷೆಯಾಗಿದ್ದ ಸೋನಿಯಾ ಅವರನ್ನು ಟೀಕಿಸುವ ಭರದಲ್ಲಿ ಎಂ.ಎಸ್.ಸ್ವಾಮಿನಾಥನ್, ಹರ್ಷ ಮಂದರ್, ಅರುಣಾ ರಾಯ್, ಜೀನ್ ಡ್ರೀಜ್ ಅವರಂತಹ ಚಿಂತಕರು, ತಜ್ಞರು ಮಂಡಳಿಯ ಸದಸ್ಯರಾಗಿದ್ದದ್ದನ್ನು ಕೂಡಾ ಬಹಳ ಜನ ಮರೆತೇಬಿಟ್ಟಿದ್ದಾರೆ.

ಅಷ್ಟೊತ್ತಿಗೆ ಅನುಭವದಿಂದ ಮಾಗಿದ್ದ ಸಿಂಗ್ ಅವರೊಳಗೆ ತಮ್ಮ ಹೊಸ ಆರ್ಥಿಕ ನೀತಿಯ ತಪ್ಪು-ಒಪ್ಪುಗಳ ವಿಶ್ಲೇಷಣೆ ನಡೆದಿರಬಹುದು. ಮೂಲಭೂತವಾಗಿ ಜನಪರವಾಗಿ ಯೋಚಿಸಬಲ್ಲ ಒಬ್ಬ ಒಳ್ಳೆಯ ಮನುಷ್ಯರಾಗಿದ್ದ ಸಿಂಗ್ ಅವರಲ್ಲಿ, ಸರ್ಕಾರವು ಹೊಸ ಆರ್ಥಿಕ ನೀತಿಯ ಅನುಕೂಲಗಳಿಂದ ಹೊರಗೆ ಉಳಿದಿರುವ ಜನರನ್ನು ಕೂಡ ತಲುಪಬೇಕೆಂಬ ಅರಿವು ಹುಟ್ಟಿರಬಹುದು. ಸಿಪಿಎಂ ನಾಯಕ ಸೀತಾರಾಮ್ ಯೆಚೂರಿ ಅಧ್ಯಕ್ಷತೆಯ ಸಮಿತಿಯು ಯುಪಿಎಗಾಗಿ ರಚಿಸಿದ್ದ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ಗಳನ್ನು ಒಪ್ಪಿಕೊಂಡದ್ದು ಮಾತ್ರವಲ್ಲ ಅವುಗಳ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದುದು ಸಿಂಗ್ ಅವರೊಳಗಿನ ಬದಲಾವಣೆಗೆ ಒಂದು ಉದಾಹರಣೆ.

ಇದರ ಅರ್ಥ ಎಡಪಕ್ಷಗಳ ಆರ್ಥಿಕ ಸಿದ್ಧಾಂತವನ್ನು ಅವರು ಒಪ್ಪಿಕೊಂಡಿದ್ದರೆಂದಲ್ಲ, ಯುಪಿಎ ಉಳಿವಿಗೆ ಅವುಗಳ ಬೆಂಬಲದ ಅಗತ್ಯವಿದೆ ಎಂಬ ರಾಜಕೀಯ ವಾಸ್ತವ ಅವರಿಗೆ ಮನವರಿಕೆಯಾಗಿತ್ತು. ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ವಿಮಾ ಕಂಪನಿಗಳ ಖಾಸಗೀಕರಣವನ್ನು ಎಡಪಕ್ಷಗಳು ತೀವ್ರವಾಗಿ ವಿರೋಧಿಸಿದಾಗಲೂ ಮನಮೋಹನ ಸಿಂಗ್ ಜಿದ್ದಿಗೆ ಬೀಳದೆ ಹಿಂದೆ ಸರಿದಿದ್ದರು.

ಆರ್ಥಿಕ ನೀತಿಯ ಈ ಎಡ- ಬಲ ಸಿದ್ಧಾಂತಗಳ ಸಂಘರ್ಷದಿಂದ ಸರ್ಕಾರಕ್ಕೆ ಹಾನಿಯಾಗದಂತೆ ಮಾಡಿದ್ದು ಕೂಡ ಸೋನಿಯಾ ಅವರ ಕೆಲಸವೇ ಆಗಿತ್ತು. ಇವರಿಬ್ಬರ ನಡುವಿನ ಸಂಬಂಧದ ನಿಜವಾದ ಅಗ್ನಿಪರೀಕ್ಷೆ ಎದುರಾಗಿದ್ದದ್ದು ಅಮೆರಿಕದ ಜೊತೆಗಿನ ನಾಗರಿಕ ಪರಮಾಣು ಒಪ್ಪಂದದ ಸಮಯದಲ್ಲಿ. ಎಡಪಕ್ಷಗಳ ಬಹುತೇಕ ಆದೇಶಗಳನ್ನು ಪಾಲಿಸುತ್ತಾ ಬಂದಿದ್ದ ಪ್ರಧಾನಿ ಮನಮೋಹನ ಸಿಂಗ್ ಈ ಒಪ್ಪಂದದ ಬಗ್ಗೆ ಮಾತ್ರ ಹಟಮಾರಿಯಾಗಿ ಬಿಟ್ಟಿದ್ದರು. ಕೋಲ್ಕತ್ತದ ಪತ್ರಿಕೆಯೊಂದರ ಮಹಿಳಾ ವರದಿಗಾರರ ಜೊತೆ ಮಾತನಾಡುತ್ತಾ 'ನೀವು ಬೆಂಬಲ ವಾಪಸು ಪಡೆಯುವುದಿದ್ದರೆ, ಹಾಗೇ ಮಾಡಿ' ಎಂದು ಎಡಪಕ್ಷಗಳಿಗೆ ಸವಾಲು ಎಸೆದು ದೇಶದಾದ್ಯಂತ ಸಂಚಲನ ಸೃಷ್ಟಿಸಿದ್ದರು.

ಮೊದಲನೆಯದಾಗಿ, ನೆಹರೂ ಅವರ ಅಲಿಪ್ತ ನೀತಿಯಿಂದ ದೂರ ಸರಿದು ಅಮೆರಿಕದ ಜೊತೆ ಆ ಮಟ್ಟದ ಮಿತ್ರತ್ವ ಬೆಳೆಸುವುದು ಕಾಂಗ್ರೆಸ್ ಪಕ್ಷದ ಒಪ್ಪಿತ ನೀತಿಗೆ ವಿರುದ್ಧವಾಗಿತ್ತು. ಎರಡನೆಯದಾಗಿ, ಯುಪಿಎ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿಯೂ ಇರದೇ ಇದ್ದ ಪರಮಾಣು ಒಪ್ಪಂದದ ಕಾರಣಕ್ಕೆ ಎಡಪಕ್ಷಗಳನ್ನು ಎದುರು ಹಾಕಿಕೊಂಡು ಸರ್ಕಾರವನ್ನು ಕಳೆದುಕೊಳ್ಳುವುದು ಸೋನಿಯಾ ಅವರನ್ನೂ ಒಳಗೊಂಡಂತೆ ಯುಪಿಎಯಲ್ಲಿ ಯಾರಿಗೂ ಬೇಕಾಗಿರಲಿಲ್ಲ. ಇದರ ಹೊರತಾಗಿಯೂ ಸೋನಿಯಾ ಅವರು ಮನಮೋಹನ ಸಿಂಗ್ ಅವರ ನಿಲುವಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿ ಅವರ ಪರವಾಗಿ ಗಟ್ಟಿಯಾಗಿ ನಿಂತಿದ್ದರು.

ನಾಗರಿಕ ಪರಮಾಣು ಒಪ್ಪಂದಕ್ಕೆ ಸಂಬಂಧಿಸಿದಂತೆ ಸರ್ಕಾರದ ಪತನಕ್ಕೂ ಸಿದ್ಧರಾಗಿದ್ದ ಸಿಂಗ್, 2ಜಿ ಸ್ಪೆಕ್ಟ್ರಮ್ ಪರವಾನಗಿಗೆ ಸಂಬಂಧಿಸಿದಂತೆ ಡಿಎಂಕೆ ಒತ್ತಡಕ್ಕೆ ಯಾಕೆ ಮಣಿದರು ಎನ್ನುವ ಯಕ್ಷಪ್ರಶ್ನೆ ಹಾಗೆಯೇ ಉಳಿದಿದೆ. ಯಾಕೆಂದರೆ ಸೋನಿಯಾ ಅವರಿಗೆ ಡಿಎಂಕೆ ಜೊತೆ ಎಡಪಕ್ಷಗಳಷ್ಟು ಆಪ್ತ ಸಂಬಂಧ ಇರಲಿಲ್ಲ. ಒಂದೊಮ್ಮೆ ಮನಮೋಹನ ಸಿಂಗ್ ಅವರು ಡಿಎಂಕೆ ವಿರುದ್ಧ ತಿರುಗಿಬಿದ್ದಿದ್ದರೂ ಸೋನಿಯಾ ಬೆಂಬಲಿಸುತ್ತಿದ್ದರು. ಹೀಗಿದ್ದರೂ ಸಿಂಗ್ ಯಾಕೆ ತಿರುಗಿಬೀಳಲಿಲ್ಲ? ಕೊನೆಯ ದಿನಗಳಲ್ಲಿ ಅವರನ್ನೂ ಅಧಿಕಾರದ ಮೋಹ ಆವರಿಸಿತ್ತೇ? ಅವರಿಗಷ್ಟೇ ಗೊತ್ತಿದ್ದ ಈ ಸತ್ಯ ಇತಿಹಾಸದ ಪುಟದಲ್ಲಿ ದಾಖಲಾಗಲಾರದು.

ಚುರುಮುರಿ

ಬದಲಾದ ದಿಕ್ಕು!

• ಬಿ.ಎನ್.ಮಲ್ಲೇಶ್

'ಮೊನ್ನೆ ಹೊಸ ವರ್ಷದಲ್ಲಿ ನಮ್ಮ ಎಣ್ಣೆವೀರರು ಹಾರಿಸಿದ ಗುಂಡಿಗೆ ಸರ್ಕಾರದ ಖಜಾನೆ ತುಂಬೋತಂತಪ. ಒಂದೇ ದಿನ 308 ಕೋಟಿ ರೂಪಾಯಿ ಗುಂಡು ವ್ಯಾಪಾರ ಆತಂತೆ' ದುಬ್ಬೀರ ವರದಿ ಒಪ್ಪಿಸಿದ.

'ಎಣ್ಣೆವೀರರಾ? ಕುಡುಕರು ಅನ್ನು. ಫುಲ್ ಟೈಟಾಗಿ ಗಟಾರದಾಗೆಲ್ಲ ಬಿದ್ದು ಎದ್ದು ತೇಲಾಡ್ತಿದ್ರು' ಮಂಜಮ್ಮ ನಕ್ಕಳು.

'ಕುಡುಕರು ಅಂದ್ರೆ ಸರಿ ಇರಲ್ಲ ನೋಡು, ಆಪತ್ಬಾಂಧವರು ಅನ್ನು. ಸರ್ಕಾರದ ಕಷ್ಟಕ್ಕೆ ದುಡ್ಡು ಕೊಡೋರು ಅವರು. ತಮ್ಮ ಲಿವರ್ ಹಾಳಾದ್ರೂ ಸರ್ಕಾರಕ್ಕೆ ಪವರ್, ಅಂದ್ರೆ ಶಕ್ತಿ ತುಂಬೋರು, ದಿಕ್ಕು ತೋರಿಸೋರು' ಗುಡ್ಡೆ ಆಕ್ಷೇಪಿಸಿದ.

'ದಿಕ್ಕು ತೋರಿಸೋರಲ್ಲ, ದಿಕ್ಕು ತಪ್ಪಿಸೋರು ಅನ್ನು'.

'ಸದ್ಯ ದಿಕ್ಕು ತಪ್ಪದೇ ಇರೋರು ಯಾರದಾರೆ ಮಂಜಮ್ಮ, ಸೂರ್ಯನೇ ಸಂಕ್ರಾಂತಿ ಟೈಮಿಗೆ ದಿಕ್ಕು ಬದಲಿಸ್ತಾನಂತೆ, ಇನ್ನು ನಾವೆಲ್ಲ ಯಾವ ಲೆಕ್ಕ?' ಎಂದ ತೆಪರೇಸಿ.

'ಈಗ ಹೊಸ ವರ್ಷದಾಗೆ ಯಾರ್ಯಾರು ದಿಕ್ಕು ಬದಲಿಸಬಹುದು ಹೇಳ್ರಪ್ಪ' ಕೊಟ್ರೇಶಿ ಕೊಕ್ಕೆ.

'ಹೈಕಮಾಂಡ್ ಹೇಳಿದ್ರೆ ನಮ್ ಯತ್ನಾಳ್ ಸಾಹೇಬ್ರು ದಿಕ್ಕು ಬದಲಿಸಬಹುದು, ಕಾಂಗ್ರೆಸ್‌ನೋರು ಆಪರೇಷನ್ ಮಾಡಿದ್ರೆ ಬಿಜೆಪಿ, ಜೆಡಿಎಸ್‌ನ ಕೆಲವರು ದಿಕ್ಕು ಬದಲಿಸಬಹುದು' ಗುಡ್ಡೆ ಹೇಳಿದ.

'ಕಾಂಗ್ರೆಸ್ ಸರ್ಕಾರದ ದಿಕ್ಕೇನಾದ್ರೂ ಬದಲಾಗಬೋದಾ? ಮಂತ್ರಿಗಳು, ಅಧ್ಯಕ್ಷರು ಬದಲಾಗಬೋದಾ?' ದುಬ್ಬೀರ ಕೇಳಿದ.

'ಏನೋಪ್ಪ, ದಿಕ್ಕು ಬದಲಾಗೋವು ಬಾಳದಾವೆ. ನಮ್ ಕ್ರಿಕೆಟ್ ಟೀಮ್ ಯಾಕೋ ದಿಕ್ಕು ತಪ್ಪೇತಿ, ಅದರ ದಿಕ್ಕು ಬದಲಾಗಬೋದು. ಅಲ್ಲಿ ನಿತೀಶ್ ಕುಮಾರ್ ಯಾಕೋ ದಿಕ್ಕು ಬದಲಿಸೋ ಹಂಗೆ ಕಾಣುಸ್ತತಿ. ಇಲ್ಲಿ ಜೆಡಿಎಸ್ ಪಕ್ಷಕ್ಕೆ ಹೊಸ ದಿಕ್ಕು ತೋರಿಸೋರು ಬರಬೋದು'.

'ನಮ್ ಹರಟೆಕಟ್ಟೆ ದಿಕ್ಕೇನಾದ್ರೂ ಬದಲಾಗಬೋದಾ?' ಮಂಜಮ್ಮ ಕೇಳಿದಳು.

'ಯಾರ ದಿಕ್ಕು ಬದಲಾದ್ರೂ ನಮ್ಮಗಳ ದಿಕ್ಕು, ಈ ಮಂಜಮ್ಮನ ಬಾಕಿ ಲೆಕ್ಕದ ಬುಕ್ಕು ಯಾವತ್ತಿಗೂ ಬದಲಾಗಲ್ಲ ಬಿಡ್ರಲೆ' ಎಂದ ಗುಡ್ಡೆ.

ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಇರಲಿ ಆಕಾಶವಾಣಿಯ ಸಾಂಗತ್ಯ

ಯುವಜನರಿಗೆ ಮತ್ತು ಸ್ಥಿತ್ಯಂತರ ಕಾಲದಲ್ಲಿ ಆಕಾಶವಾಣಿಯ ಸಾಂಗತ್ಯ ತೊರೆದ ಕೇಳುಗರಿಗೆ ಈ ಮಾಧ್ಯಮದ ಮರು ಪರಿಚಯದ ಅಗತ್ಯವಿದೆ

• ಹರೀಶ್ ಕುಮಾರ್ ಕುಡ್ತಡ್ಕ

ಆಕಾಶವಾಣಿಗೆ ಜನ ಕಿವಿಗೊಡುತ್ತಾ ತಮ್ಮ ದಿನಚರಿಯನ್ನು ಪ್ರಾರಂಭಿಸುತ್ತಿದ್ದಂತಹ ಕಾಲವೊಂದಿತ್ತು. ಬೆಳಿಗ್ಗೆ ಆಕಾಶವಾಣಿ ಕಾರ್ಯಾರಂಭಿಸಲು ತೊಡಗುತ್ತಿದ್ದಂತೆ ಶುರುವಾಗುತ್ತಿದ್ದ ಧ್ವನಿಮುದ್ರಿತ ಸಂಗೀತದ 'ಸಿಗ್ನೇಚರ್ ಟೋನ್' ದಿನಚರಿಗೆ ಮುನ್ನುಡಿ ಹಾಕುವಂತೆ ಇರುತ್ತಿತ್ತು. ಆದರೆ ಇಂದು ಆಕಾಶವಾಣಿ ಆಲಿಸುವವರ ಸಂಖ್ಯೆ ಇಳಿಮುಖವಾಗಿದೆ. ಒಂದು ತಲೆಮಾರನ್ನು ಜ್ಞಾನ, ಮಾಹಿತಿ, ಮನರಂಜನೆಯ ಮೂಲಕ ಪೊರೆದಿದ್ದ ಆಕಾಶವಾಣಿ ಇಂದು ದೃಶ್ಯ ಮಾಧ್ಯಮಗಳ ಪ್ರಭಾವ, ಆಕರ್ಷಣೆಗಳ ಮುಂದೆ ಬಸವಳಿದಿದೆ.

ಇಂದಿನ ಯುವಜನ ಟಿ.ವಿ., ಮೊಬೈಲ್ ಫೋನ್ ಬಳಕೆಯ ನಡುವೆ ಆಗೊಮ್ಮೆ ಈಗೊಮ್ಮೆ ಎಫ್.ಎಂ. ರೇಡಿಯೊಗೆ ಕಿವಿಗೊಟ್ಟಿರಬಹುದು. ಆದರೆ ಇವರಿಗೆ ಆಕಾಶವಾಣಿಯಂತಹ ಉಪಯುಕ್ತ ಮಾಧ್ಯಮ ಹತ್ತಿರವಾದಂತೆ ಕಂಡುಬರುತ್ತಿಲ್ಲ.

ಬದಲಾವಣೆ ಜಗದ ನಿಯಮ. ಕಾಲದ ಪರೀಕ್ಷೆಯಲ್ಲಿ ಯಾವುದು ಉಳಿಯುತ್ತದೆ, ಯಾವುದು ಅಳಿಯುತ್ತದೆ ಎಂದು ಹೇಳಲು ಬರುವುದಿಲ್ಲ. ಇದಕ್ಕೆ ಆಕಾಶವಾಣಿಯೂ ಹೊರತಲ್ಲ. ಆದರೆ ಅದು ಸಮಕಾಲೀನ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಮುಂದೆ ಸಾಗುತ್ತಿದೆ. ಒಂದು ಕಾಲದಲ್ಲಿ ಸುದ್ದಿ, ಮಾಹಿತಿ, ಮನರಂಜನೆಯಂತಹ ಕ್ಷೇತ್ರಗಳ ಏಕಮೇವಾ ಮಾಧ್ಯಮವಾಗಿ ಮೆರೆದಿದ್ದ ಆಕಾಶವಾಣಿ ತನ್ನ ಅಭಿಮಾನಿ ಕೇಳುಗರನ್ನು ಯಾವತ್ತೂ ನಿರಾಸೆಗೊಳಿಸಿಲ್ಲ. ಇದು ಅದರ ಹೆಗ್ಗಳಿಕೆ ಮಾತ್ರವಲ್ಲ ಅದರ ಪ್ರಸ್ತುತ ಸ್ಥಾನಮಾನ, ಮಹತ್ವವನ್ನೂ ಸಾರುವಂತಿದೆ.

ಆಕಾಶವಾಣಿಯಲ್ಲಿ ಹಿಂದೆ ಪ್ರಸಾರವಾಗುತ್ತಿದ್ದ ವಾರ್ತೆಗಳು, ನಾಟಕಗಳು, ಚಲನಚಿತ್ರ ಗೀತೆಗಳು, ಕ್ರಿಕೆಟ್ ವೀಕ್ಷಕ ವಿವರಣೆಯಂತಹವುಗಳ ನೆನಪು ರೋಮಾಂಚನವನ್ನು ಉಂಟುಮಾಡುತ್ತದೆ. ಹಿಂದೆ ಎಷ್ಟೋ ಮಂದಿ ಕಾದು ಕುಳಿತು ನಾಟಕಗಳು, ಚಲನಚಿತ್ರ ಗೀತೆಗಳನ್ನು ಕೇಳುತ್ತಿದ್ದರು. ಪರ್ವತವಾಣಿಯವರ ನಾಟಕಗಳು, ಬಿನಾಕ ಗೀತ್‌ಮಾಲಾದಂತಹ ಕಾರ್ಯಕ್ರಮಗಳು ಜನಮಾನಸದಲ್ಲಿ ಸವಿನೆನಪುಗಳಾಗಿ ಉಳಿದಿವೆ. ರೇಡಿಯೊ ಇದ್ದಂತಹ ಮನೆಗಳು ಅಥವಾ ಅಂಗಡಿ ಮುಂಗಟ್ಟುಗಳ ಮುಂದೆ ಕ್ರಿಕೆಟ್ ಕಾಮೆಂಟರಿಗಾಗಿ ಜನಜಂಗುಳಿ ಸೇರುತ್ತಿದ್ದ ದಿನಗಳನ್ನು ಮರೆಯಲು ಸಾಧ್ಯವಿಲ್ಲ. ದಿನಪತ್ರಿಕೆ, ನಿಯತಕಾಲಿಕಗಳೊಂದಿಗೆ ಆಕಾಶವಾಣಿಯೂ ಜನರ ಬದುಕಿನ ಭಾಗವಾಗಿದ್ದ ಕಾಲಮಾನ ಅದು. ಟಿ.ವಿ., ಇಂಟರ್ನೆಟ್, ಸ್ಮಾರ್ಟ್ ಫೋನ್‌ಗಳು ಬಂದ ಬಳಿಕ ಜನರ ಆಯ್ಕೆಗಳು, ಪ್ರಾಶಸ್ತ್ಯಗಳಲ್ಲಿ ಸ್ಥಿತ್ಯಂತರಗಳಾದವು.

ಒಂದು ದೃಷ್ಟಿಯಿಂದ ಈ ಬೆಳವಣಿಗೆಯನ್ನು ಸಹಜ ಎನ್ನಬಹುದಾದರೂ ಯುವಪೀಳಿಗೆಗೆ ಆಕಾಶವಾಣಿಯ ಸರಿಯಾದ ಪರಿಚಯ ಆಗದಿರುವುದು ಮುಖ್ಯ ಲೋಪದಂತೆ ಕಾಣುತ್ತದೆ. ಸ್ಥಿತ್ಯಂತರ ಕಾಲದಲ್ಲಿ ಆಕಾಶವಾಣಿಯ ಸಾಂಗತ್ಯ ತೊರೆದ ಕೇಳುಗರಿಗೂ ಆಕಾಶವಾಣಿಯ ಮರು ಪರಿಚಯದ ಅಗತ್ಯವಿದೆ ಎಂದೆನಿಸುತ್ತದೆ. ಆಕಾಶವಾಣಿಯಲ್ಲಿ ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಪ್ರಸಾರವಾಗುವಂತಹ ವಾರ್ತೆಗಳು ಸಂಕ್ಷಿಪ್ತ ಹಾಗೂ ನಿಖರವಾಗಿರುತ್ತವೆ. ಆರೋಗ್ಯ, ಶಿಕ್ಷಣ, ಕೃಷಿ ಕ್ಷೇತ್ರಗಳಿಗೆ ಸಂಬಂಧಿಸಿದ ತಜ್ಞರ ಸಂದರ್ಶನಗಳು, ಭಾಷಣಗಳು ಉಪಯುಕ್ತವಾಗಿರುತ್ತವೆ. ಹಾಗೆಯೇ ಈ ದಿಸೆಯಲ್ಲಿ ನಡೆಸಿಕೊಡಲಾಗುವ ಫೋನ್- ಇನ್ ಕಾರ್ಯಕ್ರಮ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತದೆ. ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳಿಗೆ ಹೆಚ್ಚಿನ ಒತ್ತು ನೀಡಿರುವುದು ಮೆಚ್ಚುಗೆಗೆ ಪಾತ್ರವಾಗುವ ಸಂಗತಿ. ಬದುಕಿನಲ್ಲಿ ಸಮಕಾಲೀನ ಸಂಕಷ್ಟಗಳಿಗೆ ಸಿಲುಕಿ ಗೆದ್ದಂತಹ ಶೋಷಿತರು, ದುರ್ಬಲರ ಸಂದರ್ಶನಗಳು ಪ್ರೇರಣಾದಾಯಕ ಆಗಿರುತ್ತವೆ. ಇಂತಹ ವಿಶಿಷ್ಟ ಕಾರ್ಯಕ್ರಮಗಳು ಉಳಿದ ಮಾಧ್ಯಮಗಳಲ್ಲಿ ದುರ್ಲಭವೆಂದೇ ಹೇಳಬಹುದು.

ಸ್ವಾತಂತ್ರ್ಯಪೂರ್ವದಲ್ಲಿ ಅಸ್ತಿತ್ವಕ್ಕೆ ಬಂದಿರುವ ಆಕಾಶವಾಣಿಯು ದೇಶದ ಶೇ 92ರಷ್ಟು ಭೌಗೋಳಿಕ ಪ್ರದೇಶವನ್ನು ತನ್ನ ವ್ಯಾಪ್ತಿಗೆ ಒಳಪಡಿಸಲು ಶಕ್ತವಾಗಿದೆ. ಇದು ಶೇ 99ರಷ್ಟು ಜನಸಂಖ್ಯೆಯನ್ನು ಒಳಗೊಂಡಿರುವುದನ್ನು ಗಮನಿಸಿದರೆ, ಆಕಾಶವಾಣಿಯನ್ನು ಪರಿಣಾಮಕಾರಿಯಾಗಿ ಬಳಸುವಂತಹ ಅಪಾರ ಅವಕಾಶಗಳಿರುವುದು ತಿಳಿಯುತ್ತದೆ. ಆದರೆ ಬದಲಾದ ಪರಿಸ್ಥಿತಿಯಲ್ಲಿ ಕೇಳುಗರ ಸಂಖ್ಯೆ ಕುಸಿದಿರುವುದು ವಿಷಾದಕರ ಅಂಶ.

1997ರಲ್ಲಿ ಪ್ರಸಾರ ಭಾರತಿ ಕಾಯ್ದೆ ಜಾರಿಗೆ ಬಂದ ಬಳಿಕ ಈ ದಿಸೆಯಲ್ಲಿ ಹೆಚ್ಚಿನ ಭರವಸೆ ಮೂಡಿತ್ತಾದರೂ ಆಕಾಶವಾಣಿಯ ಜನಪ್ರಿಯತೆ ಹೆಚ್ಚಾಗಲಿಲ್ಲ. ಹೆಸರಿಗೆ ಆಕಾಶವಾಣಿಯು ಸ್ವಾಯತ್ತ ಸಂಸ್ಥೆಯಾದರೂ ಅದು ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅಧೀನದಲ್ಲಿಯೇ ಹೆಚ್ಚಿನ ಸ್ವಾಯತ್ತೆ ಕಾಣದೆ ಮುಂದುವರಿಯುತ್ತಿದೆ. ಹೀಗಾಗಿ, ಅದರ ಕಾರ್ಯದಕ್ಷತೆ, ಪಾರದರ್ಶಕತೆ, ನಿಷ್ಪಕ್ಷಪಾತ ಧೋರಣೆ ಮನವರಿಕೆಯಾಗುವಂತಿಲ್ಲ. ಆದ್ದರಿಂದ ಆಕಾಶವಾಣಿಗೆ ನಿಜವಾದ ಸ್ವಾಯತ್ತೆ ದೊರೆಯುವುದು ಕೂಡ ಅಗತ್ಯ.

ಆಕಾಶವಾಣಿಯ ಒಂದು ಅನುಕೂಲವೆಂದರೆ, ಅದನ್ನು ನಾವು ನಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡೇ ಆಲಿಸಬಹುದಾಗಿರುವುದು. ವಿಶೇಷವಾಗಿ ಮಹಿಳೆಯರು ಅಡುಗೆ ಮತ್ತು ಇತರ ಗೃಹಕೃತ್ಯಗಳಲ್ಲಿ ನಿರತರಾಗಿದ್ದುಕೊಂಡು ರೇಡಿಯೊ ಆಲಿಸುವುದರಿಂದ ಏಕಕಾಲದಲ್ಲಿ ಕೆಲಸವೂ ಸಾಗುತ್ತದೆ, ಮಾಹಿತಿ, ಮನರಂಜನೆಯೂ ದೊರೆಯುತ್ತದೆ. ಈ ರೀತಿ ಮಾಡುವಂತಹ ಬಹಳಷ್ಟು ಮಂದಿ ನಮ್ಮ ನಡುವೆ ಇದ್ದಾರೆ ಕೂಡ. ಆದರೆ ಹೆಚ್ಚಿನ ಮನೆಗಳಲ್ಲಿ ರೇಡಿಯೊ ಇಲ್ಲದಿರುವುದೇ ಒಂದು ದೊಡ್ಡ ಕೊರತೆಯಾಗಿದೆ. ಈ ದಿಸೆಯಲ್ಲಿ ಜನರಿಗೆ ಮಾಹಿತಿ, ತಿಳಿವಳಿಕೆ ನೀಡುವಂತಹ ಕಾರ್ಯವನ್ನು ಆಕಾಶವಾಣಿ ಮತ್ತು ಸರ್ಕಾರ ಕೈಗೊಳ್ಳಬೇಕಾಗಿದೆ.

ವಾಚಕರ ವಾಣಿ

ಡ್ರಗ್ಸ್ ದಂಧೆ: ಯಾರನ್ನು ದೂರುವುದು?

ರಾಜ್ಯದಲ್ಲಿ ಮಾದಕ ವಸ್ತುಗಳ (ಡ್ರಗ್ಸ್) ಮಾರಾಟ, ಪೂರೈಕೆ ಜಾಲಕ್ಕೆ ಸಂಪೂರ್ಣ ಕಡಿವಾಣ ಹಾಕಲು ಗೃಹ ಸಚಿವರ ನೇತೃತ್ವದಲ್ಲಿ ರಚನೆಯಾಗಿರುವ, ಏಳು ಸಚಿವರನ್ನು ಒಳಗೊಂಡ ಕಾರ್ಯಪಡೆಯು ಈ ದಂಧೆಯನ್ನು ತಡೆಯುವಲ್ಲಿ ನಿರೀಕ್ಷಿತ ಮಟ್ಟದ ಗುರಿ ಸಾಧಿಸದಿರುವ ವಿಚಾರ ಓದಿ (ಪ್ರ.ವಾ., ಜ. 1) ಆತಂಕವಾಗುತ್ತಿದೆ. 'ತಾಯ ಮೊಲೆವಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರುವೆ...' ಎಂಬಂತೆ, ಯುವಜನರ ಭವಿಷ್ಯವನ್ನು ನಾಶ ಮಾಡುತ್ತಿರುವ ಡ್ರಗ್ಸ್ ದಂಧೆಯನ್ನು ತಡೆಯುವಲ್ಲಿ ಸರ್ಕಾರವೇ ವಿಫಲವಾದರೆ ದೂರುವುದಾದರೂ ಯಾರನ್ನು?! ಹಾಗಾಗಿ, ಸರ್ಕಾರವು ಸಮರೋಪಾದಿಯಲ್ಲಿ ಈ ಸಂಬಂಧ ಕಾರ್ಯೋನ್ಮುಖವಾಗಬೇಕಾಗಿದೆ.

ಪ್ರತಿದಿನ ಟನ್ನುಗಟ್ಟಲೆ ಮಾದಕ ವಸ್ತುಗಳು ನಾನಾ ಮಾರ್ಗಗಳಿಂದ ಅಕ್ರಮವಾಗಿ ದೇಶವನ್ನು ಪ್ರವೇಶಿಸುತ್ತಿರುವುದು ಈಗ ರಹಸ್ಯವಾಗಿ ಉಳಿದಿಲ್ಲ. ಧೂಮಪಾನ, ಮದ್ಯಪಾನ, ಗುಟ್ಕಾ ಚಟಗಳಿಂದ ದಿಕ್ಕು ತಪ್ಪುತ್ತಿರುವ ಯುವಜನರನ್ನು ಇತ್ತೀಚೆಗೆ ಆನ್‌ಲೈನ್ ಗೇಮ್ಸ್ ತೀವ್ರಗತಿಯಲ್ಲಿ ತನ್ನ ಪ್ರಭಾವಕ್ಕೆ ಒಳಗಾಗಿಸಿಕೊಳ್ಳುತ್ತಿರುವ ಹೊತ್ತಿನಲ್ಲೇ ಡ್ರಗ್ಸ್ ದಂಧೆ ವ್ಯಾಪಿಸುತ್ತಿರುವುದು ತೀವ್ರ ಆತಂಕಕಾರಿ. ಸರ್ಕಾರವು ಡ್ರಗ್ಸ್ ದಂಧೆ ತಡೆಯುವ ದಿಸೆಯಲ್ಲಿ ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳಲು ಆದ್ಯತೆ ನೀಡಬೇಕು.

ಜೆ.ಬಿ.ಮಂಜುನಾಥ, ಪಾಂಡವಪುರ

ಕಾರಣ

ಮಠಾಧೀಶರಿಗೇಕೆ
ರಾಜಕಾರಣ
ಎಂದು ಕೆಲವರ ಪ್ರಶ್ನೆ.
ಸಂಸಾರ ತಿರಸ್ಕಾರ ಮತ್ತು
ಸನ್ಯಾಸ ಸ್ವೀಕಾರವೆ
ಮಹಾಕಾರಣ
ಇರಬಹುದೆ?

ಸಿ.ಪಿ.ಕೆ., ಮೈಸೂರು

ಸಚಿವರ ಮಾತಿನ ಧಾಟಿ ಬದಲಾಗಲಿ

ಬೀದರ್ ಜಿಲ್ಲೆ ಭಾಲ್ಕಿಯ ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರ ರಾಜೀನಾಮೆಗೆ ಬಿಜೆಪಿ ಆಗ್ರಹಿಸುತ್ತಿದೆ. ರಾಜೀನಾಮೆ ಕೊಡಬೇಕೋ ಬೇಡವೋ ಎನ್ನುವುದು ಪ್ರಿಯಾಂಕ್ ಅವರ ಆತ್ಮಸಾಕ್ಷಿಗೆ ಬಿಟ್ಟ ವಿಚಾರ. ಆದರೆ ವ್ಯಕ್ತಿಯ ಸಾವಿನ ಬಗ್ಗೆ ಸಚಿವರ ಮಾತಿನಲ್ಲಿ ಯಾವ ವಿಷಾದವೂ ಇಲ್ಲದಿರುವುದು ಬೇಸರದ ಸಂಗತಿ. ತಮ್ಮ ಮಾತಿನ ಧಾಟಿಯನ್ನು ಅವರು ಬದಲಿಸಿಕೊಳ್ಳಬೇಕಾಗಿದೆ. ತಮ್ಮ ತಪ್ಪು ಇಲ್ಲದ ಮೇಲೆ ಸಚಿನ್ ಅವರ ಕುಟುಂಬವನ್ನು ಭೇಟಿಯಾಗಲು ಅವರಿಗೆ ಹಿಂಜರಿಕೆಯೇಕೆ?

ಗುರು ಜಗಳೂರು, ಹರಿಹರ

ಕೃಷಿ ಹೊಂಡದ ವಿನ್ಯಾಸ: ನಡೆಯಲಿ ಸಂಶೋಧನೆ

ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲ್ಲೂಕಿನ ಹರನಾಳ ಗ್ರಾಮದಲ್ಲಿ ತಾಯಿ ಮತ್ತು ಇಬ್ಬರು ಮಕ್ಕಳು ಕೃಷಿ ಹೊಂಡದಲ್ಲಿ ಕಾಲು ಜಾರಿ ಬಿದ್ದು ಸಾವಿಗೀಡಾಗಿರುವುದಾಗಿ ವರದಿಯಾಗಿದೆ (ಪ್ರ.ವಾ., ಜ. 2). ಕೃಷಿ ಹೊಂಡಗಳಿಂದ ಹೀಗೆ ಸಾವುಗಳು ಸಂಭವಿಸುತ್ತಲೇ ಇವೆ. ಕೃಷಿ ಹೊಂಡದ ಸುತ್ತಲೂ ಬೇಲಿ ನಿರ್ಮಿಸಿದರೆ ಪ್ರಾಣಿಗಳು ಹಾಗೂ ಮನುಷ್ಯರನ್ನು ಸಾವಿನಿಂದ ಪಾರು ಮಾಡಬಹುದು. ಕೃಷಿ ಹೊಂಡವನ್ನು ಸುರಕ್ಷಿತವೆನ್ನಿಸುವ ರೀತಿಯಲ್ಲಿ ಸೂಕ್ತ ವಿನ್ಯಾಸದಿಂದ ರೂಪಿಸಿದರೆ ಇಂತಹ ದುರಂತಗಳನ್ನು ತಡೆಯಬಹುದು. ಈ ಬಗ್ಗೆ ಕೃಷಿ ವಿಶ್ವವಿದ್ಯಾಲಯಗಳು ಸಂಶೋಧನೆ ಮಾಡುವುದು ಸೂಕ್ತ.

ಎಚ್.ಆರ್.ಪ್ರಕಾಶ್, ಕೆ.ಬಿ. ದೊಡ್ಡಿ, ಮಂಡ್ಯ

ಇಡುಗಂಟು: ಇರಲಿ ಮಾನವೀಯ ನಡೆ

ಶಾಲಾ ಮಕ್ಕಳಿಗೆ ಬಿಸಿಯೂಟ ತಯಾರಿಸುವ 1.19 ಲಕ್ಷಕ್ಕೂ ಹೆಚ್ಚು ಮಹಿಳೆಯರಿಗೆ ಅವರ ಸೇವಾ ಅವಧಿಯ ಕೊನೆಯಲ್ಲಿ ₹30 ಸಾವಿರದಿಂದ 40 ಸಾವಿರದವರೆಗೆ ಇಡುಗಂಟು ನೀಡುವ ಶಾಲಾ ಶಿಕ್ಷಣ ಇಲಾಖೆಯ ಯೋಜನೆ ಶ್ಲಾಘನೀಯ. ಆದರೆ ಹಣದ ಮೊತ್ತ ತೀರಾ ಕಡಿಮೆಯಾದಂತೆ ಅನ್ನಿಸುತ್ತದೆ.

ಅತ್ಯಂತ ಮಹತ್ವದ ಕೆಲಸ ನಿಭಾಯಿಸಿ, ನಿವೃತ್ತರಾಗುವ ಈ ಮಹಿಳೆಯರಿಗೆ ಒಂದು ಗೌರವಯುತ ಇಡುಗಂಟು ಒದಗಿಸುವುದು ಸರ್ಕಾರದ ಹೊಣೆಗಾರಿಕೆ. ಇಲಾಖೆ ಈ ವಿಷಯದಲ್ಲಿ ಉದಾರ ಮನೋಭಾವ ತೋರಲಿ. ಈ ಮಹಿಳೆಯರಿಗೆ ನಿವೃತ್ತಿಯ ನಂತರದ ಜೀವನ ಕಳೆಯಲು ಕೊಡಮಾಡುವ ಮೊತ್ತವನ್ನು, ಹಣದುಬ್ಬರದ ಪರಿಣಾಮಗಳನ್ನು ಪರಿಗಣಿಸಿ ಏರಿಸುವುದು ಮಾನವೀಯ ನಡೆಯಾಗುತ್ತದೆ.

ಪ್ರಮೋದ ನಾಯ್ಕ, ಬೆಂಗಳೂರು

ಸಂಬಂಧಗಳ ಬೆಸುಗೆಗೆ ಇರಲಿ ಒತ್ತು

ಸಂಬಂಧಗಳ ಬೆಸುಗೆಯ ಅಗತ್ಯವನ್ನು ಟಿ.ಎನ್.ವಾಸುದೇವಮೂರ್ತಿ ಸಕಾರಣಗಳೊಂದಿಗೆ ಅತ್ಯಂತ ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ (ಪ್ರ.ವಾ., ಡಿ. 31). ಇತ್ತೀಚಿನ ದಿನಗಳಲ್ಲಿ ಸಂಬಂಧಗಳು ಬೆಸೆಯುತ್ತಿರುವುದಕ್ಕಿಂತ ಹೆಚ್ಚಾಗಿ ಹಳಸುತ್ತಿರುವುದಕ್ಕೆ ಕಾರಣವೆಂದರೆ ಕುಸಿಯುತ್ತಿರುವ ಮೌಲ್ಯಗಳು. ಹಣಕ್ಕೆ ಹೆಚ್ಚಿನ ಪ್ರಾಮುಖ್ಯ, ಸೋಲನ್ನು ಅವಮಾನ ಎಂದು ಪರಿಗಣಿಸುವುದು, ಅಹಂ, ಬಿಡುವಿಲ್ಲದ ದುಡಿತ, ಅವಶ್ಯಕತೆಗಿಂತ ಹೆಚ್ಚಿನ ಸಂಪಾದನೆಯತ್ತ ಒಲವು, ಹಿರಿಯರ ಬಗ್ಗೆ ಗೌರವ ನಶಿಸುತ್ತಿರುವುದು, ದೊಡ್ಡವರ ಮಾತಿಗೆ ಅಸಡ್ಡೆ ತೋರುವಂತಹ ನಾನಾ ಕಾರಣಗಳು ಇದರಲ್ಲಿ ಸೇರಿವೆ.

ಬಹುತೇಕ ಸಿನಿಮಾಗಳು, ಟಿ.ವಿ ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಿರುವ ಹೆಚ್ಚಿನ ಧಾರಾವಾಹಿಗಳು ನೈತಿಕ ಮೌಲ್ಯಗಳನ್ನು ಬದಿಗೊತ್ತಿರುವುದು ಶೋಚನೀಯವಷ್ಟೇ ಅಲ್ಲ ಆಘಾತಕಾರಿ ಹಾಗೂ ಕಳವಳಕಾರಿ ಕೂಡ. ಸಂಬಂಧಗಳಲ್ಲಿ ಮೂಡುವ ಒಡಕು ಆ ವ್ಯಕ್ತಿಗಳ ಭಾವನೆಗಳ ಮೇಲಷ್ಟೇ ಅಲ್ಲ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ನವವರ್ಷದಲ್ಲಿ ಸಂಬಂಧಗಳ ಬೆಸುಗೆಗೆ ಹೆಚ್ಚು ಒತ್ತು ಕೊಡುವ ಆದ್ಯತೆ ನಮ್ಮದಾಗಲಿ.

ಕೆ.ಪ್ರಭಾಕರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಸ್‌ಪ್ರೀತ್ ಬೂಮ್ರಾ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಪ್ರಯೋಗಿಸಿದ 4483 ಎಸೆತಗಳಿಗೆ ಯಾವ ಬ್ಯಾಟರ್ ಕೂಡ ಸಿಕ್ಸರ್ ಬಾರಿಸಿರಲಿಲ್ಲ. ಇತ್ತೀಚೆಗೆ ಆಸ್ಟ್ರೇಲಿಯಾದ ಹೊಸ ಹುಡುಗ ಸ್ಯಾಮ್ ಕಾನ್‌ಸ್ಟಸ್ ಅವರು ಸಿಕ್ಸರ್ ಹೊಡೆದು ಈ ದಾಖಲೆ ಮುರಿದರು. ಸತತ ಮೂರು ವರ್ಷಗಳಲ್ಲಿ ಬೂಮ್ರಾ ಅವರಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಯಾವುದೇ ಬ್ಯಾಟರ್ ಸಿಕ್ಸರ್ ಹೊಡೆದಿರಲಿಲ್ಲ. ಇದು ಅವರ ಬೌಲಿಂಗ್ ಸಾಮರ್ಥ್ಯಕ್ಕೆ ಒಂದು ಉದಾಹರಣೆಯಷ್ಟೇ...

ಅತಿ ಕಡಿಮೆ ರನ್ ಅಪ್, ಅನುಕರಿಸಲಾಗದ ಶೈಲಿಯ ವೇಗದ ಬೌಲರ್

ಸ್ಪೀಡ್ ಕಿಂಗ್ ಬೂಮ್ರಾ

ಟೆಸ್ಟ್ ಕ್ರಿಕೆಟ್‌ನಲ್ಲಿ ವೇಗದ 200 ವಿಕೆಟ್ ಗಳಿಕೆ

ಬೌಲರ್	ದೇಶ	ಕೊಟ್ಟ ರನ್	ಸರಾಸರಿ
ಜಸ್‌ಪ್ರೀತ್ ಬೂಮ್ರಾ	ಭಾರತ	3912	19.56
ಜೋಲ್ ಗಾರ್ನರ್	ವೆಸ್ಟ್ ಇಂಡೀಸ್	4067	20.34
ಶಾನ್ ಪೊಲಾಕ್	ದಕ್ಷಿಣ ಆಫ್ರಿಕಾ	4077	20.39

ವೇಗದ ಬೌಲರ್ ಅಭಿಮನ್ಯು ಮಿಥುನ್ ಜತೆ ಜಾವಗಲ್ ಶ್ರೀನಾಥ್

● ಗಿರೀಶ ದೊಡ್ಡಮನಿ

ಜೆಫ್ ಥಾಮ್ಸನ್, ಡೆನಿಸ್ ಲಿಲ್ಲಿ, ಗ್ಲೆನ್ ಮೆಕ್‌ಗ್ರಾ, ಆ್ಯಂಡಿ ರಾಬರ್ಟ್ಸ್, ಮೈಕೆಲ್ ಹೋಲ್ಡಿಂಗ್, ಮಾಲ್ಕಂ ಮಾರ್ಷಲ್, ಬ್ರೆಟ್ ಲೀ, ಶೋಯೆಬ್ ಅಖ್ತರ್, ವಸೀಂ ಅಕ್ರಂ...

ಕ್ರಿಕೆಟ್‌ನಲ್ಲಿ ವೇಗದ ಬೌಲಿಂಗ್ ವಿಷಯ ಬಂದಾಗಲೆಲ್ಲ ಹಲವಾರು ವರ್ಷಗಳಿಂದ ಈ ಎಲ್ಲ ವೇಗಿಗಳ ಆಟದ ಕುರಿತು ಗಂಟೆಗಟ್ಟಲೇ ಮಾತನಾಡುತ್ತಾರೆ. ದಶಕಗಳಿಂದಲೂ ವೇಗದ ಬೌಲಿಂಗ್ ಎಂದರೆ ವೆಸ್ಟ್ ಇಂಡೀಸ್, ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ತಂಡಗಳೇ ಲಾಯಕ್ಕು ಎಂಬ ಮಾತಿತ್ತು. ಆದರೆ ಇವತ್ತು ಕಾಲ ಬದಲಾಗಿದೆ. ಈಗ ನಿವೃತ್ತ ಘಟಾನುಘಟಿ ವೇಗಿಗಳ ನಾಲಿಗೆ ಮೇಲೆ ಭಾರತದ ಜಸ್‌ಪ್ರೀತ್ ಬೂಮ್ರಾ ಹೆಸರು ನಲಿಯುತ್ತಿದೆ.

ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಭಾರತ ತಂಡವು ಎರಡು ಪಂದ್ಯಗಳಲ್ಲಿ ಸೋತಿದೆ. ಸರಣಿ ಗೆಲುವು ಕೈತಪ್ಪಿದೆ. ಇರುವ ಇನ್ನೊಂದು ಪಂದ್ಯದಲ್ಲಿ ಜಯಿಸಿ ಸರಣಿ ಸಮ ಮಾಡಿಕೊಳ್ಳುವ ಅವಕಾಶವೊಂದು ಉಳಿದಿದೆ. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪ್ರವೇಶವೂ ಬಹುತೇಕ ಕೈತಪ್ಪುವ ಹಂತದಲ್ಲಿದೆ. ಹೀಗಾಗಿ ತಂಡದ ಬಹುತೇಕ ಆಟಗಾರರು ಕ್ರಿಕೆಟ್‌ಪ್ರೇಮಿಗಳ ಟೀಕೆಗೆ ಗುರಿಯಾಗಿದ್ದಾರೆ. ಆದರೆ, ಟೀಕಾಕಾರರು ಪ್ರಜ್ಞಾಪೂರ್ವಕವಾಗಿ ಜಸ್‌ಪ್ರೀತ್ ಬೂಮ್ರಾ ಅವರನ್ನು ಮಾತ್ರ ಟೀಕಿಸುತ್ತಿಲ್ಲ. ಬದಲಿಗೆ ಮೆಚ್ಚುಗೆಯ ಮಹಾಪೂರ ಹರಿಸುತ್ತಿದ್ದಾರೆ.

ಹಾಲಿ, ಮಾಜಿ ಕ್ರಿಕೆಟಿಗರಷ್ಟೇ ಅಲ್ಲ; ಆಸ್ಟ್ರೇಲಿಯಾದ ಪ್ರಧಾನಿ ಅಂಥೋನಿ ಅಲ್ಬನೀಸ್ ಕೂಡ ಬೂಮ್ರಾ ಅವರ ಅಭಿಮಾನಿಯಾಗಿಬಿಟ್ಟಿದ್ದಾರೆ. ಅಷ್ಟರ ಮಟ್ಟಿಗೆ ಬೂಮ್ರಾ ಜಾದೂ ಆವರಿಸಿದೆ. ಆದರೆ, ಇವತ್ತು ಬೂಮ್ರಾ ಅವರನ್ನು ಶ್ಲಾಘಿಸುತ್ತಿರುವ ದಿಗ್ಗಜರೆಲ್ಲರೂ 160 ಕಿ.ಮೀ (ಪ್ರತಿ ಗಂಟೆಗೆ) ವೇಗದ ಎಸೆತಗಳನ್ನು ಪ್ರಯೋಗಿಸಿದ ಯಮವೇಗಿಗಳು. ಅವರಷ್ಟು ವೇಗ ಬೂಮ್ರಾ (153 ಕಿ.ಮೀ) ಅವರಿಗಿಲ್ಲ. ಆದರೆ, ಬೂಮ್ರಾ ಅವರು ತಾವು ಹಾಕುವ ಎಸೆತಗಳ ವೈವಿಧ್ಯ ಮತ್ತು ಶೈಲಿಯಿಂದಾಗಿ ವಿಭಿನ್ನವಾಗಿ ನಿಲ್ಲುತ್ತಾರೆ.

‘ಬೂಮ್ರಾ ಅವರ ಶೈಲಿಯನ್ನು ಅನುಕರಿಸುವುದು ಕಷ್ಟಸಾಧ್ಯ. ಜೂನಿಯರ್ ಆಟಗಾರರಿಗೆ ಹೇಳಿಕೊಡುವುದು ಸಾಧ್ಯವಿಲ್ಲ. ಅಂತಹ ಕ್ಲಿಷ್ಟಕರವಾದ ಶೈಲಿಯನ್ನು ಲೀಲಾಜಾಲವಾಗಿ ರೂಢಿಸಿಕೊಂಡಿರುವ ಬೂಮ್ರಾ ಅಸಾಮಾನ್ಯರೇ ಸರಿ’ ಎಂದು ಆಸ್ಟ್ರೇಲಿಯಾದ ಮಾಜಿ ವೇಗಿ ಗ್ಲೆನ್ ಮೆಕ್‌ಗ್ರಾ ಮೆಚ್ಚುಗೆ ಸೂಚಿಸಿದ್ದಾರೆ. ಭಾರತದ ವೇಗಿಯೊಬ್ಬರು ಇಂತಹ ಸಾಧನೆ ಮಾಡುವುದೆಂದರೆ ಅದು ಅಪರೂಪ.

ಡೆತ್ ಓವರ್ ಪರಿಣತ

ಸೀಮಿತ ಓವರ್‌ಗಳ ಕ್ರಿಕೆಟ್ ಮಾದರಿಗಳಲ್ಲಿಯೂ ಜಸ್‌ಪ್ರೀತ್ ಬೂಮ್ರಾ ‘ಡೆತ್ ಓವರ್’ ಪರಿಣತರೆಂದೇ ಖ್ಯಾತರಾಗಿದ್ದಾರೆ. ಹೊಸ ಚೆಂಡಿನಲ್ಲಿ ಬೌಲಿಂಗ್ ಮಾಡಿದಷ್ಟೇ ಪರಿಣಾಮಕಾರಿಯಾಗಿ ಅವರು ಕೊನೆಯ ಹಂತದ ಓವರ್‌ಗಳಲ್ಲಿ ರಿವರ್ಸ್ ಸ್ವಿಂಗ್ ಹಾಗೂ ಯಾರ್ಕರ್‌ಗಳನ್ನು ನಿಖರವಾಗಿ ಪ್ರಯೋಗಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಬ್ಯಾಟರ್‌ಗಳು ಮೇಲುಗೈ ಸಾಧಿಸಿದರೂ ಎದೆಗುಂದದೇ ವಿಕೆಟ್ ಉರುಳಿಸುವ ಕೌಶಲ ಅವರಿಗೆ ಇದೆ. ಕೆಲವು ವರ್ಷಗಳ ಹಿಂದೆ ಡೆತ್ ಓವರ್‌ಗಳಲ್ಲಿ ನೋಬಾಲ್ ಹಾಕುವ ಲೋಪ ಮಾಡುತ್ತಿದ್ದರು. ಇದರಿಂದಾಗಿ ಟೀಕೆಗಳಿಗೂ ಒಳಗಾಗಿದ್ದರು. ಆದರೆ ಅದನ್ನು ಬೇಗನೆ ತಿದ್ದಿಕೊಂಡ ಅವರು ಯಶಸ್ವಿ ಬೌಲರ್ ಆಗಿ ರೂಪುಗೊಂಡರು.

ಇವತ್ತು ಎಲ್ಲರೂ ನನ್ನನ್ನು ಹೊಗಳುತ್ತಿದ್ದಾರೆ. ನಾನೂ ಚೆನ್ನಾಗಿ ಆಡುತ್ತಿದ್ದೇನೆ. ಮುಂದೊಂದು ದಿನ ಸಾಮರ್ಥ್ಯ ಕಡಿಮೆಯಾದಾಗ ಇದೇ ಜನ ಟೀಕಿಸುತ್ತಾರೆ. ಆದ್ದರಿಂದ ಹೊಗಳಿಕೆ, ತೆಗಳಿಕೆ ಎರಡನ್ನೂ ಮನಸ್ಸಿಗೆ ಹಚ್ಚಿಕೊಳ್ಳಬಾರದು. ಸಿಕ್ಕ ಅವಕಾಶದಲ್ಲಿ ಉತ್ತಮವಾಗಿ ಆಡಲು ಪ್ರಯತ್ನಿಸಬೇಕು. ಎಲ್ಲವನ್ನೂ ಮುಕ್ತಮನಸ್ಸಿನಿಂದ ಸ್ವೀಕರಿಸಬೇಕು

ಜಸ್‌ಪ್ರೀತ್ ಬೂಮ್ರಾ

ವಿರಾಟ್ ಕೊಹ್ಲಿಯೊಳಗಿನ ಕಿಂಗ್ ಈಗ ಅಂತ್ಯವಾಗಿದ್ದಾನೆ. ಹೊಸ ಕಿಂಗ್ ಆಗಿ ಈಗ ಜಸ್‌ಪ್ರೀತ್ ಬೂಮ್ರಾ ಉದಯಿಸಿದ್ದಾರೆ

ಸೈಮನ್ ಕ್ಯಾಟಿಚ್, ವೀಕ್ಷಕ ವಿವರಣೆಕಾರ

ಬೌಲರ್	ದೇಶ	ಗರಿಷ್ಠ ವೇಗ (ಕಿ.ಮೀ/ಗಂಟೆಗೆ)
ಶೋಯೆಬ್ ಅಖ್ತರ್	ಪಾಕಿಸ್ತಾನ	161.3
ಬ್ರೆಟ್ ಲೀ	ಆಸ್ಟ್ರೇಲಿಯಾ	161.1
ಶಾನ್ ಟೈಟ್	ಆಸ್ಟ್ರೇಲಿಯಾ	161.1
ಜೆಫ್ ಥಾಮ್ಸನ್	ಆಸ್ಟ್ರೇಲಿಯಾ	160.6
ಮಿಚೆಲ್ ಸ್ಟಾರ್ಕ್	ಆಸ್ಟ್ರೇಲಿಯಾ	160.4
ಆ್ಯಂಡಿ ರಾಬರ್ಟ್ಸ್	ವಿಂಡೀಸ್	159.5
ಮೊಹಮ್ಮದ್ ಶಮಿ	ಭಾರತ	156.4
ಜಸ್‌ಪ್ರೀತ್ ಬೂಮ್ರಾ	ಭಾರತ	153.36

ವೇಗ, ಭಾರತ, ಶ್ರೀನಾಥ್

ಸ್ಪಿನ್ ಬೌಲಿಂಗ್ ಕಲೆಯ ದೇಶ ಭಾರತ. ಭಾರತ ತಂಡವು ಕರ್ನಲ್ ಸಿ.ಕೆ.ನಾಯ್ಡು ಅವರ ನಾಯಕತ್ವದಲ್ಲಿ ಮೊದಲ ಟೆಸ್ಟ್ ಪಂದ್ಯ ಆಡಿದ ಕಾಲದಿಂದಲೂ ವೇಗದ ಬೌಲರ್‌ಗಳು ಇರಲಿಲ್ಲ. ಇದರಿಂದಾಗಿ ವಿದೇಶಗಳಲ್ಲಿ ವೇಗದ ಬೌಲಿಂಗ್‌ಸ್ನೇಹಿ ಪಿಚ್‌ಗಳ ಮೇಲೆ ಭಾರತದ ಸ್ಪಿನ್ನರ್‌ಗಳೇ ತಮ್ಮ ಸಾಮರ್ಥ್ಯ ಮೀರಿ ಪಂದ್ಯಗಳನ್ನು ಗೆಲ್ಲಿಸಿಕೊಟ್ಟ ಇತಿಹಾಸವಿದೆ. ದತ್ತು ಫಡ್ಕರ್, ರಮಾಕಾಂತ್ ದೇಸಾಯಿ, ಸೈಯದ್ ಅಬಿದ್ ಅಲಿ, ಮದನ್ ಲಾಲ್, ಕರ್ಸನ್ ಗಾವ್ರಿ ಅವರು ಮಧ್ಯಮವೇಗಿಗಳಾಗಿ ಒಂದಷ್ಟು ಮಿಂಚುತ್ತಿದ್ದರು. ಆದರೆ, ವಿದೇಶಿ ಪಿಚ್‌ಗಳ ಮಟ್ಟಕ್ಕೆ ಏರಲು ಅವರಿಗೆ ಯಾವುದೇ ತರಬೇತಿ ಮತ್ತಿತರ ಸೌಲಭ್ಯಗಳು ಇರಲಿಲ್ಲ. ವೆಸ್ಟ್ ಇಂಡೀಸ್, ಆಸ್ಟ್ರೇಲಿಯಾದಲ್ಲಿ ಶರವೇಗದ ಎಸೆತಗಳ ಮುಂದೆ ಭಾರತದ ಬ್ಯಾಟರ್‌ಗಳು ಆಡುವ ಕಲೆಯನ್ನು ಕಲಿತಿದ್ದರು. ಅದೂ ಹೆಲ್ಮೆಟ್ ಇಲ್ಲದೇ!

1983ರ ವಿಶ್ವಕಪ್ ಜಯದ ನಂತರ ವೇಗದ ಬೌಲಿಂಗ್‌ಗೆ ಹೆಚ್ಚು ಒತ್ತು ಸಿಗತೊಡಗಿತು. ಆಗ ಭಾರತ ತಂಡದ

ಕಪಿಲ್ ದೇವ್



ಮೊಹಮ್ಮದ್ ಶಮಿ

ಶೋಯೆಬ್ ಅಖ್ತರ್

ಬ್ರೆಟ್ ಲೀ

ನಾಯಕರಾಗಿದ್ದ ಕಪಿಲ್ ದೇವ್ ಅವರೂ ಮಧ್ಯಮವೇಗಿಯಾಗಿದ್ದು ಅದಕ್ಕೆ ಕಾರಣ. ಆ ವಿಶ್ವಕಪ್ ಜಯಿಸಲು ಮಧ್ಯಮವೇಗಿಗಳಾದ ಕಪಿಲ್, ಮದನ್ ಲಾಲ್, ರೋಜರ್ ಬಿನ್ನಿ ಹಾಗೂ ಬಲ್ವಿಂದರ್ ಸಿಂಗ್ ಸಂಧು ಅವರ ಬೌಲಿಂಗ್‌ನ ಪಾತ್ರವು ದೊಡ್ಡದಿತ್ತು. ಅದರಿಂದಾಗಿ ನಂತರದ ಪೀಳಿಗೆಗಳಲ್ಲಿ ಮಧ್ಯಮವೇಗದ ಬೌಲರ್‌ಗಳು ಉದಯಿಸತೊಡಗಿದರು. ಚೇತನ್ ಶರ್ಮಾ ಹಾಗೂ ಮನೋಜ್ ಪ್ರಭಾಕರ್ ಅದರಲ್ಲಿ ಪ್ರಮುಖರು.

ಆದರೆ, ಕನ್ನಡಿಗ ಜಾವಗಲ್ ಶ್ರೀನಾಥ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟದ್ದೇ ತಡ ಮಿಂಚಿನ ಸಂಚಲನವಾಯಿತು. ‘ಮೈಸೂರು ಎಕ್ಸ್‌ಪ್ರೆಸ್’ ಎಂದೇ ಖ್ಯಾತರಾದ ಶ್ರೀನಾಥ್ ಅವರನ್ನು ಭಾರತದ ಪ್ರಥಮ ವೇಗಿ ಎನ್ನಲಡ್ಡಿಯಿಲ್ಲ. ಅವರು 150 ಕಿಲೋಮೀಟರ್‌ಗಿಂತಲೂ ಹೆಚ್ಚಿನ ವೇಗದ ಎಸೆತವನ್ನು ಪ್ರಯೋಗಿಸಿ ಗಮನ ಸೆಳೆದಿದ್ದರು. ಶಿಸ್ತು, ಸಂಯಮ ಮತ್ತು ಕಡಿಮೆ ರನ್ ಕೊಟ್ಟು ವಿಕೆಟ್ ಗಳಿಸುವ ಕಲೆ ಅವರಲ್ಲಿತ್ತು. ಭಾರತವೂ ವೇಗಿಗಳನ್ನು ಸಿದ್ಧಪಡಿಸುವ ಸಾಮರ್ಥ್ಯ ಹೊಂದಿದೆ ಎಂಬುದನ್ನು ಅವರು ತೋರಿಸಿಕೊಟ್ಟರು.

ಅವರ ಹಾದಿಯಲ್ಲಿ ಜಹೀರ್ ಖಾನ್, ಇರ್ಫಾನ್ ಪಠಾಣ್, ಅಜಿತ್ ಅಗರ್ಕರ್, ಎಸ್. ಶ್ರೀಶಾಂತ್, ಉಮೇಶ್ ಯಾದವ್, ವೆಂಕಟೇಶ್ ಪ್ರಸಾದ್, ಅಭಿಮನ್ಯು ಮಿಥುನ್, ಇಶಾಂತ್ ಶರ್ಮಾ, ದೊಡ್ಡ ಗಣೇಶ್, ಭುವನೇಶ್ವರ್ ಕುಮಾರ್ ಅವರು ತಮ್ಮ ಸಾಮರ್ಥ್ಯ ಮೆರೆದರು. ಈಗ ಬೂಮ್ರಾ ಅವರೆಲ್ಲರಿಗಿಂತ ಮುಂದಿದ್ದಾರೆ.

ಚುಟುಕು ರನ್ ಅಪ್ ಚಮತ್ಕಾರ

ಬೂಮ್ರಾ ಅವರು ಪ್ರಯೋಗಿಸುವ ಎಸೆತಗಳು ಮತ್ತು ಗಳಿಸುವ ವಿಕೆಟ್‌ಗಳಿಗಿಂತ ಹೆಚ್ಚು ಆಕರ್ಷಕವೆಂದರೆ, ಅವರ ರನ್ ಅಪ್ ಮತ್ತು ಬೌಲಿಂಗ್ ಶೈಲಿ. ಮೇಲ್ನೋಟಕ್ಕೆ ಅತ್ಯಂತ ಕಡಿಮೆ ರನ್ ಅಪ್ ಎಂದೆನಿಸಿದರೂ ಅವರು 150 ಕಿ.ಮೀ ಆಸುಪಾಸಿನಲ್ಲಿ ಪ್ರಯೋಗಿಸುವ ಯಾರ್ಕರ್‌ಗಳು ಅತ್ಯಂತ ಪರಿಣಾಮಕಾರಿ.

43 ಟೆಸ್ಟ್ ಪಂದ್ಯಗಳಿಂದ 203 ವಿಕೆಟ್‌ಗಳನ್ನು ಗಳಿಸಿರುವ ಬೂಮ್ರಾ 19.5ರ ಸರಾಸರಿ ಹೊಂದಿದ್ದಾರೆ. ಇದು ವೇಗದ ಬೌಲಿಂಗ್‌ನಲ್ಲಿಯೇ ವಿಶ್ವದ ಸಾರ್ವಕಾಲಿಕ ಶ್ರೇಷ್ಠ ಸರಾಸರಿಯಾಗಿದೆ. ಈ ಹಾದಿಯಲ್ಲಿ ಅವರು ವೆಸ್ಟ್ ಇಂಡೀಸ್‌ನ ಜೋಲ್ ಗಾರ್ನರ್ (20.34) ಮತ್ತು ದಕ್ಷಿಣ ಆಫ್ರಿಕಾದ ಶಾನ್ ಪೊಲಾಕ್ (20.39) ಅವರನ್ನು ಹಿಂದಿಕ್ಕಿದ್ದಾರೆ. ಇದೇನೂ ಸಣ್ಣ ಸಾಧನೆಯಲ್ಲ.

ದಶಕಗಳ ಹಿಂದೆ ಪಾಕಿಸ್ತಾನದ ಶೋಯೆಬ್ ಅಖ್ತರ್ ಅವರ ರನ್ ಅಪ್ ನೋಡಿದವರಿಗೆ ಬೂಮ್ರಾ ಅವರ ರನ್ ಅಪ್ ತೀರಾ ಚಿಕ್ಕದು ಎನಿಸುವುದರಲ್ಲಿ ಸಂಶಯವಿಲ್ಲ. ಶೋಯೆಬ್ ಅವರು ಓಡಿ ಬರುತ್ತಿದ್ದ ರೀತಿಗೆ ಬ್ಯಾಟರ್‌ಗಳು ಒಂದರೆಕ್ಷಣ ನಡುಗುತ್ತಿದ್ದರು. ಆದರೆ ಬೂಮ್ರಾ ಅವರ ರನ್ ಅಪ್ ಎಲ್ಲ ಸೇರಿ 15 ಹೆಜ್ಜೆಗಳು ಮಾತ್ರ.

‘ಬೂಮ್ರಾ ಅವರ ಬೌಲಿಂಗ್ ಶೈಲಿ ಬಹಳ ಆಸಕ್ತಿಕರವಾಗಿದೆ. ಬಹಳ ಚುಟುಕಾದ ರನ್ ಅಪ್ ಅದು. ಮೊದಲಿಗೆ ಜಾಗಿಂಗ್ ಮಾದರಿಯಲ್ಲಿ ಆರಂಭಿಸುತ್ತಾರೆ. ಉಳಿದ ಸ್ವಲ್ಪ ಅಂತರ ಓಡುತ್ತಾರೆ. ನೇರವಾದ (ಸೆಟೆದ ರೀತಿಯ) ತೋಳುಗಳನ್ನು ತಿರುಗಿಸಿ ಬೌಲಿಂಗ್ ಮಾಡುತ್ತಾರೆ. ಅವರ ಶೈಲಿಯು ಕ್ರಿಕೆಟ್ ಆಟದ ಯಾವುದೇ ಪುಸ್ತಕದಲ್ಲಿಯೂ ಇಲ್ಲ. ಬೇರೆಲ್ಲ ವೇಗಿಗಳಿಗಿಂತಲೂ ಅವರು ಪೂರ್ತಿ ಭಿನ್ನರಾಗಿದ್ದಾರೆ. ನನ್ನ ಕಾಲದಲ್ಲಿದ್ದ ವೇಗಿ ಜೆಫ್ ಥಾಮ್ಸನ್ ಕೂಡ ಎಲ್ಲರಿಗಿಂತ ಭಿನ್ನ ಶೈಲಿಯವರಾಗಿದ್ದರು. ಬೂಮ್ರಾ ಅವರನ್ನು ನೋಡಿದಾಗ ಜೆಫ್ ನೆನಪಾಗುತ್ತಾರೆ’ ಎಂದು ಆಸ್ಟ್ರೇಲಿಯಾದ ದಿಗ್ಗಜ ಡೆನಿಸ್ ಲಿಲ್ಲಿ ಹೇಳುತ್ತಾರೆ.

ಬೂಮ್ರಾ ಅವರ ಈ ಶೈಲಿಯು ಅಪಾಯಕಾರಿ. ಬೆನ್ನುಹುರಿಯ ಮೇಲೆ ಹೆಚ್ಚು ಒತ್ತಡ ಬೀಳುವುದರಿಂದ ಅವರು ಬಹುಬೇಗನೆ ಗಾಯಗೊಳ್ಳುವ ಸಾಧ್ಯತೆ ಇದೆ ಎಂದು ಎರಡು ವರ್ಷಗಳ ಹಿಂದೆ ಜೆಫ್ ಥಾಮ್ಸನ್ ಅವರು ಹೇಳಿದ್ದರು.

ಅಂತಹದೊಂದು ಗಾಯದಿಂದ ಚೇತರಿಸಿಕೊಂಡು ಕ್ರೀಡಾಂಗಣಕ್ಕೆ ಮರಳಿರುವ ಬೂಮ್ರಾ ಮತ್ತೆ ದೂಳೆಬ್ಬಿಸುತ್ತಿದ್ದಾರೆ. ಅದು ಅವರ ದೈಹಿಕ ಸಾಮರ್ಥ್ಯವಷ್ಟೇ ಅಲ್ಲ, ಗಟ್ಟಿ ಮನೋಬಲವೂ ಹೌದು. ಅವರ ಯಶಸ್ಸಿನ ಹಿಂದಿರುವ ಗುಟ್ಟು ಇನ್ನೊಂದಿದೆ. ಅದೇನೆಂದರೆ, ಅವರು ಎಸೆತಗಳನ್ನು ಪ್ರಯೋಗಿಸುವಾಗ ಕೇವಲ ವೇಗಕ್ಕೆ ಮಹತ್ವ ನೀಡುವುದಿಲ್ಲ. ಲೈನ್, ಲೆಂಗ್ತ್, ಸ್ವಿಂಗ್ ಮತ್ತು ಸೀಮ್ ಬ್ಯಾಲನ್ಸ್‌ಗೂ ಆದ್ಯತೆ ಕೊಡುತ್ತಾರೆ. ಪಿಚ್‌ಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಆಯಾ ಪಿಚ್‌ಗೆ ತಕ್ಕಂತೆ ಬೌಲಿಂಗ್ ಮಾಡುತ್ತಾರೆ. ಅವರ ಐಪಿಎಲ್ ಅಂಕಿಸಂಖ್ಯೆಗಳನ್ನು ತೆಗೆದು ನೋಡಿದರೆ ಇದರ ಅರಿವಾಗುತ್ತದೆ.

ಸದ್ಯ ಮೂರು ಮಾದರಿಗಳಲ್ಲಿಯೂ ಶಿಸ್ತಿನ ಬೌಲಿಂಗ್ ಮತ್ತು ಎಕಾನಮಿ ನಿರ್ವಹಣೆಯಲ್ಲಿ ಉತ್ತಮ ಸ್ಥಿರತೆ ಹೊಂದಿರುವ ಬೌಲರ್ ಬೂಮ್ರಾ. ಅವರನ್ನು ಬಿಟ್ಟರೆ ಮೊಹಮ್ಮದ್ ಶಮಿಗೆ ಅಂತಹ ಸಾಮರ್ಥ್ಯವಿದೆ. ಆದರೆ, ಅವರು ಗಾಯದಿಂದ ಈಗಷ್ಟೇ ಚೇತರಿಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಗಮನ ಸೆಳೆದ ಮಯಂಕ್ ಯಾದವ್ ಮತ್ತು ಉಮ್ರಾನ್ ಮಲಿಕ್ ಅವರು 150 ಕಿ.ಮೀ ವೇಗದ ಎಸೆತಗಳನ್ನು ಹಾಕಿ ಗಮನ ಸೆಳೆದಿದ್ದಾರೆ. ಬೂಮ್ರಾ ಅವರನ್ನು ನೋಡಿ ಜೂನಿಯರ್ ಹಂತದಲ್ಲಿ ಬಹಳಷ್ಟು ಆಟಗಾರರು ವೇಗದ ಬೌಲಿಂಗ್‌ನತ್ತ ಮುಖ ಮಾಡಿದ್ದಾರೆ.

‘ಸ್ಟಂಪ್‌ಗಳು ಗಾಳಿಯಲ್ಲಿ ಹಾರಿಹೋಗಿ ಬೀಳುವುದನ್ನು ನೋಡುವುದೆಂದರೆ ನನಗೆ ಅಪಾರ ಸಂತಸ..’ ಎಂದು ಹೇಳುವ ಬೂಮ್ರಾ ಅವರಿಗೆ ವಿಕೆಟ್ ಗಳಿಕೆಯ ಹಸಿವು ನೀಗಿಲ್ಲ. ಆದ್ದರಿಂದಲೇ ಪ್ರತಿದಿನವೂ ಹೊಸದೊಂದು ಅಸ್ತ್ರವನ್ನು ತಮ್ಮ ಬತ್ತಳಿಕೆಗೆ ಸೇರಿಸುತ್ತಾರೆ. ಭಾರತವನ್ನು ಸದಾ ಕಾಡುವ ಆಸ್ಟ್ರೇಲಿಯಾದ ಬ್ಯಾಟರ್ ಟ್ರಾವಿಸ್ ಹೆಡ್ ಅಂತಹ ಬ್ಯಾಟರ್‌ಗಳಿಗೂ ‘ತಲೆನೋವು’ ತರುತ್ತಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಕೊಲಾಜ್ ಒಂದು ವ್ಯಾಪಕವಾಗಿ ಹಂಚಿಕೆಯಾಗುತ್ತಿದೆ. ಒಂದು ವಿಡಿಯೊ ತುಣುಕಿನಲ್ಲಿ ಶಾಲಾ ಬಾಲಕಿಯರು ರಸ್ತೆಯಲ್ಲಿ ನಡೆದುಹೋಗುತ್ತಿರುವಾಗ, ಬೈಕ್‌ನಲ್ಲಿ ಬಂದ ವ್ಯಕ್ತಿಯೊಬ್ಬ ಬಾಲಕಿಯನ್ನು ಅನುಚಿತವಾಗಿ ಮುಟ್ಟುತ್ತಾನೆ. ನಂತರ ಒಬ್ಬ ವ್ಯಕ್ತಿಯನ್ನು ಪೊಲೀಸರು ಥಳಿಸಿ, ಪರೇಡ್ ಮಾಡುವುದನ್ನು ಮತ್ತೊಂದು ತುಣುಕಿನಲ್ಲಿ ತೋರಿಸಲಾಗಿದೆ. ಆರೋಪಿ ಮುಸ್ಲಿಂ ಆಗಿದ್ದು, ಉತ್ತರ ಪ್ರದೇಶದ ಪೊಲೀಸರು ಅವನಿಗೆ ತಕ್ಕ ಶಾಸ್ತಿ ಮಾಡಿದ್ದಾರೆ ಎಂದು ವಿಡಿಯೊ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ಅನ್ನು ಹಲವು ಕೀಫ್ರೇಮ್‌ಗಳಾಗಿ ವಿಂಗಡಿಸಿ, ಮೊದಲ ತುಣುಕನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಮಾಧ್ಯಮವೊಂದರಲ್ಲಿ ಪ್ರಕಟವಾಗಿದ್ದ ವರದಿ ಸಿಕ್ಕಿತು. ಮಹಾರಾಷ್ಟ್ರದ ಪ್ರಭಾನಿಯಲ್ಲಿ 2024ರ ಡಿ.6ರಂದು ಬೈಕ್ ಸವಾರನೊಬ್ಬ ಶಾಲಾ ಬಾಲಕಿಯನ್ನು ಅನುಚಿತವಾಗಿ ಸ್ಪರ್ಶಿಸಿದ್ದು, ಪೊಲೀಸರು ಈ ಸಂಬಂಧ ಮೊಹಮದ್ ಅಸ್ಲಂ ಎನ್ನುವ ಆರೋಪಿಯನ್ನು ಬಂಧಿಸಿದ್ದರು. ವಿಡಿಯೊದ ಎರಡನೇ ಭಾಗವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, 2024ರ ಡಿ.8ರಂದು ಯೂಟ್ಯೂಬ್‌ನಲ್ಲಿ ಪ್ರಕಟವಾಗಿದ್ದ ವರದಿ ಕಂಡುಬಂತು. 40 ಸಾವಿರ ಸಾಲ ಹಿಂತಿರುಗಿಸದೇ ಇದ್ದ ಕಾರಣಕ್ಕೆ ಸ್ನೇಹಿತನನ್ನು ಕೊಂದ ಆರೋಪದ ಮೇರೆಗೆ ಮಧ್ಯಪ್ರದೇಶದ ಗದ್ವಾರಾ ಪೊಲೀಸರು ವಿಕಾಸ್ ಕುಚ್‌ಬಂಡಿಯಾ ಎನ್ನುವವನನ್ನು ಬಂಧಿಸಿದ್ದ ಪೊಲೀಸರು, ಅವನಿಗೆ ಥಳಿಸಿದ್ದರು. ಈ ಎರಡೂ ಪ್ರತ್ಯೇಕ ವಿಡಿಯೊಗಳನ್ನು ಸೇರಿಸಿ ಒಂದೇ ಎಂದು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ. ಈ ಬಗ್ಗೆ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜನವರಿ 3, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಚತುರ್ಥಿ ಗಂ. 23-40 ನಕ್ಷತ್ರ: ಧನಿಷ್ಠ ಗಂ. 22-22 ಯೋಗ: ವಜ್ರ ಗಂ. 12-37 ಕರಣ: ವಣಿಜ ಗಂ. 12-26, ಧನು ಮಾಸದ 18 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 2.

ರಾಹುಕಾಲ: ಬೆಳಿಗ್ಗೆ 10-30 – 12-00

ಸೂರ್ಯೋದಯ: 06-58 ಸೂರ್ಯಾಸ್ತ: 06-12

ಮುಸ್ಲಿಂ ದಿನಾಂಕ: 02 ರಜಬ್

ಅದೃಷ್ಟ ಸಂಖ್ಯೆ: 5, 1

ಮೇಷ: ಇನ್ನೊಬ್ಬರನ್ನು ಅರ್ಥೈಸಿಕೊಳ್ಳುವ ಗುಣ ಕಡಿಮೆಯಾಗಲಿದೆ. ಸ್ನೇಹಿತರಿಂದ ಅಪೇಕ್ಷಿಸಿದ ಸಹಕಾರವು ಸಿಗಲಿದೆ. ವೈವಾಹಿಕ ಮಾತುಕತೆಗಳು ಪ್ರಗತಿ ಪಥದತ್ತ ಸಾಗುವುದಕ್ಕೆ ಶ್ರೀಸೀತಾರಾಮರನ್ನು ಪ್ರಾರ್ಥಿಸಿ.

ವೃಷಭ: ಸಂಪೂರ್ಣ ಮನಸ್ಸಿಟ್ಟು ಕೆಲಸ ಕಾರ್ಯಗಳನ್ನು ಮಾಡಿದ್ದಲ್ಲಿ ಲಾಭವನ್ನು ಗಳಿಸುವಿರಿ. ವಿದೇಶಿ ವ್ಯವಹಾರಗಳು ಲಭಿಸಬಹುದು. ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯುವ ಸಂಭವವಿದೆ.

ಮಿಥುನ: ಶೀಘ್ರ ಹಾಗೂ ಕಾಲಕ್ಕೆ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದು ಹಣಕಾಸಿನ ಲಾಭ ತರಲಿದೆ. ತಾಂತ್ರಿಕ ವಿದ್ಯಾರ್ಥಿಗಳಿಗೆ ಸುಲಭವಾಗಿ ನೌಕರಿ ಸಿಗುವ ಲಕ್ಷಣವಿದೆ. ಕೆಲಸಕ್ಕೆ ಹಿರಿಯರ ಆಶೀರ್ವಾದ ಲಭಿಸುವುದು.

ಕರ್ಕಾಟಕ: ನಂಬಿಕಸ್ಥರ ಮೋಸ ತಡೆದುಕೊಳ್ಳಲು ಕಷ್ಟವಾಗುತ್ತದೆ. ಜಯದ ಹಾದಿಯಲ್ಲಿ ಒಂದು ಹೆಜ್ಜೆ ಮುಂದೆ ಸಾಗುವಿರಿ. ಅನಾರೋಗ್ಯ ಹೊಂದಿದ್ದ ಪತ್ನಿಯ ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ಸಿಂಹ: ಬೆಲೆ ಬಾಳುವ ವಸ್ತುವನ್ನು ಕಳೆದುಕೊಳ್ಳುವಂತಾಗಲಿದೆ. ಎಚ್ಚರದಿಂದಿರಿ. ಆಹಾರದ ವಿಚಾರದಲ್ಲಿ ದಾಕ್ಷಿಣ್ಯ ಪ್ರವೃತ್ತರಾಗಿ ಸಿಕ್ಕಿಕೊಳ್ಳಬೇಡಿ. ಸ್ನೇಹಿತರೊಡನೆ ಪ್ರವಾಸವನ್ನು ಹಮ್ಮಿಕೊಳ್ಳಲು ಮನಸ್ಸಾಗುವುದು.

ಕನ್ಯಾ: ಸಂಸಾರದಲ್ಲಿ ಹೆಚ್ಚಿನ ಸಾಮರಸ್ಯವಿದ್ದು, ಮನಸ್ಸಿಗೆ ಶಾಂತಿ ನೆಮ್ಮದಿಗಳು ಉಂಟಾಗಲಿವೆ. ರಾಜಕೀಯ ಕ್ಷೇತ್ರದಲ್ಲಿರುವವರು ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿ ರೂಢಿಸಿಕೊಳ್ಳಬೇಕಾಗುತ್ತದೆ. ಅನಿರೀಕ್ಷಿತ ಪ್ರಯಾಣದ ಸಂಭವವಿದೆ.

ತುಲಾ: ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿಕೊಂಡು ಉಳಿತಾಯದ ತೀರ್ಮಾನ ಕೈಗೊಳ್ಳುವುದು ಉತ್ತಮ. ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶ್ರಮದ ಅಗತ್ಯವಿದೆ. ಆತ್ಮಬಲದ ಮೇಲೆ ನಂಬಿಕೆ ಇಡಿ.

ವೃಶ್ಚಿಕ: ವೃತ್ತಿಪರವಾಗಿ ಯಾವುದೇ ಬದಲಾವಣೆಗೆ ಸಮಂಜಸ ದಿನವಾಗಿರುವುದಿಲ್ಲ. ನಿಮ್ಮನ್ನು ವಿಮರ್ಶಿಕೊಳ್ಳಿ. ಸರಿ –ತಪ್ಪುಗಳು ನಿಮಗೆ ಅರಿವಾಗುವುದು. ಹೊಸ ವಾಹನ ಖರೀದಿ ತುಂಬಾ ಅಗತ್ಯವೆನಿಸುತ್ತದೆ.

ಧನು: ಸರಿಸಮಾನವಾದ ಮನಸ್ಸನ್ನು ಹೊಂದಿದವರಲ್ಲಿ ಒಪ್ಪಂದದ ವ್ಯವಹಾರಗಳನ್ನು ನಡೆಸಬಹುದು. ಪರೋಪಕಾರದ ಫಲ ಮತ್ತು ಆತ್ಮವಿಶ್ವಾಸ ರಕ್ಷಿಸಲಿದೆ. ದೀರ್ಘಕಾಲಿಕ ಕೆಲಸಗಳು ನಿಧಾನವಾಗಿ ಸಾಗಲಿವೆ.

ಮಕರ: ಯೋಗ್ಯ ವಯಸ್ಕರಿಗೆ ಪ್ರಯತ್ನವಿದ್ದರೆ ಮದುವೆ ನಿಶ್ಚಯವಾಗುವುದು. ಉನ್ನತ ಪೊಲೀಸ್ ಅಧಿಕಾರಿಗಳಿಗೆ ಸಂತಸದ ಸುದ್ದಿ ಕೇಳಿಬರಲಿದೆ. ಕ್ರೀಡಾಪಟುಗಳ ಅಭ್ಯಾಸದ ಕೊರತೆಯು ವೈಫಲ್ಯಕ್ಕೆ ಕಾರಣವಾಗುವುದು.

ಕುಂಭ: ಓದು ಅಥವಾ ಉದ್ಯೋಗ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ ದೊರೆಯಲಿದೆ. ಪ್ರಾಪಂಚಿಕ ವಿಚಾರವನ್ನು ಬಿಟ್ಟು ಆಧ್ಯಾತ್ಮಿಕ ವಿಚಾರಗಳ ಕಡೆಗೆ ಗಮನ ಹರಿಯಲಿದೆ. ಪ್ರೀತಿಯನ್ನು ವ್ಯಕ್ತಪಡಿಸಲು ಸುದಿನ.

ಮೀನ: ದೊಡ್ಡ ವಿಚಾರವೊಂದಕ್ಕೆ ಕೈ ಹಾಕಬೇಕಾದ ಸನ್ನಿವೇಶ ಎದುರಾಗುವುದು. ಆದರೆ ಅದಕ್ಕಿಂತ ಮೊದಲಾಗಿ ಆತ್ಮಸಂಯಮ ರೂಢಿಸಿಕೊಳ್ಳಬೇಕಾದ ಅಗತ್ಯವಿದೆ. ಪರೋಪಕಾರಕ್ಕಾಗಿ ಮೀಸಲಿಡಿ.

ತಂದೆ ತಾಯಿಗಳೇ ದೇವರು!

ನುಡಿ ಬೆಳಗು 102

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ನಮ್ಮನ್ನು ಹೆತ್ತ ತಾಯಿ ತಂದೆಯರೂ ಸಂಪತ್ತಲ್ಲೇನು? ನಾವು ದೇವರನ್ನು ಕಾಣಬೇಕು ಅಂತ ಕಾಶಿ, ರಾಮೇಶ್ವರ, ಬದರಿಗಳಿಗೆ ಹೋಗುತ್ತೇವೆ. ಕಲ್ಲಿನಲ್ಲಿ ದೇವರನ್ನು ಹುಡುಕುತ್ತೇವೆ. ಜೀವಂತ ಇರುವ ತಂದೆ ತಾಯಿಯಲ್ಲಿ ದೇವರು ಕಾಣದೇ ಇದ್ದರೆ ಕಲ್ಲಲ್ಲಿ ಹೇಗೆ ದೇವರು ಕಾಣುತ್ತಾನೆ? ನಮ್ಮನ್ನು ಹೆತ್ತ ತಂದೆ ತಾಯಿಯ ಪಾದದ ಸನ್ನಿಧಿ ನಿಜವಾದ ದೇವಾಲಯ. ಯಾಕೆ ತಂದೆ ತಾಯಿ ದೇವರು ಎಂದರೆ, ಅವರು ಇಲ್ಲದೇ ಇದ್ದರೆ ನಾವು ಈ ಭೂಮಿಗೆ ಬರುತ್ತಲೇ ಇರಲಿಲ್ಲ; ನಮಗೆ ಈ ಸುಂದರ ಬದುಕು ಸಿಗುತ್ತಿರಲಿಲ್ಲ. ತಾಯಿ ತಾನು ತಂಗಳು ಉಂಡು ಮಕ್ಕಳಿಗೆ ಬಿಸಿ ಬಿಸಿ ಉಣ್ಣಿಸುತ್ತಾಳೆ. ಅಪ್ಪ ತಾನು ಹರಿದ ಬಟ್ಟೆ ಹಾಕಿಕೊಂಡರೂ ಮಕ್ಕಳಿಗೆ ಒಳ್ಳೆಯ ಬಟ್ಟೆ ಕೊಡಿಸುತ್ತಾನೆ. ಮಕ್ಕಳು ಚೆನ್ನಾಗಿರಲಿ ಎಂದು ಬಿಸಿಲಲ್ಲಿ ದುಡೀತಾನ. ತಾಯಿ ತನ್ನ ಮಗುವಿಗೆ ಹಾಲು ಕುಡಿಸುವಾಗ ಸೆರಗು ಮುಚ್ಚಿಕೊಳ್ತಾಳ; ಯಾಕೆಂದರೆ, ತನ್ನ ದೃಷ್ಟಿಯೂ ತನ್ನ ಮಗುವಿನ ಮೇಲೆ ಬೀಳಬಾರದು ಎಂಬ ಕಾರಣಕ್ಕೆ. ತಾಯಿ ತಂದೆಯರ ತ್ಯಾಗಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಅಪ್ಪ ಮಕ್ಕಳನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಜಾತ್ರೆ ತೋರಿಸ್ತಾನ; ‘ನಾನು ಕೆಳಗೆ ಇದ್ದೇನೆ. ನಾನು ನೋಡಲಾಗದ್ದನ್ನು ಮಕ್ಕಳು ನೋಡಬೇಕು’ ಎಂಬ ಕಾರಣಕ್ಕೆ ಅವರನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡಿದ್ದಾನೆ. ನಾವು ಸಣ್ಣವರಿದ್ದಾಗ ನಮ್ಮ ಹೆಗಲಿಗೆ ಅಪ್ಪ ಆಸರೆಯಾಗಿದ್ದ. ಮುಂದೆ ಅವ ಮುಪ್ಪಾದಾಗ ನಾವು ಅವನ ಹೆಗಲಿಗೆ ಹೆಗಲು ಕೊಟ್ಟು ಆಸರೆ ಆಗದಿದ್ದರೆ ನಮ್ಮ ಹೆಗಲಿಗೆ ಏನು ಬೆಲೆ ಎಂಬೋದನ್ನು ತಿಳಕೋಬೇಕು. ತಾಯಿಗೆ ಹೆರಿಗೆ ನೋವಿಗಿಂತ ಮಗ ಹೊರಗೆ ಹಾಕಿದ ನೋವು ಜಾಸ್ತಿ. ಅಮ್ಮ ಮೊದಲು ಮಗು ಉಂಡಿಲ್ಲ ಅಂತ ಅಳತಿದ್ದಳು. ಈಗ ಮಗ ಊಟ ಹಾಕಿಲ್ಲ ಅಂತ ಅಳತಾಳ.

ಒಬ್ಬ ಹುಡುಗ ಇದ್ದ. ಅವನಿಗೆ ವಯಸ್ಸಾದ ತಾಯಿ ಇದ್ದಳು. ಮಗನಿಗೆ ಮದುವೆ ಮಾಡಬೇಕು ಅನ್ನೋದು ಆಕೆಯ ಬಯಕೆ. ಆದರೆ, ಆ ಹುಡುಗನಿಗೆ ದೇವರನ್ನು ನೋಡುವ ಆಸೆ. ಅದಕ್ಕೆ ಒಂದು ದಿನ ಆತ ತಾಯಿ ಹತ್ತಿರ ಬಂದು ‘ಅವ್ವಾ, ನಾನು ದೇವರನ್ನು ನೋಡಲು ಹೋಗ್ತೇನೆ’ ಅಂದ. ತಾಯಿ ಒಪ್ಪಿದಳು. ಮಗನಿಗೆ ಬುತ್ತಿ ಕಟ್ಟಿಕೊಟ್ಟು ‘ನೀನು ದೇವರನ್ನು ಕಂಡು ಬಾ. ಬಂದ ಮೇಲೆ ದೇವರು ಹೇಗಿದ್ದ ಅಂತಾ ನನಗೆ ಹೇಳು’ ಅಂದಳು. ಅವ ಹೊರಟ. ವರ್ಷಾನುಗಟ್ಟಲೆ ತಿರುಗಾಡಿದ. ಹಿಮಾಲಯಕ್ಕೆ ಹೋದ. ನದಿ ತಟಗಳಲ್ಲಿ ತಪಸ್ಸು ಮಾಡಿದ. ಆದರೆ, ದೇವರು ಸಿಗಲಿಲ್ಲ. ಐದಾರು ವರ್ಷದ ನಂತರ ಮನೆಗೆ ಬಂದ. ಆಗ ಮನೆಯಲ್ಲಿ ಅವನ ತಾಯಿ ದೇವರಿಗೆ ದೀಪ ಹಚ್ಚುತ್ತಾ, ‘ದೇವರೇ, ನನ್ನ ಮಗ ನಿನ್ನನ್ನು ಕಾಣಲು ಹೋಗಿದ್ದಾನೆ, ಬೇಗ ಕಾಣಿಸಿಕೊ’ ಎಂದು ಬೇಡಿಕೊಳ್ಳುತ್ತಿದ್ದಳು. ಅದೇ ಹೊತ್ತಿಗೆ ಮಗ ಮನೆ ಪ್ರವೇಶಿಸಿದ. ಮಗನನ್ನು ಕಂಡು ತಾಯಿ ‘ದೇವರು ಸಿಕ್ಕನಾ, ನೋಡಿದೆಯಾ’ ಎಂದು ಕೇಳಿದಳು. ಅದಕ್ಕೆ ಮಗ ‘ಎಲ್ಲಿ ಹುಡುಕಿದರೂ ದೇವರು ಸಿಗಲಿಲ್ಲ. ಈಗ ನೀನು ದೇವರಿಗೆ ದೀಪ ಹಚ್ಚುತ್ತಿದ್ದೆಯಲ್ಲ ಆಗ ದೀಪದ ಬೆಳಕು ನಿನ್ನ ಮುಖದ ಮೇಲೆ ಬಿದ್ದಾಗ ಅಲ್ಲೇ ನಿನ್ನ ಮುಖದಲ್ಲಿ ದೇವರು ಕಂಡ’ ಎಂದ. ತಂದೆ ತಾಯಿಗಳೇ ದೇವರು ಅನ್ನೋದನ್ನು ತಿಳಕೋಬೇಕು. ❖

ಪದಬಂಧ 5911

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ತುಂಬಾ ಜೋರಾದ ನಗು (4)
4.ಹರಿ ಇದ್ದಾಗ ಆಕ್ರೋಶದಿಂದ ರೇಗು! (4)
6.ಆಕರ ಅಥವಾ ಗಣಿ (2)
8.ಪ್ರೀತಿಪಾತ್ರನಾದವನು ತಿರುಗಿದ್ದಾನಲ್ಲಾ! (3)
10.ನಕಲುಚಿತ್ರ ಉಲ್ಟಾ ಪಲ್ಟಾ ಆಗಿದೆ (4)
11.ಸದಾ ಉರಿಯುತ್ತಿರುವ ದೀಪ (4)
12.ಋತುಗಳ ರಾಜ (3)
13.ಬ್ರಹ್ಮನನ್ನು ಹೀಗೂ ಕರೆಯುತ್ತಾರೆ (4)
14.ಮಲಗುವ ಮನೆಯಿದು (4)
15.ಮೂಲಿಕೆಗಳನ್ನು ಭಟ್ಟಿಯಿಳಿಸಿ ತೆಗೆದ ರಸ (3)
16.ಉಗುರು ಇಲ್ಲಿ ಕಾಣುತ್ತಿದೆ (2)
18.ಬದುಕಿದ್ದೂ ಸತ್ತಂತೆ ಇರುವವನು (4)
20.ಬೆಳ್ಳಿಯ ಬೆಟ್ಟ (4)

ಮೇಲಿಂದ ಕೆಳಕ್ಕೆ

1.ಬೆಟ್ಟದಿಂದ ಹರಿದು ಬರುವ ಪ್ರವಾಹ (2)
3.ಗೆಳೆಯ ಇಲ್ಲಿದ್ದಾನೆ (2)
5.ಒಂದು ಜನಾಂಗವನ್ನು ಹೊಸಮಾರ್ಗದಲ್ಲಿ ನಡೆಸುವವನು (6)
7.ರೂಪವಿರುವ ಆಜ್ಞಾಪತ್ರ! (3)
9.ಆದಿಶೇಷನ ಮೇಲೆ ಮಲಗುವವನು (6)
13.ಜನ ಕೊನೆಗಿದ್ದರೆ ಇದು ಉತ್ಪತ್ತಿ! (3)
17.ಖರ್ಪರದಲ್ಲಿರುವ ಸಂವತ್ಸರ ಗೊತ್ತಾಯಿತೆ (2)
19.ವ್ಯಯಕ್ಕೊಂದು ಪರ್ಯಾಯ ಪದ (2)

■	1	■	■	2			3	■
4			5	■	■	■	6	7
■	■	■	8		9	■	■	
10				■	11			
■	■	■	12			■	■	■
13				■	14			
	■	■	15			■	■	■
16	17	■	■	■	18		19	
■	20				■	■		■

5910ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಚಾರಣಕವಿ 4.ಪಾಷಾಂಡಿ
5.ಧಾವಂತ 6.ಕಶೇರು
8.ಸಂತಸ 10.ಅಡಜ
11.ಕುಣಿಕೆ 15.ಲಕ್ಷಣ
15.ಆಯಾಸ 16.ಮರುಕಳಿಸು

ಮೇಲಿಂದ ಕೆಳಕ್ಕೆ:

1.ಚಾರ್ವಾಕ 2.ಣರಕಮೀಸ
3.ವಿಧಾತ 4.ಪಾತಕ
7.ಶೇಕಡ 9.ತರುಣಿ
10.ಅಂಗರಕ್ಷಕ 12.ಕೆಲಸ
13.ಕಣಮ 14.ಮುನಿಸು

ಸುಡೊಕು 6296

	7			2				5
3		6	5		8			7
	4			7		2		
	6				5			
9		1		8			6	2
4			2			1	3	
		2	3		7		5	
7	1			5		6		3
5		3	4					1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6295 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಷೇರುಪೇಟೆ ವಹಿವಾಟು 1436



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,742
ಇಂದಿನ ಅಂತ್ಯ	24,188
▲	445
ದಿನದ ಗರಿಷ್ಠ	24,226

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹565
12 ಕ್ಕೆ	₹75
ಮೈಸೂರು	
100ಕ್ಕೆ	₹568

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹188
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹176

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1460 (1470)
ಸೋಯಾ (ರಿಫೈನ್ಡ್)	₹1260 (1275)
ಸೂರ್ಯಕಾಂತಿ (ರಿಫೈನ್ಡ್)	₹1370 (1370)
ಪಾಮೋಲಿನ್	₹1365 (1365)

ವಿನಿಮಯ ದರ

$	ಡಾಲರ್	85.75
£	ಪೌಂಡ್	107.03
€	ಯುರೊ	88.75
¥	ಯೆನ್ (₹100ಕ್ಕೆ)	55

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14610-14610
ಬೆಂಗಳೂರು	₹20000-25000
ತುರುವೇಕೆರೆ	₹14500-14750

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹447-638
ದ್ವಿತಳಿ (ಬಿ.ವಿ)	₹125-863

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ

ಎನ್. ಅಶ್ವಥನಾರಾಯಣಪ್ಪ
ನಿಧನ: 03-01-2024
ನಿಮ್ಮ ನೆನಪು ಸದಾ ಜೀವಂತ
ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು
ವಿದ್ಯಾರಣ್ಯಪುರ, ಬೆಂಗಳೂರು

1ನೇ ವರ್ಷದ ಚಿರಸ್ಮರಣೆ

ಹೆಚ್. ಆರ್. ಗೌರಮ್ಮ.
(ನಿವೃತ್ತ ಆರೋಗ್ಯ ಸಹಾಯಕಿ)
ಮರೆಯಾದ ಮಾಣಿಕ್ಯ ಸದಾ ನಮ್ಮ ನೆನಪಿನಂಗಳದಲ್ಲಿ ಹಸಿರಾಗಿರುವೆ..
ದುಃಖತಪ್ತರು: ಪತಿ, ಮಕ್ಕಳು, ಸೊಸೆ, ಅಳಿಯ, ಮೊಮ್ಮಗಳು.

ಪ್ರಥಮ ವರ್ಷದ ಪುಣ್ಯಸ್ಮರಣೆ



ಜೆ ಎನ್. ಪುಷ್ಪರಾಜು
ಸಂಸ್ಥಾಪಕರು: ಭಾರತ್ ಅಗ್ರಿಕಲ್ಚರಲ್ ಅಸ್ಸೆಸರೀಸ್
ನಿಮ್ಮ ಪ್ರೀತಿಯ: ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಬಂಧು-ಬಳಗ, ಸ್ನೇಹಿತರು ಹಾಗೂ ಸಿಬ್ಬಂದಿ ವರ್ಗದವರು

ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಹೇಳಿಕೆ

‘17 ಕೋಟಿ ಉದ್ಯೋಗ ಸೃಷ್ಟಿ’

ನವದೆಹಲಿ (ಪಿಟಿಐ): ‘ಡಾ. ಮನಮೋಹನ ಸಿಂಗ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ 2.9 ಕೋಟಿ ಉದ್ಯೋಗಗಳಷ್ಟೇ ಸೃಷ್ಟಿಯಾಗಿದ್ದವು. ಪ್ರಧಾನಿ ನರೇಂದ್ರ ಮೋದಿ ಅವರ ಹತ್ತು ವರ್ಷದ ಅಧಿಕಾರಾವಧಿಯಲ್ಲಿ 17.19 ಕೋಟಿ ಉದ್ಯೋಗ ಸೃಷ್ಟಿಸಲಾಗಿದೆ’ ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ತಿಳಿಸಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದೇಶದಲ್ಲಿ 2014–15ರಲ್ಲಿ 47.15 ಕೋಟಿ ಇದ್ದ ಉದ್ಯೋಗಗಳು, 2023–24ರಲ್ಲಿ 64.33 ಕೋಟಿಗೆ ಏರಿಕೆಯಾಗಿವೆ. ಒಂದು ದಶಕದ ಅವಧಿಯಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಶೇ 36ರಷ್ಟು ಏರಿಕೆಯಾಗಿದೆ’ ಎಂದು ಹೇಳಿದರು.

ಯುಪಿಎ ಅವಧಿಯಲ್ಲಿ (2004–2014) ಉದ್ಯೋಗ ಸೃಷ್ಟಿಯಲ್ಲಿ ಶೇ 7ರಷ್ಟು ಏರಿಕೆಯಾಗಿತ್ತು ಎಂದರು.

ಕಳೆದ ಒಂದು ವರ್ಷದಲ್ಲಿ (2023–24ರಲ್ಲಿ) ಸರ್ಕಾರವು 4.6 ಕೋಟಿ ಉದ್ಯೋಗಗಳನ್ನು ಸೃಷ್ಟಿಸಿದೆ ಎಂದು ಹೇಳಿದರು.

ಕೃಷಿ ವಲಯ: ಯುಪಿಎ ಅವಧಿ ವೇಳೆ ಕೃಷಿ ವಲಯದಲ್ಲಿ ಶೇ 16ರಷ್ಟು ಉದ್ಯೋಗ ಕುಸಿತವಾಗಿತ್ತು. 2014–23ರ ನಡುವೆ ಶೇ 19ರಷ್ಟು ಏರಿಕೆಯಾಗಿದೆ ಎಂದರು.

ತಯಾರಿಕಾ ವಲಯದಲ್ಲಿ ಯುಪಿಎ ಅವಧಿಯಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಶೇ 6ರಷ್ಟು ಏರಿಕೆಯಾಗಿತ್ತು. ಮೋದಿ ಅವಧಿಯಲ್ಲಿ ಶೇ 15ರಷ್ಟು ಏರಿಕೆಯಾಗಿದೆ. ಮನಮೋಹನ ಸಿಂಗ್ ಅವಧಿಯಲ್ಲಿ ಸೇವಾ ವಲಯದಲ್ಲಿ ಶೇ 25ರಷ್ಟು ಉದ್ಯೋಗ ಸೃಷ್ಟಿಯಾಗಿದ್ದರೆ, ಎನ್‌ಡಿಎ ಅಧಿಕಾರಾವಧಿಯಲ್ಲಿ ಶೇ 36ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದರು.

2017–18ರಲ್ಲಿ ಶೇ 6ರಷ್ಟಿದ್ದ ನಿರುದ್ಯೋಗ ದರವು 2023–24ರಲ್ಲಿ ಶೇ 3.2ಕ್ಕೆ ತಗ್ಗಿದೆ. ಉದ್ಯೋಗ ದರವು ಶೇ 46.8ರಿಂದ ಶೇ 58.2ಕ್ಕೆ ಏರಿಕೆಯಾಗಿದೆ. ಕಾರ್ಮಿಕರ ಪಾಲ್ಗೊಳ್ಳುವಿಕೆ ದರವು ಶೇ 49.8ರಿಂದ ಶೇ 60.1ಕ್ಕೆ ಹೆಚ್ಚಳವಾಗಿದೆ ಎಂದು ವಿವರಿಸಿದರು.

ಔಪಚಾರಿಕ ವಲಯದಲ್ಲಿ ಉದ್ಯೋಗಕ್ಕೆ ಸೇರ್ಪಡೆಗೊಳ್ಳುವ ಯುವಜನರ ಸಂಖ್ಯೆಯಲ್ಲೂ ಗಣನೀಯ ಏರಿಕೆಯಾಗಿದೆ. ಕಳೆದ ಏಳು ವರ್ಷದ ಅವಧಿಯಲ್ಲಿ (2017ರ ಸೆಪ್ಟೆಂಬರ್‌ನಿಂದ 2024ರ ಸೆಪ್ಟೆಂಬರ್ ವರೆಗೆ) 4.7 ಕೋಟಿ ಯುವಜನರು (18ರಿಂದ 28 ವರ್ಷ) ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಗೆ ಸೇರ್ಪಡೆಗೊಂಡಿದ್ದಾರೆ ಎಂದು ವಿವರಿಸಿದರು.

ನೇಮಕಾತಿ ಶೇ 9ರಷ್ಟು ಏರಿಕೆ

ಮುಂಬೈ (ಪಿಟಿಐ): ಕಳೆದ ವರ್ಷದ ಡಿಸೆಂಬರ್‌ನಲ್ಲಿ ಬಿಪಿಒ ಮತ್ತು ಐ.ಟಿ ಆಧರಿತ ಸೇವಾ ಕಂಪನಿಗಳು ಸೇರಿ ವಿವಿಧ ಕ್ಷೇತ್ರಗಳ ನೇಮಕಾತಿಯಲ್ಲಿ ಶೇ 9ರಷ್ಟು ಏರಿಕೆಯಾಗಿದೆ ಎಂದು ನೌಕರಿ ಡಾಟ್ ಕಾಂ ವರದಿ ಗುರುವಾರ ತಿಳಿಸಿದೆ.

ಕೃತಕ ಬುದ್ಧಿಮತ್ತೆ/ ಮಷಿನ್ ಲರ್ನಿಂಗ್ (ಶೇ 36), ತೈಲ ಮತ್ತು ಅನಿಲ (ಶೇ 13), ಎಫ್‌ಎಂಸಿಜಿ (ಶೇ 12) ಹಾಗೂ ಹೆಲ್ತ್‌ಕೇರ್ (ಶೇ 12) ವಲಯದಲ್ಲಿ ಹೆಚ್ಚು ನೇಮಕಾತಿ ನಡೆದಿದೆ ಎಂದು ಹೇಳಿದೆ.

2024ರ ಕೆಲವು ತಿಂಗಳುಗಳಲ್ಲಿ ಹೊಸ ನೇಮಕಾತಿ ಪ್ರಮಾಣ ಕಡಿಮೆಯಿತ್ತು. ಆದರೆ, ಡಿಸೆಂಬರ್‌ನಲ್ಲಿ ಶೇ 6ರಷ್ಟು ಏರಿಕೆಯಾಗಿದೆ. ಲೈಫ್‌ಸ್ಟೈಲ್ ಮತ್ತು ರಿಟೇಲ್ ಕ್ಷೇತ್ರದಲ್ಲಿ ಹೊಸಬರ ನೇಮಕಾತಿ ಹೆಚ್ಚಳವಾಗಿದೆ ಎಂದು ತಿಳಿಸಿದೆ. ಎಫ್‌ಎಂಸಿಜಿ ವಲಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೇಮಕಾತಿ ನಡೆದಿದೆ. ಚೆನ್ನೈ, ಬೆಂಗಳೂರು ಹಾಗೂ ಕೊಯಮತ್ತೂರಿನಲ್ಲಿ ಹೆಚ್ಚಿನ ನೇಮಕಾತಿಯಾಗಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

02-01-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ(ಹೊಸ)	8800-8900
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1480)
ಒಂದು ವಾರದ ಡೆಲಿವರಿ	1465 (1475)
ಪಾಮ್ ವಾರದ ಡೆಲಿವರಿ	1363 (1363)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1275)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹76,600 (76,300)
ಬೆಳ್ಳಿ ಕೆ.ಜಿ ₹86,900 (86,100)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುಧಾ, ಮಯೂರ ಓದಿ

ಸೆನ್ಸೆಕ್ಸ್, ನಿಫ್ಟಿ ಶೇ 2ರಷ್ಟು ಏರಿಕೆ

ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಗುರುವಾರದ ವಹಿವಾಟಿನಲ್ಲಿ ಗೂಳಿಯ ನಾಗಾಲೋಟ ಮುಂದುವರಿಯಿತು.

ಹಣಕಾಸು, ಆಟೊ ಮತ್ತು ಐ.ಟಿ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಷೇರು ಸೂಚ್ಯಂಕಗಳು ಶೇ 2ರಷ್ಟು ಏರಿಕೆ ಕಂಡಿವೆ.

ಎರಡು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ₹8.52 ಲಕ್ಷ ಕೋಟಿ ಹೆಚ್ಚಳವಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,436 ಅಂಶ ಏರಿಕೆ ಕಂಡು, 79,943 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 445 ಅಂಶ ಏರಿಕೆ ಕಂಡು, 24,188 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯ ಶೇ 8ರಷ್ಟು ಹಾಗೂ ಬಜಾಜ್ ಫೈನಾನ್ಸ್ ಷೇರಿನ ಮೌಲ್ಯದಲ್ಲಿ ಶೇ 6ರಷ್ಟು ಏರಿಕೆಯಾಗಿದೆ. ಮಾರುತಿ, ಟೈಟನ್, ಮಹೀಂದ್ರ ಆ್ಯಂಡ್ ಮಹೀಂದ್ರ, ಇನ್ಫೊಸಿಸ್, ಎಚ್‌ಸಿಎಲ್ ಟೆಕ್, ಜೊಮಾಟೊ, ಅಲ್ಟ್ರಾಟೆಕ್ ಸಿಮೆಂಟ್ ಹಾಗೂ ಕೋಟಕ್ ಮಹೀಂದ್ರ ಬ್ಯಾಂಕ್ ಷೇರಿನ ಮೌಲ್ಯ ಹೆಚ್ಚಳವಾಗಿದೆ.

ಸನ್ ಫಾರ್ಮಾ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 1.09ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 75.47 ಡಾಲರ್ ಆಗಿದೆ.

ರೂಪಾಯಿ ಮೌಲ್ಯ 11 ಪೈಸೆ ಇಳಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಗುರುವಾರದ ವಹಿವಾಟಿನಲ್ಲಿ 11 ಪೈಸೆ ಇಳಿಕೆಯಾಗಿದೆ.

ವಹಿವಾಟಿನ ಅಂತ್ಯದ ವೇಳೆಗೆ ಪ್ರತೀ ಡಾಲರ್ ಮೌಲ್ಯ ₹85.75 ಆಗಿದೆ. ದೇಶೀಯ ಷೇರುಪೇಟೆಯಲ್ಲಿ ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಳವಾಗಿದೆ. ಇದು ಡಾಲರ್ ಮೌಲ್ಯ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ಮಂಗಳೂರಿನ ಕಛೇರಿಗೆ Tally, Account/ ತಿಳಿದಿರುವ ಹುಡುಗ/ಹುಡುಗಿ ಬೇಕಾಗಿದ್ದಾರೆ. (PG ಸೌಲಭ್ಯ ಇದೆ). ಸಂಪರ್ಕಿಸಿ : 9980341034. shasthacreationsmlr@gmail.com

Domestic Helpers / Housekeeping

ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಆಸ್ಪತ್ರೆಗೆ ಅರ್ಜೆಂಟಾಗಿ ಹೌಸ್ ಕೀಪಿಂಗ್ ಬಾಯ್ಸ್ ಬೇಕಾಗಿದ್ದಾರೆ. ಸಂಬಳ: 19300/-. ಸಂಪರ್ಕಿಸಿ: ಹೇಮಾವತಿ: 9945779607, ಸಂದೀಪ: 9108946691, ಮಿಥುನ್: 9112959375.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9900859248

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA
@ 500/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9901641752
9845114560
*Conditions apply

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ತಿಂಗಳಿಗೆ ವೇತನ30000 ರಿಂದ 35000/- ವರೆಗೆ. ವಿಳಾಸ : ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು.9019626612

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

★ಭಾರತದ ಪ್ರಖ್ಯಾತ★ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನ ರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ,ಮಹಮ್ಮಾಯಿ, ಮನ್ನೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

ಸ್ತ್ರೀ- ಪುರುಷ ವಶೀಕರಣ, ಮಾಟ ಮಂತ್ರ, ಶತ್ರು ನಾಶ,ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ. ಕೇರಳದ ಜ್ಯೋತಿಷ್ಯರು, ಸುಮಂತ್: 8722756967.

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ವ್ಯಾಪಾರ

Business Offers

Franchise

AYODHYA FOODS. We are makers of soya paneer(Tofu), soya milk, flavored soya milk, dose and idli batter, For distributorship contact: 9845949869.

ಪ್ರವಾಸ

Travel

21.01.2025 ಕುಂಭಮೇಳ ಪ್ರಯುಕ್ತ ರಿಯಾಯಿತಿ ದರದಲ್ಲಿ 6ದಿನ ವಿಮಾನದಲ್ಲಿ ಕಾಶಿ ಗಯಾ ಅಯೋಧ್ಯಾ ಅಲಹಾಬದ್ (ಕೆಲವೇ ಸೀಟುಗಳಿವೆ) 06/03/2025, 10/14ದಿನಗಳು ರೈಲು/ವಿಮಾನದಲ್ಲಿ ದೆಹಲಿ ಮಥುರ ಆಗ್ರ ಅಲಹಾಬದ್ ಕಾಶಿ,ಗಯಾ,ಅಯೋಧ್ಯೆ ಹರಿದ್ವರ, ಇತ್ಯಾದಿ ಜನವರಿ ಫೆಬ್ರುವರಿಯಲ್ಲಿ ಅಂಡಮಾನ್ Royal Package "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" -9739847429/ 9845560219

17.02.2025 ರಿಂದ 17 ದಿನಗಳ ಭುವನೇಶ್ವರ್ ಕೊನಾರ್ಕ್ ಪುರಿಜಗನ್ನಾಥ್ ಗಯಾ,ನೇಪಾಳ,ಕಾಶಿ ಅಲಹಾಬಾದ್,ಅಯೋಧ್ಯಾ. ಮಹಾಶಿವರಾತ್ರಿಯೆಂದು ನೇಪಾಳ ಪಶುಪತಿನಾಥ ದರ್ಶನ ಪೋಕ್ರಾ ಮುಕ್ತಿನಾಥ ಸಂಪರ್ಕಿಸಿ: ವಿಷ್ಣು ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು-70. 9342287551 8050629305

24.1.2025 ಗುರುವಾಯುರು, ಮುನ್ನಾರ್, ಕೊಚ್ಚಿ. ಅಲಪೇ, ತಿರುವನಂತಪುರ, ಕನ್ಯಾಕುಮಾರಿ, ರಾಮೇಶ್ವರಂಸಾ 8.2.2025 ಅಯೋಧ್ಯಾ, ಕಾಶಿ,ಗಯಾ, ಪ್ರಯಾಗ್‌ರಾಜ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

28.1.2025 ತಮಿಳುನಾಡು: 11.2.25 ಗುಜರಾತ್ ಮಧ್ಯಪ್ರದೇಶ ನಾಲ್ಕು ಜ್ಯೋತಿರ್ಲಿಂಗ 28.2.25 ಜಾರ್ಖಂಡ್ ವೈದ್ಯನಾಥ ಕಾಶಿ ಅಯೋಧ್ಯೆ 28.2.25 ಕೇರಳ 15.3.25 ರಾಜಸ್ಥಾನ್ ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು: 8496044942

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಕ್ಕರೆ ಉತ್ಪಾದನೆ ಶೇ 16ರಷ್ಟು ಕುಸಿತ

ನವದೆಹಲಿ (ಪಿಟಿಐ): 2024–25ನೇ ಮಾರುಕಟ್ಟೆ ವರ್ಷದ (ಅಕ್ಟೋಬರ್–ಸೆಪ್ಟೆಂಬರ್) ಮೊದಲ ತ್ರೈಮಾಸಿಕದಲ್ಲಿ ಸಕ್ಕರೆ ಉತ್ಪಾದನೆಯು ಶೇ 16ರಷ್ಟು ಕುಸಿತವಾಗಿದೆ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘ (ಐಎಸ್‌ಎಂಎ) ತಿಳಿಸಿದೆ.

ಕಳೆದ ಮಾರುಕಟ್ಟೆ ವರ್ಷದ ಇದೇ ಅವಧಿಯಲ್ಲಿ ಕಾರ್ಖಾನೆಗಳು 113 ಲಕ್ಷ ಟನ್ ಸಕ್ಕರೆ ಉತ್ಪಾದಿಸಿದ್ದವು. ಈಗ 95.40 ಲಕ್ಷ ಟನ್ ಉತ್ಪಾದಿಸಿವೆ ಎಂದು ಹೇಳಿದೆ.

ಈ ಬಾರಿ ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಕಬ್ಬು ಅರೆಯುವಿಕೆ ಉತ್ತಮವಾಗಿದ್ದು, 493 ಕಾರ್ಖಾನೆಗಳು ಕಾರ್ಯಾಚರಣೆ ನಡೆಸುತ್ತಿವೆ ಎಂದು ತಿಳಿಸಿದೆ.

ಕಳೆದ ಮಾರುಕಟ್ಟೆ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮೊದಲ ತ್ರೈಮಾಸಿಕದಲ್ಲಿ ಉತ್ತರ ಪ್ರದೇಶದಲ್ಲಿ 32.80 ಲಕ್ಷ ಟನ್, ಮಹಾರಾಷ್ಟ್ರದಲ್ಲಿ 30 ಲಕ್ಷ ಟನ್ ಹಾಗೂ ಕರ್ನಾಟಕದಲ್ಲಿ 20.40 ಲಕ್ಷ ಟನ್ ಉತ್ಪಾದನೆ ಕಡಿಮೆಯಾಗಿದೆ.

ಈ ಮಾರುಕಟ್ಟೆ ವರ್ಷದಲ್ಲಿ 280 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗುವ ನಿರೀಕ್ಷೆಯಿದೆ ಎಂದು ಐಎಸ್‌ಎಂಎ ಅಂದಾಜಿಸಿದೆ.

ಎಂಡಿಸಿಸಿ ಬ್ಯಾಂಕ್‌ನ ಖಾತೆಗಳಿಂದ ಸರ್ಕಾರಿ ನೌಕರರಿಗೆ ವೇತನ–ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಮುಂಬೈ: ‘ಸರ್ಕಾರಿ ನೌಕರರ ವೇತನ ಬಟವಾಡೆ ಮಾಡಲು ಮುಂಬೈನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲೂ (ಎಂಡಿಸಿಸಿ) ಖಾತೆಗಳನ್ನು ತೆರೆಯಬಹುದು’ ಎಂಬ ಪ್ರಸ್ತಾವಕ್ಕೆ ಮಹಾರಾಷ್ಟ್ರ ಸರ್ಕಾರ ಸಮ್ಮತಿಸಿದೆ.

‘ಮುಂಬೈ ಬ್ಯಾಂಕ್’ ಎಂದೇ ಹೆಸರಾದ ಎಂಡಿಸಿಸಿ, ಸದ್ಯ ಬಿಜೆಪಿ ಎಂಎಲ್‌ಸಿ ಪ್ರವೀಣ್ ದರೇಕರ್ ಅವರ ನಿಯಂತ್ರಣದಲ್ಲಿದೆ. ಇದೇ ಕಾರಣಕ್ಕೆ ಸರ್ಕಾರದ ನಿರ್ಧಾರ ರಾಜಕೀಯ ಕಿಡಿ ಹೊತ್ತಿಸಬಹುದು ಎನ್ನಲಾಗಿದೆ.

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯು ಈ ಕುರಿತ ಪ್ರಸ್ತಾವಕ್ಕೆ ಸಮ್ಮತಿ ನೀಡಿತು. ದರೇಕರ್ ಅವರು ಫಡಣವೀಸ್ ಆಪ್ತ ವಲಯದ ಶಾಸಕರಾಗಿದ್ದಾರೆ.

ಎಂಡಿಸಿಸಿ ಬ್ಯಾಂಕ್‌ನಲ್ಲಿ ಸಂಬಳಗಳನ್ನು ಬಡವಾಡೆ ಮಾಡಲು ಖಾತೆ ತೆರೆಯಬಹುದು ಎಂಬುದರ ಜೊತೆಗೆ, ಸಾರ್ವಜನಿಕ ಸಂಸ್ಥೆಗಳು, ನಿಗಮಗಳು ಎಂಡಿಸಿಸಿಯಲ್ಲಿ ಹೆಚ್ಚುವರಿ ಹೂಡಿಕೆ ಮಾಡಬಹುದು ಎಂಬ ತೀರ್ಮಾನಕ್ಕೂ ಸಂಪುಟ ಸಮ್ಮತಿಸಿತು.

ಟ್ರಕ್ ಹರಿಸಿ ಹತ್ಯೆ: ಐಎಸ್‌ನಿಂದ ಸ್ಫೂರ್ತಿ ಪಡೆದಿದ್ದ ಆರೋಪಿ

ನ್ಯೂ ಆರ್ಲಿನ್ಸ್ (ಅಮೆರಿಕ) (ಎಪಿ/ಪಿಟಿಐ): ಹೊಸ ವರ್ಷದ ಸಂಭ್ರಮಾಚರಣೆ ಸಂದರ್ಭದಲ್ಲಿ ಜನರ ಮೇಲೆ ಟ್ರಕ್ ಹರಿಸಿ 15 ಮಂದಿ ಸಾವಿಗೆ ಕಾರಣವಾಗಿದ್ದ ಮಾಜಿ ಸೈನಿಕ, ಇಸ್ಲಾಮಿಕ್ ಸ್ಟೇಟ್ ಗುಂಪಿನಿಂದ ಸ್ಫೂರ್ತಿ ಪಡೆದಿದ್ದ. ಕೃತ್ಯಕ್ಕೂ ಮುನ್ನ ಸಾಮಾಜಿಕ ಮಾಧ್ಯಮದಲ್ಲಿ ಆತ ಪೋಸ್ಟ್ ಮಾಡಿದ್ದ ವಿಡಿಯೊದಿಂದ ಇದು ತಿಳಿದುಬಂದಿದೆ ಎಂದು ಅಧ್ಯಕ್ಷ ಜೋ ಬೈಡನ್ ತಿಳಿಸಿದ್ದಾರೆ.

ಚಾಲಕನನ್ನು ಟೆಕ್ಸಾಸ್ ನಿವಾಸಿ, 42 ವರ್ಷದ ಶಂಶುದ್ದೀನ್ ಜಬ್ಬಾರ್ ಎಂಬುದಾಗಿ ಗುರುತಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ ವಾಹನದಲ್ಲಿ ಐಎಸ್ ಸಂಘಟನೆಯ ಬಾವುಟ ಇತ್ತು ಎಂದು ಎಫ್‌ಬಿಐ ತಿಳಿಸಿದೆ.

‘ಇದೊಂದು ಭಯೋತ್ಪಾದಕ ಕೃತ್ಯ. ಇದರ ಹಿಂದೆ ಆರೋಪಿ ಒಬ್ಬನೇ ಇದ್ದನೆಂದು ನಂಬಲು ಸಾಧ್ಯವಿಲ್ಲ. ವಾಹನದಲ್ಲಿ ಕಚ್ಚಾ ಬಾಂಬ್‌ಗಳು ಸೇರಿದಂತೆ ಸ್ಫೋಟಕಗಳು ಪತ್ತೆಯಾಗಿದ್ದು, ಈ ಬಗ್ಗೆ ತನಿಖೆ ನಡೆಯುತ್ತಿದೆ’ ಎಂದು ಎಫ್‌ಬಿಐ ಹೇಳಿದೆ.

ಮೋದಿ ಖಂಡನೆ (ನವದೆಹಲಿ ವರದಿ): ಪ್ರಧಾನಿ ನರೇಂದ್ರ ಮೋದಿ ಅವರು ನ್ಯೂ ಆರ್ಲಿನ್ಸ್‌ನ ಘಟನೆಯನ್ನು ಖಂಡಿಸಿದ್ದಾರೆ. ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ.

ಅಡಿಗಾಸ್ ಯಾತ್ರಾ ಸಂಸ್ಥೆಯ 31ನೇ ವರ್ಷದ ಪ್ರವಾಸಿ ಕೈಪಿಡಿಯನ್ನು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಬಿಡುಗಡೆ ಮಾಡಿದರು

ಅಡಿಗಾಸ್‌ನಿಂದ ಯಾತ್ರಾ ಪ್ರವಾಸಿ ಕೈಪಿಡಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡಿಗಾಸ್ ಯಾತ್ರಾ ಸಂಸ್ಥೆಯ 31ನೇ ವರ್ಷದ ‘ಪ್ರವಾಸಿ ಕೈಪಿಡಿ’ಯನ್ನು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು, ಧರ್ಮಸ್ಥಳದಲ್ಲಿ ಇತ್ತೀಚೆಗೆ ಬಿಡುಗಡೆ ಮಾಡಿದರು.

ಈ ವೇಳೆ ಅಡಿಗಾಸ್ ಸಂಸ್ಥೆಯ ಸಂಸ್ಥಾಪಕ ನಾಗರಾಜ ಅಡಿಗ, ನಿರ್ದೇಶಕಿ ಆಶಾ ಅಡಿಗ, ಆದಿತ್ಯಾ ಅಡಿಗ, ಧರ್ಮಸ್ಥಳ ಪದವಿಪೂರ್ವ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥ ಪ್ರಸನ್ನಕುಮಾರ್ ಐತಾಳ್, ಅಡಿಗಾಸ್ ಸಂಸ್ಥೆ ಆಡಳಿತ ಮಂಡಳಿಯ ನಾಗೇಂದ್ರ ಕೆ.ಎಸ್., ಪ್ರಸನ್ನ ಎಚ್.ಕೆ., ಮಹೇಶ್ ಎಚ್.ಜೆ., ಎಂ. ರಮೇಶ್, ಶಶಾಂಕ್ ಕುಮಾರ್ ಕೆ., ಎಚ್.ಕೆ. ನರೇಶ್, ಆದಿತ್ಯಾ ಭಟ್ ಇದ್ದರು.

ಅಡಿಗಾಸ್ ಸಂಸ್ಥೆಯು 500ಕ್ಕೂ ಹೆಚ್ಚು ವೈವಿಧ್ಯಮಯ ಆಕರ್ಷಕ ಪ್ರವಾಸಿ ಯೋಜನೆಗಳನ್ನು ಜಾರಿಗೊಳಿಸಿದೆ. ದೇಶ ಮತ್ತು ವಿದೇಶಗಳಿಗೆ ಪ್ರವಾಸ ಆಯೋಜಿಸುವ ಮೂಲಕ ಜನರ ಮೆಚ್ಚುಗೆ ಪಡೆದಿದೆ. ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ವಾಸ್ತವ್ಯ, ಐಷಾರಾಮಿ ಬಸ್‌ಗಳಲ್ಲಿ ಪ್ರಯಾಣ, ಸಂಸ್ಥೆಯ ನುರಿತ ಅಡುಗೆ ಸಿಬ್ಬಂದಿಯಿಂದ ಊಟೋಪಚಾರ, ಸ್ಥಳೀಯ ಮಾರ್ಗದರ್ಶಕರನ್ನು ಒದಗಿಸಲಾಗುತ್ತದೆ ಎಂದು ಸಂಸ್ಥೆ ತಿಳಿಸಿದೆ.

ಸಂಸ್ಥೆಯು ನೇಪಾಳ, ಭೂತಾನ್, ಯುರೋಪ್, ಬ್ರಿಟನ್, ಆಸ್ಟ್ರೇಲಿಯಾ, ಜಪಾನ್, ಹಾಂಗ್‌ಕಾಂಗ್- ಮಕಾವು, ವಿಯೆಟ್ನಾಂ, ಬಾಲಿ, ಸಿಂಗಪುರ, ಮಲೇಷ್ಯಾ, ಥಾಯ್ಲೆಂಡ್, ದುಬೈ, ಶ್ರೀಲಂಕಾಕ್ಕೆ ಪ್ರವಾಸಗಳನ್ನು ಆಯೋಜಿಸುತ್ತಿದೆ. ಸಾವಿರಾರು ಪ್ರವಾಸಿಗರು ಪ್ರತಿವರ್ಷ ಈ ಪ್ರವಾಸಗಳಲ್ಲಿ ಭಾಗಿಯಾಗಿದ್ದಾರೆ ಎಂದು ತಿಳಿಸಿದೆ. ಪ್ರವಾಸಿ ಕೈಪಿಡಿ, ಸಂಸ್ಥೆ ಬಗ್ಗೆ ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 080-26616678/ ಮೊಬೈಲ್ 9449478944 ಸಂಪರ್ಕಿಸಿ.

ಸುದ್ದಿ 2 ನಿಮಿಷ

ಸಗಟು ಹಣದುಬ್ಬರ: ಆಧಾರ ವರ್ಷ ಪರಾಮರ್ಶೆಗೆ ಸಮಿತಿ ರಚನೆ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರದ ಅಳತೆಗೆ ನಿಗದಿಪಡಿಸಿರುವ ಆಧಾರ ವರ್ಷದ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಕಾರ್ಯಕಾರಿ ಸಮಿತಿ ರಚಿಸಿದೆ.

ನೀತಿ ಆಯೋಗದ ಸದಸ್ಯ ರಮೇಶ್ ಚಾಂದ್ ಅಧ್ಯಕ್ಷತೆಯ ಈ ಸಮಿತಿಯಲ್ಲಿ 18 ಸದಸ್ಯರು ಇದ್ದಾರೆ. ಸದ್ಯ ಸಗಟು ಬೆಲೆ ಸೂಚ್ಯಂಕದ (ಡಬ್ಲ್ಯುಪಿಐ) ಆಧಾರ ವರ್ಷವು 2011–12 ಆಗಿದೆ. ಇದನ್ನು 2022–23ಕ್ಕೆ ನಿಗದಿಪಡಿಸುವ ಬಗ್ಗೆ ಸಮಿತಿಯು ಪರಾಮರ್ಶೆ ನಡೆಸಲಿದೆ.

ಆಧಾರ ವರ್ಷದ ಪರಿಷ್ಕರಣೆಯಿಂದ ದೇಶದಲ್ಲಿ ಸರಕುಗಳ ಬೆಲೆ ಸ್ಥಿತಿಯನ್ನು ನಿಖರವಾಗಿ ತಿಳಿಸಲು ನೆರವಾಗಲಿದೆ ಎಂದು ಸರ್ಕಾರ ಹೇಳಿದೆ.

ಸಗಟು ಬೆಲೆ ಸೂಚ್ಯಂಕ ಮತ್ತು ಉತ್ಪಾದಕ ಬೆಲೆ ಸೂಚ್ಯಂಕದ (ಪಿಪಿಐ) ಸರಕು ಬುಟ್ಟಿಗೆ ಹೊಸದಾಗಿ ಯಾವ ಸರಕುಗಳನ್ನು ಸೇರಿಸಬೇಕು ಎಂಬ ಬಗ್ಗೆ ಸಮಿತಿಯು ಸಲಹೆ ನೀಡಲಿದೆ. ಸದ್ಯ ಈ ಬುಟ್ಟಿಯಲ್ಲಿ 697 ಸರಕುಗಳು ಇವೆ.

ಆಧಾರ ವರ್ಷವನ್ನು 2017–18ಕ್ಕೆ ನಿಗದಿಪಡಿಸುವ ಬಗ್ಗೆ ಈ ಮೊದಲು ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು (ಡಿಪಿಐಐಟಿ) ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

ತಯಾರಿಕಾ ಚಟುವಟಿಕೆ ಇಳಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಬೆಳವಣಿಗೆಯು 2024ರ ಡಿಸೆಂಬರ್‌ನಲ್ಲಿ 12 ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿದೆ. ಹೊಸ ಆರ್ಡರ್‌ಗಳ ಕೊರತೆಯೇ ಇದಕ್ಕೆ ಕಾರಣ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ವರದಿ ಗುರುವಾರ ತಿಳಿಸಿದೆ.

ನವೆಂಬರ್‌ನಲ್ಲಿ 56.5 ಇದ್ದ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) ಡಿಸೆಂಬರ್‌ನಲ್ಲಿ 56.4ಕ್ಕೆ ಇಳಿದಿದೆ. ಹೊಸ ವ್ಯಾಪಾರದ ಬೇಡಿಕೆ ಕುಸಿದಿರುವುದರಿಂದ ಉತ್ಪಾದನೆ ಪ್ರಮಾಣ ಇಳಿದಿದೆ ಎಂದು ತಿಳಿಸಿದೆ. ಆದರೆ, ದೀರ್ಘಾವಧಿ ಸರಾಸರಿಗೆ ಹೋಲಿಸಿದರೆ ಸೂಚ್ಯಂಕವು 54.1ಕ್ಕಿಂತ ಹೆಚ್ಚಿದೆ. ಇದು ಸದೃಢವಾದ ಬೆಳವಣಿಗೆಯ ಸೂಚಕವಾಗಿದೆ ಎಂದು ಹೇಳಿದೆ.

‘ಹೊಸ ಆರ್ಡರ್‌ಗಳಿಗೆ ಬೇಡಿಕೆ ಕಡಿಮೆಗೊಂಡಿದೆ. ಇದು ಮುಂಬರುವ ತಿಂಗಳುಗಳಲ್ಲಿ ಉತ್ಪಾದನೆಯು ಇಳಿಕೆಯಾಗುವುದನ್ನು ಸೂಚಿಸುತ್ತಿದೆ’ ಎಂದು ಎಚ್‌ಎಸ್‌ಬಿಸಿ ಅರ್ಥಶಾಸ್ತ್ರಜ್ಞ ಇನೆಸ್ ಲ್ಯಾಮ್ ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-48500
ಸಾಗರ	
ಬಿಳಿಗೋಟು	11214-25969
ಚಾಲಿ	17499-34099
ಕೋಕ	12699-25509
ಕೆಂಪುಗೋಟು	18129-32199
ರಾಶಿ	27869-50669
ಸಿಪ್ಪೆಗೋಟು	9100-17032
ಶಿವಮೊಗ್ಗ	
ಬೆಟ್ಟೆ	54100-56599
ಗೊರಬಲು	16011-32099
ರಾಶಿ	32999-51099
ಸರಕು	48599-75000
ಸಿದ್ದಾಪುರ	
ಬಿಳಿಗೋಟು	24109-27239
ಚಾಲಿ	31129-37499
ಕೋಕ	19089-22319
ಕೆಂಪುಗೋಟು	18899-18899
ರಾಶಿ	42099-47229
ತಟ್ಟಿಬೆಟ್ಟೆ	25099-39389
ಶಿರಸಿ	
ಬೆಟ್ಟೆ	30169-38760
ಬಿಳಿಗೋಟು	23309-29733
ಚಾಲಿ	34366-38799
ಕೆಂಪುಗೋಟು	17699-19199
ರಾಶಿ	42298-45389
ಯಲ್ಲಾಪುರ	
ಅಪಿ	63150-67933
ಬಿಳಿಗೋಟು	15100-28500
ಚಾಲಿ	28799-38201
ಕೋಕ	4509-17109
ಕೆಂಪುಗೋಟು	14800-27990
ರಾಶಿ	39609-61689
ತಟ್ಟಿಬೆಟ್ಟೆ	28000-38819

ಸಂಕ್ಷಿಪ್ತ ಸುದ್ದಿ

ತನ್ನದೇ ಅಧಿಕಾರಿಗಳ ವಿರುದ್ಧ ಸಿಬಿಐ ತನಿಖೆ

ಮುಂಬೈ: ಭ್ರಷ್ಟಾಚಾರವನ್ನು ಎಳ್ಳಷ್ಟೂ ಸಹಿಸುವುದಿಲ್ಲ ಎಂಬ ನೀತಿಯ ಭಾಗವಾಗಿ ಕೇಂದ್ರೀಯ ತನಿಖಾ ದಳವು (ಸಿಬಿಐ) ತನ್ನದೇ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ, ಅವರ ಬಳಿಯಿದ್ದ ಶಂಕಿತ ಅಕ್ರಮ ನಗದು ಮತ್ತು ದಾಖಲೆಗಳನ್ನು ವಶಪಡಿಸಿಕೊಂಡಿದೆ.

ತನಿಖೆಯ ಭಾಗವಾಗಿ ಮುಂಬೈ, ದೆಹಲಿ, ಜೈಪುರ ಮತ್ತು ಕೋಲ್ಕತ್ತ ಸೇರಿದಂತೆ 20ಕ್ಕೂ ಅಧಿಕ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದೆ.

ಈ ವೇಳೆ ಸಿಬಿಐನ ಬ್ಯಾಂಕ್ ಭದ್ರತೆ ಮತ್ತು ವಂಚನೆ ದಳದ ಪೊಲೀಸ್ ಉಪ ಅಧೀಕ್ಷಕರಾಗಿರುವ ಬಿ.ಎಮ್ ಮೀನಾ ಹಾಗೂ ಇತರ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕಾರ್ಯಾಚರಣೆಯಲ್ಲಿ ₹55 ಲಕ್ಷ ನಗದು, ₹1.78 ಕೋಟಿ ಮೌಲ್ಯದ ಆಸ್ತಿ ಪತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸಂಸ್ಥೆಯು ತನಿಖೆ ನಡೆಸುತ್ತಿರುವ ಪ್ರಕರಣಗಳಲ್ಲಿರುವ ಬೇರೆ ಬೇರೆ ವ್ಯಕ್ತಿಗಳಿಂದ ಅಕ್ರಮವಾಗಿ ಈ ಅಧಿಕಾರಿಗಳು ಲಾಭ ಪಡೆದುಕೊಂಡಿದ್ದಾರೆ. ವಿವಿಧ ಮಧ್ಯವರ್ತಿ ಸೇವೆಗಳನ್ನು ಬಳಸಿಕೊಂಡು, ಅಧಿಕಾರಿಗಳು ಲಂಚದ ಹಣವನ್ನು ವರ್ಗಾಯಿಸಿಕೊಂಡಿದ್ದಾರೆ ಎಂದು ಸಿಬಿಐ ತಿಳಿಸಿದೆ.

ಹಾಸ್ಟೆಲ್ ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದ ಮೇಡ್‌ಚಲ್‌ದಲ್ಲಿ ಇರುವ ಸಿಎಂಆರ್ ಎಂಜಿನಿಯರಿಂಗ್ ಕಾಲೇಜು ಹಾಸ್ಟೆಲ್‌ನ ಶೌಚಾಲಯಗಳಲ್ಲಿ ಗೋಪ್ಯವಾಗಿ ವಿಡಿಯೊ ಚಿತ್ರೀಕರಿಸಲಾಗುತ್ತಿದೆ, ಅದನ್ನು ತಡೆಯಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿನಿಯರು ಗುರುವಾರ ಪ್ರತಿಭಟನೆ ನಡೆಸಿದರು.

ಕಾಲೇಜು ಆಡಳಿತ ಮಂಡಳಿಯು ಹಾಸ್ಟೆಲ್ ವಾರ್ಡನ್‌ನನ್ನು ಕೆಲಸದಿಂದ ವಜಾಗೊಳಿಸಿದ್ದು, ಪೊಲೀಸರು ಪ್ರಕರಣದ ತನಿಖೆ ಪ್ರಾರಂಭಿಸಿದೆ.

ಗೋಪ್ಯವಾಗಿ ವಿಡಿಯೊ ಚಿತ್ರೀಕರಿಸಲಾಗುತ್ತಿದೆ ಎಂದು ಎರಡು ತಿಂಗಳಿನಿಂದ ಕಾಲೇಜು ಆಡಳಿತ ಮಂಡಳಿಯವರ ಗಮನಕ್ಕೆ ತಂದರೂ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ವಿದ್ಯಾರ್ಥಿನಿಯರು ಆರೋಪಿಸಿದರು. ತೆಲಂಗಾಣ ರಾಜ್ಯ ಮಹಿಳಾ ಆಯೋಗ ಕೂಡ ಪ್ರಕರಣದ ತನಿಖೆ ನಡೆಸುವಂತೆ ಸೈಬರಾಬಾದ್ ಪೊಲೀಸ್ ಕಮಿಷನರ್‌ಗೆ ನಿರ್ದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಐವರನ್ನು ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇಶದ್ರೋಹ ಆರೋಪದಡಿ ಸೆರೆವಾಸದಲ್ಲಿರುವ ಹಿಂದೂ ಮುಖಂಡ

ಚಿನ್ಮಯಿ ಕೃಷ್ಣದಾಸ್‌ಗೆ ಜಾಮೀನು ನಿರಾಕರಣೆ

ಢಾಕಾ (ಪಿಟಿಐ): ದೇಶದ್ರೋಹ ಪ್ರಕರಣದಲ್ಲಿ ಬಂಧಿತರಾಗಿರುವ ಹಿಂದೂ ಮುಖಂಡ, ಇಸ್ಕಾನ್‌ನ ಮಾಜಿ ನಾಯಕ ಚಿನ್ಮಯಿ ಕೃಷ್ಣದಾಸ್ ಅವರಿಗೆ ಚಟ್ಟೋಗ್ರಾಮದ ನ್ಯಾಯಾಲಯ ಗುರುವಾರ ಜಾಮೀನು ನಿರಾಕರಿಸಿತು.

ಚಿನ್ಮಯ್ ಅವರು ವಿಚಾರಣೆಗೆ ವರ್ಚುವಲ್ ಆಗಿ ಹಾಜರಾದರು. ಅವರ ಪರ ವಾದಿಸಲು 11 ವಕೀಲರಿದ್ದ ತಂಡ ಹಾಜರಿತ್ತು. ಸುಮಾರು 30 ನಿಮಿಷಗಳವರೆಗೆ ವಿಚಾರಣೆ ನಡೆಯಿತು.

ವಾದ, ಪ್ರತಿವಾದಗಳನ್ನು ಆಲಿಸಿದ ಮೆಟ್ರೊಪಾಲಿಟನ್ ಸೆಷನ್ಸ್ ನ್ಯಾಯಾಧೀಶ ಮೊಹಮ್ಮದ್ ಸೈಫುಲ್ ಇಸ್ಲಾಂ ಅವರು ಚಿನ್ಮಯಿ ಕೃಷ್ಣದಾಸ್ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು ಎಂದು ನ್ಯಾಯಾಲಯದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಬಾಂಗ್ಲಾದೇಶ ಸಮ್ಮಿಲಿತ ಸನಾತನಿ ಜಾಗರಣ್ ಜೋತೆ’ ವಕ್ತಾರರಾದ ಚಿನ್ಮಯಿ ಕೃಷ್ಣದಾಸ್ ಅವರನ್ನು ನವೆಂಬರ್ 25ರಂದು ಢಾಕಾದ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿತ್ತು. ಅವರಿಗೆ ಜಾಮೀನು ನಿರಾಕರಿಸಿದ್ದ ಚಟ್ಟೋಗ್ರಾಮದ ನ್ಯಾಯಾಲಯವು, ಜೈಲಿಗೆ ಕಳುಹಿಸಿತ್ತು.

ಚಿನ್ಮಯಿ ಕೃಷ್ಣದಾಸ್

ಚಿನ್ಮಯಿ ಅವರು ಬಾಂಗ್ಲಾ ದೇಶದ ಧ್ವಜವನ್ನು ಅಪವಿತ್ರಗೊಳಿಸಿದ ಆರೋಪದ ಮೇರೆಗೆ ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಿ, ಬಂಧಿಸಲಾಯಿತು. ಅವರ ಬಂಧನ ವಿರೋಧಿಸಿ ಪ್ರತಿಭಟನೆಗಳು ನಡೆದಿದ್ದವಲ್ಲದೇ, ಹಿಂಸಾಚಾರಕ್ಕೆ ತಿರುಗಿತ್ತು. ವಕೀಲರೊಬ್ಬರ ಹತ್ಯೆ ನಡೆದ ಮೇಲೆ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡಿತು.

‘ಚಿನ್ಮಯಿ ಅವರು ರಾಷ್ಟ್ರಧ್ವಜಕ್ಕೆ ಅಗೌರವ ತೋರಿದ್ದಾರೆ ಎಂಬ ಆರೋಪ ನಿರಾಧಾರ. ಏಕೆಂದರೆ ಅದು ರಾಷ್ಟ್ರಧ್ವಜವಾಗಿರಲಿಲ್ಲ. ಹೀಗಾಗಿ ಈ ಪ್ರಕರಣ ಮುಂದುವರಿಸಲು ಯೋಗ್ಯವಲ್ಲ ಎಂದು ನಾವು ನ್ಯಾಯಾಲಯದಲ್ಲಿ ವಾದಿಸಿದೆವು’ ಎಂದು ಚಿನ್ಮಯಿ ಪರ ವಕೀಲ ಅಪೂರ್ವ ಕುಮಾರ್ ಭಟ್ಟಾಚಾರ್ಯ ಸುದ್ದಿಗಾರರಿಗೆ ತಿಳಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಪಬ್ಲಿಕ್ ಪ್ರಾಸಿಕ್ಯೂಟರ್ ಮೊಫಿಜುಲ್ ಹಕ್ ಭುಯಾನ್, ‘ಈ ಜಾಮೀನು ಅರ್ಜಿಯನ್ನು ನಾವು ವಿರೋಧಿಸಿದೆವು. ನ್ಯಾಯಾಲಯ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ’ ಎಂದರು. ಕೋರ್ಟ್ ಸುತ್ತ ಪೊಲೀಸರು ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.

ಕೋಲ್ಕತ್ತ: ಇಸ್ಕಾನ್ ಬೇಸರ

ಕೋಲ್ಕತ್ತ (ಪಿಟಿಐ): ಚಿನ್ಮಯಿ ಕೃಷ್ಣದಾಸ್ ಅವರಿಗೆ ಬಾಂಗ್ಲಾದೇಶದ ನ್ಯಾಯಾಲಯ ಜಾಮೀನು ನಿರಾಕರಿಸಿದ್ದಕ್ಕೆ ಕೋಲ್ಕತ್ತದ ಇಸ್ಕಾನ್ ಬೇಸರ ವ್ಯಕ್ತಪಡಿಸಿದೆ.

‘ಚಿನ್ಮಯಿ ಅವರ ಜಾಮೀನು ಮನವಿಯನ್ನು ನಿರಾಕರಿಸಿರುವುದು ದುಃಖಕರ. ಹೊಸ ವರ್ಷದಲ್ಲಿ ಅವರ ಬಿಡುಗಡೆಯಾಗುತ್ತದೆ ಎಂದು ನಾವು ಭಾವಿಸಿದ್ದೆವು’ ಎಂದು ಕೋಲ್ಕತ್ತದ ಇಸ್ಕಾನ್ ವಕ್ತಾರ ರಾಧಾರಮಣ್ ದಾಸ್ ಹೇಳಿದ್ದಾರೆ.

‘ಆದರೆ, ಈ ಬಾರಿ ವಿಚಾರಣೆ ವೇಳೆ ನ್ಯಾಯಾಲಯದಲ್ಲಿ ದಾಸ್ ಅವರನ್ನು ವಕೀಲರು ಪ್ರತಿನಿಧಿಸಿದ್ದರು ಎಂಬುದು ತುಸು ಸಮಾಧಾನ ತರಿಸಿದೆ. ಈ ಹಿಂದಿನ ವಿಚಾರಣೆಗಳಲ್ಲಿ ಹೀಗಾಗಿರಲಿಲ್ಲ’ ಎಂದು ಅವರು ತಿಳಿಸಿದ್ದಾರೆ.

‘40 ದಿನಗಳಿಂದ ಜೈಲಿನಲ್ಲಿರುವ ಚಿನ್ಮಯಿ ಅವರ ಆರೋಗ್ಯ ಹದಗೆಟ್ಟಿರುವ ಬಗ್ಗೆ ವರದಿಯಾಗಿದೆ. ಹೀಗಾಗಿ ಅವರಿಗೆ ಜಾಮೀನು ದೊರೆಯಬಹುದು ಎಂಬ ನಿರೀಕ್ಷೆ ಇತ್ತು’ ಎಂದ ಅವರು, ‘ವಕೀಲರು ಈ ಕುರಿತು ಉನ್ನತ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಯೋಚಿಸಿರಬಹುದು’ ಎಂದಿದ್ದಾರೆ.

‘ರೈತ ನಾಯಕ ಜಗಜೀತ್ ಸಿಂಗ್ ಡಲ್ಲೇವಾಲ್ ವಿಚಾರವಾಗಿ ತಪ್ಪು ಚಿತ್ರಣ ನೀಡುವ ಯತ್ನ’

ಪಂಜಾಬ್ ಸರ್ಕಾರಕ್ಕೆ ಕೋರ್ಟ್ ತರಾಟೆ

ನವದೆಹಲಿ (ಪಿಟಿಐ): ಪಂಜಾಬ್ ಸರ್ಕಾರವನ್ನು ಗುರುವಾರ ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, ರೈತ ನಾಯಕ ಜಗಜೀತ್ ಸಿಂಗ್ ಡಲ್ಲೇವಾಲ್ ಅವರ ಉಪವಾಸವನ್ನು ಕೊನೆಗೊಳಿಸಲು ಯತ್ನ ನಡೆದಿದೆ ಎಂಬ ತಪ್ಪು ಚಿತ್ರಣವನ್ನು ಸರ್ಕಾರದ ಕೆಲವು ಅಧಿಕಾರಿಗಳು ಮತ್ತು ರೈತ ಮುಖಂಡರು ಮಾಧ್ಯಮಗಳ ಮೂಲಕ ನೀಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದೆ.

‘ನಿಮ್ಮ ಧೋರಣೆಯು ಹೊಂದಾಣಿಕೆಯ ಮನಃಸ್ಥಿತಿಯನ್ನು ಪ್ರದರ್ಶಿಸುತ್ತಿಲ್ಲ. ಅದೇ ಸಮಸ್ಯೆ. ಡಲ್ಲೇವಾಲ್ ಅವರು ವೈದ್ಯಕೀಯ ನೆರವು ಪಡೆದು ತಮ್ಮ ಉಪವಾಸ ಮುಂದುವರಿಸಲು ಅಡ್ಡಿಯಿಲ್ಲ...’
ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠ

ಡಲ್ಲೇವಾಲ್ ನಡೆಸುತ್ತಿರುವ ಪ್ರತಿಭಟನೆಯನ್ನು ಕೊನೆಗೊಳಿಸುವಂತೆ ಕೋರ್ಟ್ ಯಾವತ್ತೂ ಸೂಚನೆ ನೀಡಿಲ್ಲ. ಅವರ ಆರೋಗ್ಯದ ಬಗ್ಗೆ ಮಾತ್ರ ಕೋರ್ಟ್ ಕಳವಳ ಹೊಂದಿದೆ, ಅವರಿಗೆ ವೈದ್ಯಕೀಯ ನೆರವನ್ನು ತಕ್ಷಣ ಒದಗಿಸಬೇಕು ಎಂಬುದಷ್ಟೇ ಕೋರ್ಟ್‌ನ ಇರಾದೆ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ವಲ್ ಭೂಯಾನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ಸ್ಥಳದಲ್ಲಿನ ಪರಿಸ್ಥಿತಿಯನ್ನು ಇನ್ನಷ್ಟು ಸಂಕೀರ್ಣಗೊಳಿಸುವ ರೀತಿಯಲ್ಲಿ ಕೆಲವು ರೈತ ಮುಖಂಡರು ಹಾಗೂ ಪಂಜಾಬ್ ಸರ್ಕಾರದ ಕೆಲವು ಅಧಿಕಾರಿಗಳು ಮಾಧ್ಯಮಗಳ ಮೂಲಕ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂಬಂತೆ ಕಾಣುತ್ತಿದೆ ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

‘ಕೆಲವು ರೈತ ಮುಖಂಡರು ಡಲ್ಲೇವಾಲ್ ಅವರ ವಿಚಾರವಾಗಿ ಎಷ್ಟರ ಮಟ್ಟಿಗೆ ಸದುದ್ದೇಶ ಹೊಂದಿದ್ದಾರೆ ಎಂಬುದನ್ನು ನಾವು ಪರಿಶೀಲಿಸಬೇಕಿದೆ’ ಎಂದು ಪೀಠವು ಹೇಳಿದೆ.

ಡಲ್ಲೇವಾಲ್

ಪರಿಸ್ಥಿತಿಯನ್ನು ಇನ್ನಷ್ಟು ಸಂಕೀರ್ಣಗೊಳಿಸುವ ಯತ್ನ ನಡೆದಿದೆ ಎಂಬುದನ್ನು ಪಂಜಾಬ್‌ನ ಅಡ್ವೊಕೇಟ್ ಜನರಲ್ ಗುರ್ಮಿಂದರ್ ಸಿಂಗ್ ನಿರಾಕರಿಸಿದರು. ಉಪವಾಸವನ್ನು ಮುರಿಯದೆಯೇ ವೈದ್ಯಕೀಯ ನೆರವು ಪಡೆಯುವಂತೆ ಡಲ್ಲೇವಾಲ್ ಅವರ ಮನವೊಲಿಸುವ ಕೆಲಸ ನಡೆದಿದೆ ಎಂದು ಅವರು ತಿಳಿಸಿದರು.

ಡಲ್ಲೇವಾಲ್ ಅವರನ್ನು ಸನಿಹದ ಆರೋಗ್ಯ ಸೇವಾ ಕೇಂದ್ರಕ್ಕೆ ಕರೆದೊಯ್ಯುವಂತೆ ಡಿಸೆಂಬರ್ 20ರಂದು ತಾನು ನೀಡಿದ್ದ ಆದೇಶದ ಪಾಲನೆಯ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ಪೀಠವು ಪಂಜಾಬ್‌ನ ಮುಖ್ಯ ಕಾರ್ಯದರ್ಶಿ ಹಾಗೂ ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ) ಸೂಚನೆ ನೀಡಿದೆ. ಪ್ರಕರಣದ ವಿಚಾರಣೆಯನ್ನು ಜನವರಿ 6ಕ್ಕೆ ಮುಂದೂಡಿದೆ.

ಪ್ರತಿಭಟನೆಯಲ್ಲಿ ತೊಡಗಿದ್ದ ರೈತರಿಗೆ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದ ನಂತರದಲ್ಲಿ ನೀಡಿದ್ದ ಭರವಸೆಯಾದ ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಸೇರಿದಂತೆ ಬೇರೆ ಬೇರೆ ಭರವಸೆಗಳನ್ನು ಈಡೇರಿಸುವಂತೆ ಕೇಂದ್ರಕ್ಕೆ ಸೂಚನೆ ನೀಡಬೇಕು ಎಂಬ ಮನವಿ ಇರುವ ಅರ್ಜಿಯ ವಿಚಾರವಾಗಿ ಕೇಂದ್ರಕ್ಕೆ ನೋಟಿಸ್ ಜಾರಿಗೆ ಪೀಠ ಆದೇಶಿಸಿದೆ.

ಮನಾಲಿ ಮಂಜು... ಮನಾಲಿಯ ಸೋಲಾಂಗ್ ನಾಲಾದಲ್ಲಿ ಗುರುವಾರ ಹಿಮಪಾತದ ಬಳಿಕ ಪ್ರವಾಸಿಗರು ಆಟೋಟಗಳ ಮೂಲಕ ಸಂಭ್ರಮಿಸಿದರು – ಪಿಟಿಐ ಚಿತ್ರ

ಸಂಭಲ್ ಸಮೀಕ್ಷೆ: ಕೋರ್ಟ್‌ಗೆ ವರದಿ

ಸಂಭಲ್ (ಪಿಟಿಐ): ಸಂಭಲ್‌ನ ಶಾಹಿ ಜಾಮಾ ಮಸೀದಿ ಸಮೀಕ್ಷೆಯ ವಿಸ್ತೃತ ವರದಿಯನ್ನು ಕೋರ್ಟ್ ನೇಮಿಸಿದ್ದ ಆಯುಕ್ತ ರಮೇಶ್ ಸಿಂಗ್ ರಾಘವ್ ಅವರು ಗುರುವಾರ ಚಾಂದೌಸಿ ಕೋರ್ಟ್‌ಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ್ದಾರೆ. ಸಮೀಕ್ಷೆಯನ್ನು ನವೆಂಬರ್ 19 ಮತ್ತು ನ. 24ರಂದು ನಡೆಸಲಾಗಿದೆ.

ಜಾಮಾ ಮಸೀದಿ ಇರುವ ಸ್ಥಳದಲ್ಲಿ ಹಿಂದೆ ಹರಿಹರ ದೇವಸ್ಥಾನ ಇತ್ತು ಎಂಬ ಪ್ರತಿಪಾದನೆಗಳು ಬಂದ ನಂತರದಲ್ಲಿ, ಈ ಮಸೀದಿಯು ಕಾನೂನು ಹೋರಾಟದ ಕೇಂದ್ರಬಿಂದುವಾಗಿ ಪರಿವರ್ತಿತವಾಗಿದೆ.

‘ಕೋರ್ಟ್ ನಿರ್ದೇಶನಕ್ಕೆ ಅನುಗುಣವಾಗಿ ಸಮೀಕ್ಷೆ ನಡೆದಿದೆ. ವಿಡಿಯೊ ಚಿತ್ರೀಕರಣ ಸೇರಿದಂತೆ ಸಮೀಕ್ಷೆಯ ಪೂರ್ಣ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ’ ಎಂದು ರಾಘವ್ ಹೇಳಿದ್ದಾರೆ.

ಭೋಜಶಾಲಾ ಕುರಿತು ಅರ್ಜಿ

ನವದೆಹಲಿ (ಪಿಟಿಐ): ಮಧ್ಯಪ್ರದೇಶದಲ್ಲಿ ಇರುವ ಮಧ್ಯಕಾಲೀನ ಯುಗದ ಭೋಜಶಾಲಾ ಪ್ರದೇಶದ ಸಮೀಕ್ಷೆಗೆ ನೀಡಿದ ಆದೇಶವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಳ್ಳುವುದಾಗಿ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಎಸ್.ವಿ.ಎನ್. ಭಟ್ಟಿ ಅವರು ಇರುವ ಸುಪ್ರೀಂ ಕೋರ್ಟ್ ವಿಭಾಗೀಯ ಪೀಠವು ಹೇಳಿದೆ.

ಧಾರ್ಮಿಕ ಸ್ಥಳಗಳ ಮೇಲೆ ಹಕ್ಕು ಸ್ಥಾಪಿಸುವ ಅರ್ಜಿಗಳ ವಿಚಾರವಾಗಿ ಹೊಸದಾಗಿ ಆದೇಶ ಹೊರಡಿಸುವಂತಿಲ್ಲ, ಹೊಸ ಅರ್ಜಿಗಳನ್ನು ಪರಿಗಣಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಡಿಸೆಂಬರ್ 12ರಂದು ಅಧೀನ ನ್ಯಾಯಾಲಯಗಳಿಗೆ ಸೂಚನೆ ನೀಡಿರುವುದು, ಭೋಜಶಾಲಾಕ್ಕೆ ಸಂಬಂಧಿಸಿದ ವಿಚಾರಕ್ಕೂ ಅನ್ವಯವಾಗುತ್ತದೆ ಎಂಬಂತೆ ಕಾಣುತ್ತಿದೆ ಎಂದು ಪೀಠವು ಹೇಳಿದೆ.

ವಿಚಾರಣೆ ಸಂದರ್ಭದಲ್ಲಿ ಕೋರ್ಟ್‌ನಲ್ಲಿ ಹಾಜರಿದ್ದ ವಕೀಲ ವಿಷ್ಣು ಶಂಕರ್ ಜೈನ್ ಅವರು, ಭೋಜಶಾಲಾ ವಿಚಾರವು ಡಿಸೆಂಬರ್ 12ರ ಸೂಚನೆಯ ವ್ಯಾಪ್ತಿಗೆ ಬರುವುದಿಲ್ಲ, ಏಕೆಂದರೆ ಆ ಸ್ಥಳವು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನಿರ್ವಹಣೆಯಲ್ಲಿದೆ ಎಂದು ಹೇಳಿದರು.

‘ಇಂಡಿಯಾ’ಗೆ ವಾಪಸ್ ನಿತೀಶ್ ಗೂಡಾರ್ಥದ ಪ್ರತಿಕ್ರಿಯೆ

ಪಟ್ನಾ (ಪಿಟಿಐ): ‘ಇಂಡಿಯಾ’ ಒಕ್ಕೂಟಕ್ಕೆ ವಾಪಸ್ ಬರುವಂತೆ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರು ನೀಡಿರುವ ಕರೆಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಗುರುವಾರ ಗೂಡಾರ್ಥದಲ್ಲಿ ಪ್ರತಿಕ್ರಿಯಿಸಿದರು.

ನೂತನ ರಾಜ್ಯಪಾಲ ಆರಿಫ್ ಮಹಮ್ಮದ್ ಖಾನ್ ಅವರ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಭಾಗಿಯಾಗಲು ರಾಜಭವನಕ್ಕೆ ನಿತೀಶ್ ಕುಮಾರ್ ಆಗಮಿಸಿದ್ದರು. ಈ ಸಂದರ್ಭದಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಗೆ, ‘ಇದೇನು ಹೇಳುತ್ತಿದ್ದೀರಿ’ ಎಂದು ಮರು ಪ್ರಶ್ನಿಸಿದರು.

ನಂತರ ಸುದ್ದಿಗಾರರು, ಈ ಸರ್ಕಾರವು ಪೂರ್ಣ ಅವಧಿ ಅಧಿಕಾರದಲ್ಲಿ ಇರುತ್ತದೆಯೇ ಎಂದು ಕೇಳಿದರು.

ನಿತೀಶ್

ಖಾನ್ ಅವರು ಮಧ್ಯಪ್ರವೇಶಿಸಿ, ‘ಈ ಕಾರ್ಯಕ್ರಮದಲ್ಲಿ ಇಂಥ ಪ್ರಶ್ನೆಗಳನ್ನು ಕೇಳುವುದು ಸೂಕ್ತ ಅಲ್ಲ. ಇದು ಸಂತೋಷದ ದಿನ. ಖುಷಿಯ ವಿಚಾರಗಳ ಬಗ್ಗೆ ಮಾತ್ರ ಮಾತನಾಡೋಣ’ ಎಂದು ಹೇಳಿದರು.

ಲಾಲು ಪ್ರಸಾದ್ ಅವರು ಇತ್ತೀಚೆಗೆ ‘ನಿತೀಶ್ ಕುಮಾರ್ ಅವರಿಗೆ ಬಾಗಿಲುಗಳು ತೆರೆದಿವೆ’ ಎಂದು ಹೇಳಿದ್ದರು.

ಪಾನ್ಸರೆ ಹತ್ಯೆ ಪ್ರಕರಣ: ತನಿಖೆಯ ಮೇಲ್ವಿಚಾರಣೆ ನಿಲ್ಲಿಸಿದ ಹೈಕೋರ್ಟ್

ಮುಂಬೈ (ಪಿಟಿಐ): ವಿಚಾರವಾದಿ ಗೋವಿಂದ ಪಾನ್ಸರೆ ಹತ್ಯೆ (2015) ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಮೇಲ್ವಿಚಾರಣೆಯನ್ನು ಬಾಂಬೆ ಹೈಕೋರ್ಟ್ ಗುರುವಾರ ಸ್ಥಗಿತಗೊಳಿಸಿತು. ಇನ್ನು ಮುಂದೆ ಅದರ ಅಗತ್ಯವಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ಅದಾಗ್ಯೂ, ಪ್ರಕರಣದ ವಿಚಾರಣೆಯನ್ನು ತ್ವರಿತವಾಗಿ, ನಿತ್ಯ ನಡೆಸುವಂತೆ ಕೊಲ್ಹಾಪುರದ ಸೆಷನ್ಸ್ ನ್ಯಾಯಾಲಯಕ್ಕೆ ಹೈಕೋರ್ಟ್ ಸೂಚನೆ ನೀಡಿತು.

ನ್ಯಾಯಮೂರ್ತಿಗಳಾದ ಎ. ಎಸ್.ಗಡ್ಕರಿ ಮತ್ತು ಕಮಲ್ ಖಾತಾ ಅವರನ್ನು ಒಳಗೊಂಡ ವಿಭಾಗೀಯ ಪೀಠವು, ‘ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಈಗಾಗಲೇ ವರದಿ ಸಲ್ಲಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲ ಆಯಾಮಗಳಿಂದಲೂ ತನಿಖೆ ನಡೆದಿರುವುದು ವರದಿಯಿಂದ ಗೊತ್ತಾಗುತ್ತದೆ. ಹೀಗಾಗಿ ವಿಭಾಗೀಯ ಪೀಠವು ತನಿಖೆಯ ಮೇಲ್ವಿಚಾರಣೆಯನ್ನು ನಿಲ್ಲಿಸಲು ನಿರ್ಧರಿಸಿದೆ’ ಎಂದು ತಿಳಿಸಿತು.

ಗೋವಿಂದ ಪಾನ್ಸರೆ

ಎಟಿಎಸ್ ವರದಿ ಪ್ರಕಾರ, ಇಬ್ಬರು ಆರೋಪಿಗಳು ಮಾತ್ರ ತಲೆಮರೆಸಿಕೊಂಡಿದ್ದು, ಅವರನ್ನು ಪತ್ತೆಹಚ್ಚುವ ಕೆಲಸವಷ್ಟೇ ಬಾಕಿಯಿದೆ. ಇವರನ್ನು ಬಂಧಿಸಿದ ಬಳಿಕ ತನಿಖಾ ಸಂಸ್ಥೆಯು ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದು ಎಂದು ಪೀಠ ಹೇಳಿತು.

ಕೊಲ್ಹಾಪುರದಲ್ಲಿ 2015ರ ಫೆ.15ರಂದು ಪಾನ್ಸರೆ ಅವರು ವಾಯು ವಿಹಾರ ಮಾಡುತ್ತಿದ್ದಾಗ, ಅವರ ಮೇಲೆ ಗುಂಡು ಹಾರಿಸಲಾಗಿತ್ತು. ಐದು ದಿನಗಳ ಬಳಿಕ ಅವರು ಮೃತಪಟ್ಟರು. ಈ ಕುರಿತು ತನಿಖೆಯನ್ನು ಆರಂಭದಲ್ಲಿ ಮಹಾರಾಷ್ಟ್ರದ ಅಪರಾಧ ತನಿಖಾ ವಿಭಾಗದ (ಸಿಐಡಿ) ವಿಶೇಷ ತನಿಖಾ ತಂಡ (ಎಸ್‌ಐಟಿ) ನಡೆಸಿತು. ಬಳಿಕ 2022ರಲ್ಲಿ ಅದನ್ನು ಎಟಿಎಸ್‌ಗೆ ವರ್ಗಾಯಿಸಲಾಯಿತು.

2016ರಿಂದ ಹೈಕೋರ್ಟ್ ಈ ಪ್ರಕರಣದ ತನಿಖೆಯ ಮೇಲ್ವಿಚಾರಣೆ ನಡೆಸುತ್ತಿತ್ತು. ತನಿಖಾ ಸಂಸ್ಥೆಗಳು ನಿಯಮಿತವಾಗಿ ತನಿಖಾ ಪ್ರಗತಿ ವರದಿಗಳನ್ನು ಸಲ್ಲಿಸುತ್ತಿದ್ದವು.

ನುಸುಳುಕೋರರಿಗೆ ಬಿಎಸ್‌ಎಫ್ ನೆರವು: ಮಮತಾ ಆರೋಪ

ಕೋಲ್ಕತ್ತ (ಪಿಟಿಐ): ‘ನುಸುಳುಕೋರರಿಗೆ ನೆರವಾಗುವ ಮೂಲಕ ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಪಶ್ಚಿಮ ಬಂಗಾಳದಲ್ಲಿ ಅರಾಜಕತೆ ಸೃಷ್ಟಿಸಲು ಯತ್ನಿಸುತ್ತಿದೆ’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಮಮತಾ

‘ಬಿಎಸ್‌ಎಫ್‌ನ ಈ ನಡೆಯ ಹಿಂದೆ ಕೇಂದ್ರ ಸರ್ಕಾರದ ನೀಲನಕ್ಷೆ ಇರುವಂತಿದೆ’ ಎಂದಿದ್ದಾರೆ.

‘ಇಸ್ಲಾಮ್‌ಪುರ, ಸಿತಾಯಿ, ಚೋಪಡಾ ಸೇರಿದಂತೆ ಗಡಿ ಭಾಗಕ್ಕೆ ಹೊಂದಿರುವ ಹಲವು ಭಾಗಗಳಿಂದ ನುಸುಳುಕೋರರು ರಾಜ್ಯಕ್ಕೆ ಪ್ರವೇಶಿಸಲು ಬಿಎಸ್‌ಎಫ್ ನೆರವು ನೀಡುತ್ತಿದೆ. ರಾಜ್ಯದ ಜನರಿಗೆ ಹಿಂಸೆ ನೀಡುವ ಮೂಲಕ ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿದೆ’ ಎಂದು ವಿಧಾನಸಭೆಯಲ್ಲಿ ಗುರುವಾರ ನಡೆದ ಪರಿಶೀಲನಾ ಸಭೆಯ ಬಳಿಕ ತಿಳಿಸಿದರು.

‘ಗಡಿಯ ಎರಡೂ ಭಾಗಗಳಲ್ಲಿ ಶಾಂತಿ ನೆಲಸುವುದನ್ನು ಎದುರು ನೋಡುತ್ತಿದ್ದೇನೆ. ನೆರೆಯ ಬಾಂಗ್ಲಾದೇಶದ ಜೊತೆಗೆ ಉತ್ತಮ ಬಾಂಧವ್ಯವಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

‘ಗೃಹಿಣಿಯರ ಮಂಗಳಸೂತ್ರಕ್ಕೆ ಕೇಂದ್ರದ ನೀತಿಯ ಕೈ’

ನವದೆಹಲಿ (ಪಿಟಿಐ): ‘ಚಿನ್ನ ಅಡಮಾನ ಸಾಲ ತೀರಿಸದ ಮಹಿಳೆಯರು ಮಂಗಳಸೂತ್ರ, ಆಭರಣ ಕಳೆದುಕೊಳ್ಳುತ್ತಿರುವ ಸ್ಥಿತಿಗೆ ಕೇಂದ್ರ ಸರ್ಕಾರದ ಕೆಲವರಿಗೆ ಸೀಮಿತವಾದ, ಅಸ್ಪಷ್ಟ ನೀತಿಗಳು, ಗೋಪ್ಯ ಆದ್ಯತೆಗಳೇ ಕಾರಣ’ ಎಂದು ಕಾಂಗ್ರೆಸ್ ಪಕ್ಷ ವಾಗ್ದಾಳಿ ನಡೆಸಿದೆ.

‘ಜನರು ಶೇ 30ರಷ್ಟು ಪ್ರಕರಣಗಳಲ್ಲಿ, ಚಿನ್ನ ಅಡವಿಟ್ಟು ಪಡೆದ ಸಾಲ ತೀರಿಸಲಾಗುತ್ತಿಲ್ಲ. ಹೀಗಾಗಿ, ಮಂಗಳಸೂತ್ರ ಮತ್ತಿತರ ಆಭರಣಗಳನ್ನು ಮಹಿಳೆಯರು ಕಳೆದುಕೊಳ್ಳುತ್ತಿದ್ದಾರೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರತಿಪಾದಿಸಿದ್ದಾರೆ.

ಜೈರಾಮ್ ರಮೇಶ್

ವರದಿಯೊಂದನ್ನು ಉಲ್ಲೇಖಿಸಿರುವ ರಮೇಶ್, ‘ಭಾರತೀಯ ಕುಟುಂಬಗಳು ಪಡೆದಿರುವ ಸುಮಾರು ₹3 ಲಕ್ಷ ಕೋಟಿ ಚಿನ್ನದ ಮೇಲಿನಸಾಲ ಇಂದು ಬಾಕಿ ಉಳಿದಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಮಂಗಳಸೂತ್ರ ಕಸಿದುಕೊಳ್ಳುತ್ತಿರುವ ಏಕಮಾತ್ರ ಸರ್ಕಾರ ಇದು’ ಎಂದು ‘ಎಕ್ಸ್’ನಲ್ಲಿ ಟೀಕಿಸಿದ್ದಾರೆ.

‘ಮಂಗಳಸೂತ್ರ’ ಕಸಿದುಕೊಳ್ಳುತ್ತಾರೆ ಎಂದು ಕಾಲ್ಪನಿಕ ಕಥನ ಹರಿಯಬಿಟ್ಟು ಅತಿಮಾನುಷ ಪ್ರಧಾನಿಯೊಬ್ಬರು ಮಹಿಳೆಯರಿಗೆ ಬೆದರಿಸುತ್ತಿದ್ದರು’ ಎಂದರು.

ದೆಹಲಿ ವಿ.ವಿ. ಕಾಲೇಜಿಗೆ ಸಾವರ್ಕರ್ ಹೆಸರು: ಕಾಂಗ್ರೆಸ್ ತೀವ್ರ ವಿರೋಧ

ನವದೆಹಲಿ: ಹಿಂದುತ್ವದ ಚಿಂತಕ ವಿ.ಡಿ.ಸಾವರ್ಕರ್ ಅವರ ಹೆಸರಿನ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಪ್ರಧಾನಿ ಮೋದಿ ಶುಕ್ರವಾರ ಇಲ್ಲಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಆದರೆ, ಸಾವರ್ಕರ್ ಹೆಸರಿಡಲು ಕಾಂಗ್ರೆಸ್ ಪಕ್ಷ, ಎನ್‌ಎಸ್‌ಯುಐ ಘಟಕ ವಿರೋಧ ವ್ಯಕ್ತಪಡಿಸಿವೆ.

ದೆಹಲಿ ವಿಶ್ವವಿದ್ಯಾಲಯವು ಇಲ್ಲಿನ ನಜಫಗಢದಲ್ಲಿ ವೀರ ಸಾವರ್ಕರ್ ಹೆಸರಿನ ಕಾಲೇಜು ಸ್ಥಾಪಿಸುತ್ತಿದೆ. ವಿಶ್ವವಿದ್ಯಾಲಯದ ಮೂರು ವಿವಿಧ ಯೋಜನೆಗಳಲ್ಲಿ ಕಾಲೇಜು ನಿರ್ಮಾಣ ಕೂಡ ಒಂದಾಗಿದ್ದು, ಉಳಿದಂತೆ ಎರಡು ಪ್ರತ್ಯೇಕ ಕ್ಯಾಂಪಸ್‌ಗಳನ್ನು ಅಭಿವೃದ್ಧಿಪಡಿಸಲಿದೆ.

ಕಾಲೇಜಿಗೆ ಸಾವರ್ಕರ್ ಹೆಸರಿಡುವುದನ್ನು ವಿರೋಧಿಸಿ ಎನ್‌ಎಸ್‌ಯುಐ ಅಧ್ಯಕ್ಷ ವರುಣ್ ಚೌಧರಿ ಅವರು ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ‘ಉಲ್ಲೇಖಿತ ಹೊಸ ಕಾಲೇಜಿಗೆ ಮನಮೋಹನ ಸಿಂಗ್ ಅವರ ಹೆಸರಿಡಬೇಕು. ಇದು, ಸಿಂಗ್ ಅವರಿಗೆ ಗೌರವ ಸಲ್ಲಿಸುವ ಉತ್ತಮ ಮಾರ್ಗವೂ ಆಗಿದೆ’ ಎಂದು ಹೇಳಿದ್ದಾರೆ.

ಅಣ್ಣಾ ವಿ.ವಿ ಪ್ರಕರಣ ಎಸ್‌ಐಟಿ ರಚನೆ

ಚೆನ್ನೈ: ಅಣ್ಣಾ ವಿಶ್ವವಿದ್ಯಾಲಯದಲ್ಲಿ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆಗಾಗಿ ಮಹಿಳಾ ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ಮದ್ರಾಸ್ ಹೈಕೋರ್ಟ್ ಗುರುವಾರ ನೇಮಿಸಿದೆ.

‘ಡಾ.ಭುಕ್ಯಾ ಸ್ನೇಹ ಪ್ರಿಯಾ, ಅಯ್ಮಾನ್ ಜಮಲ್ ಮತ್ತು ಎಸ್.ಬೃಂದಾ ಅವರ ತನಿಖಾ ತಂಡವು ಗುರುವಾರ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿತು ಮತ್ತು ಸಂತ್ರಸ್ತೆಯೊಂದಿಗೆ ಮಾತುಕತೆ ನಡೆಸಿತು’ ಎಂದು ಮೂಲಗಳು ತಿಳಿಸಿವೆ.

ಪ್ರಕರಣವನ್ನು ರಾಜಕೀಯಗೊಳಿಸಿದ ವಿಚಾರವಾಗಿ ನ್ಯಾಯಾಲಯವು ಪಕ್ಷಗಳನ್ನು ತರಾಟೆಗೆ ತೆಗೆದುಕೊಂಡಿತು. ‘ಸಂತ್ರಸ್ತೆಯು ದೂರು ನೀಡುವ ಧೈರ್ಯ ತೋರಿದಾಗಿನಿಂದ ಮಾಧ್ಯಮಗಳೇ ಪ್ರಕರಣದ ‘ವಿಚಾರಣೆ’ ನಡೆಸುವ ಧಾಟಿಯಲ್ಲಿ ವರದಿಗಳನ್ನು ಪ್ರಕಟಿಸುತ್ತಿವೆ’ ಎಂದು ನ್ಯಾಯಮೂರ್ತಿ ಪಿ.ವೇಲಮುರುಗನ್ ಬೇಸರಿಸಿದರು.

ಉಪನ್ಯಾಸಕರು ಮನೆಗೆ

821	10,948	4,291	379
ಅನುದಾನಿತ ಕಾಲೇಜುಗಳು	ಮಂಜೂರಾದ ಹುದ್ದೆಗಳು	ಖಾಲಿ ಹುದ್ದೆಗಳು	ಕಾರ್ಯಭಾರ ಕೊರತೆಯ ಉಪನ್ಯಾಸಕರು

ಒಂದನೇ ಪುಟದಿಂದ...

ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆ ಇತ್ತೀಚೆಗಷ್ಟೇ ಅನುಮೋದನೆ ನೀಡಿತ್ತು. 1995–96ನೇ ಶೈಕ್ಷಣಿಕ ಸಾಲಿನ ಪೂರ್ವದಲ್ಲಿ ಆರಂಭವಾಗಿ ವೇತನಾನುದಾನಕ್ಕೆ ಒಳಪಟ್ಟಿರುವ ಶಾಲಾ–ಕಾಲೇಜುಗಳಲ್ಲಿ ಜನವರಿ 2016ರಿಂದ ಡಿಸೆಂಬರ್ 2020ರವರೆಗಿನ ಅವಧಿಯಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಮತ್ತಿತರ ಕಾರಣಗಳಿಂದ ಖಾಲಿ ಇರುವ ಎಲ್ಲ ವಿಷಯಗಳ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬಹುದು ಎಂದು ಸೂಚಿಸಿತ್ತು.

ಅನುಮೋದನೆ ದೊರೆತ ನಂತರ ಕಾಲೇಜುಗಳ ಆಡಳಿತ ಮಂಡಳಿಗಳು ನೇಮಕಾತಿ ಪ್ರಕ್ರಿಯೆ ಆರಂಭಿಸಿರುವ ಬೆನ್ನಲ್ಲೇ ವಿದ್ಯಾರ್ಥಿಗಳ ಕೊರತೆ ಇರುವ ಕಾಲೇಜುಗಳ ವಿಷಯವಾರು ಉಪನ್ಯಾಸಕರನ್ನು ಕೆಲಸದಿಂದ ಬಿಡುಗಡೆ ಮಾಡುವಂತೆ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಆದೇಶ ಹೊರಡಿಸಿದೆ.

ಸರ್ಕಾರಿ ಕಾಲೇಜು ನಿಯೋಜನೆಗೂ ತಡೆ: ಅನುದಾನಿತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಶೇ 50ರಷ್ಟು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ದಶಕಗಳ ಹಿಂದೆ ಆರಂಭವಾಗಿದ್ದ ಕಾಲೇಜುಗಳಲ್ಲಿ ಕಲಾ, ವಾಣಿಜ್ಯ, ವಿಜ್ಞಾನ ಸೇರಿದಂತೆ ವಿವಿಧ ಕೋರ್ಸ್ ಇದ್ದವು. ಈಗ ಗ್ರಾಮೀಣ ಪ್ರದೇಶದಲ್ಲಿ ಕಲಾ, ವಾಣಿಜ್ಯ ವಿಷಯಗಳಿಗೆ ವಿದ್ಯಾರ್ಥಿಗಳ ಕೊರತೆ ಎದುರಾಗಿದೆ. ಈ ಕುರಿತು 2018ರಲ್ಲಿ ನಿಯಮ ರೂಪಿಸಿದ್ದ ಸರ್ಕಾರ, ವಿದ್ಯಾರ್ಥಿಗಳ ಕೊರತೆ ಎದುರಾದ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದ ಉಪನ್ಯಾಸಕರನ್ನು ವಾರದಲ್ಲಿ ಮೂರು ದಿನ ಸಮೀಪದ ಸರ್ಕಾರಿ ಕಾಲೇಜುಗಳಿಗೆ ನಿಯೋಜನೆ ಮಾಡಲು ಸಮ್ಮತಿಸಿತ್ತು. ಈ ನಿಯಮಕ್ಕೆ 2022ರಲ್ಲಿ ತಿದ್ದುಪಡಿ ತಂದು ಸರ್ಕಾರಿ ಕಾಲೇಜುಗಳಿಗೆ ನಿಯೋಜನೆ ಮಾಡುವುದಕ್ಕೆ ನಿರ್ಬಂಧ ವಿಧಿಸಿತು.

‘ಹಲವು ಕಾಲೇಜುಗಳಲ್ಲಿ ಕಾರ್ಯಭಾರದ ಕೊರತೆ ಇದೆ. ಈ ಕಾಲೇಜುಗಳ ಉಪನ್ಯಾಸಕರನ್ನು ಸರ್ಕಾರಿ ಪಿ.ಯು ಕಾಲೇಜುಗಳಿಗೆ ನಿಯೋಜನೆ ಮಾಡಬೇಕು. 2022ರ ನಿಯಮಕ್ಕೆ ತಿದ್ದುಪಡಿ ತರಬೇಕು ಎಂದು ಮನವಿ ಮಾಡಿದ್ದೇವೆ. ಈಗ ಕೆಲವರನ್ನು ಕೆಲಸದಿಂದ ಬಿಡುಗಡೆ ಮಾಡುವಂತೆ ಆದೇಶ ಹೊರಡಿಸಿರುವುದು ಸೇವಾ ಭದ್ರತೆಯನ್ನೇ ಕಿತ್ತುಕೊಂಡಂತೆ’ ಎನ್ನುತ್ತಾರೆ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಅಧ್ಯಕ್ಷ ಎ.ಎಚ್. ನಿಂಗೇಗೌಡ.

ಕಾರ್ಯಭಾರದ ಕೊರತೆಯ ಕಾರಣ 2018ರಿಂದ ಸರ್ಕಾರಿ ಕಾಲೇಜಿಗೆ ನಿಯೋಜನೆಗೊಂಡಿದ್ದೆ. ಈಗ ಕೆಲಸದಿಂದಲೇ ಬಿಡುಗಡೆ ಮಾಡಿದ್ದಾರೆ. ಬದುಕು ಬೀದಿಗೆ ಬಿದ್ದಿದೆ
ಕೆ.ಕೆ. ಗೌಡ, ಬೆಂಗಳೂರು

ಕಾರ್ಯಭಾರ ಕಡಿಮೆ ಇರುವ ಅನುದಾನಿತ ಉಪನ್ಯಾಸಕರನ್ನು ಕೆಲಸದಿಂದ ಬಿಡುಗಡೆ ಮಾಡುವಂತೆ ಹೊರಡಿಸಿದ ಆದೇಶವನ್ನು ಸರ್ಕಾರ ಹಿಂಪಡೆಯಬೇಕು
ಎ.ಎಚ್. ನಿಂಗೇಗೌಡ, ಅಧ್ಯಕ್ಷ, ಪಿ.ಯು ಕಾಲೇಜುಗಳ ಉಪನ್ಯಾಸಕರ ಸಂಘ

ಸರ್ಕಾರಿ ಕಾಲೇಜುಗಳಲ್ಲೂ ಕೊರತೆ

ಕಾರ್ಯಭಾರಕ್ಕಾಗಿ ವಿಷಯವಾರು 40 ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗದಿಗೊಳಿಸಲಾಗಿದೆ. ರಾಜ್ಯದಲ್ಲಿನ 1,232 ಸರ್ಕಾರಿ ಪಿಯು ಕಾಲೇಜುಗಳಲ್ಲಿ ವಿಷಯವಾರು ವಿದ್ಯಾರ್ಥಿಗಳ ಸಂಖ್ಯೆ 30ಕ್ಕಿಂತ ಕಡಿಮೆ ಇದೆ.

821 ಅನುದಾನಿತ ಕಾಲೇಜುಗಳಲ್ಲಿ 426ಕ್ಕೂ ಹೆಚ್ಚು ಕಾಲೇಜುಗಳಲ್ಲಿ ಕೆಲ ವಿಷಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 425ಕ್ಕಿಂತ ಕಡಿಮೆ ಇದೆ. ವಿದ್ಯಾರ್ಥಿಗಳ ಕೊರತೆ ಇರುವ ಕಾಲೇಜುಗಳ 379 ಉಪನ್ಯಾಸಕರ ವೇತನವನ್ನು ಕಳೆದ 6 ತಿಂಗಳಿನಿಂದ ತಡೆ ಹಿಡಿಯಲಾಗಿದೆ.

ಪ್ರಯಾಣ ದರ; ಶೇ 15ರಷ್ಟು ಭಾರ

ಒಂದನೇ ಪುಟದಿಂದ...

ಹಿಂದೆ ದರ ಹೆಚ್ಚಳ ಮಾಡಿದಾಗ ರಾಜ್ಯದ 4 ಸಾರಿಗೆ ನಿಗಮಗಳ ಡೀಸೆಲ್‌ನ ಒಟ್ಟು ವೆಚ್ಚವು ₹9.16 ಕೋಟಿ ಇತ್ತು. ಈಗ ಆ ಮೊತ್ತವು ₹13.21 ಕೋಟಿಗೆ ಹೆಚ್ಚಳವಾಗಿದೆ. ಈ ನಾಲ್ಕೂ ಸಾರಿಗೆ ಸಂಸ್ಥೆಗಳಿಂದ ಪ್ರತಿ ದಿನ ಸಿಬ್ಬಂದಿ ವೆಚ್ಚವು ಆಗ ₹12.85 ಕೋಟಿ ಇದ್ದದ್ದು, ಈಗ ₹18.36 ಕೋಟಿಗೆ ಏರಿದೆ. ಪ್ರತಿದಿನ ₹9.56 ಕೋಟಿ ಹೆಚ್ಚುವರಿ ಹೊರೆ ಆಗುತ್ತಿದೆ. ಅದನ್ನು ಸರಿದೂಗಿಸಲು ದರ ಹೆಚ್ಚಿಸುವುದು ಅನಿವಾರ್ಯವಾಗಿತ್ತು ಎಂದು ಅವರು ಹೇಳಿದರು.

ಪರಿಷ್ಕರಣೆ ಎಷ್ಟು ಮಾಡಬೇಕು ಎಂಬ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಶೇ 13ರಿಂದ ಶೇ 15ರಷ್ಟು ಪರಿಷ್ಕರಣೆಯ ಪ್ರಸ್ತಾವ ಸಂಪುಟದ ಮುಂದಿತ್ತು. ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರಗಳ ಸಾರಿಗೆ ನಿಗಮಗಳ ಪ್ರಯಾಣ ದರಕ್ಕೆ ಹೋಲಿಸಿದಾಗ ನಮ್ಮ ರಾಜ್ಯದ ಪ್ರಯಾಣ ದರ ಕಡಿಮೆ ಇತ್ತು. ದರ ಏರಿಕೆ ಮಾಡಿದ ಬಳಿಕವೂ ನಮ್ಮ ರಾಜ್ಯದ ಪ್ರಯಾಣ ದರ ನೆರೆ ರಾಜ್ಯಗಳಿಗಿಂತ ಕಡಿಮೆಯೇ ಇದೆ ಎಂದೂ ಹೇಳಿದರು.

ಪ್ರಯಾಣದ ದರ ಏರಿಕೆ ಸಾರಿಗೆ ಸಂಸ್ಥೆಯ ಎಲ್ಲ ದರ್ಜೆಯ ಬಸ್ಸುಗಳಿಗೂ ಏಕಪ್ರಕಾರವಾಗಿ ಅನ್ವಯವಾಗಲಿದೆ. ಕಲ್ಯಾಣ ಯೋಜನೆಗಳಿಗೆ ವೆಚ್ಚ ಮಾಡುತ್ತಿರುವ ಮೊತ್ತದ ಹೊರೆಯನ್ನು ಕೆಲವು ವರ್ಗದವರು ಹೊತ್ತುಕೊಳ್ಳಬೇಕಾಗುತ್ತದೆ ಎಂದರು.

ಯಾವಾಗ ಹೆಚ್ಚಳ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು 2020ರಲ್ಲಿ ಶೇ 12ರಷ್ಟು ಹೆಚ್ಚಳ ಮಾಡಲಾಗಿತ್ತು. ಆಗ ಡೀಸೆಲ್ ದರ ಪ್ರತಿ ಲೀಟರ್‌ಗೆ ₹60.98 ಗಳಾಗಿತ್ತು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳ ಬಸ್ ಪ್ರಯಾಣ ದರವನ್ನು 2014ರಲ್ಲಿ ಶೇ 17.8ರಷ್ಟು ಹೆಚ್ಚಿಸಲಾಗಿತ್ತು. 2015ರಲ್ಲಿ ಈ ದರವನ್ನು ಶೇ 1.7ರಷ್ಟು ಇಳಿಕೆ ಮಾಡಲಾಗಿತ್ತು. ಆ ವರ್ಷದ ಜನವರಿಯಲ್ಲಿ ಪ್ರತಿ ಲೀಟರ್ ಡೀಸೆಲ್ ದರ ₹46.24 ಆಗಿತ್ತು.

ರಕ್ತ ಹೀರುವ ಸರ್ಕಾರ: ಆರ್. ಅಶೋಕ

‘ಸಿದ್ದರಾಮಯ್ಯನವರೇ, ದಿನಬೆಳಗಾದರೆ ಒಂದಲ್ಲ ಒಂದು ಬೆಲೆ ಏರಿಕೆ ಮಾಡಿ ಕನ್ನಡಿಗರ ರಕ್ತ ಹೀರುತ್ತಿದ್ದೀರಲ್ಲ, ನಿಮ್ಮ ಸರ್ಕಾರದ ಬಕಾಸುರ ಹೊಟ್ಟೆ ತುಂಬಿಸಲು ಕನ್ನಡಿಗರು ಇನ್ನೆಷ್ಟು ತೆರಿಗೆ, ಶುಲ್ಕ ತೆರಬೇಕು’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದ್ದಾರೆ.

ಈ ಕುರಿತು ಎಕ್ಸ್ ಮಾಡಿರುವ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದ ಬೆಲೆ ಏರಿಕೆ, ತೆರಿಗೆ ಹೆಚ್ಚಳ ಅಂತ ಒಂದಲ್ಲ ಒಂದು ರೀತಿ ಜನ ಸಾಮಾನ್ಯರ ಸುಲಿಗೆ ಮಾಡುತ್ತಲೇ ಇದೆ’ ಎಂದು ದೂರಿದ್ದಾರೆ.

ಅಸಮರ್ಥ ಸಿದ್ದರಾಮಯ್ಯನವರ ದುರಾಡಳಿತದಲ್ಲಿ ಪೆಟ್ರೋಲ್– ಡೀಸೆಲ್, ಆಸ್ತಿ ತೆರಿಗೆ, ನೀರು, ಹಾಲು, ಬಸ್ ದರ ಏರಿಕೆ ಅನಿವಾರ್ಯ. ಕನ್ನಡಿಗರು ಕಾಂಗ್ರೆಸ್ ಸರ್ಕಾರದ ವಿರುದ್ಧ ಶೀಘ್ರವೇ ದಂಗೆ ಏಳುವುದೂ ಅನಿವಾರ್ಯ ಎಂದು ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ನೆರೆ ರಾಜ್ಯಗಳಿಗಿಂತ ನಮ್ಮಲ್ಲಿಯೇ ದರ ಕಡಿಮೆ
- ಎಲ್ಲ ದರ್ಜೆಯ ಬಸ್ಸುಗಳಿಗೆ ಏಕಪ್ರಕಾರವಾಗಿ ಅನ್ವಯ

ಸಾಲಕ್ಕೆ ಖಾತರಿ

ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಭವಿಷ್ಯ ನಿಧಿ ಬಾಕಿ ಮತ್ತು ಇಂಧನ ಬಾಕಿ ಹೊಣೆಗಾರಿಕೆಯನ್ನು ಪಾವತಿಸಲು ₹2,000 ಕೋಟಿ ಸರ್ಕಾರ ಖಾತರಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆಯಲು ಸಂಪುಟ ಘಟನೋತ್ತರ ಅನುಮೋದನೆ ನೀಡಿದೆ ಎಂದು ಸಚಿವ ಎಚ್.ಕೆ. ಪಾಟೀಲ ಅವರು ತಿಳಿಸಿದರು.

ಸಾರಿಗೆ ನಿಗಮಗಳು ಹಣಕಾಸು ಸಂಸ್ಥೆಗಳಿಂದ ಪ್ರತ್ಯೇಕವಾಗಿ ಸಾಲವನ್ನು ಪಡೆಯಬಹುದಾಗಿದೆ. ಒಂದು ವೇಳೆ ನಿಗಮಗಳು ಸಾಲ ಮರುಪಾವತಿ ಮಾಡುವಲ್ಲಿ ವಿಫಲವಾದರೆ ಸರ್ಕಾರ ನಿಗಮಗಳ ನೆರವಿಗೆ ಬರಲಿದೆ ಎಂದು ಪಾಟೀಲ ವಿವರಿಸಿದರು.

AIR FORCE SCHOOL, JALAHALLI-560014
E-Mail ID : afsjal@rediffmail.com. Website : www.afsjal.org
VACANCIES

Applications are invited for Appointment / Empanelment of Teaching / Non-Teaching Staff and Helpers in Air Force School Jalahalli for the academic session 2025-26 as per the following details:

Sl.No.	Post	Category	Subject	Vacancy
01	PGT	Regular	PGT Biology	01
		Empanel	Accountancy, Economics, Business Studies, Computer Science, Physics, Chemistry, Biology, Physical Education, Mathematics, English	10 (01 each)
02	TGT	Regular	Sanskrit, Social Science	02 (1 each)
		Empanel	English, Hindi, Sanskrit, Maths, Science, Social Science, Computer Science	07 (1 each)
03	PRT	Contractual	Academics(All Subjects)	08
		Empanel	Academics (All Subjects) 08+01 Games 01	08+01
04	Pre-Nursery/ NTT	Empanel	Academic (All Subjects)	02
05	Office Superintendent	Empanel	Administration	01
06	Clerk	Empanel	Administration	03
07	Lab Attendent	Empanel	Physics, Chemistry, Biology, Computer	04 (01 each)
08	Helper (Male/Female)	Regular Contractual Empanel	Ayah / Peon / Sweeper / Gardener	03 03 06
09	Special Educator/ Stem Lab Technician	Part Time/ Full Time (Contractual)	Special Educator, Stem Lab Technician	02 (01 each)
10	Dance/ Music/Yoga	Part Time Basis (Contractual)	Dance, Music, Yoga	03 (01 each)
11	Football / Basketball/ Band Master/ Taekwondo	Part Time Basis (Contractual)	Football/Basket ball/Band Master/ Taekwondo	04 (01 each)

Note: 1. For details of eligibility criteria, please visit school website:www.afsjal.org
2. Application alongwith the Photocopies of supportive Documents to reach Executive Director, AF School, Jalahalli before 18th January 2025
3. For any queries Contact Tel No.080-23455069/63, Mob : 9141040530.
4. Please submit separate Applications for each post.
Executive Director, A F School, Jalahalli

ವಕ್ಫ್ ಹೋರಾಟ ನಿಲ್ಲಿಸಲು ವರಿಷ್ಠರು ಹೇಳಿಲ್ಲ: ಯತ್ನಾಳ

ಒಂದನೇ ಪುಟದಿಂದ...

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಜಮೀರ್ ಅಹಮದ್ ಖಾನ್ ಜತೆಗೂ ನನಗೆ ಹೊಂದಾಣಿಕೆ ಇಲ್ಲ. ಇಂತಹ ವಿಷಯಗಳು ಕೇವಲ ಮಾಧ್ಯಮಗಳ ಸೃಷ್ಟಿ’ ಎಂದರು.

‘ವಿಜಯೇಂದ್ರ ಪಕ್ಷದ ಅಧ್ಯಕ್ಷ. ಸಹಜವಾಗಿ ಪಕ್ಷದ ವರಿಷ್ಠರನ್ನು ಭೇಟಿ ಮಾಡುತ್ತಾರೆ. ನಮ್ಮ ವಿರುದ್ಧ ದೂರು ಕೊಟ್ಟ ಬಗ್ಗೆ ಮಾಹಿತಿ ಇಲ್ಲ. ನಮಗೆ ಇನ್ನೊಬ್ಬರ ಮೇಲೆ ದೂರು ಕೊಟ್ಟು ಅಭ್ಯಾಸವೂ ಇಲ್ಲ. ಕಾಂಗ್ರೆಸ್ ಭಿಕ್ಷೆಯಿಂದ ಶಾಸಕರೂ ಆಗಿಲ್ಲ’ ಎಂದರು.

ಬೆಂಗಳೂರಿಗೆ ಬಂದ ನಡ್ಡಾ

ಅಧಿಕೃತ ಕಾರ್ಯಕ್ರಮದ ಭಾಗವಾಗಿ ಬೆಂಗಳೂರಿಗೆ ಬಂದಿರುವ ಕೇಂದ್ರ ಸಚಿವ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಬಿಜೆಪಿ ರಾಜ್ಯ ಘಟಕದ ನಾಯಕರು ಶುಕ್ರವಾರ ಭೇಟಿ ಮಾಡಲಿದ್ದಾರೆ. ಆರೋಗ್ಯ ಇಲಾಖೆಗೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಬೆಳಿಗ್ಗೆ ಭಾಗಿಯಾಗಲಿದ್ದಾರೆ. ಅವರನ್ನು ಬಿಜೆಪಿ ನಾಯಕರು ಕುಮಾರಕೃಪಾ ಅತಿಥಿಗೃಹದಲ್ಲಿ ಭೇಟಿ ಮಾಡಿ, ಮಾತುಕತೆ ನಡೆಸಲಿದ್ದಾರೆ.

‘ಮೇಲಂಗಿ ತೆಗೆಯುವುದು ಬೇಡ’ ಹೇಳಿಕೆಗೆ ವಿರೋಧ

ಕೊಟ್ಟಾಯಂ, ಕೇರಳ (ಪಿಟಿಐ): ದೇವಸ್ಥಾನ ಪ್ರವೇಶಿಸುವ ಮುನ್ನ ಪುರುಷ ಭಕ್ತರು ತಮ್ಮ ಅಂಗಿಯನ್ನು ತೆಗೆಯಬೇಕು ಎಂಬ ನಿಯಮವನ್ನು ಕೈಬಿಡಲು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿಕೆಯನ್ನು ನಾಯರ್ ಸರ್ವಿಸ್ ಸೊಸೈಟಿ (ಎನ್‌ಎಸ್‌ಎಸ್) ಪ್ರಧಾನ ಕಾರ್ಯದರ್ಶಿ ಜಿ.ಸುಕುಮಾರನ್ ನಾಯರ್ ಟೀಕಿಸಿದ್ದಾರೆ.

ಸುಕುಮಾರನ್

‘ದೇವಾಲಯಗಳ ಸಂಪ್ರದಾಯಗಳ ವಿಚಾರದಲ್ಲಿ ಬೇರೆಯವರು ಮಧ್ಯಪ್ರವೇಶಿಸಬಾರದು. ಪ್ರತಿ ದೇವಾಲಯಕ್ಕೆ ತನ್ನದೇ ಆದ ಸಂಪ್ರದಾಯಗಳಿದ್ದು, ಸರ್ಕಾರ ಅಥವಾ ವ್ಯಕ್ತಿಗಳು ಬದಲಾಯಿಸಲು ಹೋಗಬಾರದು’ ಎಂದು ನಾಯರ್ ಪ್ರತಿಕ್ರಿಯಿಸಿದ್ದಾರೆ. ಕೇರಳದ ಹಿರಿಯ ಕಾಂಗ್ರೆಸ್ ಮುಖಂಡ ರಮೇಶ್ ಚೆನ್ನಿತ್ತಲ ಅವರ ಮುಂದೆಯೇ ಈ ಹೇಳಿಕೆ ನೀಡಿದ್ದಾರೆ.

ಆರ್‌ಎಸ್‌ಎಸ್ ಶಾಖೆಗೆ ಅಂಬೇಡ್ಕರ್ ಭೇಟಿ ನೀಡಿದ್ದರು: ವಿಎಸ್‌ಕೆ

ನಾಗ್ಪುರ (ಪಿಟಿಐ): ಬಿ.ಆರ್. ಅಂಬೇಡ್ಕರ್ ಅವರು ಆರ್‌ಎಸ್‌ಎಸ್ ಶಾಖೆಗೆ 85 ವರ್ಷಗಳ ಹಿಂದೆಯೇ ಭೇಟಿ ನೀಡಿದ್ದರು ಎಂದು ವಿಶ್ವ ಸಂವಾದ ಕೇಂದ್ರ (ವಿಎಸ್‌ಕೆ) (ವಿದರ್ಭ ವಲಯ) ತಿಳಿಸಿದೆ.

ಆರ್‌ಎಸ್‌ಎಸ್‌ನ ಸಂವಹನ ವಿಭಾಗವಾಗಿರುವ ವಿಎಸ್‌ಕೆ, ಈ ಬಗ್ಗೆ ಗುರುವಾರ ಹೇಳಿಕೆಯನ್ನು ಬಿಡುಗಡೆ ಮಾಡಿದೆ.

‘ಅಂಬೇಡ್ಕರ್ ಅವರು ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಕರದ್‌ನಲ್ಲಿರುವ ಆರ್‌ಎಸ್‌ಎಸ್ ಶಾಖೆಗೆ 1940ರ ಜನವರಿ 2ರಂದು ಭೇಟಿ ನೀಡಿ, ಆರ್‌ಎಸ್‌ಎಸ್‌ನ ಸ್ವಯಂ ಸೇವಕರನ್ನುದ್ದೇಶಿಸಿ ಭಾಷಣವನ್ನೂ ಮಾಡಿದ್ದರು. ಕೆಲವು ವಿಚಾರಗಳಲ್ಲಿ, ಆರ್‌ಎಸ್‌ಎಸ್ ಜೊತೆಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರೂ, ಸಂಘವನ್ನು ಆತ್ಮೀಯ ಭಾವದಿಂದಲೇ ಕಾಣುವುದಾಗಿ ತಮ್ಮ ಭಾಷಣದಲ್ಲಿ ಅಂಬೇಡ್ಕರ್ ಅವರು ಹೇಳಿದ್ದರು’ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಆರ್‌ಎಸ್‌ಎಸ್ ಶಾಖೆಗೆ ಅಂಬೇಡ್ಕರ್ ಅವರು ಭೇಟಿ ನೀಡಿರುವುದಕ್ಕೆ, ‘ಕೇಸರಿ’ ಮರಾಠಿ ಪತ್ರಿಕೆಯಲ್ಲಿ 1940ರ ಜ.9ರಂದು ಪ್ರಕಟವಾಗಿರುವ ವರದಿಯೇ ಸಾಕ್ಷಿ ಎಂದಿದೆ. ಪ್ರಕಟಣೆಯ ಜೊತೆಗೆ, ಈ ವರದಿಯ ತುಣುಕನ್ನು ವಿಎಸ್‌ಕೆ ಲಗತ್ತಿಸಿದೆ.

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74
NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad, Mangalore, Harihara, Mysore, Gulbarga and Hospet. For the period **January to March 2025**

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH &PV Print waste & unsolds (Voucher & Office Copies)	12	6	4.5	4	4	4.5	2
Mixed Print & Folded waste	3	1.5	0.6	0.3	0.2	0.3	0.2
DH,PV, Sudha & Mayura White cut Peel waste	4	0.6	0.2	0.5	0.4	0.3	0.3
White Reel ends including core DH,PV, Sudha & Mayura	8	1.8	0.6	1	2	1	1
Reel Wrappers/Miscellaneous sweep/Bale pattie waste	6	2	0.9	1.2	1.2	0.9	0.9
Sudha & Mayura Print Waste & unsolds-Magazine	1	0.4	0.9	0.4	0.6	0.9	0.05
Miscellaneous Tissue/ Mixed White	2	0.2	0.3	0.4	0.2	0.5	0.2

For clarification, Contact the Procurement Head at 25880430/340/ Mobile No: 9900042650. Sealed Tenders/mail may be addressed to Procurement Head <babu.v@printersmysore.co.in><venu.tl@printersmysore.co.in> and sent to the above address within 7 days from the date of this advertisement.

ಅಂತಿಮ ಟೆಸ್ಟ್ ಇಂದಿನಿಂದ: ಆಸ್ಟ್ರೇಲಿಯಾಕ್ಕೆ ಸರಣಿ ಗೆಲುವಿನ ತವಕ • ಶರ್ಮಾ ನಡೆ ನಿಗೂಢ

ಭಾರತಕ್ಕೆ ಪುಟಿದೇಳುವ ಸವಾಲು

• ಮಧು ಜವಳಿ

ಸಿಡ್ನಿ: ಭಾರತದಲ್ಲಿ 2017ರ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿ ನಡೆದ ನಂತರ ಇದೇ ಮೊದಲ ಬಾರಿ ಆಸ್ಟ್ರೇಲಿಯಾ ತಂಡವು ಅಂತಿಮ ಟೆಸ್ಟ್ ಪಂದ್ಯದಲ್ಲಿ ಹೆಚ್ಚು ಒತ್ತಡವಿಲ್ಲದೇ ಕಣಕ್ಕಿಳಿಯುತ್ತಿದೆ. ಮೆಲ್ಬರ್ನ್‌ನಲ್ಲಿ ಅಮೋಘ ಜಯಸಾಧಿಸಿ 2–1 ಮುನ್ನಡೆ ಸಾಧಿಸಿರುವ ಆತಿಥೇಯರು ಶುಕ್ರವಾರ ಆರಂಭವಾಗುವ ಐದನೇ ಟೆಸ್ಟ್‌ನಲ್ಲಿ ಡ್ರಾ ಮಾಡಿಕೊಂಡರೂ ಟ್ರೋಫಿ ಮರಳಿ ಪಡೆಯಲಿದ್ದಾರೆ.

ಈ ಹಿಂದಿನ ನಾಲ್ಕು ಸರಣಿಗಳಲ್ಲಿ ಗೆಲ್ಲಲೇಬೇಕಾದ ಒತ್ತಡದೊಡನೆ ಕೊನೆಯ ಟೆಸ್ಟ್ ಪಂದ್ಯ ಆಡಲು ಇಳಿಯುತ್ತಿದ್ದ ಆಸ್ಟ್ರೇಲಿಯಾ ಪ್ರತಿ ಬಾರಿ ಹಿನ್ನಡೆ ಕಾಣುತಿತ್ತು. ಆದರೆ ಇತ್ತೀಚಿನ ಉತ್ತಮ ಪ್ರದರ್ಶನಗಳಿಂದ ತಂಡ ಉತ್ಸಾಹದಲ್ಲಿದ್ದು ನಾಲ್ಕು ಸರಣಿಗಳ ನಂತರ ಮೊದಲ ಬಾರಿ ಟ್ರೋಫಿ ಗೆಲುವಿನ ನಿರೀಕ್ಷೆಯಲ್ಲಿದೆ.

ಸಿಡ್ನಿಯಲ್ಲಿ ಗುರುವಾರ ಅಭ್ಯಾಸದ ವೇಳೆ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಉಪನಾಯಕ ಜಸ್‌ಪ್ರೀತ್ ಬೂಮ್ರಾ ಅವರೊಂದಿಗೆ ಮಾತುಕತೆ ನಡೆಸಿದರು –ಎಎಫ್‌ಪಿ ಚಿತ್ರ

ಪರ್ತ್‌ನ ಮೊದಲ ಟೆಸ್ಟ್ ಬಿಟ್ಟರೆ, ಉಳಿದ ಪಂದ್ಯಗಳಲ್ಲಿ ಆಸ್ಟ್ರೇಲಿಯಾ ತಂಡವೇ ಮೇಲುಗೈ ಸಾಧಿಸಿದೆ. ಆಡಿಲೇಡ್‌ನಲ್ಲಿ ಭರ್ಜರಿ ಗೆಲುವು, ನಂತರ ಮಳೆಯಿಂದ ಮೊಟಕುಗೊಂಡ ಬ್ರಿಸ್ಬೇನ್ ಟೆಸ್ಟ್‌ನಲ್ಲಿ ಪ್ರಾಬಲ್ಯ ಸಾಧಿಸಿದ ಕಮಿನ್ಸ್ ಪಡೆ ಮೆಲ್ಬರ್ನ್‌ನಲ್ಲಿ ಹೋರಾಟದ ಜಯ ಸಾಧಿಸಿ ಸರಣಿ ಮುನ್ನಡೆ ಗಳಿಸಿದೆ. ಈಗ ಸಿಡ್ನಿಯಲ್ಲಿ ಗೆಲುವು ಸಾಧಿಸಿ ಸರಣಿಯನ್ನು ಅಮೋಘವಾಗಿ ಮುಗಿಸುವ ತರಾತುರಿಯಲ್ಲಿದೆ.

ಸಿಡ್ನಿ ಕ್ರೀಡಾಂಗಣದಲ್ಲಿ ತಂಡಗಳ ಸಾಧನೆ (ಟೆಸ್ಟ್)

	ಆಸ್ಟ್ರೇಲಿಯಾ	ಭಾರತ
ಪಂದ್ಯಗಳು	112	13
ಗೆಲುವು	61	1
ಡ್ರಾ	23	7
ಸೋಲು	28	5
ಸರಾಸರಿ	54.5	7.7



ಪ್ಯಾಟ್ ಕಮಿನ್ಸ್

ಮಳೆಯ ಭೀತಿ: ಆದರೆ ಭಾರತ ತಂಡಕ್ಕೆ ಇದು ಅಳಿವು–ಉಳಿವಿನ ಪ್ರಶ್ನೆಯಾಗಿದೆ. ಟ್ರೋಫಿ ತಮ್ಮಲ್ಲೇ ಉಳಿಸಿಕೊಳ್ಳಬೇಕಾದರೆ ಗೆಲುವು ಅನಿವಾರ್ಯ. ಆದರೆ ಮುಂದಿರುವ ಸವಾಲು ಕಠಿಣವಾಗಿದೆ. ಪಂದ್ಯದ ನಾಲ್ಕು ಮತ್ತು ಐದನೇ ದಿನ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಇಂಥ ಪರಿಸ್ಥಿತಿಯಲ್ಲಿ ಡ್ರಾ ಆಗುವ ಸಾಧ್ಯತೆಯೇ ಹೆಚ್ಚು. ಒಂದು ವೇಳೆ ಸೋತಲ್ಲಿ ಅದು ಮಹತ್ವದ ಬದಲಾವಣೆಗೆ ದಾರಿಯಾಗಬಲ್ಲದು. ಕಾಡುತ್ತಿರುವ ವಿವಾದಗಳು ಮತ್ತು ಹೆಚ್ಚುತ್ತಿರುವ ಒತ್ತಡಗಳ ನಡುವೆ ತಂಡದ ಗುರಿ ಇರುವುದು ಸೂಕ್ತ ಸಂಯೋಜನೆ ರೂಪಿಸುವುದರ ಕಡೆ.

ತಂಡದೊಳಗೆ ಎಲ್ಲವೂ ಸರಿಯಿಲ್ಲ ಎಂಬ ಭಾವನೆ ದಿನೇದಿನೇ ಬಲವಾಗುತ್ತಿದೆ. ಮೆಲ್ಬರ್ನ್‌ನಲ್ಲಿ ತಂಡ ಸೋತ ನಂತರ ಕೋಚ್ ಗೌತಮ್ ಗಂಭೀರ್ ಅವರು ಆಟಗಾರರ ವಿರುದ್ಧ ಟೀಕಾಸ್ತ್ರ ಪ್ರಯೋಗಿಸಿದ್ದಾರೆ. ಇದರ ನಡುವೆ ಒಬ್ಬ ಹಿರಿಯ ಆಟಗಾರ ತಂಡ ಮುನ್ನಡೆಸುವ ಬಗ್ಗೆ ಬಯಕೆ ವ್ಯಕ್ತಪಡಿಸಿದ್ದಾರೆ ಎಂಬ ವದಂತಿಯೂ ಹರಿದಾಡಿದೆ.

ಡ್ರೆಸಿಂಗ್ ರೂಮ್‌ನೊಳಗೆ ಏನು ನಡೆದಿದೆ ಎಂಬುದು ಖಾಸಗಿಯಾಗಿ ಉಳಿಯಬೇಕು ಎಂದು ಗಂಭೀರ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಪಾದಿಸಿದ್ದಾರೆ. ಆಟಗಾರನಾಗಿ ಹಲವು ವರ್ಷ ಭಾರತ ಕ್ರಿಕೆಟ್‌ನ ಆಳ–ಅಗಲ ಬಲ್ಲ ಗಂಭೀರ್ ಅವರಿಗೆ ಇಂಥ ವದಂತಿಗಳು ಎಲ್ಲಿಂದ ಉಗಮವಾಗುತ್ತವೆ ಎಂಬುದು ಗೊತ್ತಿಲ್ಲದ ವಿಚಾರವೇನಲ್ಲ. ತಂಡವು ಆಟದ ಕಡೆಗಷ್ಟೇ ಗಮನಹರಿಸುವಂತೆ ಮಾಡುವುದು ಅವರ ಮುಂದಿರುವ ಸವಾಲು. ಇದರ ಜೊತೆ ಕೆಲವು ಆಟಗಾರ ವೈಯಕ್ತಿಕ ಭವಿಷ್ಯವೂ ಈ ಪಂದ್ಯದಲ್ಲಿ ಅಡಗಿದೆ.

ಅತಿ ಹೆಚ್ಚು ಒತ್ತಡ ಎದುರಿಸುತ್ತಿರುವ ಇಬ್ಬರು– ನಾಯಕ ರೋಹಿತ್ ಶರ್ಮಾ ಮತ್ತು ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ. ಲಯಕ್ಕೆ ಪರದಾಡುತ್ತಿರುವ ಈ ಅನುಭವಿ ಆಟಗಾರರ ಬ್ಯಾಟ್ ದೀರ್ಘ ಕಾಲದಿಂದ ಮೌನವಾಗಿದೆ. ಈ ಇಬ್ಬರ ಉಪಸ್ಥಿತಿಯು ತಂಡದ ಸಂಯೋಜನೆಯನ್ನು ಕ್ಲಿಷ್ಟಕರಗೊಳಿಸುತ್ತಿದೆ. ಆಸ್ಟ್ರೇಲಿಯಾ ಕ್ರೀಡಾಂಗಣಗಳಲ್ಲೇ ಸ್ಪಿನ್ನರ್‌ಗಳಿಗೆ ಸ್ನೇಹಿಯಾಗಿರುವ ಸಿಡ್ನಿಯಲ್ಲಿ ವಾಷಿಂಗ್ಟನ್ ಸುಂದರ್ ಅವರಿಗೆ ಜಾಗ ಮಾಡಿಕೊಡಬೇಕಾದರೆ ಪ್ರತಿಭಾನ್ವಿತ ಬ್ಯಾಟರ್ ಶುಭಮನ್ ಗಿಲ್ ಅವರನ್ನು ಮತ್ತೆ ಕೈಬಿಡಬೇಕಾಗಲಿದೆ.

ರೋಹಿತ್ ಶರ್ಮಾ ಆಡುವ 11ರಲ್ಲಿ ಇರುತ್ತಾರೆಯೇ ಎಂಬ ಪ್ರಶ್ನೆಗೆ ಗಂಭೀರ್ ನೇರ ಉತ್ತರ ನೀಡಲಿಲ್ಲ. ನೆಟ್ಸ್‌ನಲ್ಲಿ ಭಾರತದ ನಾಯಕ ಅಭ್ಯಾಸ ನಡೆಸುತ್ತಿರುವುದು ಕಂಡುಬಂತು. ಆದರೆ ಪತ್ರಿಕಾಗೋಷ್ಠಿಯಲ್ಲಿ ಅವರು ಗಂಭೀರ್ ಜೊತೆ ಇರಲಿಲ್ಲ. ಸ್ಲಿಪ್ ಕ್ಯಾಚ್ ಪ್ರಾಕ್ಟೀಸ್ ವೇಳೆಯೂ ಕಾಣಲಿಲ್ಲ. ಆದರೆ ಆ ವೇಳೆ ಗಿಲ್ ಕಂಡುಬಂದರು.

ಆಕಾಶ್ ದೀಪ್ ಬೆನ್ನುನೋವಿಗೆ ಒಳಗಾಗಿರುವ ಕಾರಣ ಅವರನ್ನು ಕೈಬಿಡುವ ಸೂಚನೆ ನೀಡಿದರು. ಮೊದಲ ಎರಡು ಟೆಸ್ಟ್‌ಗಳಲ್ಲಿ ಆಡಿದ್ದ ವೇಗಿ ಹರ್ಷಿತ್ ರಾಣಾ ಸಾಧಾರಣ ಯಶಸ್ಸು ಗಳಿಸಿದ್ದರು. ಹೀಗಾಗಿ ಕರ್ನಾಟಕದ ವೇಗಿ ಪ್ರಸಿದ್ಧ ಕೃಷ್ಣ ಈ ಬಾರಿ ಅವಕಾಶ ಪಡೆದರೂ ಅಚ್ಚರಿಯಿಲ್ಲ.

ಆಸ್ಟ್ರೇಲಿಯಾಕ್ಕೆ ಸಿಡ್ನಿ ಟೆಸ್ಟ್, ಬಾರ್ಡರ್–ಗಾವಸ್ಕರ್ ಟ್ರೋಫಿ ಮರಳಿ ಪಡೆಯಲು ಇರುವ ತಾಣವಷ್ಟೇ ಅಲ್ಲ. ಇತ್ತೀಚಿನ ಸರಣಿಗಳ ಅಂತಿಮ ಪಂದ್ಯಗಳಲ್ಲಿ ತಮ್ಮನ್ನು 'ಕಾಡಿಸುತ್ತಿದ್ದ' ಎದುರಾಳಿಯಿಂದ ಉಂಟಾದ ಹತಾಶೆಯನ್ನು ಕೊನೆಗೊಳಿಸುವ ಅವಕಾಶ ಸಹ. ಒತ್ತಡದ ಸನ್ನಿವೇಶದಲ್ಲೂ ಉತ್ತಮವಾಗಿ ಆಡುವ ಸಾಮರ್ಥ್ಯ ತಂಡದಲ್ಲಿ ಹುರುಪು ತುಂಬಿದೆ. ಸರಣಿ ಗೆಲ್ಲಲು 'ಡ್ರಾ' ಸಾಕೆನಿಸಿದರೂ ತಂಡ ಗೆಲುವಿಗೆ ಯತ್ನಿಸಿ ಸರಣಿಯನ್ನು ಪ್ರಾಬಲ್ಯದೊಡನೆ ಮುಗಿಸುವ ಸನ್ನಾಹದಲ್ಲಿದೆ.

ಆಸ್ಟ್ರೇಲಿಯಾ ತಂಡ ಈ ಪಂದ್ಯಕ್ಕೆ ಮಿಚೆಲ್ ಮಾರ್ಷ್ ಅವರನ್ನು ಕೈಬಿಟ್ಟು ಮತ್ತೊಬ್ಬ ಆಲ್‌ರೌಂಡರ್ ಬ್ಯೂ ವೆಬ್‌ಸ್ಟರ್ ಅವರನ್ನು ಸೇರಿಸಿಕೊಂಡಿದೆ. ಮಿಚೆಲ್ ಸ್ಟಾರ್ಕ್ ಕೂಡ ಆಡುವ ಬಳಗದಲ್ಲಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 5
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ರೋಹಿತ್ ಆಡುವರೇ– ಖಚಿತಪಡಿಸದ ಗಂಭೀರ್

ಈ ಬಾರಿ ಸ್ವತಃ ನಾಯಕ ರೋಹಿತ್ ಶರ್ಮಾ ಅವರ ಕುತೂಹಲದ ಕೇಂದ್ರಬಿಂದು ಆಗಿದ್ದಾರೆ. ಅವರ ಫಾರ್ಮ್, ನಾಯಕತ್ವ ಮತ್ತು ಹನ್ನೊಂದರಲ್ಲಿ ಸ್ಥಾನ ಪಡೆಯುವ ಬಗ್ಗೆ ಕುತೂಹಲ ಮೂಡಿದೆ.

ಗೌತಮ್ ಗಂಭೀರ್ ಅವರಿಗೆ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಪ್ರಶ್ನೆ ಎದುರಾಯಿತು. 'ರೋಹಿತ್ ಶರ್ಮಾ ಎಲ್ಲಿ? ರೋಹಿತ್ ಚೆನ್ನಾಗಿ ದ್ದಾರೆಯೇ?'. ಇದಕ್ಕೆ ಗಂಭೀರ್ ಅವರ ಉತ್ತರ– 'ಪ್ರತಿ ಪಂದ್ಯದ ಮೊದಲು ನಾಯಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಬೇಕೆಂಬ ಸಂಪ್ರದಾಯವೇನೂ ಇಲ್ಲ.'

'ನಾಳೆ ಒಮ್ಮೆ ಪಿಚ್ ನೋಡುತ್ತೇವೆ. ಮತ್ತೆ 11ರ ತಂಡ ಪ್ರಕಟಿಸುತ್ತೇವೆ' ಎಂದರು.

ರೋಹಿತ್ ಅವರು ಅಂತಿಮ ಟೆಸ್ಟ್ ಆಡುವರೇ ಎಂದು ಕೆದಕಿ ಕೇಳಿದರೂ ಗಂಭೀ ್ರ ಖಚಿತ ಉತ್ತರ ನೀಡಲಿಲ್ಲ. ಹಿಂದೆ ಆಡಿದ ಮಾತನ್ನೇ ಪುನರುಚ್ಚರಿಸಿದರು.

ವಾರ್ಮಪ್ ವೇಳೆ ನಾಯಕ ಕಾಣಿಸಿಕೊಂಡರೂ, ಸ್ಲಿಪ್ ಕ್ಯಾಚಿಂಗ್ ವೇಳೆ ಕಾಣಲಿಲ್ಲ. ನೆಟ್ಸ್‌ನಲ್ಲಿ ಅಭ್ಯಾಸ ಶುರು ಮಾಡಿದಾಗ ಅವರು ಇರಲಿಲ್ಲ. ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿ, ಶುಭಮನ್ ಗಿಲ್ ಬ್ಯಾಟಿಂಗ್ ಅಭ್ಯಾಸ ನಡೆಸಿದರು.

ಕೊನೆಗೂ ರೋಹಿತ್ ನೆಟ್ಸ್‌ಗೆ ಬಂದರು. ಆದರೆ ಅವರು ಥ್ರೋಡೌನ್‌ಗಳನ್ನು ಎದುರಿಸಿದರು. ನಂತರ ಉಪನಾಯಕ ಬೂಮ್ರಾ ಮತ್ತು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಜೊತೆ ಹಿಂತಿರುಗಿದರು. ಹೀಗಾಗಿ ರೋಹಿತ್ ಶರ್ಮಾ ಆಡುವರೇ ಎಂಬ ಕೌತುಕ ಉಳಿಯಿತು.

ಲಿಂಗ್ಡೈಕಿಮ್ ಮಿಂಚು: ಭಾರತಕ್ಕೆ ಜಯ

ಎರಡನೇ ಸ್ನೇಹಪರ ಪಂದ್ಯದಲ್ಲೂ ಮಾಲ್ಡೀವ್ಸ್ ಪರಾಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫಾರ್ವರ್ಡ್ ಆಟಗಾರ್ತಿ ಲಿಂಗ್ಡೈಕಿಮ್ ಗಳಿಸಿದ ನಾಲ್ಕು ಗೋಲುಗಳ ನೆರವಿನಿಂದ ಭಾರತದ ವನಿತೆಯರು ಗುರುವಾರ ಇಲ್ಲಿ ನಡೆದ ಎರಡನೇ ಸ್ನೇಹಪರ ಫುಟ್‌ಬಾಲ್ ಪಂದ್ಯದಲ್ಲಿ 11–1ರಿಂದ ಮಾಲ್ಡೀವ್ಸ್ ತಂಡವನ್ನು ಮಣಿಸಿದರು.

ಪ್ರಕಾಶ್ ಪಡುಕೋಣೆ ಸೆಂಟರ್ ಆಫ್ ಎಕ್ಸಲೆನ್ಸ್ ಮೈದಾನದಲ್ಲಿ ನಡೆದ ಎರಡು ಪಂದ್ಯಗಳಲ್ಲಿ ಆತಿಥೇಯ ತಂಡವು ಒಟ್ಟು 25 ಗೋಲುಗಳನ್ನು ಬಾರಿಸಿ ಪಾರಮ್ಯ ಮೆರೆಯಿತು. ಮೊದಲ ಪಂದ್ಯವನ್ನು ಭಾರತ 14–0ರಿಂದ ಗೆದ್ದಿತ್ತು.

ತಮ್ಮ ಚೊಚ್ಚಲ ಅಂತರರಾಷ್ಟ್ರೀಯ ಪಂದ್ಯದಲ್ಲಿ ಮಿಂಚು ಹರಿಸಿದ ಲಿಂಗ್ಡೈಕಿಮ್ ಅವರು 12ನೇ, 16ನೇ 56ನೇ ಮತ್ತು 59ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದರು. ನೋಂಗ್ಮೇಕಪಂ ಸಿವಾನಿ ದೇವಿ ಅವರಿಗೂ ಇದು ಪದಾರ್ಪಣೆ ಪಂದ್ಯವಾಗಿದ್ದು, ಅವರು 45 + 1ನೇ ನಿಮಿಷದಲ್ಲಿ ಗೋಲು ಗಳಿಸಿ ಗಮನ ಸೆಳೆದರು.

ಉಳಿದಂತೆ ಕಾಜೋಲ್ ಡಿಸೋಜ (15ನೇ ನಿ.), ಪೂಜಾ (41ನೇ ನಿ.), ಸಿಮ್ರನ್ ಗುರುಂಗ್ (62ನೇ ಮತ್ತು 68ನೇ ನಿ.) ಮತ್ತು ಕೆ. ಭೂಮಿಕಾ ದೇವಿ (71ನೇ) ಭಾರತದ ಪರ ಗೋಲು ಹೊಡೆದರು.

ಮಾಲ್ಡೀವ್ಸ್ ಪರ 27ನೇ ನಿಮಿಷದಲ್ಲಿ ಮರಿಯಮ್ ರಿಫಾ ಏಕೈಕ ಗೋಲು ಗಳಿಸಿದರು. ಆದರೆ, 17ನೇ ನಿಮಿಷದಲ್ಲಿ ಮಾಲ್ಡೀವ್ಸ್ ತಂಡದ ನಾಯಕಿ ಹವ್ವಾ ಹನೀಫಾ ಅವರು ಭಾರತಕ್ಕೆ 'ಉಡುಗೊರೆ' ಗೋಲು ನೀಡಿದರು.

ನಾಲ್ಕು ಗೋಲು ಗಳಿಸಿದ ಭಾರತ ತಂಡದ ಫಾರ್ವರ್ಡ್ ಆಟಗಾರ್ತಿ ಲಿಂಗ್ಡೈಕಿಮ್ –ಎಕ್ಸ್ ಚಿತ್ರ

ಭಾರತ ತಂಡದ ಕೋಚ್ ಜೋಕಿಮ್ ಅಲೆಕ್ಸಾಂಡರ್ಸನ್ ಅವರು ಆರು ಬದಲಾವಣೆಯೊಂದಿಗೆ ತಂಡವನ್ನು ಕಣಕ್ಕೆ ಇಳಿಸಿದ್ದರು. ಮೊದಲಾರ್ಧದಲ್ಲಿ 6–1 ಗೋಲುಗಳ ಮುನ್ನಡೆ ಪಡೆದ ಭಾರತದ ವನಿತೆಯರು, ಉತ್ತರಾರ್ಧದಲ್ಲೂ ಗೋಲಿನ ಮಳೆಗರೆದು ಜಯಭೇರಿ ಬಾರಿಸಿದರು.

17 ಪ್ಯಾರಾ ಅಥ್ಲೀಟ್‌ಗಳು ಸೇರಿ 32 ಮಂದಿಗೆ ಅರ್ಜುನ ಪ್ರಶಸ್ತಿ ಘೋಷಣೆ

ಮನು, ಗುಕೇಶ್, ಹರ್ಮನ್‌ಗೆ ಖೇಲ್‌ರತ್ನ

ನವದೆಹಲಿ (ಪಿಟಿಐ): ಶೂಟರ್ ಮನು ಭಾಕರ್, ಚೆಸ್ ವಿಶ್ವ ಚಾಂಪಿಯನ್ ಗುಕೇಶ್ ದೊಮ್ಮರಾಜು, ಪುರುಷರ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಪ್ಯಾರಾ ಅಥ್ಲೀಟ್ ಪ್ರವೀಣ್ ಕುಮಾರ್ ಅವರಿಗೆ ದೇಶದ ಅತ್ಯುನ್ನತ ಕ್ರೀಡಾ ಪುರಸ್ಕಾರವಾದ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿ ಘೋಷಿಸಲಾಗಿದೆ.

ಮನು ಭಾಕರ್

ಡಿ.ಗುಕೇಶ್

ಹರ್ಮನ್‌ಪ್ರೀತ್ ಸಿಂಗ್

ಪ್ರವೀಣ್ ಕುಮಾರ್

22 ವರ್ಷದ ಭಾಕರ್, ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಪಡೆದ ಸ್ವತಂತ್ರ ಭಾರತದ ಮೊದಲ ಕ್ರೀಡಾಪಟು ಎನಿಸಿದ್ದರು. ಅವರು ಕಳೆದ ಆಗಸ್ಟ್‌ನಲ್ಲಿ ನಡೆದ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 10 ಮೀ. ಏರ್‌ಪಿಸ್ತೂಲ್ ವೈಯಕ್ತಿಕ ಮತ್ತು ಮಿಶ್ರ ವಿಭಾಗದಲ್ಲಿ ಕಂಚಿನ ಪದಕ ಜಯಿಸಿದ್ದರು.

ಅದೇ ಒಲಿಂಪಿಕ್ಸ್‌ನ ಹಾಕಿಯಲ್ಲಿ ಹರ್ಮನ್‌ಪ್ರೀತ್ ಸಿಂಗ್ ನೇತೃತ್ವದ ಭಾರತ ತಂಡ ಸತತ ಎರಡನೇ ಬಾರಿ ಕಂಚಿನ ಪದಕ ಗೆದ್ದುಕೊಂಡಿತು.

18 ವರ್ಷ ವಯಸ್ಸಿನ ಗುಕೇಶ್, ವಿಶ್ವ ಚೆಸ್ ಚಾಂಪಿಯನ್‌ಷಿಪ್ ಇತಿಹಾಸದಲ್ಲೇ ಚಾಂಪಿಯನ್ ಕಿರೀಟ ಧರಿಸಿದ ಅತಿ ಕಿರಿಯ ಆಟಗಾರ ಎನಿಸಿದ್ದರು. ಒಲಿಂಪಿಯಾಡ್‌ನಲ್ಲಿ ಭಾರತ ಓಪನ್ ತಂಡ ಗೆಲ್ಲಲು ನೆರವಾಗಿದ್ದ ಅವರು ವೈಯಕ್ತಿಕ ಚಿನ್ನವನ್ನೂ ಗೆದ್ದಿದ್ದರು.

ನಾಲ್ಕನೇ ಪ್ರಶಸ್ತಿ ಪುರಸ್ಕೃತ ರಾಗಿರುವ ಪ್ಯಾರಾ ಹೈಜಂಪರ್ ಪ್ರವೀಣ್ ಅವರು ಟಿ64 ವಿಭಾಗದಲ್ಲಿ ಚಾಂಪಿಯನ್ ಆಗಿದ್ದರು. ಈ ವಿಭಾಗದಡಿ ಸ್ಪರ್ಧಿಸುವ ಅಥ್ಲೀಟುಗಳು ಮೊಣಕಾಲಿನಿಂದ ಕೆಳಗೆ ಒಂದು ಅಥವಾ ಎರಡೂ ಕಾಲುಗಳನ್ನು ಕಳೆದುಕೊಂಡಿರುತ್ತಾರೆ. ಅವರು ಕೃತಕ ಕಾಲಿನ ನೆರವು ಪಡೆದು ಓಡಾಡಬೇಕಾಗುತ್ತದೆ.

ರಾಷ್ಟ್ರಪತಿ ಭವನದಲ್ಲಿ ದ್ರೌಪದಿ ಮುರ್ಮು ಅವರು ಇದೇ 17ರಂದು ಬೆಳಿಗ್ಗೆ 11 ಗಂಟೆಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಕ್ರೀಡಾ ಸಚಿವಾಲಯದ ಪ್ರಕಟಣೆ ತಿಳಿಸಿದೆ. 32 ಮಂದಿಯನ್ನು ಅರ್ಜುನ ಪ್ರಶಸ್ತಿಗೆ ಹೆಸರಿಸಲಾಗಿದೆ.

ಪ್ರಶಸ್ತಿಗೆ ಆಯ್ಕೆಯಾದವರು

- **ಅರ್ಜುನ ಪ್ರಶಸ್ತಿ:** ಜ್ಯೋತಿ ಯರ್ರಾಜಿ, ಅನ್ನು ರಾಣಿ (ಅಥ್ಲೆಟಿಕ್ಸ್), ನೀತು, ಸ್ವೀಟಿ (ಬಾಕ್ಸಿಂಗ್), ವಂತಿಕಾ ಅಗರವಾಲ್ (ಚೆಸ್), ಸಲೀಮಾ ಟೆಟೆ, ಅಭಿಷೇಕ್, ಸಂಜಯ್, ಜರ್ಮನ್‌ಪ್ರೀತ್ ಸಿಂಗ್, ಸುಖಜೀತ್ ಸಿಂಗ್ (ಹಾಕಿ), ರಾಕೇಶ್ ಕುಮಾರ್ (ಪ್ಯಾರಾ ಅರ್ಚರಿ), ಪ್ರೀತಿ ಪಾಲ್, ಜೀವಾಂಜಿ ದೀಪ್ತಿ, ಅಜಿತ್ ಸಿಂಗ್, ಸಚಿನ್ ಸರ್ಜೆರಾವ್ ಖಿಲಾರಿ, ಧರ್ಮವೀರ್, ಪ್ರಣವ್ ಸೂರ್ಮಾ, ಎಚ್. ಹೊಕಾಟೊ ಸೆಮಾ, ಸಿಮ್ರಾನ್, ನವದೀಪ್ (ಪ್ಯಾರಾ ಅಥ್ಲೆಟಿಕ್ಸ್), ನಿತೇಶ್ ಕುಮಾರ್, ತುಳಸಿಮತಿ ಮುರುಗೇಶನ್, ನಿತ್ಯಶ್ರೀ ಸುಮತಿ ಶಿವನ್, ಮನಿಷಾ ರಾಮದಾಸ್ (ಪ್ಯಾರಾ ಬ್ಯಾಡ್ಮಿಂಟನ್), ಕಪಿಲ್ ಪರಮಾರ್ (ಪ್ಯಾರಾ ಜೂಡೊ), ಮೋನಾ ಅಗರವಾಲ್, ರುಬಿನಾ ಫ್ರಾನ್ಸಿಸ್ (ಪ್ಯಾರಾ ಶೂಟಿಂಗ್), ಸ್ವಪ್ನಿಲ್ ಕುಸಾಳೆ, ಸರಬ್ಜೋತ್ ಸಿಂಗ್ (ಶೂಟಿಂಗ್), ಅಭಯ್ ಸಿಂಗ್ (ಸ್ಕ್ವಾಷ್), ಸಜನ್ ಪ್ರಕಾಶ್ (ಈಜು), ಅಮನ್ (ಕುಸ್ತಿ).
- **ಅರ್ಜುನ ಪ್ರಶಸ್ತಿ (ಜೀವಮಾನ ಸಾಧನೆ):** ಸುಚಾ ಸಿಂಗ್ (ಅಥ್ಲೆಟಿಕ್ಸ್), ಮುರಳಿಕಾಂತ ರಾಜಾರಾಂ ಪೇಟ್ಕರ್ (ಪ್ಯಾರಾ ಈಜು).
- **ದ್ರೋಣಾಚಾರ್ಯ ಪ್ರಶಸ್ತಿ (ಶ್ರೇಷ್ಠ ತರಬೇತುದಾರರಿಗೆ):** ಸುಭಾಷ್ ರಾಣಾ (ಪ್ಯಾರಾ ಶೂಟಿಂಗ್), ದೀಪಾಲಿ ದೇಶಪಾಂಡೆ (ಶೂಟಿಂಗ್), ಸಂದೀಪ್ ಸಂಗ್ವಾನ್ (ಹಾಕಿ). **ಜೀವಮಾನ ಸಾಧನೆ:** ಎಸ್.ಮುರಳೀಧರನ್ (ಬ್ಯಾಡ್ಮಿಂಟನ್), ಅರ್ಮಾಂಡೊ ಆ್ಯಂಜೆಲೊ ಕೊಲಾಕೊ (ಫುಟ್‌ಬಾಲ್).

20ರಿಂದ ಐಟಿಎಫ್ ಟೆನಿಸ್ ಟೂರ್ನಿ

ಬೆಂಗಳೂರು: ಇಲ್ಲಿನ ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ಇದೇ 20ರಿಂದ 26ರವರೆಗೆ ನಡೆಯುವ ಕೆಐಬಿ ಟ್ರಸ್ಟ್ ಐಟಿಎಫ್ ಮಹಿಳೆಯರ ಟೆನಿಸ್ ಟೂರ್ನಿಯಲ್ಲಿ ಭಾರತದ ತಾರೆಯರೊಂದಿಗೆ ವಿದೇಶಿ ಆಟಗಾರ್ತಿಯರು ಕಣಕ್ಕೆ ಇಳಿಯಲಿದ್ದಾರೆ.

ಅಂಕಿತಾ ರೈನಾ, ಸಹಜಾ ಯಮಲಪಲ್ಲಿ, ಶ್ರೀವಲ್ಲಿ ಭಮಿಡಿಪಾಟಿ, ವೈದೇಹಿ ಚೌಧರಿ ಮತ್ತು ರುತುಜಾ ಭೋಸಲೆ ಸೇರಿದಂತೆ ಭಾರತದ ಆಟಗಾರ್ತಿಯರು ಭಾಗವಹಿಸುವರು.

ಟೂರ್ನಿಯನ್ನು ಈ ಬಾರಿ ಡಬ್ಲ್ಯು50 ಯಿಂದ ಡಬ್ಲ್ಯು100ಕ್ಕೆ ಮೇಲ್ದರ್ಜೆಗೆ ಏರಿಸಲಾಗಿದೆ. ಒಟ್ಟು ₹85 ಲಕ್ಷ ಬಹುಮಾನ ಮೊತ್ತವಿದ್ದು, ಪ್ರಶಸ್ತಿ ವಿಜೇತರು ₹13 ಲಕ್ಷದೊಂದಿಗೆ 100 ಡಬ್ಲ್ಯುಟಿಎ ರ‍್ಯಾಂಕಿಂಗ್ ಪಾಯಿಂಟ್ಸ್ ಗಳಿಸಲಿದ್ದಾರೆ.

ರಿತ್ವಿಕ್– ಹಾಸ್ ಜೋಡಿಗೆ ಸೋಲು

ಬ್ರಿಸ್ಬೇನ್ (ಪಿಟಿಐ): ಎಟಿಪಿ ಡಬಲ್ಸ್ ಸರ್ಕೀಟ್‌ನಲ್ಲಿ ಪ್ರಗತಿ ಕಾಣುತ್ತಿರುವ ಭಾರತದ ರಿತ್ವಿಕ್ ಚೌಧರಿ ಬೊಲ್ಲಿಪಲ್ಲಿ ಅವರು ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯಲ್ಲಿ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದರು. ಅವರು ನೆದರ್ಲೆಂಡ್ಸ್‌ನ ರಾಬಿನ್ ಹಾಸ್ ಜೊತೆ ಆಡಿದ್ದರು.

ಎಟಿಪಿ 250 ಮಟ್ಟದ ಈ ಟೂರ್ನಿಯಲ್ಲಿ ಇಂಡೊ–ಡಚ್ ಜೋಡಿ 4–6, 2–6 ರಿಂದ ರಿಂಕಿ ಹಿಜಿಕಟಾ – ಜೇಸನ್ ಕುಬ್ಲೆರ್ ಎದುರು ಸೋಲನುಭವಿಸಿತು.

ಜನವರಿ 12ರಂದು ಆರಂಭವಾಗುವ ಆಸ್ಟ್ರೇಲಿಯನ್ ಓಪನ್ ಮೂಲಕ ರಿತ್ವಿಕ್ ಅವರು ಗ್ರ್ಯಾನ್‌ಸ್ಲಾಮ್‌ಗೆ ಪದಾರ್ಪಣೆ ಮಾಡುವ ಸಾಧ್ಯತೆಯಿದೆ.

ಯುನೈಟೆಡ್ ಎಫ್‌ಸಿ ತಂಡಕ್ಕೆ ಗೆಲುವು

ಬೆಂಗಳೂರು: ಸಾಂಘಿಕ ಪ್ರದರ್ಶನ ನೀಡಿದ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 2–1 ಗೋಲುಗಳಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಯುನೈಟೆಡ್ ಪರ ಧ್ರುವ ಶರ್ಮಾ (33ನೇ ನಿಮಿಷ), ಅಕ್ಷುನ್ನ ತ್ಯಾಗಿ (56ನೇ ನಿ.) ಗೋಲು ಹೊಡೆದರು. ರೂಟ್ಸ್ ಪರ ಮೊಹಮ್ಮದ್ ತಮೀಮ್ ಟಿ.ಕೆ. (45 + 2ನೇ) ಚೆಂಡನ್ನು ಗುರಿ ಸೇರಿಸಿದರು.

ಕಿಕ್‌ಸ್ಟಾರ್ಟ್ ಎಫ್‌ಸಿ 5–0ಯಿಂದ ಪರಿಕ್ರಮ ಎಫ್‌ಸಿ ತಂಡವನ್ನು ಮಣಿಸಿತು. ಶ್ರೀದಾರ್ಥ್ ನೊಂಗ್ಮೇಕಪಂ (26ನೇ ಮತ್ತು 70ನೇ ನಿ), ಎಡ್ವಿನ್ ರೊಸೊರಿಯೊ (41ನೇ ನಿ), ರಾಮ್ ಸನ್ಯಾಸಿ (56ನೇ ನಿ) ಮತ್ತು ಜಿತು (85ನೇ ನಿ) ಗೋಲು ತಂದಿತ್ತರು.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬುಕ್‌ಮೇಕರ್ಸ್ ಅಸೋಸಿಯೇಷನ್ ಅಧ್ಯಕ್ಷ ನರಹರಿ ಅವರು 'ಓಕ್ಸ್' ಟ್ರೋಫಿಯನ್ನು ಅನಾವರಣಗೊಳಿಸಿ ಬಿಟಿಸಿ ಅಧ್ಯಕ್ಷ ಮತ್ತು ಹಿರಿಯ ಸ್ಟೀವರ್ಡ್ ಆರ್. ಮಂಜುನಾಥ್ ರಮೇಶ್ ಅವರಿಗೆ ಹಸ್ತಾಂತರಿಸಿದರು. ಬೆಂಗಳೂರು ಓಕ್ಸ್ ಗ್ರೇಡ್2 ರೇಸ್ ಆಗಿದ್ದು, ಈ ರೇಸ್‌ಗೆ ಬೆಂಗಳೂರು ಬುಕ್‌ಮೇಕರ್ಸ್ ಅಸೋಸಿಯೇಷನ್ ಸತತವಾಗಿ ಎರಡನೇ ಬಾರಿ ಪ್ರಾಯೋಜಕತ್ವ ನೀಡುತ್ತಿದೆ. ಒಟ್ಟು ₹25 ಲಕ್ಷ ನಗದು ಬಹುಮಾನ ಒಳಗೊಂಡಿದೆ

ಸಂಕ್ಷಿಪ್ತ ಸುದ್ದಿ

ವಿಜಯ್ ಹಜಾರೆ ಟ್ರೋಫಿ ಕರ್ನಾಟಕಕ್ಕೆ ಸೌರಾಷ್ಟ್ರ ಸವಾಲು

ಅಹಮದಾಬಾದ್: ವಿಜಯ್ ಹಜಾರೆ ಟ್ರೋಫಿ ಟೂರ್ನಿಯ 'ಸಿ' ಗುಂಪಿನ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಮರಳುವ ಛಲದಲ್ಲಿರುವ ಕರ್ನಾಟಕ ತಂಡವು ಶುಕ್ರವಾರ ಸೌರಾಷ್ಟ್ರ ತಂಡವನ್ನು ಎದುರಿಸಲಿದೆ.

ಮಯಂಕ್

ಟೂರ್ನಿಯಲ್ಲಿ ಹ್ಯಾಟ್ರಿಕ್ ಶತಕ ಗಳಿಸಿರುವ ಮಯಂಕ್ ಅಗರವಾಲ್ ಮತ್ತು ತಲಾ ಒಂದು ಶತಕ ಹೊಡೆದಿರುವ ಆರ್. ಸ್ಮರಣ್ ಹಾಗೂ ಕೆ.ಎಲ್. ಶ್ರೀಜಿತ್ ಅವರು ಉತ್ತಮ ಲಯದಲ್ಲಿದ್ದಾರೆ. ಬೌಲಿಂಗ್‌ನಲ್ಲಿ ವಿ. ಕೌಶಿಕ್ ಉತ್ತಮ ಲಯದಲ್ಲಿದ್ದಾರೆ. ಉಳಿದ ಬೌಲರ್‌ಗಳು ಲಯಕ್ಕೆ ಮರಳಿದರೆ ತಂಡಕ್ಕೆ ಬಲ ಬರಲಿದೆ.

ಟೂರ್ನಿಯಲ್ಲಿ ಕರ್ನಾಟಕ ತಂಡವು 5 ಪಂದ್ಯಗಳನ್ನು ಆಡಿ 4ರಲ್ಲಿ ಜಯಿಸಿದೆ. ಕಳೆದ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ 3 ವಿಕೆಟ್‌ಗಳಿಂದ ಕರ್ನಾಟಕ ತಂಡವು ಸೋತಿತ್ತು. ಒಟ್ಟು 16 ಅಂಕ ಗಳಿಸಿದೆ. ಪಂಜಾಬ್ ತಂಡವೂ ಇಷ್ಟೇ ಅಂಕ ಗಳಿಸಿದ್ದು ಕರ್ನಾಟಕ ತಂಡಕ್ಕಿಂತ ಹೆಚ್ಚು ನೆಟ್ ರನ್ ರೇಟ್ ಹೊಂದಿದೆ. ಆದ್ದರಿಂದ ಪ್ರಥಮ ಸ್ಥಾನದಲ್ಲಿದೆ. ನಾಲ್ಕನೇ ಸ್ಥಾನದಲ್ಲಿರುವ ಸೌರಾಷ್ಟ್ರ ತಂಡವು 12 ಅಂಕ ಗಳಿಸಿದೆ.

ಪಂದ್ಯ ಆರಂಭ: ಬೆಳಿಗ್ಗೆ 9

ಕರಾಚಿ: ಚಾಂಪಿಯನ್ಸ್ ಟ್ರೋಫಿ ಪಂದ್ಯಗಳ ಸ್ಥಳಾಂತರ

ಕರಾಚಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ ಫೆ.19ರಂದು ಆರಂಭವಾಗಲಿದ್ದು, ಅದಕ್ಕೂ ಮುನ್ನ ಕರಾಚಿಯ ನ್ಯಾಷನಲ್ ಕ್ರೀಡಾಂಗಣದ ನವೀಕರಣ ಕಾರ್ಯವನ್ನು ಪೂರ್ಣಗೊಳಿಸಲು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಹರಸಾಹಸ ನಡೆಸುತ್ತಿದೆ.

ಇದೇ ಕ್ರೀಡಾಂಗಣದಲ್ಲಿ ಟೂರ್ನಿಯ ಉದ್ಘಾಟನಾ ಪಂದ್ಯ ನಿಗದಿಯಾಗಿವೆ. ಆತಿಥೇಯ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳು ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಆ ವೇಳೆಗೆ ಕಾಮಗಾರಿ ಪೂರ್ಣಗೊಳ್ಳುವುದು ಅನುಮಾನವಾಗಿದ್ದರಿಂದ ಇಲ್ಲಿ ನಿಗದಿಯಾಗಿದ್ದ ಪಂದ್ಯಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಪಿಸಿಬಿ ಮುಂದಾಗಿದೆ.

'ಆಟಗಾರರಿಗೆ ಅಚರಣೆಯಾಗಬಾರದು ಎಂಬ ಕಾರಣಕ್ಕೆ ಕರಾಚಿಯ ಕ್ರೀಡಾಂಗಣದಲ್ಲಿ (ಎನ್‌ಎಸ್‌ಕೆ) ಯಾವುದೇ ಪಂದ್ಯಗಳನ್ನು ನಡೆಸದಿರಲು ನಿರ್ಧರಿಸಲಾಗಿದೆ' ಎಂದು ಪಿಸಿಬಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಶ್ವದ ಅತಿ ಹಿರಿಯ ಒಲಿಂಪಿಕ್ ಸ್ವರ್ಣವಿಜೇತೆ ನಿಧನ

ಬುಡಾಪೆಸ್ಟ್ (ರಾಯಿಟರ್ಸ್): ಐದು ಬಾರಿಯ ಒಲಿಂಪಿಕ್ ಚಾಂಪಿಯನ್, ಹಂಗೆರಿಯ ಜಿಮ್ನಾಸ್ಟ್ ಆ್ಯಗ್ನೆಸ್ ಕೆಲೆಟಿ (103) ಗುರುವಾರ ಇಲ್ಲಿ ನಿಧನರಾದರು ಎಂದು ಹಂಗೇರಿಯನ್ ಒಲಿಂಪಿಕ್ ಸಮಿತಿ ಗುರುವಾರ ತಿಳಿಸಿದೆ. ಅವರು ವಿಶ್ವದ ಅತಿ ಹಿರಿಯ ಒಲಿಂಪಿಕ್ ಚಾಂಪಿಯನ್ ಎನಿಸಿದ್ದರು.

ನಾಝಿಗಳು ದಬ್ಬಾಳಿ ಉತ್ತುಂಗ ದಲ್ಲಿದ್ದ ವೇಳೆ ಆಸ್ಟ್ರೋವಿಚ್ ಹತ್ಯಾಕಾಂಡದಲ್ಲಿ ಅವರ ತಂದೆ, ಸಂಬಂಧಿಕರು ಸೇರಿ ನೂರಾರು ಮಂದಿ ಹತ್ಯೆಯಾಗಿದ್ದರು. ಕೆಲೆಟಿ ಅವರು ಯಾತನಾ ಶಿಬಿರದಿಂದ ತಪ್ಪಿಸಿಕೊಂಡಿದ್ದರು.

1956ರ ಮೆಲ್ಬರ್ನ್ ಒಲಿಂಪಿಕ್ಸ್‌ನಲ್ಲಿ ಅವರು ಕ್ರೀಡಾ ಜೀವನದ ಉತ್ತುಂಗದಲ್ಲಿದ್ದು ನಾಲ್ಕು ಚಿನ್ನಗಳು ಅವರ ಪಾಲಾಗಿದ್ದವು. ಚಿನ್ನ ಗೆದ್ದ ಅತಿ ಹಿರಿಯ ಜಿಮ್ನಾಸ್ಟ್ ಎಂಬ ಹಿರಿಮೆಯೂ ಅವರದಾಯಿತು. ಒಂದು ವರ್ಷ ನಂತರ ಅವರು ಇಸ್ರೇಲ್‌ನಲ್ಲಿ ನೆಲೆಸಿದರು. ಅವರು ಒಲಿಂಪಿಕ್ಸ್‌ನಲ್ಲಿ ಐದು ಚಿನ್ನ ಸೇರಿ ಒಟ್ಟು 10 ಪದಕಗಳನ್ನು ಪಡೆದಿದ್ದಾರೆ.